ಗ್ರಂಥ ಸ್ವಾಮ್ಯ ವಿಭಾಗ
894.814 3
ರಾಜ್ಯ ಕೇಂದ್ರ ಗ್ರಂಥಾಲಯ
KAR ಬೆಂಗಳೂರು N99

# ವ್ಯೂಹ

ಕೌಂಡಿನ್ಯ

ನವಚೇತನ ಪಬ್ಲಿಕೇಷನ್
ನಂ. 16, 25ನೇ ಮುಖ್ಯರಸ್ತೆ, ಬನಶಂಕರಿ ಮೊದಲನೆ ಹಂತ,
2ನೇ ಘಟ್ಟ, ಬೆಂಗಳೂರು - 560 050

META ENTERED

**YOUHA** - A Social Novel by Sri. Koundinya. Published by Navachethana Publication No. 16, 25th Main. B. S. K. 1st Stage, 2nd Block, Bangalore - 560 050

© ಕೌಂಡಿನ್ಯ

894.411.3
KOU N99

ಪುಟಗಳು - 176

74424CR

ಮೊದಲ ಮುದ್ರಣ - 1999

ಬೆಲೆ. ರೂ. : 70 . 00

ಮುದ್ರಣ :
ಶ್ರೀರಂಗ ಪ್ರಿಂಟರ್ಸ್,
ರಾಮಾಂಜನೆಯ ಮುಖ್ಯರಸ್ತೆ,
ಹನುಮಂತನಗರ, ಬೆಂಗಳೂರು - 560 019

# ವ್ಯೂಹ

ಮಧ್ಯಾಹ್ನ ಎರಡು ಗಂಟೆಯ ಸಮಯ, ಏಪ್ರಿಲ್ ತಿಂಗಳ ಸುಡು ಬಿಸಲಿನ ಪ್ರಖರತೆ ತೀವ್ರವಾಗಿತ್ತು. ರುದ್ರಯ್ಯ ಕರ್ಚೀಫ್‌ನಿಂದ ಬೆವರನ್ನು ಒರೆಸಿಕೊಂಡ. ಸಮಯ ಉರುಳಿದಂತೆ ಅಸಹನೆ ಹೆಚ್ಚಾಗಿ ಚಡಪಡಿಸಲಾರಂಭಿಸಿದ.

ದೂರದಲ್ಲಿ ರೋಸ್ ಕಲರ್ ಕಾರು ಬರುತ್ತಿರುವುದನ್ನು ಕಂಡ. ನಂಬರ್ ನೋಡಿದ ಮೇಲೆ ಖಾತ್ರಿಯಾಗಿ ಸಮಾಧಾನವಾಯಿತು. ಸ್ಥೂಲಕಾಯದ ರುದ್ರಯ್ಯ ಕುಂಟುತ್ತಲೇ ನಡೆಯಾಲಾರಂಭಿಸಿದ. ಪರಿಚಯದವರೆಲ್ಲ ಇವನ್ನು 'ಚೊತ್ತ ಕಾಲಿನ ರುದ್ರ' ಎನ್ನುತ್ತಿದ್ದರು.

ಕಾರು ಇವನ ಸಮೀಪದಲ್ಲೇ ನಿಂತುಕೊಂಡಿತು. ಕಪ್ಪು ಬಣ್ಣದಗ್ಲಾಸು ಕೆಳಗೆ ಸರಿಸಿದಾಗ ಒಳಗೆ ತನಗೆ ಬೇಕಾಗಿದ್ದವನೇ ಕುಳಿತಿರುವುದು ಕಂಡಿತು.

ಇಬ್ಬರು ದಡೂತಿ ವ್ಯಕ್ತಿಗಳು

ಮುಂಭಾಗದ ಡೋರ್ ತೆರೆದುಕೊಂಡಿತು. ಒಳಗಿನಿಂದ ''ಗೆಟ್ ಇನ್'' ಎಂಬ ಗಡಸು ಧ್ವನಿಯ ಮಾತು ಕೇಳಿ ಬಂದಿತು.. ರುದ್ರಯ್ಯ ಕುಳಿತುಕೊಂಡ ಕೂಡಲೇ ಕಾರು ಚಲಿಸಿತು.

ಕಾರು ವೇಗವಾಗಿ ಚಲೀಸುತ್ತಿದೆ. ತೆರೆದ ಕಿಟಕಿಯ ಮೂಲಕ ಗಾಳಿ 'ಬರೋ' ಎಂದು ಸುಗ್ಗುತ್ತಿದೆ.

ಹಿಂಭಾಗದ ಸೀಟನಲ್ಲಿ ಆ ದಡೂತಿಗಳು ಕುಳಿತುಕೊಂಡಿದ್ದಾರೆ. ಅವರಲ್ಲಿ ಒಬ್ಬ ಪೈಪ್ ಬಾಯಿಗಿಟ್ಟುಕೊಂಡಿದ್ದಾನೆ. ಸ್ವಲ್ಪ ಹೊತ್ತು ಯಾರು ಮಾತಾಡಲಿಲ್ಲ. ರುದ್ರಯ್ಯನಿಗೆ ಸಂತೋಷ, ಕುತೂಹಲ ತಾಳಲಾಗುತ್ತಿಲ್ಲ.

ಈ ದಡೂತಿಗಳು ಸಾಮಾನ್ಯರಲ್ಲ. ದೊಡ್ಡ ರೌಡಿಗಳು. ಹಣಕ್ಕಾಗಿ

ಅಪಾಯವಾದ ಸಾಹಸ ಮಾಡುವವರು. ಇಂತಹವರು, ತನ್ನನ್ನು ಕರೆಸಿಕೊಂಡು ಕೆಲಸ ವಹಿಸುತ್ತಿದ್ದಾರೆ ಎಂದರೆ ಅದು ಅದೃಷ್ಟವೇ ಸರಿ. ಏಕೆಂದರೆ ಈ ದಡೂತಿಗಳು ಪ್ರತಿಯೊಂದು ಕೆಲಸಕ್ಕೂ ಕೈ ತುಂಬಾ ಹಣ ಕೊಡುತ್ತಾರೆ ಎಂದು ರುದ್ರಯ್ಯನಿಗೆ ಗೊತ್ತಿತ್ತು. ಆದಕ್ಕೇ ಅವನಿಗೆ ಈಗ ತುಂಬಾ ಸಂತೋಷವಾಗಿದೆ. ರುದ್ರಯ್ಯ ಈ ಮೊದಲು ರೌಡಿಸಂನಲ್ಲಿ ಹೆಸರು ಹಣ ಮಾಡಿದ್ದ! ಯಾವುದೋ ಪ್ರಕರಣದಲ್ಲಿ ಕಾಲಿನ ಸ್ವಾಧೀನ ಕಳೆದುಕೊಂಡಿದ್ದ. ಅದೊಂದು ಯ ಗ್ರೇಟ್ ಟ್ರಾಜಿಡಿ!

ರುದ್ರಯ್ಯ ಕುಂಟನಾಗಿ ನಾಲ್ಕು ವರ್ಷಗಳು ಕಳೆದಿದೆ. ಈಗ ಮೊದಲಿನಂತೆ ಸಂಪಾದಿಸಲಾಗುತ್ತಿಲ್ಲ. ಕುಂಟನನ್ನು ಕರೆದು ಯಾರು ತಾನೇ ಕೆಲಸ ಕೊಡಲು ಸಾಧ್ಯ?

ರುದ್ರಯ್ಯನ ಪರಿಸ್ಥಿತಿ ಎಷ್ಟೊಂದು ಚಿಂತಾಜನಕವಾಗಿತ್ತು ಎಂದರೆ ಇವನನ್ನು ಕಂಡರೆ ಹೆದರುತ್ತಿದ್ದ ಚಿಲ್ಲರೆ ರೌಡಿಗಳು ಸಹ ಇವನ ಎದುರಿಗೇ ಕಾಲಿನ ಮೇಲೆ ಕಾಲು ಹಾಕಿಕೊಂಡು ಬೀಡಿ ಸೇದುತ್ತಿದ್ದರು. ಅಪಹಾಸ್ಯ ಮಾಡುತ್ತಿದ್ದರು. ಪೋಲೀಸರಂತೂ ಇವನನ್ನು ಮರೆತು ತುಂಬಾ ದಿವಸಗಳಾಗಿತ್ತು. ಈ ಕುಂಟ ರೌಡಿಸಂ ಮಾಡಲು ಸಾಧ್ಯವೇ ಎಂದು ಲೀಸ್ಟ್‌ನಿಂದಲೇ ತೆಗೆದುಹಾಕಿದ್ದರು.

ಅಂದರೆ ಪೋಲೀಸರ ದೃಷ್ಟಿಯಲ್ಲಿ ಈ ಕುಂಟರುದ್ರಯ್ಯ ಅಪ್ರಯೋಜಕ. ಅವನು ಪ್ರೊಫೆಷನ್ ಬಿಟ್ಟಿದ್ದಾನೆ ಎಂದು ನಂಬಿದ್ದರು. ಈ ನಂಬಿಕೆಯೇ ರುದ್ರಯ್ಯನ ಪಾಲಿಗೆ ವರವಾಗಿ ಒಂದು ಹೊಸ ಅವಕಾಶವನ್ನು ತಂದಿತ್ತು. ಯಾವುದೋ ದುಷ್ಟ ದಡೂತಿಗಳು ಮಾಜಿ ರೌಡಿ ಕುಂಟ ರುದ್ರಯ್ಯನನ್ನು ಹುಡುಕಿಕೊಂಡು ಬಂದಿದ್ದರು.

ಇವರು ತನಗೆ ಎಂತಹ ಕೆಲಸ ವಹಿಸುವರೋ ಏನೋ ಎಂದು ರುದ್ರಯ್ಯ ಕುತೂಹಲದಿಂದ ನೋಡುತ್ತಿದ್ದ.

ಸೈಕಲ್ ಚೈನ್ ಕೃಷ್ಣಗಡುಸಾಗಿ, ''ರುದ್ರ...ನಿನ್ನನ್ನು ಈ ಕೆಲಸಕ್ಕೆ ಆರಿಸಲು ಕಾರಣ ಏನು ಗೊತ್ತೆ?'' ಎಂದ.

ರುದ್ರಯ್ಯ ಏನೆಂಬಂತೆ ನೋಡಿದ.

''ಪೋಲೀಸರಿಗೆ ನಿನ್ನ ಮೇಲೆ ಅನುಮಾನವಿಲ್ಲ. ಇದೇ ಪ್ಲಸ್ ಪಾಯಿಂಟ್. ಈ ಕೆಲಸದಲ್ಲಿ ನಿನಗೆ ರಿಸ್ಕ್ ಇರೋದಿಲ್ಲ.''

''ಕೆಲಸ ಏನು ಅಂತ ಹೇಳಿ?''

''ಇವತ್ತು ರಾತ್ರಿ ಎಂಟು ಗಂಟೆಗೆ ನೀನು ಶ್ರೀಮಂತನಂತೆ ಡ್ರೆಸ್

ಮಾಡಿಕೊಂಡು ಹೋಟೆಲ್ ಅಯೋಧ್ಯೆಗೆ ಹೋಗಬೇಕು. ಆ ಸ್ಟಾರ್ ಹೋಟೆಲ್‌ನ 105ನೇ ರೂಮಿನಲ್ಲಿ ರತನ್‌ಲಾಲ್ ಅನ್ನೋ ಶ್ರೀಮಂತ ಉಳಿದುಕೊಂಡಿರುತ್ತಾನೆ.''

ರುದ್ರಯ್ಯ ಕೂಡಲೇ ಕೇಳಿದ. ''ಶ್ರೀಮಂತನಂತೆ ಸ್ಟಾರ್ ಹೋಟೆಲ್‌ಗೆ ಹೋಗಲು ತನ್ನ ಹತ್ತಿರ ಒಳ್ಳೆಯ ಡ್ರೆಸ್ ಎಲ್ಲಿದೆ?''

ಗಡ್ಡ ಕಣ್ಣಿನ ಡೇವಿಡ್ ರೇಗುತ್ತಾ ''ಎಲ್ಲವನ್ನೂ ನಾವು ವ್ಯವಸ್ಥೆ ಮಾಡುತ್ತೇವೆ. ಮಧ್ಯೆ ಮಾತಾಡದೆ ತೆಪ್ಪಗೆ ಕೇಳು.''

ರುದ್ರಯ್ಯ ತಲೆಯಾಡಿಸಿದ.

ಸೈಕಲ್ ಚೈನ್. ''ನೀನು ಯಾರಿಗೂ ಅನುಮಾನ ಬಾರದ ರೀತಿಯಲ್ಲಿ ರೂಂ ನಂಬರ್ 105ಕ್ಕೆ ಹೋಗು. ಅಲ್ಲಿ ದೊಡ್ಡ ಸೂಟ್‌ಕೆಸ್ ಇರುತ್ತದೆ. ಅದನ್ನು ಎತ್ತಿಕೊಂಡು ಬಾ!'' ಎಂದ.

ರುದ್ರಯ್ಯ ಗಾಬರಿಯಿಂದ, ''ರತನ್‌ಲಾಲ್ ಇರೋವಾಗ...'' ಎಂದಾಗ ದೇವಿಡ್ ಗಂಭೀರವಾಗಿ, ''ಇಲ್ಲ...ರತನಲ್‌ಲ್‌ನಿಂದ ನಿನಗೆ ತೊಂದರೆ ಬರೊಲ್ಲ. ಯಾಕೆ ಅಂದರೆ ಅವನು ಬದುಕಿರೊಲ್ಲ.''

ರುದ್ರಯ್ಯನಿಗೆ ಗಾಬರಿಯಾದರೂ ತೋರಿಸಿಕೊಳ್ಳಲಿಲ್ಲ.

ಸೈಕಲ್ ಚೈನ್ ಕೂಷ್ಣ. ''ಆ ರೂಮಿನಲ್ಲಿ ಇರೋ ಸೂಟ್‌ಕೇಸ್ ಅನ್ನು ತೆಗೆದುಕೊಂಡು ಬಂದು ನೀನು ನಮಗೆ ಕೊಡಬೇಕು.'' ಆಜ್ಞಾಪಿಸಿದ.

''ಆ ಸೂಟ್‌ಕೇಸ್‌ನಲ್ಲಿ ಏನು ಇರುತ್ತದೆ?'' ರುದ್ರಯ್ಯನ ಮಾತಿನಲ್ಲಿ ಕುತೂಹಲ ಇಣುಕಿತು.

''ಹೆಣ ಅಥವ ಹಣ...!''

ರುದ್ರಯ್ಯ ಗಾಬರಿಯಾದ!

''ಏನು ಏನಂದ್ರಿ!'' ಉದ್ಗರಿಸಿದ.

''ಅದೆಲ್ಲಾ ನಿನಗ್ಯಾಕೆ?'' ಆ ಸೂಟ್‌ಕೇಸ್ ಅನ್ನು ತಂದುಕೊಡುವ ಜವಾಬ್ದಾರಿ ನಿನ್ನದು. ಇಷ್ಟು ಕೆಸ ಮಾಡಿದರೆ ನಿನಗಗೆ ಇಪ್ಪತ್ತು ಸಾವಿರ! ಅವನು ಇಷ್ಟೊಂದು ಹಣ ಸಿಗುತ್ತದೆಂದು ಅಂದುಕೊಂಡಿರಲಿಲ್ಲ.

''ಈ ಕೆಲಸಕ್ಕೆ ನನಗೆ ಒಪ್ಪಗೆಯಿದೆ. ಸೂಟ್‌ಕೇಸ್ ಅನ್ನು ಎಲ್ಲಿಗೆ ತಂದುಕೊಡಬೇಕು?'' ಕೇಳಿದ ತಲೆಯಾಡಿಸುತ್ತಾ ರುದ್ರಯ್ಯ.

''ಆಂಜನೇಯನ ದೇವಸ್ಥಾನದ ಹತ್ತಿರ ಇದೇ ಕಾರಿನಲ್ಲಿ ಕುಳಿತುಕೊಂಡು ಕಾಯುತ್ತಿರುತ್ತೇವೆ. ನಿನಗೆ ಅಡ್ವಾನ್ಸ್ ಹತ್ತು ಸಾವಿರ ಈಗ ಕೊಡುತ್ತೇವೆ. ಉಳಿದದ್ದು ಕೆಲಸವಾದ ಮೇಲೆ'' ಎಂದು ಡೇವಿಡ್ ನೂರರ ನಿಟಿನ ಕಂತೆಯೊಂದನ್ನು ರುದ್ರಯ್ಯನ ಕೈಗೆ ಹಾಕಿದ.

ರುದ್ರಯ್ಯ ನೋಟಿನ ಕಂತೆಯನ್ನು ಗಬಕ್ಕನೆ ಜೇಬಿಗೆ ತುರುಕಿಕೊಳ್ಳುತ್ತಾ ಕೇಳಿದ.

''ರತನ್‌ಲಾಲ್‌ನ ಸಾವಿನ ವಿಷಯ ಹೋಟೆಲ್‌ನವರಿಗೆ ಗೊತ್ತಾದರೆ?''

''ಇಲ್ಲ...ಗೊತ್ತಾಗೊಲ್ಲ. ನಾವು ಹೇಳಿದ ಸಮಯಕ್ಕೆ ಸರಿಯಾಗಿ ನೀನು ಆ ಕೊಠಡಿಗೆ ಹೋಗಬೇಕು!'' ಎಂದು ಸೈಕಲ್ ಚೈನ್ ಕೃಷ್ಣ ಎಲ್ಲವನ್ನೂ ವಿವರಿಸಿದ.

ಮುಂದಿನ ಚಿತ್ರ ವಿಚಿತ್ರ ವಿಸ್ಮಯಕಾರಿ ಘಟನೆಗಳಿಗೆ ಇದೇ ನಾಂದಿ.

★★★

ಹೋಟೆಲ್ ಅಯೋಧ್ಯ!

ಲಲಿತ ಮಹಲ್ ಪ್ಯಾಲೆಸ್‌ನಂತೆ ಭವ್ಯವಾಗಿ ಕಂಗೊಳಿಸುತ್ತಿದ್ದ ಭವನದೊಳಗೆ ವ್ಯಕ್ತಿಯೊಂದು ಪ್ರವೇಶಿಸಿತು.

ಸಿಲ್ಕ್ ಜುಬ್ಬ, ಪೈಜಾಮ, ತಲೆಯಲ್ಲಿ ಜರಿ ಟೋಪಿ ಧರಿಸಿದ್ದ ಬೊಜ್ಜು ಶರೀರದ ವ್ಯಕ್ತಿ! ಎರಡು ಕೈಗಳಲ್ಲೂ ಉಂಗುರಗಳು, ಎದೆಯ ಮೇಲೆ ಕಾಣುವಂತೆ ಇದ್ದ ಒಂದೆಳೆಯ ಚಿನ್ನದ ಸರ. ಶ್ರೀಮಂತಿಕೆಯ ಕಳೆಯಿದ್ದ ವ್ಯಕ್ತಿ ಕುಂಟುತ್ತಾ ನಡೆಯುತ್ತಿದ್ದ.

ಅವನು ಕುಂಟ ರುದ್ರಯ್ಯ!

ರುದ್ರಯ್ಯ ರಿಸೆಪ್ಷನ್ ಕೌಂಟರಿನ ಹತ್ತಿರ ಬಂದು, ''ರತನ್‌ಲಾಲ್ ಯಾವ ಕೊಠಡಿಯಲ್ಲಿದ್ದಾರೆ?'' ಎಂದು ಹಿಂದಿಯಲ್ಲಿ ಕೇಳಿದ.

ಕೆಂದುಟಿಯ ಚೆಲುವೆ ನಗುತ್ತಾ. ''ರೂಂ ನಂಬರ್ 105ರಲ್ಲಿ ಇದ್ದಾರೆ'' ಎಂದು ಹಿಂದಿಯಲ್ಲೇ ಉತ್ತರಿಸಿದಳು.

ರುದ್ರಯ್ಯ ಗತ್ತಿನಿಂದಲೇ, ''ಥ್ಯಾಂಕ್ಸ್'' ಎಂದು ಸುತ್ತಲೂ ನೋಡಿ ಲಿಫ್ಟ್ ಮೂಲಕ ಸೆಕೆಂಡ್ ಫ್ಲೋರಿಗೆ ಬಂದ.

105 ಎಂಬ ಸಂಖ್ಯೆಯ ಕೊಠಡಿ ಸೆಕೆಂಡ್ ಫ್ಲೋರ್‌ನ ಕಾರ್ನರ್‌ನಲ್ಲಿತ್ತು. ರುದ್ರಯ್ಯ ಒಂದು ಸಾರಿ ತನ್ನ ಎಡಕ್ಕೆ ತಿರುಗು ನೋಡಿದ. ದೂರದಲ್ಲಿ ಒಬ್ಬಿಬ್ಬಿರು ಓಡಾಡುತ್ತಿದ್ದರು. ತನ್ನನ್ನು ಯಾರೂ ಗಮನಿಸುತ್ತಿಲ್ಲ ಎಂದು ಖಾತ್ರಿಯಾದ ಮೇಲೆ ಬಾಗಿಲನ್ನು ಮೆಲ್ಲಗೆ ನೂಕಿದ.

ಬಾಗಿಲು ತೆರೆದುಕೊಂಡಿತು!

ರುದ್ರಯ್ಯ ಮತ್ತೊಂದು ಸಾರಿ ತನ್ನ ಎಡ ಭಾಗಕ್ಕೆ ತಿರುಗಿ ನೋಡಿ ಒಳಗೆ ಪ್ರವೇಶಿಸಿ ಬಾಗಿಲನ್ನು ಹಾಕಿಕೊಂಡ.

ರಾತ್ರಿ ಎಂಟು ಗಂಟೆಯ ಸಮಯ...

ಬೆಡ್ ಲೈಟ್‌ನ ಮಂದ ಪ್ರಕಾಶದಲ್ಲಿ ಪಂಚತಾರಾ ಹೋಟೆಲ್‌ನ ಕೊಠಡಿಯ ವೈಭವಪೂರಿತ ಪೀಠೋಪಕರಣಗಳು ಸ್ಪಷ್ಟವಾಗಿ ಕಾಣುತ್ತಿತ್ತು. ರುದ್ರಯ್ಯ ಕೊಠಡಿಯನ್ನೆಲ್ಲಾ ವೀಕ್ಷಿಸಿದ.

ಟಿಪಾಯಿಯ ಮೇಲೆ ಕಪ್ಪು ಬಣ್ಣದ ದೊಡ್ಡ ಸೂಟ್‌ಕೇಸ್ ಇತ್ತು. ಅದರ ಒಂದು ಕಡೆ ಬಿಳಿಯ ಬಣ್ಣದಿಂದ 'ಜಾಕ್ಸನ್' ಎಂದು ಬರೆಯಲಾಗಿತ್ತು.

ರುದ್ರಯ್ಯ ಸೂಟ್‌ಕೇಸ್ ಅನ್ನು ಸವರುತ್ತಾ ಮಂಚದ ಕಡೆ ಅಳುಕುತ್ತಾ ನೋಡಿದ.

ಶ್ರೀಮಂತ ಮುದುಕ ರತನ್‌ಲಾಲ್‌ನ ಹೆಣ...! ತೆರೆದಿದ್ದ ಕಣ್ಣುಗಳು...ನೀಲಿಗಟ್ಟಿದ್ದ ಮುಖ...

ಬಾಯಿಂದ ಹೊರ ಬಂದಿದ್ದ ನೊರೆ...

ತನ್ನ ವೃತ್ತಿಯಲ್ಲಿ ಇಂತಹ ಎಷ್ಟೋ ಹೆಣಗಳನ್ನು ಉರುಳಿಸಿದ್ದ ರುದ್ರಯ್ಯ ಸಹ ಭಯಗೊಂಡಿದ್ದ ಈ ದೃಶ್ಯ ನೋಡಿ. ಯಾವುದೋ ಶೀಘ್ರ ಪರಿಣಾಮಕಾರಿ ವಿಷದಿಂದಲೇ ಕೊಂದಿದ್ದಾರೆ ಎಂದುಕೊಂಡ. ಆದರೆ ಅವನನ್ನು ಯಾವ ರೀತಿ ಕೊಂದಿದ್ದಾರೆ?

ಯೋಚಿಸುತ್ತಾ ನಿಲ್ಲಲು ಸಮಯವಿರಲಿಲ್ಲ. ಆಗಿನ್ನೂ ರಾತ್ರಿ ಎಂಟೂವರೆಯ ಸಮಯ. ಸಡನ್ ಆಗಿ ಯಾರಾದರು ಬಂದರೆ ತೊಂದರೆಯಾಗುತ್ತದೆ ಎಂದುಕೊಂಡು ಟಿಪಾಯಿಯ ಹತ್ತಿರ ಬಂದ.. ಅದರ ಮೇಲೆ ಸೂಟ್‌ಕೇಸ್ ಇತ್ತು!

ರುದ್ರಯ್ಯ ಅದನ್ನು ಎತ್ತಿ ನೋಡಿದ. ತುಂಬಾ ಭಾರವಾಗಿತ್ತು. ಈಗ ಭಯ ಮಿಶ್ರಿತ ಕುತೂಹಲ ಕಾಡಲಾರಂಭಿಸಿತು.

ಈ ಸೂಟ್‌ಕೇಸ್‌ನಲ್ಲಿ ಏನಿರಬಹುದು?

ಹಣವೇ...?

ಹೆಣವೆ?!

ರುದ್ರಯ್ಯ ತನ್ನ ಜೇಬಿನಿಂದ ಕೀಗೊಂಚಲೊಂದನ್ನು ತೆಗೆದ. ಹಲವಾರು

ಕೀಗಳಿದ್ದವು. ಅದರ ನಡುವೆ ಮೂರು ಇಂಚು ಉದ್ದದ ಸಣ್ಣ ತಂತಿ ಇತ್ತು.

ತಂತಿ ಸೂಟ್‌ಕೇಸ್‌ನ ಲಾಕರ್‌ನಲ್ಲಿ ತೂರಿಸಿದ.

ಕ್ಲಿಕ್ ಎಂಬ ಶಬ್ದ.

ರುದ್ರಯ್ಯ ನಡುಗುವ ಕೈಗಳಿಂದ ಡವಗುಟ್ಟುತ್ತಿದ್ದ ಎದೆಯನ್ನು ಅದುಮಿಕೊಂಡ.

ಕ್ಷಣಗಳು ಉರುಳುತ್ತಿತ್ತು.

ರುದ್ರಯ್ಯ ಎಡಗೈಯಿಂದ ಸೂಟ್‌ಕೇಸ್ ತೆರೆ. ಅವನ ಮುಖದ ತುಂಬಾ ಬೆವರಿನ ಹನಿಗಳು ಮೂಡಿತ್ತು.

ಹಣ...ನೋಟಿನ ಕಂತೆಗಳು!

ಇಪ್ಪತ್ತೈದು ಲಕ್ಷಕ್ಕೆ ಕಡಿಮೆಯಿಲ್ಲ!

'ಅಬ್ಬ ಎಷ್ಟೊಂದು ಹಣ...' ಎಂಬ ಉದ್ಗಾರ ಹೊರಟಿತು. ರುದ್ರಯ್ಯನ ಮನಸ್ಸು ಚಂಚಲಗೊಂಡಿತು. ಆಸೆ ಅಂಕುರಿಸಿತು.

ಸುಖ ಜೀವನದ ನೂರಾರು ಕನಸುಗಳು...

ಸಮಯ ಉರುಳುತ್ತಿತ್ತು.

ರುದ್ರಯ್ಯ ಎಚ್ಚೆತ್ತು ಕರ್ಚೀಫ್‌ನಿಂದ ಬೆವರನ್ನು ಒರೆಸಿಕೊಂಡು ಸೂಟ್‌ಕೇಸ್ ಅನ್ನು ಮೊದಲಿನಂತೆ ಲಾಕ್ ಮಾಡಿ, ಅದನ್ನು ಎತ್ತಿಕೊಂಡು ಹೊರಬಂದ.

ಆದರೆ ಒಂದೇ ಸಾರಿ ಹೊರಬರಲಿಲ್ಲ. ಬಾಗಿಲಿನ ಹತ್ತಿರ ನಿಂಲ್ಲು ಎಲ್ಲಾಕಡೆ ನೋಡಿ ಯಾರು ಓಡಾಡುತ್ತಿಲ್ಲವೆಂದು ಖಾತ್ರಿಯಾದ ಮೇಲೆ ಸೂಟ್‌ಕೇಸ್ ಎತ್ತಿಕೊಂಡು ಹೊರಬಂದ.

ರುದ್ರಯ್ಯ ರಿಸೆಪ್ಷನ್ ಕೌಂಟರಿನ ಹತ್ತಿರ ಬಂದ. ಭಯದಿಂದ ಎದೆ ಬಡಿತ ದ್ವಿಗುಣಗೊಂಡಂತೆ ಭಾಸವಾಯಿತು. ಯಾರಿಗಾದರೂ ತನ್ನ ಮೇಲೆ ಅನುಮಾನ ಬರಬಹುದೇ ಎಂಬ ಸಂದೇಹದಿಂದ ಕೌಂಟರಿನ ಕಡೆ ನೋಡಿದ.

ಅಲ್ಲಿದ್ದ ಕೆಂಪು ತುಟಿಯ ಚೆಲುವೆ ರಿಸೆಪ್ಷನಿಸ್ಟ್ ನಗುತ್ತಾ, ''ಮೇ ಐ ಹೆಲ್ಪ್ ಯೂ ಸರ್?''

''ನೋ...ಥ್ಯಾಂಕ್ಸ್'' ಎಂದು ಕೈಯಾಡಿಸುತ್ತಾ ರುದ್ರಯ್ಯ ಬಾಗಿಲಿನ ತನಕ ಬಂದ.

ರುದ್ರಯ್ಯ ಭಾರವಾದ ಸೂಟ್‌ಕೇಸನ್ನು ಹೊರಲಾರದೆ ಹೊತ್ತುಕೊಂಡು

ನಡೆಯುತ್ತಿರುವುದನ್ನು ವ್ಯಕ್ತಿಯೊಂದು ತೀಕ್ಷ್ಣವಾಗಿ ನೋಡುತ್ತಿತ್ತು.

ಆ ವ್ಯಕ್ತಿ ಎಸ್. ಐ. ಮನೋಹರ್!

ಯಾವುದೋ ತನಿಖೆಯ ವಿಚಾರವಾಗಿ ಹೋಟೆಲ್ ಮ್ಯಾನೇಜರನ್ನು ನೋಡಲು ಬಂದಿದ್ದ ಎಸ್. ಐ. ಮನೋಹರ್ ಹಾಲ್‌ನಲ್ಲಿ ಸೋಫಾದಲ್ಲಿ ಪೇಪರ್ ಓದುತ್ತಾ ಕುಳಿತ್ತಿದ್ದ. ರುದ್ರಯ್ಯನ ಮೇಲೆ ಅವನು ಗಮನಹರಿಸಲು ಕಾರಣ ಎರಡು ಅಂಶಗಳು.

ಪಂಚತಾರ ಹೋಟೆಲ್‌ನಲ್ಲಿ ಸೇವಾ ಸೌಕರ್ಯ ಇದ್ದರೂ ಸಹ ಸೂಟ್‌ಕೇಸ್ ಅನ್ನು ಅವನೇ ಹೊತ್ತುಕೊಂಡು ಹೋಗುತ್ತಿರುವುದು. ಎರಡನೆಯ ಅಂಶ ಸೊಟ್ಟ ಕಾಲಿನ ನಡಿಗೆ!

ರುದ್ರಯ್ಯ ಟಾಕ್ಸಿಯಲ್ಲಿ ಕೂರುತ್ತಾ "ಗಣಪತಿ ದೇವಸ್ಥಾನಕ್ಕೆ ಬೇಗ ಓಗಪ್ಪ" ಎಂದ.

ಟ್ಯಾಕ್ಸಿ ಚಲಿಸಿತು.

ಹೋಟೆಲ್ ಕೊಠಡಿಯಲ್ಲಿದ್ದ ರತನ್‌ಲಾಲ್‌ನ ಕೊಂದಿದ್ದು ದಡೂತಿಗಳಾದ ಸೈಕಲ್ ಚೈನ್ ಕೃಷ್ಣ ಮತ್ತು ಗೆಡ್ಡೆಕಣ್ಣಿನ ದೇವಿಡ್ ಇವರಿಬ್ಬರೂ ಆ ಹೋಟೆಲ್‌ಗೆ ಬರದ ಮರೆಯಲ್ಲಿದ್ದುಕೊಂಡೇ ಬುದ್ಧಿವಂತಿಕೆಯಿಂದ ಕೊಲೆ ಮಾಡಿಸಿದ್ದರು.

ಹಣದ ಸೂಟ್‌ಕೇಸ್ ತೆಗೆದುಕೊಂಡು ಗಣಪತಿ ದೇವಸ್ಥಾನಕ್ಕೆ! ಕಾರಣ ದುರಾಸೆ, ಈ ಗಣವನ್ನೆಲ್ಲಾ ತಾನೇ ಹೊಂದಬೇಕು ಎಂಬ ದುರಾಸೆ, ಮೋಸ ಮಾಡಲು ಪ್ರಚೋದಿಸಿತ್ತು!

★★★

ಹೋಟೆಲ್‌ನಲ್ಲಿ...

ರೂಂ ನಂಬರ್ 105ರ ಮುಂದೆ ಜನಗಳು ಸೇರಿದ್ದರು. ತರನ್‌ಲಾಲ್ ಕೊಲೆಯಾಗಿದ್ದ ವಿಷಯ ಬಹಿರಂಗವಾಗಿತ್ತು. ಬೇರೆ ಯಾವುದೋ ತನಿಖೆಗಾಗಿ ಬಂದಿದ್ದ ಆ ಏರಿಯಾದ ಎಸ್.ಐ. ಮನೋಹರನಿಗೆ ವಿಷಯ ತಿಳಿದು ಫೋನ್ ಮಾಡಿ ತನ್ನ ಸಿಬ್ಬಂದಿಯನ್ನು ಕರೆಸಿಕೊಂಡಿದ್ದ.

ಪಿ.ಸಿ.ಗಳು ರೂಮಿನೊಳಗೆ ಹೋಟೆಲ್ ಸಿಬ್ಬಂದಿಯನ್ನು ವಿಚಾರಣೆ ಮಾಡಿ ರತನ್‌ಲಾಲ್ ಬಗ್ಗೆ ತಿಳಿದುಕೊಂಡ.

ಕೊನೆಯಲ್ಲಿ ಕೆಂಪು ತುಟಿಯ ಚೆಲುವೆ ಸ್ವಾಗತಕಾರಿಣಿ, ''ಸಾರ್...ಈಗ ಸ್ವಲ್ಪ ಹೊತ್ತಿಗೆ ಮೊದಲು ಈ ರೂಮಿನಲ್ಲಿದ್ದ ರತನ್‌ಲಾಲ್‌ನ ನೋಡೋದಿಕ್ಕೆ ಅಂತ ಒಬ್ಬ ಹೋಗಿದ್ದ ಸಾರ್...''

''ಯಾರವನು? ಅವನ ಹೆಸರೇನು?''

''ಹೆಸರು ಗೊತ್ತಿಲ್ಲ...''

''ನೋಡಲು ಹೇಗಿದ್ದ...''

''ಚೂಜ್ಜು ಮೈಯಿ, ತುಂಬಾ ಶ್ರೀಮಂತನಂತೆ ಕಾಣುತ್ತಿದ್ದ ಸಾರ್...ಅವನು ಕುಂಟ...!''

ಎಸ್.ಐ. ಮನೋಹರ್ ಬೆಚ್ಚಿಬೀಳುತ್ತಾ ''ಏನಂದೆ?'' ಎಂದ.

''ಹೌದು ಸಾರ್, ಅವನು ಕುಂಟ...''

''ಮೈ ಗಾಡ್...!''

ಕೆಂಪು ತುಟಿಯ ಚೆಲುವೆ ಅಳುತ್ತಲೇ, ''ಸಾರ್...ರತನ್‌ಲಾಲ್‌ನ ನೋಡಲು ಬಂದಿದ್ದಾಗ ಅವನ ಕೈಯಲ್ಲಿ ಏನು ಇರಲಿಲ್ಲ. ಆದರೆ ಇಲ್ಲಿಂದ ಹೋಗುವಾಗ ಅವನ ಕೈಯಲ್ಲಿ ಸೂಟ್‌ಕೇಸ್ ಇತ್ತು.''

ಎಸ್.ಐ. ಮನೋಹರ್‌ಗೆ ತಕ್ಷಣ ನೆನಪಾಯಿತು. 'ಜಾಕ್ಸನ್' ಎಂಬ ಬರಹವಿದ್ದ ಸೂಟ್‌ಕೇಸನ್ನು ರುದ್ರಯ್ಯ ತೆಗೆದುಕೊಂಡು ಹಿಗಿದ್ದನ್ನು ಅವನು ನೋಡಿದ್ದನು.

ಎಸ್.ಐ. ಮನೋಹರ್ ತಡಮಾಡಲಿಲ್ಲ. ಯಾವುದೋ ನಂಬರ್‌ಗೆ ಡಯಲ್ ಮಾಡುತ್ತಾ ''ಹಲೋ... ಕಂಟ್ರೋಲ್ ರೂಂ...!'' ಎಂದ.

★★★

ರಾತ್ರಿ ಒಂಭತ್ತು ಗಂಟೆಯ ಸಮಯ!

ಅದು ಗಣಪತಿ ದೇವಸ್ಥಾನ.

ಅಂದು ಕೃಷ್ಣಪಕ್ಷದ ಚೌತಿಯಾಗಿದ್ದರಿಂದ ಸಂಕಷ್ಟಹರ ಗಣಪತಿ ಪೂಜೆ ಆಗತಾನೆ ಮುಗಿದು ಭಕ್ತಾದಿಗಳು ಗುಂಪುಗುಂಪಾಗಿ ಹೊರಬರುತ್ತಿದ್ದರು. ರುದ್ರಯ್ಯ ಎದುರಿಗಿದ್ದ ಅರಳೀಕಟ್ಟೆಯ ಮೇಲೆ ಸೂಟ್‌ಕೇಸ್ ಇರಿಸಿಕೊಂಡು ನಿಂತಿದ್ದ. ಅವನಿಗೆ ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಎಂಬ ಗೊಂದಲ ಪ್ರಾರಂಭವಾಗಿದ್ದರಿಂದ ಸುಮ್ಮನೆ ನಿಂತಿದ್ದ.

ಕೃಷ್ಣಪಕ್ಷವಾಗಿದ್ದರಿಂದ ಚಂದ್ರನ ದರ್ಶನವಿರಲಿಲ್ಲ. ಆಗಸದಲ್ಲಿ ಮೋಡಗಳು ಕವಿಯುತ್ತಿದ್ದುದ್ದರಿಂದ ಕತ್ತಲಿನ ಗಾಢತೆ ಕ್ಷಣ ಕ್ಷಣಕ್ಕೂ ಹೆಚ್ಚುತ್ತಿತ್ತು.

ಗಾಳಿ 'ಬರ್ರೋ' ಎಂದು ಬೀಸುತ್ತಿದೆ...

ಗುಡುಗು ಕೇಳಿ ಬರುತ್ತಿದೆ!

ಆಗೊಮ್ಮೆ, ಈಗೊಮ್ಮೆ ಕಣ್ಣು ಕೋರೈಸುವಂತಹ ಮಿಂಚು ಮೂಡಿ ಇಡೀ ನಭೋ ಮಂಡಲವನ್ನು ಬೆಳಗುತ್ತಿದೆ. ಆದರೆ ಮಿಂಚು ಮೂಡಿ ಮರೆಯಾದ ನಂತರ ಕತ್ತಲಿನ ತೀವ್ರತೆ ಮೊದಲಿಗಿಂತ ಜಾಸ್ತಿಯಾಗುತ್ತಿದೆ.

ರುದ್ರಯ್ಯ ಚಳಿಯಿಂದ ನಡುಗುತ್ತಿದ್ದಾನೆ. ಪಕ್ಕನೆ ಕರೆಂಟ್ ಹೋಯಿತು!

ಕಂಬಗಳಿಂದ ಮಬ್ಬು ಬೆಳಕಾದರೂ ಬರುತ್ತಿತ್ತು. ಈಗ ಅದೂ ಇಲ್ಲವಾದ್ದರಿಂದ ಏನೂ ಕಾಣುತ್ತಿಲ್ಲ.

ಕತ್ತಲು...ಗವ್ ಎನ್ನುವ ಕತ್ತಲು...

ಚಟಪಟನೆ ಮಳೆಹನಿ ಪ್ರಾರಂಭವಾಯಿತು.

ರುದ್ರಯ್ಯನ ಮುಖದ ಮೇಲೆ ಹತ್ತಾರು ಹನಿಗಳು ಬಿದ್ದವು. ಕೈಯಿಂದ ನೀರನ್ನು ಒರೆಸಿಕೊಂಡು ಅಲ್ಲಿಂದ ಹೊರಟ.

ಕತ್ತಲಿನಲ್ಲಿ ಯಾರು ಕಾಣುತ್ತಿಲ್ಲ. ಕೈಯಲ್ಲಿ ತುಂಬಾ ತೂಕವಿದ್ದ ಸೂಟ್‌ಕೇಸ್ ಬೇರೆ ಇದೆ. ಕತ್ತಲಲ್ಲಿ ತಡಕಾಡುತ್ತಾ ನಿಧಾನವಾಗಿ ನಡೆತ್ತಿದ್ದಾನೆ.

ಮಳೆ ಜೋರಾಯಿತು. ರುದ್ರಯ್ಯ ಕುಂಟುತ್ತಲೇ ನಡೆಯುತ್ತಿದ್ದಾನೆ. ಬೇಗ ಎಲ್ಲಾದರೂ ತಲೆ ಮರೆಸಿಕೊಳ್ಳಬೇಕು. ತಾನು ವಂಚಿಸಿರುವುದು ನಗರದ ದೊಡ್ಡ ರೌಡಿಗಳನ್ನು, ಅವರಿಗೆ ಈಗಾಗಲೇ ತನ್ನ ವಂಚನೆಯ ಪ್ರಯತ್ನದ ಬಗ್ಗೆ ತಿಳಿದಿರುತ್ತದೆ. ಈಗಾಗಲೇ ಹುಡುಕಾಟ ಪ್ರಾರಂಭವಾಗಿರುತ್ತದೆ.

ಬಸ್ಸು ನಿಲ್ದಾಣ, ರೈಲ್ವೇಸ್ಟೇಷನ್, ಏರ್‌ಪೋರ್ಟ್‌ಗಳಲ್ಲಿ ಈಗಾಗಲೇ ರೌಡಿಗಳು ಕಾಯುತ್ತಿರುತ್ತಾರೆ. ಬೇರೆ ಊರಿಗೆ ಹೋಗಲು ಯಾವ ರೀತಿಯಲ್ಲೇ ಪ್ರಯತ್ನಿಸಿದರೂ ಸಿಕ್ಕಿಬೀಳಬೇಕಾಗುತ್ತದೆ. ಇದು ತುಂಬಾ ಅಪಾಯ.

ರುದ್ರಯ್ಯನಿಗೆ ಇನ್ನೊಂದು ವಿಚಾರ ಗೊತ್ತಿರಲಿಲ್ಲ. ಪೋಲಿಸರೂ ಸಹ ತನಗಾಗಿ ಹುಡುಕಾಡುತ್ತಿದ್ದಾರೆ ಎಂದು! ಮಳೆ ಜೋರಾಯಿತು.

ರುದ್ರಯ್ಯ ಪೂರ್ತಿಯಾಗಿ ನೆಂದಿದ್ದಾನೆ. ಅವನ ದೇಹದಿಂದ ಮಳೆಯ ನೀರು ತೊಟ್ಟಿಕ್ಕುತ್ತಿದೆ.

ದಡೂತಿಗಳು ಅಡ್ವಾನ್ಸ್ ಎಂದು ಕೊಟ್ಟಿದ್ದ ಹಣ ಹತ್ತು ಸಾವಿರ ರೂಪಾಯಿ ಭದ್ರವಾಗಿತ್ತು. ತ್ತಾಉವುದೊ ಹೋಟೆಲ್‌ನಲ್ಲಿ ರೂಮನ್ನು ಪಡೆದುಕೊಳ್ಳಲೇ ಎಂದುಕೊಂಡ. ಆದರೆ ಮರುಕ್ಷಣ ಭಯ ಕಾಡಲಾರಂಭಿಸಿತು.

ರೌಡಿಗಳು ಊರಿನಲ್ಲಿರುವ ಎಲ್ಲಾ ಲಾಡ್ಜ್‌ಗಳನ್ನು ಕೇವಲ ಒಂದು ಗಂಟೆಯಲ್ಲಿ ಜಾಲಾಡಿಬಿಡುತ್ತಾರೆ.

ಮತ್ತೇನು ಮಾಡೋದು?

ರುದ್ರಯ್ಯ ಚಳಿ, ಮಳೆಯನ್ನು ತಾಳಲಾರದೆ ಯಾವುದೋ ಮುರುಕಲು ಮನೆಯ ಸೂರಿನ ಕೆಳಗೆ ನಿಂತ.

ಎರಡು ನಿಮಿಷ ಕಳೆಯಿತು. ರುದ್ರಯ್ಯ ತನ್ನ ನಿಕ್ಕರ್ ಜೇಬಿನಲ್ಲಿದ್ದ ಸಿಗರೇಟ್ ಪ್ಯಾಕನ್ನು ಮತ್ತು ಲೈಟರನ್ನು ಹೊರತೆಗೆದ. ಸಿಗರೇಟ್ ಒದ್ದೆಯಾಗಿರದಿದ್ದರೂ ನೀರಿನ ಪಸೆಯಿತ್ತು. ಅದನ್ನೇ ತುಟಿಗಳ ನಡುವೆ ಸಿಗಿಸಿಕೊಂಡು ಬೆಂಕಿ ತಾಕಿಸಿದ.

ಎರಡು ದಮ್ ಎಳೆದು ಹೊಗೆಯನ್ನುಳಿದ ನಂತರ ರುದ್ರಯ್ಯನಿಗೆ ತುಸು ಸಮಾಧಾನವಾಯಿತು. ತಲೆಗೆ ಕೆಲಸ ಕೊಟ್ಟು ಯೋಚಿಸಲು ಪ್ರಾರಂಭಿಸಿದಾಗ ಪ್ಲಾನ್ ಆಯಿತು!

ಅದೇ ಊರಿನಲ್ಲಿದ್ದ ಅಕ್ಕನ ನೆನಪಾಯಿತು. ಈ ಊರಿನಿಂದ ಹೊರ ಹೋಗಲು ಹೇಗೆ ಪ್ರಯತ್ನಿಸಿದರೂ ರೌಡಿಗಳ ಕೈಗೆ ಸಿಕ್ಕಿಬೀಳಬೇಕಾಗುತ್ತದೆ. ಒಂದೆರಡು ದಿವಸ ಅಕ್ಕನ ಮನೆಯಲ್ಲಿ ತಲೆ ಮರೆಸಿಕೊಂಡಿದ್ದು ನಂತರ ಬೇರೆ ರಾಜ್ಯಕ್ಕೆ ಹೋಗಿಬಿಡಬೇಕು ಎಂದುಕೊಂಡ.

ಸೂಟ್‌ಕೇಸ್‌ನಲ್ಲಿ ಇಪ್ಪತ್ತೈದು ಲಕ್ಷ ರೂಪಾಯಿಗಳಿವೆ! ಬದುಕಿರುವ ತನಕ ಸುಖ ಅನುಭವಿಸಲು ಇಷ್ಟು ಹಣ ಸಾಕು.

ರುದ್ರಯ್ಯ ಈಗ ಸೂಟ್‌ಕೇಸನ್ನು ಎತ್ತಿಕೊಂಡು ತನ್ನ ಅಕ್ಕನ ಮನೆಯ ಕಡೆ ನಡೆಯಲಾರಂಭಿಸಿದ.

ಅಪಾಯ ಎನ್ನುವುದು ಊಹೆಗೂ ನಿಲುಕದ ರೀತಿಯಲ್ಲಿ ತನ್ನನ್ನು ಆವರಿಸಿಕೊಳ್ಳಬಹುದು ಎಂಬ ಕಲ್ಪನೆ ಸಹ ರುದ್ರಯ್ಯನಿಗಿರಲಿಲ್ಲ!

★ ★ ★

ಅದೊಂದು ನಾಡ ಹೆಂಚಿನ ಮನೆ!

ಊರಿನಿಂದ ಹೊರಗೆ ಪ್ರತ್ಯೇಕವಾಗಿದ್ದ ಆ ಮನೆಯಲ್ಲಿ ವಿದ್ಯುತ್ ದೀಪ ಇರಲಿಲ್ಲ. ಆದರೆ ಗ್ಯಾಸ್ ಲೈಟ್ ಉರಿಯುತ್ತಿತ್ತು. ಗಡ್ಡೆ ಕಣ್ಣಿನ ಡೇವಿಡ್ ಅಸಹನೆಯಿಂದ ಚಡಪಡಿಸುತ್ತಿದ್ದ. ಸೈಕಲ್ ಚೈನ್ ಕೃಷ್ಣ ಜೇಬಿನಿಂದ ವಿಸ್ಕಿ ಸೀಸೆಯನ್ನು ತೆಗೆದು ಗಟಗಟನೆ ಕುಡಿದು ಕೋಪ, ಆವೇಶದಿಂದ ಗೋಡೆಗೆ ಅಪ್ಪಳಿಸಿದ. ಸೀಸೆ 'ಫಳಾರ್'' ಎಂದು ಒಡೆಯಿತು. ಇಬ್ಬರು ದಾಂಡಿಗರು ಭಯದಿಂದ ನೋಡುತ್ತಿದ್ದರು.

ಸೈಕಲ್ ಚೈನ್ ಕೃಷ್ಣ ದ್ವೇಷದಿಂದ ಕರಕರನೆ ಹಲ್ಲು ಕಡಿಯುತ್ತಾ, ''ಆ ಕುಂಟ ನನ್ನ ಮಗ ಸಿಕ್ಕಿದ್ನಾ?'' ಎಂದು ಅಬ್ಬರಿಸಿದ.

ಆ ಗ್ಯಾಂಗ್‌ನ ರೌಡಿ ಹೆದರುತ್ತಾ ''ಸಿಕ್ಕಿಲ್ಲ ಅಣ್ಣಾ...''

'4ಆಂ...ಹೂಂ...'' ಎಂದು ಅಬ್ಬರಿಸಿದ.

ರೌಡಿ ಮೆಲ್ಲಗೆ, ''ನಮ್ಮವರು ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್ ಮತ್ತು ಊರಿನ ಎಲ್ಲಾ ಮುಖ್ಯ ಸರ್ಕಲ್‌ಗಳಲ್ಲೂ ಕಾವಲು ಕಾಯುತ್ತಿದ್ದಾರೆ. ಜೀಪಿನಲ್ಲಿ ಎಲ್ಲಾ ಕಡೆ ತಿರುಗಾಡುತ್ತಿದ್ದಾರೆ.''

ಗಡ್ಡೆ ಕಣ್ಣಿನ ಡೇವಿಡ್ ಕೋಪದಿಂದ, ''ಈ ಕುಂಟ ಈ ರೀತಿ ಕೈ ಕೊಡ್ತಾನೆ ಅಂತ ನಾನಂದುಕೊಂಡಿರಲಿಲ್ಲ.''

ಕೃಷ್ಣ ಗಡುಸಾಗಿ, ''ನನಗೆ ಮೋಸ ಮಾಡಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ದಕ್ಕಿಸಿಕೊಳ್ಳೋದು ಅಷ್ಟು ಸುಲಭವಲ್ಲ. ಅವನು ಪಾತಾಳದಲ್ಲೇ ಅಡಗಿದ್ದರೂ ಬಿಡದೆ ಹಿಡಿಯುತ್ತೇನೆ.''

ದೇವಿಡ್ ಕೈ ಹಿಸುಕಿಕೊಳ್ಳುತ್ತಾ ''ಕುಂಟ ಕಂಡ ಕೂಡಲೇ ಆ ನನ್ನ ಮಗನಿಗೆ ಬ್ಲೇಡ್ ಹಾಕಿ ಹಣ ಎತ್ತಿಕೊಂಡು ಬರುತ್ತೇನೆ.''

''ರುದ್ರ ಎಲ್ಲಿಗೆ ಹೋಗಿರಬಹುದು?''

''ಈ ಊರನ್ನು ಬಿಟ್ಟು ಎಲ್ಲಿಯೂ ಹೋಗಿಲ್ಲ. ಎಲ್ಲೋ ಅಡಗಿಕೊಂಡಿದ್ದಾನೆ. ಆದರೆ ನಮ್ಮವರ ಕಣ್ಣಿಗೆ ಬಿದ್ದಿಲ್ಲ.''

ಅದೇ ಸಮಯಕ್ಕೆ ಹೊರಗಿನಿಂದ ಇನ್ನೊಬ್ಬ ರೌಡಿ ಬಂದು ಆತುರದಿಂದ, ''ಅಣ್ಣ...ರುದ್ರನನ್ನು ನಮ್ಮವನು ನೋಡಿದನಂತೆ.''

ಕೃಷ್ಣ ಒಂದೆ ನೆಗೆತಕ್ಕೆ ಅವನ ಹತ್ತಿರ ಹಾರಿ ಅವನ ಕತ್ತನ್ನು ಹಿಡಿದುಕೊಂಡು.

''ಎಲ್ಲಿ...ಎಲ್ಲಿ ನೋಡಿದ್ದಂತೆ?'' ಅಬ್ಬರಿಸಿದ.

''ಸುಭಾಷ್ ನಗರದಲ್ಲಿ...''

''ಮತ್ಯಾಕೆ ಅವನನ್ನು ಹಿಡಿದುಕೊಂಡು ಬಂದಿಲ್ಲ.''

''ಸುಭಾಷ್‌ನಗರದಲ್ಲಿ ಹೋಗುತ್ತಿದ್ದ ಅಂತ ದಾರಿಹೋಕರಿಂದ ಸುದ್ದಿ ತಿಳಿದು ಹುಡುಕಲು ಹೋಗಿದ್ದಾರೆ.''

ಕೃಷ್ಣ ಅಸಹನೆಯಿಂದ, ''ಛೇ...ಛೇ...'' ಎಂದು ಗೊಣಗಿಕೊಂಡು ಮುಷ್ಟಿಯಿಂದ ಗೋಡೆಗೆ ಗುದ್ದಿದ.

ಡೇವಿಡ್ ಗಂಭೀರವಾಗಿ, ''ಫ್ರೆಂಡ್...ಇದು ಇಪ್ಪತ್ತೈದು ಲಕ್ಷದ ವಿಷಯ. ಇದರಲ್ಲಿ ನಾವಿಬ್ಬರೂ ಆಸಕ್ತಿ ವಹಿಸದಿದ್ದರೆ ಅಷ್ಟೊಂದು ದೊಡ್ಡ ಮೊತ್ತದ ಹಣ ಕೈ ತಪ್ಪಿ ಹೋಗುತ್ತದೆ.''

ಕೃಷ್ಣ ಸಿಗರೇಟ್ ಸೇದುತ್ತಾ ತಲೆಯಾಡಿಸಿದ.

ಡೇವಿಡ್ ಮುಂದುವರೆಸುತ್ತಾ, ''ನಮ್ಮವರೆಲ್ಲಾ ಬೆಳಗಿನ ತನಕ ಸುಭಾಷ್‌ನಗರದಲ್ಲಿ ಗಮನಿಸುತ್ತಿರಲಿ. ನಾವಿಬ್ಬರೂ ಬೆಳಿಗ್ಗೆ ಹೋಗಿ ವಿಚಾರಣೆ ಮಾಡೋಣ.''

ಕೃಷ್ಣ, ''ಯೂ ಆರ್ ರೈಟ್. ಸುಭಾಷ್‌ನಗರಕ್ಕೇ ರುದ್ರಯ್ಯ ಹೋಗಿರಬೇಕಾದರೆ ಏನೋ ಕಾರಣ ಇರಲೇಬೇಕು.''

''ಹೌದು. ಅವನಿಗೆ ಅಲ್ಲಿ ಸ್ನೇಹಿತರೋ ಅಥವಾ ರಕ್ತಸಂಬಂಧಿಗಳೋ ಇರಬೇಕು. ನನಗೆ ಅನಿಸುತ್ತೆ ಅವನು ಖಂಡಿತಾ ಆ ಏರಿಯಾದಲ್ಲೇ ಯಾವ ಮನೆಯಲ್ಲೋ ತಲೆ ಮರೆಸಿಕೊಂಡಿದ್ದಾನೆ ಅಂತ. ಜಾನಿ...ಮದನ...ನೀವು ಈಗಲೇ ಸುಭಾಷ್‌ನಗರಕ್ಕೆ ಹೋಗಿ ಆ ಕುಂಟನನ್ನು ಗಮನಿಸಿಕೊಳ್ಳಿ'' ಎಂದು ತನ್ನ ಫಾಲೋಯರ್ಸ್‌ಗೆ ವಿಷಯ ತಿಳಿಸಿದ.

ಮರುದಿನ ಬೆಳಿಗ್ಗೆ ಕುಂಟ ರುದ್ರನನ್ನು ತಲಾಷ್ ಮಾಡಲು ತಾವೇ ಹೋಗಬೇಕು ಎಂದು ಕೃಷ್ಣ ಮತ್ತು ಡೇವಿಡ್ ಮಾತಾಡಿಕೊಂಡರು.

ಕೃಷ್ಣ ಕೋಪದಿಂದ, ''ಕುಂಟನನ್ನು ಡರೆ ಯಾವ ಗಲಾಟೆಗೂ ಅವಕಾಶ ಮಾಡಿಕೊಡದಂತೆ ಕೊಲೆ ಮಾಡಬೇಕು. ನಮಗೆ ಮೋಸ ಮಾಡಿರುವ ರುದ್ರ ಸಾಯಬೇಕು. ನಿಜ. ಅದಕ್ಕಿಂತಲೂ ಮುಖ್ಯವಾದುದು ಹಣ. ಇಪ್ಪತ್ತೈದು ಲಕ್ಷ ನಮಗೆ ಸಿಗಬೇಕು.''

ಡೇವಿಡ್ ಕೋಪ ಕಂಟ್ರೋಲ್ ಮಾಡಿಕೊಳ್ಳುತ್ತಾ "ರುದ್ರ ಬದುಕಿದ್ದರೆ ಯಾವತ್ತಿದ್ದರೂ ಡೇಂಜರ್ ಅವನಿಂದ ಪೋಲೀಸರಿಗೆ ನಮ್ಮ ವಿಚಾರವೆಲ್ಲಾ ತಿಳಿಯುತ್ತದೆ. ಇದರಿಂದ ರತನ್ ಲಾಲ್‌ನ ಕೊಲೆಯ ಪ್ರಕರಣ ಸಹ ಹೊರಬೀಳುತ್ತದೆ. ಆದಕ್ಕೇ ಸದ್ದಿಲ್ಲದಂತೆ ರುದ್ರನನ್ನು ಕೊಂದು ಸೂಟ್‌ಕೇಸ್ ಎತ್ತಿಕ್ಕೊಂಡು ಬರೋಣ" ಎಂದ.

ಸೈಕಲ್ ಚೈನ್ ಕೃಷ್ಣ ಎದ್ದು ನಿಂತನು. ಕುಂಟ ರುದ್ರನನ್ನು ತುಂಡು, ತುಂಡಾಗಿ ಕತ್ತರಿಸಿ ಹಾಕಬೇಕೆನ್ನುವಷ್ಟು ಕೋಪ ಉಕ್ಕೇರಿ ಬರುತ್ತಿತ್ತು ಅವನಲ್ಲಿ.

★★★

ರಾತ್ರಿ ಒಂಭತ್ತೂವರೆ ಸಮಯ.

ಸುಭಾಷ್ ನಗರ!

ಚೊತ್ತಕಾಲಿನ ಹೆಜ್ಜೆ ಇಡುತ್ತಾ ರುದ್ರಯ್ಯ ನಡೆಯುತ್ತಿದ್ದಾನೆ. ಮಳೆಯ ಹನಿಗಳು ಮುಖಕ್ಕೆ ಎರಚಲಿನಂತೆ ಬಡಿಯುತ್ತಿದೆ. ಕತ್ತಲಲ್ಲಿ ತಡವರಿಸಿಕೊಂಡು ನಡೆಯುತ್ತಿದ್ದಾನೆ. ಮೊದಲೇ ಕುಂಟ. ಜೊತೆಗೆ ಕತ್ತಲು ಬೇರೆ. ಆಮೆಯ ನಡಿಗೆ ಸಾಗುತ್ತಿದೆ.

ಸುಭಾಷ್ ನಗರದಲ್ಲಿರುವ ತನ್ನ ಅಕ್ಕನ ಮನೆಗೆ ನಾಲ್ಕು ವರ್ಷಗಳ ಹಿಂದೆ ಒಂದು ಸಾರಿ ಬಂದಿದ್ದನು. ಇವನ ಅಕ್ಕ ಪಾರ್ವತಮ್ಮ ಪ್ರೀತಿಯಿಂದ ನೋಡಿಕೊಂಡಿದ್ದಳು. ಒಂದೇ ಊರಿನಲ್ಲಿದ್ದರೂ ಸಹ ರುದ್ರಯ್ಯ ಆಗಾಗ ಹೋಗುತ್ತಿರಲಿಲ್ಲ.

ಈಗ ಅಕ್ಕ ಹೇಗಿದ್ದಾಳೋ ಗೊತ್ತಿಲ್ಲ 'ಮಗನಿಗೆ ಮದುವೆ ಮಾಡಬೇಕು ಹೆಣ್ಣು ನೋಡುತ್ತಿದ್ದೇನೆ' ಎಂದಿದ್ದಳು. ಆದರೆ ತನಗೆ ಇದರ ಬಗ್ಗೆ ಯಾವ ವಿಚಾರವೂ ತಿಳಿದಿಲ್ಲ. ಈಗಲೂ ಅಷ್ಟೇ ತಲೆ ಮರೆಸಿಕೊಳ್ಳಲು ಆಶ್ರಯ, ಆಸರೆ ಬೇಕಾಗಿರುವುದರಿಂದ ಅಕ್ಕ ನೆನಪಿಗೆ ಬರುತ್ತಿದ್ದಾಳೆ ಇಲ್ಲದಿದ್ದರೆ ಈಗಲಾದರೂ ತಾನೆಲ್ಲಿ ಹೋಗುತ್ತಿದ್ದ?

"ಎಲ್ಲಿ... ಎಲ್ಲಿ ನೋಡಿದ್ದಂತೆ?" ಅಬ್ಬರಿಸಿದ.

"ಸುಭಾಷ್ ನಗರದಲ್ಲಿ..."

"ಮತ್ಯಾಕೆ ಅವನನ್ನು ಹಿಡಿದುಕೊಂಡು ಬಂದಿಲ್ಲ."

"ಸುಭಾಷ್ ನಗರದಲ್ಲಿ ಹೋಗುತ್ತಿದ್ದ ಅಂತ ದಾರಿಹೋಕರಿಂದ ಸುದ್ದಿ ತಿಳಿದು ಹುಡುಕಲು ಹೋಗಿದ್ದಾರೆ."

ಕೃಷ್ಣ ಅಸಹನೆಯಿಂದ, ಛೇ...ಛೇ..." ಎಂದು ಗೊಣಗಿಕೊಂಡು ಮುಷ್ಟಿಯಿಂದ ಗೋಡೆಗೆ ಗುದ್ದಿದ.

ಡೇವಿಡ್ ಗಂಭೀರವಾಗಿ, ''ಫ್ರೆಂಡ್...ಇದು ಇಪ್ಪತ್ತೈದು ಲಕ್ಷದ ವಿಷಯ. ಇದರಲ್ಲಿ ನಾವಿಬ್ಬರೂ ಆಸಕ್ತಿವಹಿಸದಿದ್ದರೆ ಅಷ್ಟೊಂದು ದೊಡ್ಡ ಮೊತ್ತದ ಹಣ ಕೈ ತಪ್ಪಿ ಹೋಗುತ್ತದೆ.''

ಕೃಷ್ಣ ಸಿಗರೇಟ್ ಸೇದುತ್ತಾ ತಲೆಯಾಡಿಸಿದ.

ಡೇವಿಡ್ ಮುಂದುವರೆಸುತ್ತಾ, ''ನಮ್ಮವರೆಲ್ಲಾ ಬೆಳಗಿನ ತನಕ ಸುಭಾಷ್‌ನಗರದಲ್ಲಿ ಗಮನಿಸುತ್ತಿರಲಿ. ನಾವಿಬ್ಬರೂ ಬೆಳಿಗ್ಗೆ ಹೋಗಿ ವಿಚಾರಣೆ ಮಾಡೋಣ.''

ಕೃಷ್ಣ, ''ಯೂ ಆರ್ ರೈಟ್. ಸುಭಾಷ್‌ನಗರಕ್ಕೇ ರುದ್ರ ಹೋಗಿರಬೇಕಾದರೆ ಏನೋ ಕಾರಣ ಇರಲೇಬೇಕು.''

''ಹೌದು ಅವನಿಗೆ ಅಲ್ಲಿ ಸ್ನೇಹಿತರೋ ಅಥವಾ ರಕ್ತಸಂಬಂಧಿಗಳೋ ಇರಬೇಕು. ನನಗೆ ಅನಿಸುತ್ತೆ ಅವನು ಖಂಡಿತಾ ಆ ಏರಿಯಾದಲ್ಲೇ ಯಾವ ಮನೆಯಲ್ಲೋ ತಲೆ ಮರೆಸಿಕೊಂಡಿದ್ದಾನೆ ಅಂತ. ಜಾನಿ...ಮದನ...ನೀವು ಈಗಲೇ ಸುಭಾಷ್‌ನಗರಕ್ಕೆ ಹೋಗಿ ಆ ಕುಂಟನನ್ನು ಗಮನಿಸಿಕೊಳ್ಳಿ'' ಎಂದು ತನ್ನ ಫಾಲೋಯರ್ಸ್‌ಗೆ ವಿಷಯ ತಿಳಿಸಿದ.

ಮರುದಿನ ಬೆಳಿಗ್ಗೆ ಕುಂಟ ರುದ್ರನನ್ನು ತಲಾಷ್ ಮಾಡಲು ತಾವೇ ಹೋಗಬೇಕು ಎಂದು ಕೃಷ್ಣ ಮತ್ತು ಡೇವಿಡ್ ಮಾತಾಡಿಕೊಂಡರು.

ಕೃಷ್ಣ ಕೋಪದಿಂದ, ''ಕುಂಟನನ್ನು ಯಾವ ಗಲಾಟೆಗೂ ಅವಕಾಶ ಮಾಡಿಕೊಡದಂತೆ ಕೊಲೆ ಮಾಡಬೇಕು. ನಮಗೆ ಮೋಸ ಮಾಡಿರುವ ರುದ್ರ ಸಾಯಬೇಕು. ನಿಜ. ಅದಕ್ಕಿಂತಲೂ ಮುಖ್ಯವಾದುದು ಹಣ. ಇಪ್ಪತ್ತೈದು ಲಕ್ಷ ನಮಗೆ ಸಿಗಬೇಕು.''

ಡೇವಿಡ್ ಕೋಪ ಕಂಟ್ರೋಲ್ ಮಾಡಿಕೊಳ್ಳುತ್ತಾ ''ರುದ್ರ ಬದುಕಿದ್ದರೆ ಯಾವತ್ತಿದ್ದರೂ ಡೇಂಜರ್. ಅವನಿಂದ ಪೋಲೀಸರಿಗೆ ನಮ್ಮ ವಿಚಾರವೆಲ್ಲಾ ತಿಳಿಯುತ್ತದೆ. ಇದರಿಂದ ರತನ್‌ಲಾಲ್‌ನ ಕೊಲೆಯ ಪ್ರಕರಣ ಸಹ ಹೊರಬೀಳುತ್ತದೆ. ಆದಕ್ಕೇ ಸದ್ದಿಲ್ಲದಂತೆ ರುದ್ರನನ್ನು ಕೊಂದು ಸೂಟ್‌ಕೇಸ್ ಎತ್ತಿಕೊಂಡು ಬರೋಣ'' ಎಂದ.

ಸೈಕಲ್ ಚೈನ್ ಕೃಷ್ಣ ಎದ್ದು ನಿಂತನು. ಕುಂಟ ರುದ್ರನನ್ನು ತುಂಡು, ತುಂಡಾಗಿ

ಕತ್ತರಿಸಿ ಹಾಕಬೇಕೆನ್ನುವಷ್ಟು ಕೋಪ ಉಕ್ಕೇರಿ ಬರುತ್ತಿತ್ತು ಅವನಲ್ಲಿ.

★★★

ರಾತ್ರಿ, ಒಂಭತ್ತೂವರೆ ಸಮಯ.

ಸುಭಾಷ್ ನಗರ!

ಚೊತ್ತ ಕಾಲಿನ ಹೆಜ್ಜೆ ಇಡುತ್ತಾ ರುದ್ರಯ್ಯ ನಡೆಯುತ್ತಿದ್ದಾನೆ. ಮಳೆಯ ಹನಿಗಳು ಮುಖಕ್ಕೆ ಎಚಲಿನಂತೆ ಬಡಿಯುತ್ತಿದೆ. ಕತ್ತಲಲ್ಲಿ ತಡವರಿಸಿಕೊಂಡು ನಡೆಯುತ್ತಿದ್ದಾನೆ. ಮೊದಲೇ ಕುಂಟ. ಜೊತೆಗೆ ಕತ್ತಲು ಬೇರೆ. ಆಮೆಯ ನಡಿಗೆ ಸಾಗುತ್ತಿದೆ.

ಸುಭಾಷ್ ನಗರದಲ್ಲಿರುವ ತನ್ನ ಅಕ್ಕನ ಮನೆಗೆ ನಾಲ್ಕು ವರ್ಷಗಳ ಹಿಂದೆ ಒಂದು ಸಾರಿ ಬಂದಿದ್ದನು. ಇವನ ಅಕ್ಕ ಪಾರ್ವತಮ್ಮ ಪ್ರೀತಿಯಿಂದ ನೋಡಿಕೊಂಡಿದ್ದಳು. ಒಂದೆ ಊರಿನಲ್ಲಿದ್ದರೂ ಸಹ ರುದ್ರಯ್ಯ ಆಗಾಗ ಹೋಗುತ್ತಿರಲಿಲ್ಲ.

ಈಗ ಅಕ್ಕ ಹೇಗಿದ್ದಾಳೋ ಗೊತ್ತಿಲ್ಲ. 'ಮಗನಿಗೆ ಮದುವೆ ಮಾಡಬೇಕು ಹೆಣ್ಣು ನೋಡುತ್ತಿದ್ದೇನೆ' ಎಂದಿದ್ದಳು. ಆದರೆ ತನಗೆ ಇದರ ಬಗ್ಗೆ ಯಾವ ವಿಚಾರವೂ ತಿಳಿದಿಲ್ಲ. ಈಗಲೂ ಅಷ್ಟೇ ತಲೆ ಮರೆಸಿಕೊಳ್ಳಲು ಆಶ್ರಯ, ಆಸರೆ ಬೇಕಾಗಿರುವುದರಿಂದ ಅಕ್ಕ ನೆನಪಿಗೆ ಬರುತ್ತಿದ್ದಾಳೆ. ಇಲ್ಲದಿದ್ದರೆ ಈಗಲಾದರೂ ತಾನೆಲ್ಲಿ ಹೋಗುತ್ತಿದ್ದ?

ರುದ್ರಯ್ಯ ಸೂಟ್‌ಕೇಸನ್ನು ಎಡಗೈಗೆ ಬದಲಾಯಿಸಿಕೊಂಡ. ಏಕೆಂದರೆ ಕೈ ಒಂದೇ ಸಮನೆ ಉರಿಯುತ್ತಿತ್ತು.

ರುದ್ರಯ್ಯ ಗಲ್ಲಿಯೊಂದರಲ್ಲಿ ತಿರುಗಿದ. ಎದುರಿಗೆ ದೊಡ್ಡ ಮಾವಿನ ಮರ ಕಾಣುತ್ತಿತ್ತು. ಅಲ್ಲಿಂದ ಎಡಕ್ಕೆ ತಿರುಗಿದ. ಎದುರಿಗೆ ಜೋಡಿ ತೆಂಗಿನ ಮರಗಳಿದ್ದ ಮನೆ ಕಂಡಿತು. ಅದೇ ಇವನ ಅಕ್ಕ ಪಾರ್ವತಮ್ಮನ ಮನೆ.

ಮಂಗಳೂರು ಹೆಂಚಿನ ಮಧ್ಯಮವರ್ಗದವರ ಮನೆ. ರುದ್ರಯ್ಯ ಮೆಟ್ಟಲುಗಳನ್ನು ಹತ್ತಲಾರಂಭಿಸಿದ. ಆಗ ನಾಯಿಯೊಂದು ಜೋರಾಗಿ ಬೊಗಳುತ್ತಾ ಇವನ ಹತ್ತಿರ ಬಂದಿತು. ರುದ್ರಯ್ಯ ದೂರ ಸರಿಯುತ್ತಾ ಕಲ್ಲೊಂದನ್ನು ಎತ್ತಿಕೊಂಡು ಅದರತ್ತ ಬೀಸುತ್ತಾ, "ಥೂ...ಕುರ್ ಯಾ..." ಎಂದು ಅಬ್ಬರಿಸಿದ.

ನಾಯಿಯ ಬೊಗಳುವಿಕೆ ಜಾಸ್ತಿಯಾಯಿತು.

ರುದ್ರಯ್ಯ ಹೆದರಿ ಹಿಂದೆ ಸರಿಯುತ್ತಿದ್ದ.

ವಿದ್ಯುತ್ ದೀಪ ಬೆಳಗಿತು.

ರುದ್ರಯ್ಯ ಆತುರದಿಂದ ಅತ್ತ ನೋಡಿದ. ಬೇಗ ಯಾರಾದರೂ ಎದ್ದು ಬರಬಾರದೆ ಎಂದುಕೊಂಡ.

ಬಾಗಿಲು ತೆರೆದುಕೊಂಡಿತು.

ಟಾರ್ಚಿನ ಬೆಳಕನ್ನು ಬೆಳಗಿಸುತ್ತಾ ಯಾರೋ ಹೊರಗೆ ಬಂದು ತುಂಬಾ ಗಡುಸಾಗಿ, ''ಯಾರು...ಯಾರದು?''

ರುದ್ರಯ್ಯ ಸರ್ರನೆ ಅತ್ತ ನೋಡಿದ.

ಅವನ ಅಕ್ಕನ ಮಗ ಸುರೇಂದ್ರ ನಿಂತಿದ್ದ. ಮಳೆಯ ಬಿರುಸು ಜಾಸ್ತಿಯಾಯಿತು. ರುದ್ರಯ್ಯ ಚಳಿಯಿಂದ ನಡುಗುತ್ತಾ, ''ಸುರೇಂದ್ರ...ನಾನೋ ನಿನ್ನ ಸೋದರ ಮಾವ...'' ಎಂದು ಧ್ವನಿಯೇರಿಸಿ ಹೇಳಿ ಹತ್ತಿರ ಬಂದ.

ಸುರೇಂದ್ರನಿಗೆ ಮೊದಲು ನಂಬಿಕೆಯೆ ಬರಲಿಲ್ಲ. ಗುರುತು ಹಿಡಿದ ನಂತರ ಅಸಮಾಧಾನದಿಂದಲೇ, ''ಓ...ಮಾವನ? ಮಧ್ಯ ರಾತ್ರಿಯಲ್ಲಿ ನಮ್ಮ ನೆನಪು ಬಂದಿತೆ?'' ಎಂದು ವ್ಯಂಗ್ಯವಾಗಿ ಕೇಳಿದ.

ರುದ್ರಯ್ಯನಿಗೆ ಕೋಪ ಬಂದರೂ ಸಹಿಸಿಕೊಂಡು, ''ಸುರಿಯೋ ಮಳೆಯಲ್ಲಿ ನಿಲ್ಲಿಸಿಕೊಂಡು ಎಂತಹ ಮಾತು ಆಡೋದು. ಮೊದಲು ಅಕ್ಕನನ್ನು ನೋಡಬೇಕು. ಒಳಗೆ ನಡಿ.''

ಸುರೇಂದ್ರ ತನ್ನ ಮಾವನ್ನ ವಿಚಿತ್ರವಾಗಿ ನೋಡುತ್ತಾ ''ಏನು...ಏನಂದೆ ಮಾವ, ಅಕ್ಕನನ್ನು ನೋಡಲು ಬಂದಿರುವೆಯಾ?'' ಎಂದು ಹುಬ್ಬೇರಿಸಿ ಕೇಳಿದ.

''ಇದ್ಯಾಕೆ ಹೀಗೆ ಕೇಳ್ತಾ ಇದ್ದೀಯಾ ಸುರೇಂದ್ರ. ನನ್ನ ರಕ್ತಸಂಬಂಧಿ ಅಂತ ನನಗೆ ಇನ್ಯಾರು ಇದ್ದಾರೆ ಹೇಳು'' ಎಂದು ತಾನಾಗಿಯೇ ಮನೆಯೊಳಗೆ ಬಂದ.

ಅದೇ ಸಮಯಕ್ಕೆ ನಾಲ್ಕು ಮಂದಿ ರೌಡಿಗಳಿದ್ದ ಜೀಪು ಸುಭಾಷ್‌ನಗರಕ್ಕೆ ಬಂದಿತು!

★★★

ಅದು ಪೋಲೀಸ್ ಸ್ಟೇಷನ್!

ಎಸ್. ಐ. ಮನೋಹರ್ ರತನ್‌ಲಾಲ್ ಕೊಲೆಯ ಬಗ್ಗೆ ತಾನು ಸಂಗ್ರಹಿಸಿದ್ದ ವಿವರಗಳನ್ನು ಪಟ್ಟಿ ಮಾಡಲಾರಂಭಿಸಿದ.

ರತನ್‌ಲಾಲ್ ದೊಡ್ಡ ಬಿಜಿನೆಸ್‌ಮ್ಯಾನ್. ಯಾವುದೋ ವ್ಯವಹಾರದ

ಸಲುವಾಗಿ ಕೆಲವು ಲಕ್ಷಗಳನ್ನು ತೆಗೆದುಕೊಂಡು ಬಂದು ಅಯೋಧ್ಯ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದ.

ರತನ್‌ಲಾಲ್ ಎಷ್ಟು ಹಣ ತಂದಿದ್ದ ಎಂದು ತನಿಖೆಯ ಸಮಯದಲ್ಲಿ ಅವನ ಮನೆಯವರು ಹೇಳಿರಲಿಲ್ಲ. ಏಕೆಂದರೆ ಎಲ್ಲವೂ ಬ್ಲಾಕ್ ಮನಿ. ಕಡಿಮೆಯೆಂದರೂ ಇಪ್ಪತ್ತೈದು ಲಕ್ಷ ಇರಬೇಕು.

ರತನ್‌ಲಾಲ್ ಕೊಲೆಯಾಗಿದ್ದಾನೆ!

ಹಣ ಕಳುವಾಗಿದೆ!

ಅಂದರೆ ರತನ್‌ಲಾಲ್ ಹತ್ತಿರ ಹಣ ಇರೋ ವಿಚಾರ ತಿಳಿದಿರುವ ವ್ಯಕ್ತಿಯೇ ಕೊಲೆ ಮಾಡಿದ್ದಾನೆ.

ಸಿಗರೇಟ್ ಸೇದುತ್ತಾ ಎಲ್ಲವನ್ನೂ ತರ್ಕ ಬದ್ಧವಾಗಿ ಆಲೋಚಿಸುತ್ತಿದ್ದ ಮನೋಹರನಿಗೆ ಅಯೋಧ್ಯ ಹೋಟೆಲ್‌ನಲ್ಲಿ ತಾನು ಕಂಡಿದ್ದ ಕುಂಟನ ನೆನಪಾಯಿತು.

ಈ ಕುಂಟ ರುದ್ರನೇ ಕೊಲೆಗಾರ!

ಏಕೆಂದರೆ ರತನ್‌ಲಾಲ್‌ನನ್ನು ನೋಡುವುದಕ್ಕೆ ಅಂತ ಹೇಳಿ ರೂಮಿಗೆ ಹೋಗಿದ್ದಾನೆ. ಹೋಗುವಾಗ ಅವನ ಕೈಯಲ್ಲಿ ಏನೂ ಇರಲಿಲ್ಲವಂತೆ. ಆದರೆ ಬರುವಾಗ ಸೂಟ್‌ಕೇಸ್ ಇತ್ತು. ಅದರಲ್ಲಿ 'ಜಾಕ್‌ಸನ್' ಎಂದು ಬರೆದಿತ್ತು.

ಈ ಸೂಟ್‌ಕೇಸ್ ರತನ್‌ಲಾಲ್‌ನದ್ದು ಎಂದು ಹೋಟೆಲ್ ಸಿಬ್ಬಂದಿಯ ಹೇಳಿಕೆಯಿಂದ ದೃಢಪಟ್ಟಿದೆ.

ಈ ಕುಂಟ ಶ್ರೀಮಂತನಂತೆ ವೇಷ ಹಾಕಿಕೊಂಡು ಯಾರಿಗೂ ಅನುಮಾನಬಾರದ ರೀತಿಯಲ್ಲಿ ಕೊಠಡಿಗೆ ಹೋಗಿ ಕೊಲೆ ಮಾಡಿ ಹಣ ಎತ್ತಿಕೊಂಡು ಬಂದಿದ್ದಾನೆ.

ಅಂದರೆ ಕುಂಟನ ಹತ್ತಿರ ಹಣವಿದೆ!

ಈ ಕುಂಟ ಯಾರು?

ಎಸ್. ಐ. ಮನೋಹರ್ ತಾನು ಹೋಟೆಲ್‌ನಲ್ಲಿ ಕಂಡಿದ್ದ ವ್ಯಕ್ತಿಯ ಮುಖವನ್ನು ನೆನಪುಮಾಡಿಕೊಂಡ.

ಸಮಯ ಉರುಳುತ್ತಿತ್ತು.

ನಂತರ ಏನೋ ಹೊಳೆದಂತಾಗಿ ಎದ್ದು ಹೋಗಿ ಕೆಲವು ಫೈಲುಗಳನ್ನು ಎತ್ತಿಕೊಂಡು ಬಂದು ನೋಡಲಾರಭಿಸಿದ.

ಅರ್ಧ ಗಂಟೆ ಕಳೆಯಿತು.

ರುದ್ರಯ್ಯನ ಬಗ್ಗೆ ವಿವರಗಳಿದ್ದ ಫೈಲು ದೊರೆಯಿತು. ಅದರಲ್ಲಿ ಫೋಟೋ ಮತ್ತು ಅವನ ಅಪರಾಧಗಳ ವಿವರವಿತ್ತು.

ಫೋನ್ ಶಬ್ದ ಮಾಡಲಾರಂಭಿಸಿತು.

ಎಸ್. ಐ. ಮನೋಹರ್ ರಿಸೀವರ್ ಎತ್ತಿ ''ಹಲೋ...''

''ಸಾರ್...ಕಾನ್‌ಸ್ಟೇಬಲ್ ಕೆಂಚ ಮಾತಾಡ್ತ ಇರೋದು.''

''ಹಾಂ...ಹೇಳು...ಹೇಳು...''

''ಕುಂಟನನ್ನು ನಾವು ನೋಡಿದೆವು.''

''ಎಲ್ಲಿ...ಎಲ್ಲಿ?'' ಆತುರದಿಂದ ಕೇಳಿದ.

''ಸುಭಾಷ್‌ನಗರದಲ್ಲಿ.''

''ಅಲ್ಲಿ ಯಾರ ಮನೆಗೆ ಹೋದ?''

''ಗೊತ್ತಿಲ್ಲ ಸಾರ್.''

ಮನೋಹರ್ ಕೋಪದಿಂದ, ''ಏನೋ ಹಾಗಂದ್ರೆ...''

''ಸುಭಾಷ್‌ನಗರಕ್ಕೆ ಬಂದಿದ್ದನ್ನು ನಮ್ಮವರು ನೋಡಿದ್ದಾರೆ. ಆದರೆ ಕತ್ತಲಲ್ಲಿ ಕುಂಟ ಎಲ್ಲಿಗೆ ಹೋದ ತಿಳಿಯಲಿಲ್ಲ.

''ಓ.ಕೆ. ಆ ಏರಿಯಾದ ಎಲ್ಲಾ ಕಡೆ ನಮ್ಮವರು ಎಚ್ಚರಿಕೆಯಿಂದ ಕಾಯುತ್ತಿರಲಿ. ಉಳಿದದ್ದನ್ನು ನಾನು ಗಮನಿಸುತ್ತೇನೆ.''

''ಎಸ್ ಸಾರ್.''

ಫೋನ್ ಡಿಸ್‌ಕನೆಕ್ಟ್ ಆಯಿತು.

ರುದ್ರಯ್ಯ ಸುಭಾಷ್ ನಗರದಲ್ಲೇ ಉಳಿದುಕೊಂಡಿದ್ದಾನೆ. ಆದರೆ ಯಾರ ಮನೆಯಲ್ಲಿ? ಅವನಿಗೆ ಪರಿಚಯದವರು ಮತ್ತು ಸಂಬಂಧಿಗಳು ಇರುವರೆ?

ಮನೋಹರ್ ಮತ್ತೊಂದು ಸಿಗರೇಟ್ ಸೇದಿದ.

ಯೋಚನೆಗಳು ತರ್ಕಬದ್ಧವಾಗಿ ಸಾಗಿತ್ತು. 'ನಾನು ಯೂನಿಫಾರಂನಲ್ಲಿ ಹೋಗಬಾರದು. ಆ ಏರಿಯಾದಲ್ಲಿಹೇಗಿದ್ದರೂ ಕ್ಲೋಸ್ ಫ್ರೆಂಡ್ ಸುರೇಂದ್ರ ಇದ್ದಾನೆ. ಅವನ ಮನೆಗೆ ಹೋಗಿ ಅವನನ್ನು ಜೊತೆಗೆ ಕರೆದುಕೊಂಡು ಈ ಕುಂಟನನ್ನು ಪತ್ತೆ ಮಾಡಬೇಕು. ಸ್ವಲ್ಪ ಸುಳಿವೂ ಸಿಕ್ಕಿದರೂ ಕುಂಟ ಜಾರಿಕೊಳ್ಳುತ್ತಾನೆ. ಕುಂಟನಿಗೆ ಎಂಟು

ಚೇಷ್ಟೆ ಅನ್ನೋದು ನಿಜ. ಯಾರಿಗೂ ಸುಳಿವನ್ನೇ ಕೊಡದಂತೆ ಡೀಲ್ ಮಾಡಬೇಕು.'

ಪುನಃ ಫೋನ್ ಶಬ್ದ ಮಾಡಲಾರಂಭಿಸಿತು.

ಮನೋಹರ ರಿಸೀವರ್ ಎತ್ತಿ, ''ಹಲೋ...''

''ಸರ್...ಕಾನ್‌ಸ್ಟೇಬಲ್ ಕಂಚ...''

''ಹಾಂ...ಹೇಳು...''

''ಈಗ ತಾನೇ ರೌಡಿಗಳ ಜೀಪು ಬಂದಿತು.''

ಮನೋಹರ ಆಶ್ಚರ್ಯದಿಂದ ಉದ್ಗರಿಸಿದ, ''ಏನಂದೆ?''

''ಹೌದು ಸಾರ್. ಅದರಿಂದ ನಾಲ್ಕು ಮಂದಿ ರವಡಿಗಳು ಇಳಿದು ಸುಭಾಷ್‌ನಗರದ ನಾಲ್ಕು ಮೂಲೆಗಳಿಗೆ ಹೋದರು.''

''ಅವರ್‍ಯಾಕೆ ಬಂದಿರಬಹುದು?''

''ಅವರು ಹುಡುಕುತ್ತಿರುವ ರೀತಿಯನ್ನು ನೋಡಿದರೆ ಅವರೂ ಸಹ ಕುಂಟನಿಗಾಗಿ ಬಂದಿರಬೇಕು.''

''ಮೈ ಗಾಡ್...! ಆ ಕುಂಟ ರವಡಿಗಳ ಕೈಗೆ ಸಿಗಬಾರದು'' ಎಂದು ಗಾಬರಿಯಿಂದ ಹೇಳಿದ.

''ಎಲ್ಲರನ್ನೂ ಅರೆಸ್ಟ್ ಮಾಡಲು ಹೇಳಲೆ?''

''ಬೇಡ...ಬೇಡ...ಯಾರ್‍ಯಾರು ಬಂದಿದ್ದಾರೆ?''

''ಎಲ್ಲಾ ಸೈಕಲ್ ಚೈನ್ ಕೃಷ್ಣನ ಕಡೆಯವರು.''

''ಏನಾದರೂ ಗಲಾಟೆ ಮಾಡಿದರೆ?''

''ಇಲ್ಲ ಸಾರ್.''

''ನೀವ್ಯಾರೂ ರೌಡಿಗಳ ತಂಟೆಗೆ ಹೋಗಬೇಡಿ. ಆದರೆ ಆ ಕುಂಟ ಅವನ ಕೈಗೆ ಸಿಗದಂತೆ ನೋಡಿಕೊಳ್ಳಿ.''

''ಓ. ಕೆ. ಸಾರ್''

ಫೋನ್ ಡಿಸ್‌ಕನೆಕ್ಟ್ ಆಯಿತು.

ಸೈಕಲ್ ಚೈನ್ ಕೃಷ್ಣನ ರೌಡಿಗಳು ಕುಂಟನನ್ನು ಹುಡುಕಿಕೊಂಡು ಬರಲು ಕಾರಣವೇನು? ಅವನ ಹತ್ತಿರ ಹಣ ಇರೋ ವಿಚಾರ ತಿಳಿದು ಅದಕ್ಕಾಗಿ ಹುಡುಕಿಕೊಂಡು ಬಂದಿರಬಹುದೆ? ಇಲ್ಲ...ಇಲ್ಲ...ಕುಂಟ ರೌಡಿಗಳ ಕೈಗೆ ಸಿಗಬಾರದು. ನಾನು ಸುಮಳ

ಚುರುಕಾಗದಿದ್ದರೆ ಕೆಲಸ ಕೆಡುತ್ತದೆ ಎಂದುಕೊಂಡು ಎಸ್. ಐ. ಮನೋಹರ್ ಎದ್ದು ನಿಂತನು.

ಎಸ್. ಐ. ಮನೋಹರ್ ಕುಂಟನನ್ನು ಹುಡುಕಿ ಅರೆಸ್ಟ್ ಮಾಡಿ ಕರೆದುಕೊಂಡು ಬರಬೇಕೆಂಬ ಉದ್ದೇಶದಿಂದ ಬೈಕನ್ನು ಸ್ಟಾರ್ಟ್ ಮಾಡಿದ.

ಒಂದು ಕಡೆ ರೌಡಿಗಳು...ಮತ್ತೊಂದು ಕಡೆ ಪೋಲೀಸರು...

ಈ ಅಪಾಯಗಳ ಅರಿವೇ ಇಲ್ಲದೆ ಕುಂಟ ರುದ್ರಯ್ಯ ತನ್ನ ಹತ್ತಿರ ಇರುವ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಹೇಗೆ ಖರ್ಚು ಮಾಡಬೇಕು ಎಂದು ಸುಖದ ಕನಸು ಕಾಣುತ್ತಿದ್ದ!

2

ರುದ್ರಯ್ಯ ಟವಲ್ಲಿನಿಂದ ಮುಖ ಒರೆಸಿಕೊಂಡ. ನಂತರ ತನ್ನ ಸೋದರಳಿಯ ಕೊಟ್ಟ ಪಂಚೆ ಮತ್ತು ಬನಿಯನ್ ಅನ್ನು ಧರಿಸಿಕೊಂಡ.

ಗೆಜ್ಜೆಯ ಶಬ್ದ ಕೇಳಿಸಿತು. ರುದ್ರಯ್ಯ ತಲೆಯೆತ್ತಿ ನೋಡಿದ.

ಗುಲಾಬಿ ಬಣ್ಣದ ನೈಟಿ ಧರಿಸಿದ್ದ ಸುಂದರ ಯುವತಿಯೊಬ್ಬಳು ಕೈಯಲ್ಲಿ ಹೊಗೆಯಾಡುತ್ತಿದ್ದ ಕಾಫಿಯ ಲೋಟ ಹಿಡಿದುಕೊಂಡು ನಿಂತಿದ್ದಳು. ಅವಳ ಕತ್ತಿನಲ್ಲಿ ಮಾಂಗಲ್ಯದ ಸರ ಕಾಣುತ್ತಿತ್ತು.

ರುದ್ರಯ್ಯ ಹುಬ್ಬೇರಿಸಿ ನೋಡಿದ.

ಇದನ್ನು ಅರ್ಥ ಮಾಡಿಕೊಂಡ ಸುರೇಂದ್ರ, ''ನನ್ನ ಹೆಂಡತಿ ಸುಮ'' ಎಂದು ಹೆಂಡತಿಯತ್ತ ತಿರುಗಿ, ''ಇವರು ನನ್ನ ಸೋದರಮಾವ ರುದ್ರಯ್ಯ ಅಂತ'' ಪರಿಚಯಿಸಿದ.

ಸುಮ ನಗುತ್ತಾ ಕೈ ಮುಗಿದಳು.

ರುದ್ರಯ್ಯ ಕಾಫಿ ಕುಡಿಯುತ್ತಾ, ''ಸುರೇಂದ್ರ...ಯಾವಾಗ ಮದುವೆ ಮಾಡಿಕೊಂಡೆ?'' ಕೇಳಿದ.

''ಒಂದು ತಿಂಗಳಾಯಿತು.''

''ನಿನ್ನ ಮದುವೆಗಂತೂ ನನಗೆ ಬರಲು ಆಗಲಿಲ್ಲ. ಇದು ನಿನ್ನ ಸೋದರಮಾವನ ಕಿರು ಉಡುಗೊರೆ'' ಎಂದು ಜೇಬಿನಿಂದ ನೂರರ ಇಪ್ಪತ್ತು ನೋಟುಗಳನ್ನು ತೆಗೆದುಕೊಟ್ಟನು.

ಮುಖ ಅರಳಿತು.

,ಸುರೇಂದ್ರ ಗಾಬರಿಯಿಂದ, ''ಇಷ್ಟೊಂದು ಹಣ ಯಾಕೆ ಮಾವ?'' ಎಂದ.

''ನಿನ್ನ ಹೆಂಡತಿಗೆ ಉಂಗುರ ಮಾಡಿಸು.''

ಸುರೇಂದ್ರ ತೊದಲುತ್ತಾ ''ಹಾಗಲ್ಲ ಅದು...ಅದು...''

ರುದ್ರಯ್ಯ ಗಂಭೀರವಾಗಿ, ''ನಾನೇನು ದೂರದವನಲ್ಲ. ಯಾಕೆ ಸಂಕೋಚ ಮಾಡಿಕೊಳ್ತೀಯ ತಗೋ.''

ಸುರೇಂದ್ರ ಹೆಂಡತಿಯತ್ತ ನೋಡಿದ. ಆಗಲೇ ಹೊಸ ಉಂಗುರದ ಕನಸು ಕಾಣುತ್ತಿದ್ದ ಸುಮ ಹಣ ತಗೆದುಕೊಳ್ಳುವಂತೆ ತನ್ನ ಗಂಡನಿಗೆ ಸೂಚನೆ ನೀಡಿದಳು. ಸುರೇಂದ್ರ ಮರು ಮಾತನಾಡದೆ ಹಣವನ್ನು ತನ್ನ ಜೇಬಿಗೆ ಸೇರಿಸಿದ.

ಇಲ್ಲಿ ವಿಚಾರವೊಂದಿದೆ. ರುದ್ರಯ್ಯನೇನು ಎರಡು ಸಾವಿರ ರೂಪಾಯಿಗಳನ್ನು ಸೋದರಳಿಯನ ಮೇಲಿನ ಪ್ರೀತಿಯಿಂದ ಕೊಟ್ಟರಲಿಲ್ಲ. ಇದು ಎಲ್ಲಾ ವ್ಯವಹಾರಿಕ! ಅಂದರೆ ಈಗವನಿಗೆ ಆಶ್ರಯದ ಅಗತ್ಯವಿತ್ತು. ನಾಲ್ಕು ದಿವಸ ಅದೇ ಮನೆಯಲ್ಲಿ ಇರಬೇಕಲ್ಲ. ಕಾಸು ತೋರಿಸದೆ ಸಂಬಂಧದ ಹೆಸರಿನಲ್ಲಿ ಠಿಕಾಣಿ ಹೂಡಿದರೆ ಹೆಂಗಸರು ಆದರದಿಂದ ಸತ್ಕರಿಸಲು ಸಾಧ್ಯವೆ? ಅದಕ್ಕೆ ಉಡುಗೊರೆಯ ನೆಪದಲ್ಲಿ ಎರಡು ಸಾವಿರ ಕೈಗೆ ಹಾಕಿ ಹೆಂಡತಿಗೆ ಉಂಗುರ ಮಾಡಿಸು ಎಂದಿದ್ದ.

ರುದ್ರಯ್ಯ ಗಡ್ಡ ಕೆರೆದುಕೊಂಡು ಸುತ್ತಲೂ ನೋಡುತ್ತಾ, ''ಅಕ್ಕ ಎಲ್ಲೋ ಸುರೇಂದ್ರ?''

''ತಿರುಪತಿಗೆ ಹೋಗಿದ್ದಾರೆ.''

''ಹೌದಾ...ಛೇ...ಛೇ...ತುಂಬಾ ದಿವಸ ಆಗಿತ್ತು. ಈ ಸಾರಿಯೂ ನೋಡಲು ಆಗುತ್ತದೋ ಇಲ್ಲವೋ'' ಎಂದು ರಾಗ ಎಳೆದ.

ಸುಮ ಕೂಡಲೇ, ''ಮಾವಯ್ಯ...ಇನ್ನೆರಡು ದಿವಸಕ್ಕೆ ಅತ್ತೆ ವಾಪಸ್ ಬರುತ್ತಾರೆ. ನೋಡಿಕೊಂಡೇ ಹೋಗುವಿರಂತೆ ಇರಿ'' ಎಂದಳು.

ಸುರೇಂದ್ರ ಮೆಲ್ಲಗೆ, ''ಹಾಗೆ ಮಾಡಿ ಮಾವ.''

ರುದ್ರಯ್ಯ ತಲೆಯಾಡಿಸುತ್ತಾ, ''ನೀವಿಬ್ಬರೂ ಇಷ್ಟು ಹೇಳುತ್ತಿರುವಾಗ ನನಗೆ ನಿರಾಕರಿಸಲು ಮನಸ್ಸಾಗುತ್ತಿಲ್ಲ ಅಕ್ಕ ಬರುವ ತನಕ ಇದ್ದು ಅವಳನ್ನು ನೋಡಿಕೊಂಡೇ ಹೋಗುತ್ತೇನೆ'' ಎಂದು ಜೇಬಿಗೆ ಕೈ ಹಾಕಿ ಪುನಃ ಒಂದು ಸಾವಿರ ರೂಪಾಯಿ ತೆಗೆದು

ಸುಮ ಕೈಗೆ ಕೊಡುತ್ತಾ, ''ಇದನ್ನು ಮನೆಯ ಖರ್ಚಿಗೆ ಉಪಯೋಗಿಸಿಕೊಳ್ಳಮ್ಮ'' ಎಂದು ನಕ್ಕ.

ಧಾರಾಳವಾಗಿ ಹಣ ಕೊಡುತ್ತಿರುವಾಗ ಸಂತೋಷ ಆಗದಿರುವುದೇ? ಸುಮ ಸಂಕೋಚದಿಂದಲೆ ಹಣ ತೆಗೆದುಕೊಂಡು ಬೇಗ ಬಿಸಿಬಿಸಿ ಅಡುಗೆ ಮಾಡಿ ಬಡಿಸಿದಳು.

ಆಗ ರಾತ್ರಿ ಹನ್ನೆರಡರ ಸಮಯ.

ತುಂಬಾ ಹೊಟ್ಟೆ ಹಸಿದಿದ್ದರಿಂದ ರುದ್ರಯ್ಯ ಚೆನ್ನಾಗಿಯೇ ತಿಂದು, 'ಡರ್' ಎಂದು ತೇಗಿದ.

ಸುರೇಂದ್ರ ತನ್ನ ಮಾವನಿಗೆ ಮಲಗಿಕೊಳ್ಳಲು ವ್ಯವಸ್ಥೆ ಮಾಡುತ್ತಿರುವಾಗ ರುದ್ರಯ್ಯ ಹತ್ತಿರ ಬಂದು ''ಸುರೇಂದ್ರ, ನನಗೊಂದು ಪ್ರತ್ಯೇಕ ಕೊಠಡಿ ಬೇಕು. ಯಾಕೆ ಅಂದರೆ ನಾನು ಕೆಲವು ಬರವಣಿಗೆ ಕೆಲಸ ಮಾಡಬೇಕಾಗುತ್ತದೆ.''

ಗಂಡ-ಹೆಂಡತಿ ಪರಸ್ಪರ ಮುಖ ನೋಡಿಕೊಂಡರು. ಅವರ ಮನೆಯಲ್ಲಿ ಪ್ರತ್ಯೇಕವಾಗಿ ಇದ್ದದ್ದು ಒಂದೆ ಒಂದು ಕೊಠಡಿ ಮಾತ್ರ. ಅದನ್ನೇ ಬೆಡ್‌ರೂಮ್ ಆಗಿ ಬಳಸಿಕೊಳ್ಳುತ್ತಿದ್ದರು. ಇನ್ನು ಈ ಸೋದರ ಮಾವನಿಗೆ ಪ್ರತ್ಯೇಕ ಕೊಠಡಿ ಎಲ್ಲಿಂದ ತರಲು ಸಾಧ್ಯ?

ರುದ್ರಯ್ಯ ಗಂಭೀರವಾಗಿ, ''ಬೇಡಾ ಬಿಡು ಪಾಪ...ನಿಮಗ್ಯಾಕೆ ತೊಂದರೆ. ನಾನೇ ಯಾವುದಾದಾರೂ ಹೋಟೆಲ್‌ನಲ್ಲಿ ಉಳಿದುಕೊಳ್ಳುತ್ತೇನೆ.''

ಸುಮ ಆತುರದಿಂದ, ''ಹತ್ತಿರದ ಸಂಬಂಧಿಗಳಿದ್ದೂ ನೀವ್ಯಾಕೆ ಹೋಟೆಲ್‌ನಲ್ಲಿ ಉಳಿದುಕೊಳ್ಳಬೇಕು. ನಿಮಗೆ ಬೇಕಿದ್ದರೆ ನಮ್ಮ ರೂಮನ್ನೇ ತೆರವು ಮಾಡಿಕೊಡುತ್ತೇವೆ.''

ಸುರೇಂದ್ರ ಹೆಂಡತಿಯನ್ನು ದುರುದುರು ನೋಡಿದ.

ರುದ್ರಯ್ಯ ಗಂಭೀರವಾಗಿ, ''ನೋಡಮ್ಮ ಸುಮ...ನನಗೆ ಜನಗಳ ಬಳಕೆ ಅಂದರೆ ಅಲರ್ಜಿ. ನಿಮ್ಮ ಮನೆಗೆ ಯಾರೇ ಬಂದರೂ ನನ್ನ ಪರಿಚಯ ಮಾಡಿಕೊಡಬಾರದು. ನನ್ನ ಬಗ್ಗೆ ಯಾರಿಗೂ ಹೇಳಬಾರದು. ನನ್ನ ಪಾಡಿಗೆ ನಾನು ರೂಮಿನಲ್ಲಿರುತ್ತೇನೆ.''

ಸುಮ ತನ್ನ ಗಂಡನತ್ತ ನೋಡಿದಳು. ಅವನ ಮುಖದಲ್ಲಿ ಹಲವಾರು ಸಂದೇಹಗಳು ಆಗಲೇ ಕಾಡಲಾರಂಭಿಸಿತ್ತು. ಸುರೇಂದ್ರ, ''ಮಾವ...ಯಾಕೆ ಅಂತ ಕಾರಣ ಕೇಳಬಹುದಾ?''

ರುದ್ರಯ್ಯ ವಿಷಾದಗೊಂಡವನಂತೆ ನಟಿಸುತ್ತಾ, ''ಸುರೇಂದ್ರ...ನಿನಗೆ ಗೊತ್ತಿರೋ ಹಾಗೆ ನಾನು ಹೆಸರಿಗೆ ಮಾತ್ರ ಸಂಬಂಧಿ. ಆದರೆ ಸಂಪರ್ಕವೇ ಇಲ್ಲ. ಯಾವ ಶುಭ-ಅಶುಭ ಕಾರ್ಯಕ್ಕೂ ಬಂದಿಲ್ಲ. ಆದ್ದರಿಂದ ನನಗೆ ಜನಗಳ ಜೊತೆ ಬೆರೆಯಲು ಕಷ್ಟವಾಗುತ್ತದೆ. ನಿಮಗೆ ನನ್ನಿಂದ ತೊಂದರೆ ಆಗುವುದಾದರೆ ಹೇಳಿ ನಾನು...''

ಸುಮ ಕೂಡಲೇ, ''ಇದರಲ್ಲಿ ತೊಂದರೆ ಏನು ಬಂತು. ನಿಮಗೆ ಹೇಗೆ ಬೇಕೋ ಹಾಗೆ ಇರಿ. ಅಲ್ವೇನ್ರಿ...?'' ಎಂದು ಗಂಡನ ಪಕ್ಕೆಯನ್ನು ತಿವಿಯುತ್ತಾ ಹೇಳಿದಳು.

ಹೆಂಡತಿಯ ತಿವಿತದ ಸೂಚನೆಯನ್ನು ಅರ್ಥ ಮಾಡಿಕೊಂಡ ಸುರೇಂದ್ರ ಗಾಬರಿಯಿಂದ, ''ಹಾಂ...ಹಾಂ...ಹೌದು. ನಿಮಗೆ ಹೇಗೆ ಬೇಕೋ ಹಾಗೆ ಇರಿ.'' ಎಂದಿದ್ದ.

ಹತ್ತು ನಿಮಿಷಗಳು ಕಳೆಯಿತು.

ಸುರೇಂದ್ರ ತನ್ನ ಹೆಂಡತಿಯೊಂದಿಗೆ ಹಾಲ್‌ನಲ್ಲಿ ಮಲಗಿಕೊಂಡಿದ್ದ ರುದ್ರಯ್ಯ ಈಗ ಬೆಡ್‌ರೂಮಿನಲ್ಲಿದ್ದ.

ಭಾರವಾದ ಸೂಟ್‌ಕೇಸನ್ನು ರುದ್ರಯ್ಯ ಹೊತ್ತುಕೊಂಡು ಹೋಗುತ್ತಿದ್ದರೆ ಸುಮ ವಿಸ್ಮಯದಿಂದಲೇ ನೋಡಿದ್ದಳು. ಅವಳಿಗೆ ಎಲ್ಲೋ ಏನೋ ಅಸಹಜತೆ ಇದೆ ಎಂದು ಅನಿಸಿತ್ತು.

ಈ ಸೂಟ್‌ಕೇಸ್‌ನಲ್ಲಿ ಏನಿದೆ?

ರುದ್ರಯ್ಯ ಬೆಡ್‌ರೂಮಿಗೆ ಬಂದ ಕೂಡಲೆ ಬಾಗಿಲನ್ನು ಭದ್ರಪಡಿಸಿಕೊಂಡು ತೆರೆದ ಕಿಟಕಿಯ ಮೂಲಕ ಬೀದಿಯ ಕಡೆ ನೋಡಲಾರಂಭಿಸಿದ. ತುಂಬಾ ಹೊತ್ತಿನಿಂದ ಸಿಗರೇಟ್ ಸೇದಿರಲಿಲ್ಲವಾದ್ದರಿಂದ ಧೂಮಪಾನ ಪ್ರಾರಂಭವಾಯಿತು.

ಬೀದಿಯಲ್ಲಿ ವಿದ್ಯುತ್ ದೀಪ ಬೆಳಗುತ್ತಿತ್ತು. ಮಳೆಯ ಬಿರುಸು ಕಡಿಮೆಯಾಯಿತ್ತು.

ಆಗ...ತುಂಬಾ ವೇಗವಾಗಿ ಜೀಪೊಂದು ಬಂದು ನಿಂತುಕೊಂಡಿತು. ಅದರಿಂದ ನಾಲ್ಕು ಮಂದಿ ದಾಂಡಿಗರು ಇಳಿದು ನಾಲ್ಕು ಕಡೆಗೆ ಹೋದದ್ದನ್ನು ರುದ್ರಯ್ಯ ನೋಡಿದ.

ರುದ್ರಯ್ಯ ಬೆಚ್ಚಿ ಬಿದ್ದ! ಏಕೆಂದರೆ ಇವನಿಗೆ ರೌಡಿಹಗಳ ಮುಖ ಪರಿಚಯವಿತ್ತು. ಈ ರೌಡಿಗಳು ಸೈಕಲ್ ಚೈನ್ ಕೂಷ್ಣನ ಕಡೆಯವರು!

ರುದ್ರಯ್ಯ ಗಡಗಡನೆ ನಡುಗಿದ.

ನಾನು ಇಲ್ಲಿರುವುದು ಗೊತ್ತಾಗಿ ಹೋಗಿದೆ. ಅದಕ್ಕೆ ವಾಸನೆ ಹಿಡಿದು ಬಂದಿದ್ದಾರೆ. ಮುಂದೇನು ಗತಿ? ರುದ್ರಯ್ಯ ಚಳಿಯಲ್ಲೂ ಬೆವರುತ್ತಿದ್ದ.

★★★

ಪೋಲೀಸರು ಮಾರುವೇಷದಲ್ಲಿ ಕುಂಟ ರುದ್ರಯ್ಯನಿಗಾಗಿ ಆ ಏರಿಯಾದ ಯಲ್ಲಾ ಕಡೆ ಸುತ್ತಾಡಿದ್ದರು. ಅದೇ ರೀತಿ ಸೈಕಲ್ ಚೈನ್ ಕೃಷ್ಣ ಕಳುಹಿಸಿದ್ದ ರಉಡಿಗಳೂ ಸಹ ಮತ್ತೊಂದು ಕಡೆ ಹೊಂಚು ಹಾಕಿ ಕಾಯುತ್ತಿದ್ದರು. ದೂರದಲ್ಲಿ ನಿಂತುಕೊಂಡು ಗೆಡ್ಡೆ ಕಣ್ಣಿನ ಡೇವಿಡ್ ಮತ್ತು ಕೃಷ್ಣ ಎಲ್ಲವನ್ನೂ ಗಮನಿಸುತ್ತಿದ್ದರು.

ಅದೇ ಸಮಯಕ್ಕೆ ಬೈಕ್ ಬಂದಿತು.

ಬೈಕಿನಿಂದ ಇಳಿದು ನೇರವಾಗಿ ಹೋಟೆಲ್‌ಗೆ ಹೋದ. ಆಗ ಕೃಷ್ಣ ''ಅದು ಸರಿ...ಈ ಪೋಲೀಸರ್ಯಾಕೆ ರುದ್ರನ ಹಿಂದೆ ಬಿದ್ದಿದ್ದಾರೆ? ಅವರಿಗ್ಯಾಕೆ ಅನುಮಾನ ಬಂತು?''

ಗೆಡ್ಡೆ ಕಣ್ಣಿನ ಡೇವಿಡ್, ''ಚೊತ್ತ ಕಾಲಿನ ರುದ್ರ ರತನ್‌ಲಾಲ್‌ನ ರೂಮಿಗೆ ಹೋಗಿ ಅಲ್ಲಿಂದ ಬರುವಾಗ ಸೂಟ್‌ಕೇಸ್ ಹಿಡಿದುಕೊಂಡು ಬಂದಿದ್ದನ್ನು ಯಾರೋ ನೋಡಿದ್ದಾರೆ ಅಂತ ಕಾಣುತ್ತೆ.''

ಕೃಷ್ಣ ಅಸಹನೆಯಿಂದ, ''ಛೇ...ಛೇ...ಎಂತಹ ಕೆಲಸ ಆಗಿಹೋಯಿತು. ರುದ್ರ ಏನಾದರೂ ಪೋಲೀಸರ ಕೈಗೆ ಸಿಕ್ಕಿಬಿದ್ದರೆ ಹಣ ಹೋಗುವುದು ಮಾತ್ರವಲ್ಲ. ರತನ್‌ಲಾಲ್‌ನ ಕೊಲೆಯ ಆಪಾದನೆಯ ಮೇಲೆ ಜೈಲು ಸೇರಬೇಕಾಗುತ್ತದೆ.''

ಡೇವಿಡ್ ಕೋಪದಿಂದ, ''ಏ ಕೃಷ್ಣ, ಅದ್ಯಾಕೆ ಅಷ್ಟೊಂದು ಹೆದರಿಕೊಂಡು ಸಾಯುತ್ತಿದ್ದೀಯ. ನಾವು ಮಾಡಿರೋದು ಇದೇ ಮೊದಲನೆಯ ಕೊಲೆ ಅಲ್ಲ. ಇಂತಾದ್ದು ಎಷ್ಟೋ ಆಗಿಹೋಗಿದೆ.''

''ನನಗೆ ಗೊತ್ತಿದೆ. ಇಪ್ಪತ್ತೈದು ಲಕ್ಷ ರೂಪಾಯಿ ಕೈ ಬಿಟ್ಟುಹೋಗುತ್ತದೆ ಎಂಬ ಗಾಬರಿ, ಆತಂಕದಿಂದ ನನ್ನ ತಲೆ ಕೆಟ್ಟುಹೋಗಿದೆ. ಈಗ ಈ ಎಸ್. ಐ. ಬೇರೆ ಅಡ್ಡ ಬಂದಿದ್ದಾನೆ.''

ಡೇವಿಡ್ ಹಲ್ಲು ಕಡಿಯುತ್ತಾ, ''ಕೃಷ್ಣ...ಆ ಎಸ್. ಐ. ಮನೋಹರನಿಗೆ ಚುರುಕು ಮುಟ್ಟಿಸಿದರೆ...'' ಎಂದ.

ಕೃಷ್ಣಗಾಬರಿಯಿಂದ, ''ಬೇಡ...ಬೇಡ ಇದರಿಂದ ನೇರವಾಗಿ ಪೋಲೀಸರನ್ನು ಎದುರು ಹಾಕಿಕೊಂಡಂತೆ ಆಗುತ್ತದೆ.''

ಡೇವಿಡ್ ನಗುತ್ತಾ, ''ನಿನಗೇನೋ ಆಗಿಹೋಗಿದೆ. ಅದಕ್ಕೆ ಪ್ರತಿಯೊಂದಕ್ಕೂ ಹೆದರಿಕೊಂಡು ಸಾಯುತ್ತಿದ್ದೀಯ. ಅವನಿಗೆ ಮುಖ ತೋರಿಸಿಕೊಂಡೇ ಫೈಟ್ ಮಾಡಬೇಕೆ? ನೀನು ಹೂಂ ಅನ್ನು. ಆ ನನ್ನ ಮಗ ಒಂದುವಾರ ಮೇಲಕ್ಕೆ ಏಳದಂತೆ ಬೆಂಡ್ ಎತ್ತುತ್ತೀನಿ. ತರ ಎಲ್ಲಾ ಸರಿಹೋಗುತ್ತದೆ.''

ಕೃಷ್ಣತಲೆಯಾಡಿಸುತ್ತಾ, ''ನೀನು ಹೇಳೋದು ಸರಿ. ಇನ್ನೂ ಆ ಇನ್‌ಸ್ಪೆಕ್ಟರ್‌ಗೆ ನಮ್ಮ ಮೇಲೆ ಅನುಮಾನ ಬಂದಿಲ್ಲ. ಈಗ ನಾವು ಮಾಸ್ಕ್ ಹಾಕಿಕೊಂಡು ಅವನ ಮೇಲೆ ಅಟ್ಯಾಕ್ ಮಾಡಿದರೂ ಸಹ ನಮ್ಮ ಮೇಲೆ ಅನುಮಾನ ಬರೋಲ್ಲ.''

ಡೇವಿಡ್ ಹೊರಡುತ್ತಾ, ''ಹಾಗಾದರೆ ಈಗಲೇ ಪ್ರಯತ್ನಿಸೋಣ. ನಡಿ...ಕಾರಿನಲ್ಲಿ ಕುಳಿತು ಡ್ರೆಸ್ ಚೇಂಜ್ ಮಾಡಿಕೊಳ್ಳೋಣ'' ಎಂದು ಕಾರಿನತ್ತ ಹೊರಟರು.

ಹತ್ತು ನಿಮಿಷ ಕಳೆಯಿತು.

ಕೃಷ್ಣ ಮತ್ತು ಡೇವಿಡ್ ಗುರುತೇ ಸಿಗಲಾರದನಂತೆ ಬದಲಾಗಿದ್ದರು. ಅವರು ಮೇಕಪ್ ಮಾಡಿಕೊಂಡಿದ್ದ ರೀತಿ ಹಾಗಿತ್ತು. ವಿಭಿನ್ನ ರೀತಿಯ ಅಪಾಯಕಾರಿ ಆಯುಧಗಳನ್ನು ರಹಸ್ಯವಾಗಿ ಇರಿಸಿಕೊಂಡಿದ್ದರು! ಎಸ್. ಐ. ಮನೋಹರನಿಗೆ ರಿಪೇರಿ ಮಾಡಲು ತುಂಬಾ ಉತ್ಸಾಹದಿಂದ ಹೊರಟರು!

ಮನೋಹರನಿಗೆ ಅಪಾಯ ಕಾದಿತ್ತು!

★★★

ಬೆಳಗಿನ ಎಂಟು ಗಂಟೆಯ ಸಮಯ.

ಸುರೇಂದ್ರ, ಆದೇ ತಾನೇ ಎದ್ದು ಕಾಫಿ ಕುಡಿದು ಸ್ನಾನ ಮಾಡಲು ಬಾತ್‌ರೂಂಗೆ ಹೊರಟನು. ಆ ಕೊಠಡಿಯಲ್ಲಿ ಕಂಡ ದೃಶ್ಯದಿಂದ ಸುಮ ಬೆಚ್ಚಿಬಿದ್ದಳು. ಅವಳಿಗೆ ನಂಬಿಕೆಯೇ ಬರಲಿಲ್ಲ.

ಚೆನ್ನಾಗಿ ಕಣ್ಣರಳಿಸಿ ನೋಡಿದಳು.

ಸೂಟ್‌ಕೇಸ್ ತೆರೆದಿತ್ತು!

ರುದ್ರಯ್ಯ ನೂರರ ನೋಟಿನ ಕಂತೆಗಳನ್ನು ಕೈಯಿಂದ ಸವರಿ, ಸವರಿ ಪುನಃ ಜೋಡಿಸುತ್ತಿದ್ದ.

ಸುಮ ಬೆರಗಾಗಿ ನೋಡುತ್ತಿದ್ದಳು.

ಅಬ್ಬ...ಎಷ್ಟೊಂದು ಹಣ ಇದೆ. ಇಪ್ಪತ್ತು ಲಕ್ಷ ಇರಬಹುದೆ? ಇಷ್ಟೊಂದು ಹಣ ಎಲ್ಲಿಂದ ಬಂದಿತು?

ಇದು ನ್ಯಾಯದ ಸಂಪಾದನೆಯಲ್ಲ!

ಸಾಕು... ಸಾಕು. ಈ ಅಂಶವೊಂದು ಗೊತ್ತಾದರೆ ಸಾಕು. ಸುಮಳ ಮನಸ್ಸು ಹುಚ್ಚು ಕುದುರೆಯಂತೆ ಆಗಿತ್ತು.

ನೂರಾರು ಕನಸುಗಳು...

ಆಸೆಗಳ ಮಹಾ ಸೌಧ...

ಮನೆ, ಗಂಡ ಎಲ್ಲಾ ಮಾಯವಾಗಿ ನೂರು ರೂಪಾಯಿಗಳ ನೋಟಿನ ಕಂತೆಗಳು ಮಾತ್ರ ಕಾಣಲಾರಂಭಿಸಿತು.

ಸಮಯ ಉರುಳುತ್ತಿತ್ತು.

ಕನಸು ರಂಗುರಂಗಾಗಿ ಸಾಗುತ್ತಿತ್ತು.

'ಸುಮ...ಟವೆಲ್ ತಂದುಕೊಡ್ತೀಯ...?'' ಎಂದು ಸುರೇಂದ್ರ ಬಚ್ಚಲ ಮನೆಯಿಂದ ಕೂಗಿಕೊಂಡಾಗಲೇ ಸುಮಳಿಗೆ ಎಚ್ಚರವಾದದ್ದು. ಕಾಫಿ ಆರಿ ತಣ್ಣಗಾಗಿತ್ತು.

ಟವಲ್ ಕೊಡಲು ಕೈ ಚಾಚಿದಾಗ ಸುರೇಂದ್ರ ಅವಳನ್ನು ಒಳಗೆ ಎಳೆದುಕೊಂಡ.

ಸುಮ ಕೊಸರಾಡುತ್ತಾ, ''ರೀ...ಥೂ...ಬಿಡಿ...ನಿಮ್ಮಾವ ಇದ್ದಾರೆ ಕಣೆ..''

ಸಮಯ ಉರುಳುತ್ತಿತ್ತು.

ಸುಮ ಎಚ್ಚೆತ್ತು ಗಂಡನಿಂದ ದೂರ ಸರಿದು ಸಡಿಲವಾಗಿದ್ದ ರವಿಕೆಯ ಹುಕ್ಕುಗಳನ್ನು ಹಾಕಿಕೊಂಡಳು.

ಸುರೇಂದ್ರ ನಗುತ್ತಾ, ''ಸುಮ...ಅದೇನೋ ಹೇಳಬೇಕು ಅಂತಾ ಇದ್ದೆಯಲ್ಲ...' ಕೇಳಿದ.

ಸುಮ ತಾನು ಕಂಡಿದ್ದನ್ನು ವಿವರಿಸಿದಳು.

ಸುರೇಂದ್ರನಿಗೆ ನಂಬಿಕೆಯೇ ಬರಲಿಲ್ಲ.

ಅವನು ಆಶ್ಚರ್ಯದಿಂದ, ''ಸುಮ...ನೀನು ಹೇಳ್ತಾ ಇರೋದು ನಿಜಾನ? ಮೈ ಗಾಡ್! ಮಾವನ ಹತ್ತಿರ ಅಷ್ಟೊಂದು ಹಣ ಇದೆಯ?''

ಸುಮ, ''ಖಂಡಿತಾ ಇದೆ. ಅನುಮಾನವಿದ್ದರೆ ಆ ಸೂಟ್‌ಕೇಸನ್ನು ನೀವೇ

ತೆರೆದು ನೋಡಿಏಪಿ. ಸಮರ್ಥಿಸಿದಳು.

''ಒಂದು ವೇಳೆ ಅಷ್ಟೊಂದು ಹಣ ಇರೋದು ನಿಜವೇ ಆಗಿದ್ದರೆ ನಾವು ಖಂಡಿತಾ ಸುಮ್ಮನಿರಬಾರದು.''

ಸುಮ ಆತುರದಿಂದ, ''ಮತ್ತೇನು ಮಾಡಬೇಕು...!?'' ಕೇಳಿದಳು.

''ಪೋಲೀಸರಿಗೆ ತಿಳಿಸಬೇಕು.''

ಸುಮ ಗಾಬರಿಯಿಂದ ''ಯಾಕೆ...?'' ಕೇಳಿದಳು

''ಯಾಕೆ ಅಂದರೆ ಇದು ನ್ಯಾಯವಾದ ಸಂಪಾದನೆಯಲ್ಲ.''

ಸುಮ ಹಣೆ ಚಚ್ಚಿಕೊಳ್ಳುತ್ತಾ ''ರಾಮ ರಾಮ ಬಡ್ಕೊಡು, ನಿಮ್ಮ ಪೆದ್ದುತನಕ್ಕೆ ಅಹಾ...! ಪೋಲೀಸರಿಗೆ ತಿಳಿಸುತ್ತಾರಂತೆ.''

''ಮತ್ತೇನು ಮಾಡಬೇಕೆ?'' ಕಕ್ಕರಾಗಿ ಕೇಳಿದ.

''ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಳ್ಳಬಾರದು.''

ಸುರೇಂದ್ರ ಹುಬ್ಬೇರಿಸಿ, ''ಅಂದರೆ?''

''ಸಿಕ್ಕಿರೋದನ್ನು ಬಿಡಬಾರದು ಅಂದೆ''

ಸುರೇಂದ್ರ ರೇಗುತ್ತಾ ''ನೋಡು...ಅದೇನು ಸಿಕ್ಕಿದೆ ಅಂತ ಸರಿಯಾಗಿ ಹೇಳು.''

''ಇಪ್ಪತ್ತೈದು ಲಕ್ಷ ನಮಗೆ ಸಿಕ್ಕಿದೆ.''

''ನಿನಗೆಲ್ಲೋ ತಲೆ ಕೆಟ್ಟಿದೆ.''

ಸುಮ ಕೋಪದಿಂದ, ''ರೀ...ಪೆದ್ದು, ಪೆದ್ದಾಗಿ ಆಡಬೇಡಿ...ಈ ವಿಷಯವನ್ನು ಪೋಲೀಸರಿಗೆ ತಿಳಿಸಿದರೆ ಏನು ಪ್ರಯೋಜನ?''

''ಅಪರಾಧಿಗೆ ಶಿಕ್ಷೆ ಆಗುತ್ತೆ.''

ಸುಮ ಕೋಪದಿಂದ, ''ಅದರಿಂದ ನಿಮಗೇನು ಪ್ರಯೋಜನ ಆಗುತ್ತೆ ಅಂತ ನಾನು ಕೇಳ್ತಾ ಇರೋದು?''

''ಅಲ್ವೇ? ಯಾರಿಗೋ ಮೋಸ ಮಾಡಿ ನಮ್ಮಾವ ಹಣ ತಂದಿರಬಹುದು. ಆದರಿಂದ ನಮಗ್ಯಾಕೆ ಪ್ರಯೋಜನ ಆಗಬೇಕು. ನಾನು ಈಗಲೇ ಪೋಲೀಸರಿಗೆ ತಿಳಿಸುತ್ತೇನೆ.''

ಸುಮ ಗಂಡನ ಕೈ ಹಿಡಿದು ಎಳೆಯುತ್ತಾ, ''ರೀ...ಪೆದ್ದು ಪೆದ್ದಾಗಿ ಪೋಲೀಸರ

ಹತ್ತಿರ ಹೇಳಬೇಡಿ. ಮನೆಗೆ ಒಲಿದು ಬಂದಿರೋ ಮಹಾ ಲಕ್ಷ್ಮಿಯನ್ನು ತಿರಸ್ಕರಿಸಬಾರದು'' ಎಂದಳು.

ಸುರೇಂದ್ರ ಅನುಮಾನದಿಂದ, ''ಅಂದರೆ...''

ಸುಮ ತನ್ನ ಗಂಡನ ಮುಖ ಮತ್ತು ಎದೆಯನ್ನು ತನ್ನ ಮೃದುವಾದ ಅಂಗೈಯನಿಂದ ಸವರುತ್ತಾ ವಿವರಿಸಿದಳು. ಎಲ್ಲವನ್ನೂ ಕೇಳಿಸಿಕೊಂಡ ಬಳಿಕ ಸುರೇಂದ್ರ ಭಯದಿಂದ, ''ಲೇ...ಲೇ...ಈ ರೀತಿ ಮಾಡೋದು ಅನ್ಯಾಯ ಅಲ್ಲವೇನೆ?'' ಎಂದ.

''ನ್ಯಾಯವಾಗಿದ್ದರೆ ಲಕ್ಷ ಲಕ್ಷ ಸಿಗೋಲ್ಲವಲ್ಲ.''

ಸುರೇಂದ್ರ ಚಿಂತಿಸಲಾರಂಭಿಸಿದ.

ಆದರೆ ಸುಮ ಸುಮ್ಮನಿರಲಿಲ್ಲ. ಇಪ್ಪತ್ತೈದು ಲಕ್ಷ ರೂಪಾಯಿಗಳ ಬಗ್ಗೆ ರಂಗುರಂಗಾಗಿ ಹೇಳಲಾರಂಭಿಸಿದಳು.

ಸುರೇಂದ್ರನ ಮನಸ್ಸು ಅತ್ತ ವಾಲತೊಡಗಿತು.

ಸಮಯ ಉರುಳುತ್ತಿತ್ತು.

ಸುರೇಂದ್ರ ಅಷ್ಟೊಂದು ಬದಲಾಗಿದ್ದ ಎಂದರೆ ಕೊನೆಯಲ್ಲಿ ಅವನು ಹೆಂಡತಿಯೊಡನೆ, ''ಸುಮ...ನಾವಾಗಿಯೇ ನ್ಯಾಯವಾಗಿ ಕೇಳಿದರೆ ಮಾವ ಹಣ ಕೊಡೊಲ್ಲ. ಬಲವಂತವಾಗಿ ಕಿತ್ತುಕೊಂಡರೆ ಗಲಾಟೆ ಆಗಿ ವಿಷಯ ಎಲ್ಲರಿಗೂ ತಿಳಿಯುತ್ತದೆ. ಅಪರಾಧಿಗೆ ಆಶ್ರಯ ನೀಡಿದ ತಪ್ಪಿಗೆ ನಾವೂ ಕೂಡಾ ಕಂಬಿ ಎಣಿಸಬೇಕಾಗುತ್ತದೆ. ಈಗ ಉಳಿದಿರೋದು ಒಂದೇ ದಾರಿ.''

ಸುಮ ಕುತೂಹಲದಿಂದ ಕೇದಳು, ''ಏನದು?''

''ರುದ್ರಯ್ಯ ಮಾವ ಬಂದಾಗ ಮಧ್ಯರಾತ್ರಿಯಾಗಿತ್ತು. ಅಲ್ಲವೇ? ಈ ವಿಷಯ ಯಾರಿಗೂ ಗೊತ್ತಿಲ್ಲ. ಹಣದ ವಿಷಯ ರಹಸ್ಯವಾಗಿ ಉಳಿಯಬೇಕು ಅಂದರೆ ಮಾವನ ವಿಚಾರ ಹೊರ ಬರಬಾರದು''

''ಅಂದರೆ...ಅಂದರೆ...''

ಸುರೇಂದ್ರ ದೃಢವಾಗಿ, ''ಮುಖ್ಯವಾಗಿ ಮಾವನೇ ಈ ಮನೆಯಿಂದ ಜೀವಂತವಾಗಿ ಹೊರಹೋಗಬಾರದು''

''ಅಷ್ಟೊಂದು ಧೈರ್ಯ ನಿಮಗಿದೆಯ?''

''ನಾವೇನು ಚಾಕು ತೆಗೆದುಕೊಂಡು ಹೋಗಿ ಕೊಲೆ ಮಾಡೋಲ್ಲ.''

''ಮತ್ತೇ...?'' ಹುಬ್ಬೇರಿಸಿದಳು.

ಸುರೇಂದ್ರ, ಗಂಭೀರವಾಗಿ, ''ಸ್ವರವೇ ಹೊರಬರದಂತೆ ಕೊಲೆ ಮಾಡಿ ಹಣವನ್ನೇ ಇಲ್ಲದಂತೆ ಮಾಡಬೇಕು...!'' ಎಂದ.

★★★

ಹೋಟೆಲ್ ತ್ರೀ ಸ್ಟಾರ್!

ಸುಭಾಷ್‌ನಗರದಲ್ಲಿದ್ದ ಸಣ್ಣ ಹೋಟೆಲ್‌ನ ಹೆಸರು ಮಾತ್ರ ತ್ರೀ ಸ್ಟಾರ್. ಆ ಏರಿಯಾದ ಅತ್ಯಂತ ದೊಡ್ಡ ಹೋಟೆಲ್.

ಆ ಹೋಟೆಲ್‌ನಲ್ಲಿ ಫ್ಯಾಮಿಲಿ ರೂಮ್ ಸಹ ಇತ್ತು. ಆದರೆ ಈಗ ಅಲ್ಲಿ ಎಸ್. ಐ. ಮನೋಹರ ಮಾರುವೇಷದಲ್ಲಿದ್ದ ಪಿ.ಸಿ.ಗಳ ಜೊತೆ ಕುಳಿತುಕೊಂಡು ಅವರಿಗೆ ಏನೇನು ಮಾಡಬೇಕು ಎಂದು ಸೂಚನೆ ಕೊಡುತ್ತಿದ್ದ.

ಹತ್ತು ನಿಮಿಷ ಕಳೆಯಿತು.

ಮನೋಹರ ಬಿಲ್ಲಿನ ಹಣ ತೆತ್ತು ಹೊರಬಂದ. ಅವನಿಗೆ ಆಗ ಅದೆ ಏರಿಯಾದಲ್ಲಿ ವಾಸಿಸುತ್ತಿದ್ದ ಆತ್ಮೀಯ ಸ್ನೇಹಿತ ಸುರೇಂದ್ರನ ನೆನಪಾಯಿತು. ಅವನಿಗೆ ಸೂಕ್ಷ್ಮವಾಗಿ ವಿಷಯ ತಿಳಿಸಿ, ಅವನೊಂದಿಗೆ ಈ ಏರಿಯಾದಲ್ಲಿರುವ ಮನೆಗಳನ್ನು ಹುಡುಕಬೇಕು ಎಂದುಕೊಂಡು ಸ್ನೇಹಿತನ ಮನೆಯತ್ತ ನಡೆದಿದ್ದ.

ಅದು ಅಮ್ಮನವರ ದೇವಸ್ಥಾನ!

ಎಸ್. ಐ. ಮನೋಹರ್ ದೇವಸ್ಥಾನದ ಸಮೀಪ ಬಂದ. ಆ ದೇವಸ್ಥಾನದ ಆಸುಪಾಸಿನಲ್ಲಿ ಮನೆಗಳಿರಲಿಲ್ಲ. ಎಸ್. ಐ. ಮನೋಹರ್ ಇನ್ನೇನು ಎಡಕ್ಕೆ ತಿರುಗಬೇಕು ಎಂದುಕೊಂಡಿರುವಾಗ ಬೆನ್ನಿಗೆ 'ದಢ್' ಎಂದು ಯಾರೋ ಜಾಡಿಸಿದರು.

ಮನೋಹರ್ ಮುಗ್ಗರಿಸಿದ.

ಅನಿರೀಕ್ಷಿತ ಹೊಡೆತದಿಂದ ಮನೋಹರ ಬ್ಯಾಲೆನ್ಸ್ ಕಳೆದುಕೊಂಡು ಬಿದ್ದಿದ್ದ. ಅವನು ತಡವರಿಸಿಕೊಂಡು ಎದ್ದು ಕುಳಿತು ಮುಖದಲ್ಲಿ ಮೆತ್ತಿಕೊಂಡಿದ್ದ ಧೂಳನ್ನು ಒರೆಸಿಕೊಂಡು ಕತ್ತನ್ನು ಎತ್ತಿ ನೋಡಿದ.

ಇಬ್ಬರು ದಾಂಡಿಗರು ನಿಂತಿದ್ದರು!

ಒಬ್ಬನ ಕೈಯಲ್ಲಿ ಸೈಕಲ್ ಚೈನ್!

ಮತ್ತೊಬ್ಬನ ಕೈಯಲ್ಲಿ ಹಾಕಿ ಸ್ಟಿಕ್!

ಮುಖಕ್ಕೆ ಮಾಸ್ಕ್ ಹಾಕಿಕೊಂಡಿದ್ದರಿಂದ ತನ್ನ ಮೇಲೆ ದಾಳಿ ಮಾಡಲು ಬಂದಿರುವವರು ಯಾರೆಂದು ಗೊತ್ತಾಗಲಿಲ್ಲ. ಅಲ್ಲದೆ ಒಬ್ಬ ಪೋಲೀಸ್ ಅಧಿಕಾರಿಯ ಮೇಲೆ ಚಿಲ್ಲರೆ ರೌಡಿಗಳು ಕೈ ಮಾಡುವಂತಹ ಸಾಹಸಕ್ಕೆಜ ಪ್ರಯತ್ನಿಸಲಾರರು. ಮುಖಕ್ಕೆ ಮಾಸ್ಕ್ ಹಾಕಿಕೊಂಡಿರುವುದರಿಂದ ಯಾರೋ ಪರಿಚಿತ ರೌಡಿಗಳೇ ಇರಬೇಕು ಎಂದುಕೊಂಡ.

'ಸೊಂಯ್' ಎಂದು ಶಬ್ದ ಮಾಡುತ್ತಾ ಸೈಕಲ್ ಚೈನ್ ಇವನತ್ತ ನುಗ್ಗಿತು.

ಮನೋಹರ್ ಲೈಟ್ನಿಂಗ್ ಸ್ಪೀಡ್‌ನಲ್ಲಿ ಡೈ ಹೊಡೆದ. ಆದರೆ ಹಾಕಿ ಸ್ಟಿಕ್ 'ರಪ್' ಎಂದು ತೊಡೆಗೆ ಬಡಿಯಿತು. ಮನೋಹರ್ ನೋವಿನಿಂದ ಕಿರುಚುತ್ತಾ ನೆಲಕ್ಕೆ ಬಿದ್ದ.

ಈಗ ಸೈಕಲ್ ಚೈನ್ ಮತ್ತು ಹಾಕಿಸ್ಟಿಕ್ ಏಕಕಾಲದಲ್ಲಿ ದಾಳಿ ಪ್ರಾರಂಭಿಸಿದವು.

'ಸೊಂಯ್...ರಪ್' ಎಂಬ ಶಬ್ದ.

ಮನೋಹರ್ ನಿಂತಲ್ಲಿ ನಿಲ್ಲದೆ ಮಿಂಚಿನಂತೆ ಚಲಿಸುತ್ತಾ ಏಟುಗಳನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಆದರೆ ಒಂದೆರಡು ಸಾರಿ ಏಟುಗಳು ಬಿದ್ದಿದ್ದವು.

ಮನೋಹರ್ ರೌಂಡ್‌ಶೇಪ್‌ನಲ್ಲಿ ತಿರುಗುತ್ತಾ ಸೂಪರ್‌ಸಾನಿಕ್ ಸ್ಪೀಡ್‌ನಲ್ಲಿ ಕಿಕ್ ಮಾಡಿದ.

ಹಾಕಿಸ್ಟಿಕ್ ದೂರ ಹಾರಿತು.

ಮರುಕ್ಷಣ...

ಮನೋಹರ ಮುಷ್ಟಿ ಬಿಗಿದು ದಾಂಡಿಗನೊಬ್ಬನ ಮುಖಕ್ಕೆ ಪಂಚ್ ಕನೆಕ್ಟ್ ಮಾಡಿದ.

ದಾಂಡಿಗ ಹಿಂದಕ್ಕೆ ವಾಲಿದ.

ಮತ್ತೊಂದು ಸೂರಪ್ ಕಿಕ್! ಆ ದಾಂಡಿಗ ವಿಕಾರವಾಗಿ ಕಿರುಚುತ್ತಾ ದಢಾಲನೆ ನೆಲಕ್ಕೆ ಬಿದ್ದಿದ್ದ.

ಆಗ 'ಸೊಂಯ್' ಎಂಬ ಶಬ್ದ...

ಸೈಕಲ್ ಚೈನ್ ಇವನ ತೋಳನ್ನು ಸವರಿಕೊಂಡು ಹೋಯಿತು. ಮನೋಹರ್ ನೋವಿನಿಂದ ಕಿರುಚಿಕೊಂಡ. ಏಕೆಂದರೆ ಸೈಕಲ್ ಚೈನ್ ತುತ್ತು ಕೊಟ್ಟ ಜಾಗದ ಚರ್ಮ ಹರಿದು ಕಿತ್ತು ಬರಲಾರಂಭಿಸಿತು.

ರಕ್ತ...! ತನ್ನ ರಕ್ತವನ್ನು ಕಂಡೊಡನೆ ಮನೋಹರ್ ಕೋಪದಿಂದ ಹುಚ್ಚನಾದ

ಎರಡು ಹೆಜ್ಜೆ ಹಿಂದೆ ಸರಿದು ಪಾದಗಳನ್ನು ನೆಲಕ್ಕೆ ಊರಿ ಸ್ಪ್ರಿಂಗ್‌ನಂತೆ ಮೇಲಕ್ಕೆ ಜಿಗಿದು ಕಿಕ್ ಮಾಡಿದ.

ಸೈಕಲ್ ಚೈನ್‌ನ ದಾಂಡಿಗ ಸದ್ದಾಗದಂತೆ ಅಲ್ಲಿಂದ ಕಾಲಿಗೆ ಬುದ್ಧಿ ಹೇಳಿದ.

ಮನೋಹರ್‌ನಿಂದ ಹೊಡೆತಗಳನ್ನು ತಿನ್ನುತ್ತಿದ್ದ ದಾಂಡಿಗ ಕೊಸರಾಡುತ್ತಿದ್ದ.

ಅವನೇ ಸೈಕಲ್ ಚೈನ್ ಕೃಷ್ಣ!

ಆ ಏರಿಯಾದಲ್ಲಿ ಸುತ್ತಾಡುತ್ತಿರುವ ಎಸ್. ಐ. ಮನೋಹರನನ್ನು ಹೆದರಿಸಿ ಓಡಿಸಬೇಕು ಎಂದುಕೊಂಡಿದ್ದ. ಆದರೆ ಈಗ ಅವನೇ ಅಲ್ಲಿಂದ ಓಡಿಹೋಗುವಂತಹ ಪ್ರಸಂಗ ಬಂದಿತ್ತು.

ಮನೋಹರ ಮುಖಕ್ಕೆ ಕೈ ಹಾಕಿದ.

ಕೃಷ್ಣ ಗಾಬರಿಯಾದ. ಮಾಸ್ಕ್ ತೆಗೆದರೆ ತಾನ್ಯಾರೆಂದು ಗೊತ್ತಾಗುತ್ತದೆ. ಇದರಿಂದ ಎಸ್. ಐಐ ಮನೋಹರ್ ಖಂಡಿತಾ ಸುಮ್ಮನೆ ಬಿಡಲಾರ ಎಂದುಕೊಂಡು ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ಮನೋಹರನನ್ನು ಸಡನ್ ಆಗಿ ನೂಕಿದ.

ಮನೋಹರ್ ನೆಲಕ್ಕೆ ಬಿದ್ದೊಡನೆ ಕೂಷ್ಣ ಪಕ್ಕಕ್ಕೆ ಹಾರಿ ಓಡಲಾರಂಭಿಸಿದ.

ಮನೋಹರ ತನ್ನ ಮೇಲೆ ದಾಳಿ ಮಾಡಿದವರನ್ನು ಹಿಡಿಯಲೇಬೇಕು ಎಂದುಕೊಂಡು ಓಡುತ್ತಾ ಸುತ್ತಲೂ ನೋಡಿದ. ಜನಗಳು ಗುಂಪುಗುಂಪಾಗಿ ಸೇರಿ ಅಪರೂಪದ ಫೈಟಿಂಗ್ ಸೀನ್ ನೋಡುತ್ತಿದ್ದರು.

ಮನೋಹರ್ ಸ್ವಲ್ಪ ದೂರ ಓಡಿಬಂದ. ಆದರೆ ಮಾಸ್ಕ್ ಧರಿಸಿದ್ದ ಕೃಷ್ಣ ತಪ್ಪಿಸಿಕೊಂಡಿದ್ದ.

ಮನೋಹರ್ ಅಂಗಿಯೊಂದರ ಮುಂದೆ ನಿಂತು ಕರ್ಚೀಫ್‌ನಿಂದ ದೇಹವನ್ನೆಲ್ಲಾ ಒರಸಿಕೊಂಡ. ನಂತರ ಅದೇ ಏರಿಯಾದಲ್ಲಿದ್ದ ಕ್ಲಿನಿಕ್‌ಗೆ ಹೋಗಿ ಗಾಯಕ್ಕೆ ಡ್ರೆಸ್ ಮಾಡಿಸಿಕೊಂಡ.

ಆಗ ಬೆಳಗಿನ ಹನ್ನೊಂದರ ಸಮಯ!

ಮನೋಹರ್ ಸಿಗರೇಟ್ ಸೇದುತ್ತಾ ರಸ್ತೆಯಲ್ಲಿ ನಡೆಯುತ್ತಿದ್ದ.

ಸ್ನೇಹಿತ ಸುರೇಂದ್ರ ಆಫೀಸ್‌ಗೆ ಹೋಗಿರುತ್ತಾನೇನೋ ಎಂದುಕೊಂಡ.

ಹತ್ತು ನಿಮಿಷ ಕಳೆಯಿತು.

ಮನೋಹರ್ ತನ್ನ ಸ್ನೇಹಿತನ ಮನೆಯ ಮುಂದೆ ನಿಂತು ಕಾಲಿಂಗ್ ಬೆಲ್ ಪ್ರೆಸ್ ಮಾಡಿದ.

ಅಲ್ಲೊಂದು ವಿಚಿತ್ರ ಕಾದಿತ್ತು!

★★★

ಹಣ...ಹಣ...ಹಣ...!

ಅದರ ಪ್ರಭಾವ ಅಪರಿಮಿತವಾದದ್ದು. ಒಂದು ಸಾರಿ ಹಣದ ಹುಚ್ಚು ಹಿಡಿದರೆ ಅದು ಮನುಷ್ಯನಿಂದ ಎಂತಹ ಕೆಲಸವನ್ನು ಬೇಕಾದರೂ ಮಾಡಿಸುತ್ತದೆ.

ಸುರೇಂದ್ರ ಸಾಧು ಪ್ರಾಣಿ. ಒಂದು ಜಿರಲೆಯನ್ನೂ ಸಹ ಕೊಲ್ಲಲು ಹಿಂಜರಿಯುತ್ತಿದ್ದವನ ಮನಸ್ಸಿನಕ್ಕಿ ದೊಡ್ಡ ಜೀವವನ್ನೇ ಮುಗಿಸುವ ಆಲೋಚನೆ ಬಂದಿತ್ತು.

ಮನುಷ್ಯನನ್ನೇ ಕೊಲೆ ಮಾಡುವ ಆಲೋಚನೆ!

ತನ್ನನ್ನು ನಂಬಿ ತನ್ನ ಮನೆಯಲ್ಲಿ ಆಶ್ರಯ ಪಡೆದುಕೊಂಡಿರುವ ತನ್ನ ಸೋದರಮಾವನನ್ನೇ ರಹಸ್ಯವಾಗಿ ಕೊಲೆ ಮಾಡುವಂತ ಆಲೋಚನೆ!

ಯಾಕೆ...ಯಾಕೆ?

ಬೀಕಾಸ್ ಆಫ್ ಮನಿ. ಮನಿ ಮೇಕ್ಸ್ ಮನಿಥಿಂಗ್. ಮನಿ ಗೀವ್ಸ್ ಎವೆರಿಥಿಂಗ್ ಎಂಬ ತತ್ವದ ಉಪದೇಶವನ್ನು ಅವನ ಹೆಂಡತಿ ಮಾಡಿದ್ದರಿಂದ ಕೊಲೆ ಮಾಡುವಂತಹ ಅಪಾಯಕಾರಿ ಸಾಹಸಕ್ಕೆ ಕೈ ಹಾಕಿದ್ದ ಅದುವರೆಗೂ ಹೆಂಡತಿ, ಸರಸ, ಸಂಸಾರ ಮತ್ತು ಆಫೀಸ್ ಬಗ್ಗೆ ಮಾತ್ರ ಆಲೋಚಿಸುತ್ತಿದ್ದುದ್ದರಿಂದ ನೆಮ್ಮದಿಯಿಂದ ಇದ್ದ. ಆದರೆ...ಆದರೆ ಈಗ?

ಪ್ರತಿಕ್ಷಣವೂ ಭಯ, ಗಾಬರಿ, ಆತಂಕ ಏನಾಗುತ್ತದೋ ಏನೋ ಎಂಬ ಟೆನ್ ಷನ್!

ಅದಕ್ಕೋಸ್ಕರ ಈ ಪುಣ್ಯಾತ್ಮ ತುಂಬಾ ತಲೆ ಕೆಡಿಸಿಕೊಂಡು ಒದ್ದಾಡುತ್ತಿದ್ದ.

ಸುರೇಂದ್ರ ಈಗ ತಾನೇ ಕಾಫಿ ಲೋಟ ಹಿಡಿದುಕೊಂಡು ರೂಮಿನ ಹತ್ತಿರ ಬಂದು ಮೆಲ್ಲಗೆ, 'ಮಾವ...ಮಾವ...''

ಒಂದು ನಿಮಿಷ ಕಳೆಯಿತು...ಬಾಗಿಲು ತೆರೆದುಕೊಂಡಿತು...

,ಒಳಗಿನಿಂದ ಜೋರಾಗಿ ಆಕಳಿಸುತ್ತಾ ರುದ್ರಯ್ಯ ಹೊರಬಂದ.

ಸುರೇಂದ್ರ, ''ಮಾವ...ಕಾಫಿ ಕುಡಿಯಿರಿ. ರಾತ್ರಿ ಚೆನ್ನಾಗಿ ನಿದ್ದೆ ಬಂತಾ?''

ರುದ್ರಯ್ಯ ಕಾಫಿ ಕುಡಿಯುತ್ತಾ ತಲೆಯಾಡಿಸಿದ. ಸುರೇಂದ್ರನಿಗೆ ಹೆಂಡತಿಯ

ಮಾತುಗಳು ನೆನಪಾದವು. 'ನಿಮ್ಮ ಮಾವ ತಂದಿರುವ ಸೂಟ್‌ಕೇಸಿನ ತುಂಬಾ ಹಣಪಿಟ್ಟದ್ದಾರೆ' ಎಂದಿದ್ದಳು ಈಗ ಆ ಸೂಟ್‌ಕೇಸ್ ಎಲ್ಲಿರುವುದೋ ಎಂದು ಕತ್ತನ್ನು ತುಸು ಮೇಲೆ ಎತ್ತಿ ನೋಡಲಾರಂಭಿಸಿದಳು.

ಆದರೆ ರುದ್ರಯ್ಯ ಬಾಗಿಲಿಗೆ ಅಡ್ಡಲಾಗಿ ನಿಂತುಕೊಂಡಿದ್ದರಿಂದ ಒಳಗಿನ ದೃಶ್ಯ ಕಾಣುತ್ತಿರಲಿಲ್ಲ. ಅದೇ ಸಮಯಕ್ಕೆ ಸುಮ ಪೊರಕೆ ಹಿಡಿದುಕೊಂಡು ಬರುತ್ತಾ, ''ಮಾವ, ನೀವು ಸ್ನಾನ ಮಾಡಿ. ಅಷ್ಟರಲ್ಲಿ ಕಸ ಗುಡಿಸಿಬಿಡುತ್ತೇನೆ.'' ಎಂದು ರೂಮಿನೊಳಗೆ ನುಗ್ಗಿದಳು.

ರುದ್ರಯ್ಯನಿಗೆ ತುಸು ಗಾಬರಿಯಾಯಿತು. ಏಕೆಂದರೆ ಅವನಿಗೆ ಹಣವಿರುವ ಸೂಟ್‌ಕೇಸನ್ನು ಬಿಟ್ಟು ಹಿಗಲು ಮನಸ್ಸಿರಲಿಲ್ಲ.

ಆದ್ದರಿಂದ, ''ಸುಮ...ಯಾಕೋ ನನ್ನ ದೇಹಾರೋಗ್ಯ ಸರಿಯಿಲ್ಲ. ನೀನು ಕಸಗುಡಿಸು. ನಾನು ನಾಳೆ ಸ್ನಾನ ಮಾಡುತ್ತೇನೆ'' ಎಂದ.

ದಂಪತಿಗಳು ಪರಸ್ಪರ ಮುಖ ನೋಡಿಕೊಂಡರು. ಸುರೇಂದ್ರ, ''ನಾನು ಆಫೀಸ್‌ಗೆ ಹೋಗಿ ಬರುತ್ತೇನೆ'' ಎಂದು ಹೇಳಿ ಮನೆಯಿಂದ ಹೊರಬಂದ.

ಸುಮ ಕಸಗುಡಿಸಲು ಪ್ರಾರಂಭಿಸಿದಳು. ರೂಮಿನ ತುಂಬಾ ಸಿಗರೇಟಿನ ತುಂಡುಗಳು ಬಿದ್ದಿದ್ದವು.. ಗಬ್ಬುವಾಸನೆ ಆವರಿಸಿಕೊಂಡಿತ್ತು. ಸುಮ ಮುಖ ಸಿಂಡರಿಸಿದಳು. ಸೆರಗಿನಿಂದ ಮೂಗನ್ನು ಮುಚ್ಚಿಕೊಂಡು ಕಸಗುಡಿಸಲಾರಂಭಿಸಿದಳು.

ಮಂಚದ ಕೆಳಗೆ ಸೂಟ್‌ಕೇಸ್ ಇರುವುದನ್ನು ಕಂಡಳು. ಅದರಲ್ಲಿ ಇರುವ ನೋಟಿನ ಕಂತೆಗಳನ್ನು ನೆನಪಿಸಿಕೊಂಡ ಆವಳ ಮೈ ಪುಳಕಗೊಂಡಿತು. ಈ ಹಣವನ್ನು ಹೇಗಾದರೂ ಸರಿ ನಾವು ಹೊಂದಬೇಕು ಎಂದುಕೊಂಡಳು.

ಸುಮ ಕಸಗುಡಿಸುವ ತನಕ ರುದ್ರಯ್ಯ ಹೊರಗೆ ನಿಂತಿದ್ದ. ಆಗಾಗ ರೂಮಿನ ಕಡೆ ನೋಡುತ್ತಿದ್ದ ಸುಮ ಹೊರಗೆ ಬಂದ ನಂತರ ರೂಮಿನ ಬಾಗಿಲನ್ನು ಹಾಕಿಕೊಂಡು ನಿತ್ಯದ ಶೌಚ ಕರ್ಮಗಳನ್ನು ಆತುರಾತುರವಾಗಿ ಮುಗಿಸಿದ.

ರುದ್ರಯ್ಯ ಟವಲ್ಲಿನಿಂದ ಮುಖ ಒರೆಸಿಕೊಳ್ಳುತ್ತಾ ಹೊರಬಂದ. ಆಗ ಅದೇ ತಾನೇ ವರ್ತನೆಯಹಾಲನ್ನು ಕೊಡಲು ಬಂದಿದ್ದ ಕನಕಮ್ಮ ಕಣ್ಣುಗಳನ್ನು ಅರಳಿಸಿಕೊಂಡು ನೋಡಲಾರಂಭಿಸಿದಳು. ಏಕೆಂದರೆ ರುದ್ರಯ್ಯ ಚೊತ್ತಕಾಲು ಹಾಕಿಕೊಂಡು ನಡೆಯುತ್ತಿದ್ದ.

ರುದ್ರಯ್ಯ ಅದೇಕೋ ತುಸು ಗಾಬರಿಯಿಂದಲೇ ಕನಕಮ್ಮನತ್ತ ನೋಡಿ

ಸರಸರನೆ ತನ್ನ ರೂಮಿಗೆ ಹೋದ. ಏಕೆಂದರೆ ಬೇರೆ ಜನಗಳ ಕಣ್ಣಿಗೆ ಬೀಳುವುದು ಅವನಿಗೆ ಇಷ್ಟವಿರಲಿಲ್ಲ. ಇದರಿಂದ ಸುದ್ದಿಬಾಯಿಂದ, ಬಾಯಿಗೆ ಹರಡಿ ತಾನು ಈ ಮನೆಯಲ್ಲಿರುವ ವಿಚಾರ ಪೋಲೀಸರಿಗೆ ಅಥವಾ ರೌಡಿಗಳಿಗೆ ತಿಳಿಯುತ್ತದೆ ಎಂಬ ಭಯ ಅವನನ್ನು ಕಾಡುತ್ತಿತ್ತು.

ಕನಕಮ್ಮ ಪಾತ್ರೆಗೆ ಹಾಲನ್ನು ಸುರಿಯುತ್ತಾ ''ಅಮ್ಮಾವ್ರೆ...ಈಗ ಕುಂಟಿಕೊಂಡು ಒಳಗೆ ಹೋದರಲ್ಲ ಅವರ್‍ಯಾರು?'' ಕೇಳಿದಳು.

ಸುಮ ನಗುತ್ತಾ ರಾ...ನಮ್ಮ ಯಜಮಾನರ ಸೋದರಮಾವ. ನೆನ್ನೆ ರಾತ್ರಿ ಬಂದರು'' ಎಂದಳು.

''ಓ...ಹಂಗಾ...'' ಎಂದು ರಾಗ ಎಳೆಯುತ್ತಾ ಹಾಲಲಿನ ಕನಕಮ್ಮ ಹೊರಟುಹೋದಳು.

ರುದ್ರಯ್ಯ ಕುಳಿತಲ್ಲೇ ಚಡಪಡಿಸುತ್ತಿದ್ದನು.

ಸುಮ ರೂಮಿನ ಹತ್ತಿರ ಬಂದು ''ಮಾವ...'' ಎಂದು ಕರೆದಳು.

ರುದ್ರಯ್ಯ ರೂಮಿನ ಬಾಗಿಲನ್ನು ತೆಗೆಯದೆ, ''ಏನಮ್ಮಾ?'' ಎಂದು ತುಸು ಧ್ವನಿಯೇರಿಸಿ ಕೇಳಿದ.

''ತಿಂಡಿ ಸಿದ್ಧವಾಗಿದೆ. ಇಲ್ಲಿಗೆ ಬರುತ್ತೀರೋ ಅಥವಾ ರೂಮಿಗೆ ತಂದುಕೊಡಲೋ?'' ಎಂದು ಕೇಳಿದ.

''ಇಲ್ಲಿಗೇ ತಂದು ಕೊಡಮ್ಮ''

ಸುಮ ಅಡಿಗೆಯ ಮನೆಗೆ ಹೋದಳು..

ಎರಡು ನಿಮಿಷ ಕಳೆಯಿತು.

ಕಾಲಿಂಗ್ ಬೆಲ್ ಶಬ್ದ ಮಾಡಿತು.

ತಿಂಡಿಯ ತಟ್ಟೆಯನ್ನು ಹಿಡಿದುಕೊಂಡು ಬಂದು ಬಾಗಿಲನ್ನು ತೆರೆದು ಕುತೂಹಲದಿಂದ ಬಂದವರ್‍ಯಾರೆಂದು ನೋಡಿದಳು.

ಎಸ್. ಐ. ಮನೋಹರ್!

ಮಫ್ತಿಯಲ್ಲಿದ್ದ ಆದರೆ ಸುರೇಂದ್ರನನ್ನು ನೋಡಲು ಹಲವಾರು ಸಾರಿ ಬಂದಿದ್ದರಿಂದ ಸುಮಳಿಗೆ ಇವನ ಪರಿಚಯವಿತ್ತು ಗಂಡನ ಆತ್ಮೀಯ ಸ್ನೇಹಿತನನ್ನು ನಗು ಮುಖದಿಂದಲೇ ಸ್ವಾಗತಿಸುತ್ತಾ,

''ಬನ್ನಿ...ಮನೆಯಲ್ಲಿ ಎಲ್ಲಾ ಚೆನ್ನಾಗಿದ್ದಾರ?'' ಕೇಳಿದಳು.

ಮನೋಹರ ಒಳಗೆ ಬರುತ್ತಾ, ''ಹೂಂ...ಚೆನ್ನಾಗಿದ್ದಾರೆ. ಎಲ್ಲಿ ಸುರೇಂದ್ರ?'' ಎಂದು ಸೋಫಾದಲ್ಲಿ ಕುಳಿತ.

ಮನೋಹರ ಅಲ್ಲಿಗೆ ಬಂದದ್ದು ತನನ ಸ್ನೇಗಿತನನ್ನು ಮಾತಾಡಿಕೊಂಡು, ಅವನೊಂದಿಗೆ ಆ ಏರಿಯಾದಲ್ಲಿರುವ ಮನೆಗಳನ್ನು ಅನುಮಾನಬಾರದ ರೀತಿಯಲ್ಲಿ ಶೋಧಿಸಬೇಕೆಂದು, ಯೂನಿಫಾರಂ ಹಾಕಿಕೊಂಡು ಬಂದಿದ್ದರೆ ಆ ಏರಿಯಾದ ನಿವಾಸಿಗಳು ಅವನನ್ನು ತಡೆಯುತ್ತಿರಲಿಲ್ಲ. ಆದರೆ ಅನಾವಶ್ಯಕ ಗಲಭೆಗೆ ಅವಕಾಶ ಕೊಡಲು ಮನೋಹರನಿಗೆ ಇಷ್ಟವಿರಲಿಲ್ಲ.

ಇದರಿಂದ ರುದ್ರಯ್ಯ ತಪ್ಪಿಸಿಕೊಂಡು ಹೋಗುವ ಸಾಧ್ಯತೆಗಳಿದ್ದವು. ಇಲ್ಲದಿದ್ದರೆ ಹೊಂಚು ಹಾಕಿ ಕಾಯುತ್ತಿರುವ ರೌಡಿಗಳ ಗುಂಪು ಕಿಡ್ನಾಪ್ ಮಾಡುವ ಅವಕಾಶಗಳಿದ್ದವು.

ಮನೋಹರ್ ತನ್ನ ಸ್ನೇಹಿತನ ಹೆಂಡತಿಯ ಕೈಯಲ್ಲಿ ತಿಂಡಿಯ ತಟ್ಟೆ ಇರುವುದನ್ನು ಕಂಡ.

ಸುಮ, ''ತಗೊಳ್ಳಿ ತಿಂಡಿ ತಿನ್ನಿ'' ಎಂದು ತಟ್ಟೆಯನ್ನು ಮುಂದೆ ಮಾಡಿದಳು.

ಮನೋಹರ ಕತ್ತನ್ನು ಅಲ್ಲಾಡಿಸುತ್ತಾ, ''ನೋ...ಥ್ಯಾಂಕ್ಸ್. ನನಗೆ ಒಂದು ಲೋಟ ಒಳ್ಳೆಯ ಕಾಫಿ ಕೊಟ್ಟರೆ ಸಾಕು.''

ಸುಮ ನಗುತ್ತಾ ''ಅದಕ್ಕೇನಂತೆ ಧಾರಾಳವಾಗಿ ಮಾಡಿಕೊಂಡು ಬಂದು ಕೊಡುತ್ತೇನೆ. ಅವರು ಈಗ ತಾನೇ ಆಫೀಸ್‌ಗೆ ಹೋದರು. ನೀವು ಪೇಪರ್ ಓದ್ತಾ ಇರಿ ಕಾಫಿ ಬೆರೆಸಿಕೊಂಡು ತಂದು ಬಿಡುತ್ತೇನೆ'' ಎಂದು ಒಳಗೆ ಹೋದಳು.

ಮನೋಹರ್ ಮನೆಯನ್ನು ಒಂದು ಸಾರಿ ಅವಲೋಕಿಸಿದ. ಅದು ಮಧ್ಯಮವರ್ಗದವರ ಮನೆ. ಒಂದು ಸೋಫಾ, ಟೀಪಾಯಿಯನ್ನು ಇರಿಸಲಾಗಿತ್ತು. ಹಾಲ್‌ನ ಎಡಭಾಗದ ಮೂಲೆಯಲ್ಲಿ ದೊಡ್ಡ ಮರದ ಟೇಬಲ್ ಇತ್ತು. ಅದರ ಮೇಲೆ ಬ್ಲಾಕ್ ಅಂಡ್ ವೈಟ್ ಟೀವಿ ರೇಡಿಯೋ ಇತ್ತು.

ವಾಲ್‌ನ ಬಲಭಾಗದ ಮೂಲೆಯಲ್ಲಿ ಒಂದು ರೂಮ್ ಇತ್ತು. ಅದೇ ಈ ದಂಪತಿಗಳ ಬೆಡ್‌ರೂಮ್ ಎಂದು ಅವನಿಗೆ ಗೊತ್ತಿತ್ತು. ಏಕೆಂದರೆ ಆ ಮನೆಯಲ್ಲಿ ಬೇರೆ ರೂಮುಗಳಿರಲಿಲ್ಲ.

ಮನೋಹರ್ ರೂಮನ್ನು ನೋಡಿದ. ಕಿಟಕಿ ತೆರೆದಿತ್ತು ಆದರೆ ಬಾಗಿಲನ್ನು ಹಾಕಲಾಗಿತ್ತು. ಮನೋಹರ್ ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದ. ಬಾಗಿಲನ್ನು ಒಳಗಡೆಯಿಂದ ಲಾಕ್ ಮಾಡಿಕೊಂಡಿರುವಂತೆ ಕಂಡುಬಂದಿತು ಅಂದರೆ ಒಳಗೆ ಯಾರೋ ಇದ್ದಾರೆ!

ಮನೋಹರನ ಪೋಲೀಸ್ ಬುದ್ಧಿ ಚುರುಕಾಯಿತು. ದಂಪತಿಗಳ ಬೆಡ್‌ರೂಮಿನಲ್ಲಿ ಈಗ ಯಾರೋ ಇದ್ದಾರೆ? ಒಂದು ವೇಳೆ ಈ ಮನೆಯ ಮುಖ್ಯ ವ್ಯಕ್ತಿಯೆ ಇದ್ದರೂ ಬಾಗಿಲನ್ನು ಹಾಕಿಕೊಳ್ಳುವಂತ ಅಗತ್ಯವಾದರೂ ಏನಿದೆ?

ಕಿಟಕಿಯ ಕಡೆಯೇ ನೋಡುತ್ತಿರುವಾಗ ಸಣ್ಣಗೆ ಹೊಗೆ ತೇಲಿಕೊಂಡು ಬರಲಾರಂಭಿಸಿತು. ಸಿಗರೇಟಿನ ವಾಸನೆ!

ಮನೋಹರ ಬೆಚ್ಚಿಬಿದ್ದ. ಅವನಿಗೆ ಅಲ್ಲಿರುದ್ರಯ್ಯ ಇದ್ದಾನೆ ಎಂಬ ಕಲ್ಪನೆಯೂ ಇರಲಿಲ್ಲ. ಆದರೆ ಸುಮಳ ಬಡ್‌ರೂಮಿನಲ್ಲಿ ಯಾರೋ ಸಿಗರೇಟನ್ನು ಸೇದುತ್ತಿದ್ದಾರೆ.

ಅಂದರೆ ಆ ವ್ಯಕ್ತಿ ಗಂಡಸು! ಸ್ನೇಹಿತ ಸುರೇಂದ್ರ ಇಲ್ಲದಿರುವಾಗ ಬೇರೆ ಗಂಡಸರು ಬೆಡ್ ರೂಮಿನಲ್ಲಿ ಇರುವುದು ಎಂದರೆ ಏನರ್ಥ?

ಮನೋಹರನಿಗೆ ತನ್ನ ಸ್ನೇಹಿತನ ಹೆಂಡತಿಯ ನಡವಳಿಕೆಯ ಬಗ್ಗೆ ಸಂದೇಹ ಬಂದಿತು. ಒಳಗೆ ಯಾರಿದ್ದಾರೆ ಎಂದು ನೋಡಲೇಬೇಕೆಂದು ಎದ್ದು ರೂಮಿನ ಹತ್ತಿರ ಬಂದ.

ಒಳಗೆ ವ್ಯಕ್ತಿಯೊಂದು ಕುಳಿತಿತ್ತು!

ಮನೋಹರ್ ಕಿಟಕಿಯ ಮೂಲಕ ಇಣುಕಿ ನೋಡಿದ. ಆಗ ಅವನ ಕಣ್ಣಿಗೆ ಮಂಚದ ಕೆಳಗಿದ್ದ ಸೂಟ್‌ಕೇಸ್ ಕಂಡಿತು.

ಅದರ ಮೇಲೆ 'ಜಾಕ್‌ಸನ್' ಎಂದು ಬರೆದಿತ್ತು.

ಮನೋಹರ ಬೆಚ್ಚಿಬಿದ್ದ ಅಲ್ಲಿ ಕುಳಿತಿರುವ ವ್ಯಕ್ತಿಯತ್ತ ಸರಿಯಾಗಿ ನೋಡಿದ.

ಅದೇ...ಅದೇ ವ್ಯಕ್ತಿ! ಅಯೋಧ್ಯ ಹೋಟೆಲ್‌ನಲ್ಲಿ ಸೂಟ್‌ಕೇಸ್ ಹಿಡಿದುಕೊಂಡು ಹೋಗುತ್ತಿದ್ದ ವ್ಯಕ್ತಿ! ಆದರೆ ಅಯೋಧ್ಯ ಹೋಟೆಲ್‌ನಲ್ಲಿ ನಡೆದಿದ್ದ ರತನ್‌ಲಾಲ್‌ನ ಕೊಲೆ ಪ್ರಕರಣ! ದೊಡ್ಡ ಮೊತ್ತದ ಹಣದ ಕಳ್ಳತನ ಇವುಗಳಲ್ಲಿ ಈ ರುದ್ರಯ್ಯ ಅನುಮಾನಾಸ್ಪದ ರೀತಿಯಲ್ಲಿ ಸಿಕಿ-ಕಕೊಂಡಿದ್ದರಿಂದ ಎಸ್. ಐ. ಮನೋಹರನಿಗೆ ಸಂಶಯಬಂದಿತು.

ಆದರೆ ಈ ರುದ್ರಯ್ಯ ಇಲ್ಲೇಕೆ ಬಂದಿದ್ದಾನೆ? ಅವನಿಗೂ ಈ ಮನೆಗೂ ಏನಾದರೂ ಸಂಬಂಧ ಇದೆಯೇ?

ಬಳೆಗಳ ಶಬ್ದ ಕೇಳಿಬಂತು!

ಮನೋಹರ ದಡಕ್ಕನೆ ಎದ್ದು ಮೊದಲಿನಂತೆ ಕುಳಿತುಕೊಂಡು ಪೇಪರ್ ಓದಲಾರಂಭಿಸಿದ. ಸುಮ ಹೆಗೆಯಾಡುತ್ತಿದ್ದ ಪರಿಮಳಯುಕ್ತವಾದ ಕಾಫಿಯನ್ನು ಕೊಟ್ಟಳು. ಮನೋಹರ್ ಸ್ವಾದಿಷ್ಟಭರಿತವಾದ ಕಾಫಿಯನ್ನು ಚಪ್ಪರಿಸುತ್ತಾ ಸುಮಳತ್ತ ನೋಡಿದ.

ಸುಮಳ ಮುದ್ದು ಮುಖದಲ್ಲಿ ಪ್ರಶಾಂತ ಕಳೆಯಿತ್ತು. ಅದೇಕೋ ಮನೋಹರನಿಗೆ ಗೊಂದಲ ಪ್ರಾರಂಭವಾಯಿತು. ಹತ್ತು ಹಲವಾರು ಸಂಶಯಗಳು ದಾಳಿ ಮಾಡುತ್ತಿದ್ದರಿಂದ ಮನೋಹರ್ ಮಾತಾಡದೆ ಕಾಫಿ ಕುಡಿದು ಮುಗಿಸಿದ.

ಎರಡು ನಿಮಿಷ ಕಳೆಯಿತು.

ಸುಮ ಸಹ ತನ್ನ ಮಾನಸಿಕ ತುಮುಲವನ್ನು ತುಂಬಾ ಕಷ್ಟದಿಂದ ಸಹಿಸಿಕೊಳ್ಳುತ್ತಿದ್ದಳು. ತನ್ನ ಗಂಡನ ಸ್ನೇಹಿತ ಬೇಗ ಎದ್ದು ಹೋಗಬಾರದೆ ಎಂದು ಹಿಡಿ ಶಾಪ ಹಾಕಿದಳು.

ಏಕೆಂದರೆ ಗಂಡನ ಸ್ನೇಹಿತ ಪೋಲೀಸ್ ಅಧಿಕಾರಿ. ಅವನು ತುಂಬಾ ಹೊತ್ತು ಇಲ್ಲಿಯೇ ಇದ್ದರೆ ಒಳಗಿರುವ ರುದ್ರಯ್ಯ ಮಾವನ ವಿಷಯ ಗೊತ್ತಾಗುತ್ತದೆ. ಇದರಿಂದ ಮುಂದೆ ಖಂಡಿತಾ ತೊಂದರೆಯಾಗುತ್ತದೆ. ಎಂದು ಸುಮಳಿಗೆ ಅನಿಸಿತು.

ಮನೋಹರ ಮನೆಯನ್ನೆಲ್ಲಾ ನೋಡುತ್ತಿದ್ದ. ಸುಮಳಿಗೆ ಭಯ, ಗಾಬರಿಯಿಂದ ಮುಖದ ತುಂಬಾ ಬೆಚರಿನ ಹನಿಗಳು ಮೂಡಿದವು. ಅವಳು ಸೆರಗಿನಿಂದ ಬೆವರನ್ನು ಒರೆಸಿಕೊಳ್ಳುತ್ತಾ ನಿಂತಲ್ಲೇ ಚಡಪಡಿಸಲಾರಂಭಿಸಿದಳು.

ಮನೋಹರ್ ಎದ್ದು ನಿಂತು ಸುತ್ತಲೂ ನೋಡುತ್ತಾ. ''ಅದು ಸರಿ... ನಿಮ್ಮ ಅತ್ತೆ ಎಲ್ಲಿ?'' ಕೇಳಿದ.

''ತಿರುಪತಿಗೆ ಹೋಗಿದ್ದಾರೆ?''

''ಯಾವಾಗ ಬರುತ್ತಾರೆ?''

''ಗೊತ್ತಿಲ್ಲ.''

ಮನೋಹರ್ ಬಾಗಿಲಿನ ತನಕ ನಡೆದುಕೊಂಡು ಬಂದು ಸರ್ರನೆ ಹಿಂತಿರುಗಿ

ನೋಡಿದ. ಅದೇ ಸಮಯಕ್ಕೆ ಸುಮ ಬೆಡ್‌ರೂಮಿನ ಕಡೆ ಗಾಬರಿಯಿಂದ ನೋಡುತ್ತಿದ್ದಳು ಇದನ್ನು ಎಸ್. ಐ. ಮನೋಹರ್ ನೋಡಿದ್ದರಿಂದ ಅವಳಿಗೆ ಮತ್ತಷ್ಟು ಗಾಬರಿಯಾಯಿತು.

ಮನೋಹರ್ ನಗುತ್ತಾ ''ಸುಮ...ಯಾಕೆ ಒಂದು ತರಹ ಇದ್ದೀಯ? ಆರೋಗ್ಯವಾಗಿದ್ದೀಯ ತಾನೇ?'' ಎಂದ.

ಸುಮ ಬಲವಂತವಾಗಿ ನಗುತ್ತಾ, ''ನನಗೆ...ನನಗೆ...ಏನಾಗಿದೆ? ಚೆನ್ನಾಗಿಯೇ ಇದ್ದೀನಿ'' ಎಂದು ಅದೇಕೋ ಜೋರಾಗಿ ಕೆಮ್ಮಲಾರಂಭಿಸಿದಳು.

ಅವಳ ಪರಿಸ್ಥಿತಿಯನ್ನು ಕಂಡು ನಗು ಬಂದರೂ ತಡೆದುಕೊಂಡು, '4ಸುಮ...ನಿನ್ನನ್ನು ಒಳ್ಳೆಯ ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗಲು ಸುರೇಂದ್ರನಿಗೆ ಹೇಳುತ್ತೇನೆ.''

ಸುಮ ಆತುರದಿಂದ ''ಇದು ಆಫೀಸ್‌ನಲ್ಲಿಯೇ ಸಿಗುತ್ತಾರೆ. ನೀವು ಈಗಲೇ ಅಲ್ಲಿಗೆ ಹೋಗಿ'' ಎಂದಳು ಏಕೆಂದರೆ ಈ ಪೋಲೀಸ್ ಅಧಿಕಾರಿ ಅಲ್ಲಿಂದ ಬೇಗ ಹೋದರೆ ಸಾಕು ಎಂದುಕೊಂಡು ಈ ರೀತಿ ಹೇಳಿದ್ದಳು.

ಮನೋಹರ ರೂಮಿನ ಕಡೆಯೇ ನೋಡುತ್ತಾ, ''ನಿನ್ನ ನೈಅ್ತ ಬಂದರೆ ತಿರುಪತಿಯ ಲಾಡು ಪ್ರಸಾದವನ್ನು ಇಟ್ಟಿರಲು ಹೇಳು'' ಎಂದ./

ಮನೋಹರ ಹೊರಬಂದ. ಹೊರಡುವ ಮುನ್ನ ರೂಮಿನತ್ತ ನೋಡಿದ. ಹೊಸ ಐಡಿಯಾ ಫ್ಲಾಶ್ ಆಯಿತು! ಎಸ್. ಐ. ಮನೋಹರ್ ಹೋದ ಕೂಡಲೇ ಸುಮ ಬಾಗಿಲನ್ನು ಹಾಕಿ 'ದೂಪ್' ಎಂದು ಸೋಫಾದಲ್ಲಿ ಕುಕ್ಕರಿಸುತ್ತಾ 'ಉಫ್' ಎಂದು ಜೋರಾಗಿ ಉಸಿರುಬಿಟ್ಟಳು.

ಆಗ ಕೇಳಿಬಂತು ''ಸುಮಿ...ಸುಮಿ...''

ಸುಮ ಬೆಚ್ಚಿ ಹಿಂತಿರುಗಿದಳು.

ಬೆಡ್‌ರೂಮಿನ ಕಿಟಕಿಯ ಮೂಲಕ ಮುಖವನ್ನು ತೂರಿಸಿದ್ದ ರುದ್ರಯ್ಯ. ''ಸುಮ...ಈಗ ಬಂದದ್ದು ಯಾರು?''

''ಪೋಲೀಸ್ ಇನ್ಸ್‌ಪೆಕ್ಟರ್...''

''ಏಂ...'ನಂದ...'' ಗಾಬರಿಯಿಂದ ಕೇಳಿದ ರುದ್ರಯ್ಯ.

''ಎಸ್. ಐಐ ಮೋಹರ್. ನನ್ನ ಗಂಡನ ಸ್ನೇಹಿತ. ಅವರನ್ನು ನೋಡಲು ಬಂದಿದ್ದರು.''

''ನನ್ನ ವಿಷಯ ಹೇಳಿದೆಯ?''

''ಇಲ್ಲ...''

''ಸಧ್ಯ ಉಸಿರುಬಿಟ್ಟ.

ಸುಮ ಕೋಪದಿಂದ, ''ನೀವು ಇದೇ ರೀತಿ ಸಿಗರೇಟ್ ಸೇದುತ್ತಿದ್ದರೆ ನಾನು ಹೇಳದೆ ಇದ್ದರೂ ಗೊತ್ತಾಗುತ್ತದೆ'' ಎಂದಳು.

ರುದ್ರಯ್ಯ ಹಲ್ಲು ಕಿಸಿಯುತ್ತಾ, ''ಏನು ಮಾಡೋದಮ್ಮ ಹಾಳು ಚಟ ಕಲಿತುಬಿಟ್ಟಿದ್ದೇನೆ.''

ಕಾಲಿಂಗ್ ಬೆಲ್ ಶಬ್ದ ಮಾಡಿತು.

ಸುಮ ಬೆಚ್ಚಿಬಿದ್ದಳು. ಗಾಬರಿಯಿಂದ ರುದ್ರಯ್ಯನ ಮುಖ ನೋಡಿದಳು.

ರುದ್ರಯ್ಯ ಭಯದಿಂದ, ''ಸುಮಿ...ಯಾರೋ ಬಂದರು. ನನ್ನ ಬಗ್ಗೆ ಮಾತ್ರ ಹೇಳಬೇಡ'' ಎಂದು ಒಳಗೆ ಹೋದ.

ಸುಮಳಿಗೆ ಈ ಮುದಿ ಮಾವನನ್ನು ಕತ್ತು ಹಿಡಿದು ಹೊರಗೆ ದಬ್ಬುವಷ್ಟು ಕೋಪ ಬಂದಿತು. ಆದರೆ ರುದ್ರಯ್ಯನ ಹತ್ತಿರ ಇರುವ ಲಕ್ಷಾಂತರ ರೂಪಾಯಿ ಸಿಗಬಹುದೆಂಬ ದೂರದ ಆಸೆಯಿಂದ ಅವಳು ಸಹಿಸಿಕೊಂಡಿದ್ದಳು.

ಕಾಲಿಂಗ್ ಬೆಲ್ ಪುನಃ ಶಬ್ದ ಮಾಡಿತು.

''ಬಂದೆ...'' ಎನ್ನುತ್ತಾ ಸುಮ ಎದ್ದು ಬಂದು ಬಾಗಿಲನ್ನು ತೆರೆದು ಗಾಬರಿಯಿಂದ ನೋಡಿದಳು.

ಪಾರ್ವತಮ್ಮ ನಿಂತಿದ್ದರು!

ತಿರುಪತಿಯ ಯಾತ್ರೆಗೆ ಹೋಗಿದ್ದ ಇವಳ ಅತ್ತೆ ಪಾರ್ವತಮ್ಮ ಅದೇಕೋ ಎರಡು ದಿವಸಗಳು ಮೊದಲೇ ಬಂದಿದ್ದರು!

## 3

ಅದು ಅಗ್ರಿಕಲ್ಚರ್ ಆಫೀಸ್!

ಬೆಳಗಿನ ಹನ್ನೊಂದರ ಸಮಯ.

ಸುರೇಂದ್ರ ಟೇಬಲ್ಲಿನ ಮೇಲೆ ಫೈಲುಗಳನ್ನು ಹರಡಿಕೊಂಡಿದ್ದ ಆದರೆ ಕೆಲಸ ಮಾಡುತ್ತಿರಲಿಲ್ಲ. ಅವನಿರುವ ಪರಿಸ್ಥಿತಿಯಲ್ಲಿ ಕೆಲಸ ಮಾಡಲು ಸಾಧ್ಯವೂ ಇಲ್ಲ ಬಿಡಿ.

ತಲೆಯ ತುಂಬಾ ಆಲೋಚನೆಗಳು.,

ಹೆಂಡತಿ ಹೇಳಿದಾಗಲಿನಿಂದ ಅವನ ಕಣ್ಣಿನ ಮುಂದೆ ಸೂಟ್‌ಕೇಸ್‌ನಲ್ಲಿರುವ ನೋಟಿನ ಕಂತೆಗಳೇ ಕಾಣುತ್ತಿತ್ತು.

ಇಪ್ಪತ್ತೈದು ಲಕ್ಷ ಇರಬಹುದೇ?

ಅಬ್ಬ...ಈ ಹಣ ಎಲ್ಲ ನನ್ನದಾದರೆ ನನ್ನನ ಕನಸುಗಳು ನನಸಾಗುತ್ತದೆ.

ಅರು, ಬಂಗಲೆ, ಫಾರಿನ್ ಟೂರ್...

ಹೆಂಡತಿ ಸಹ ಈ ಮಹದಾಸೆಯಿಂದಲೇ ಮಾವನಿಗೆ ರಹಸ್ಯವಾಗಿರಲು ಅವಕಾಶ ಮಾಡಿಕೊಟ್ಟಿದ್ದಾಳೆ. ಮಾವ ನಮ್ಮ ಮನೆಗೆ ಬಂದಿರುವುದು ಯಾರಿಗೂ ಗೊತ್ತಿಲ್ಲ. ಇದು ಗೊತ್ತಾಗುವುದಕ್ಕೆ ಮೊದಲೇ ಏನಾದರೂ ಮಾಡಬೇಕು ಏನಾದರೂ ಅಂದರೆ...

ಕೊಲೆ...ಕೊಲೆ ಮಾಡಬೇಕು!

ರುದ್ರಯ್ಯ ಮಾವನನ್ನು ಕೊಲೆ ಮಾಡಬೇಕು!

ಕೊಲೆ ಮಾಡುವುದು ನಂತರ ಈ ಆಲೋಚನೆಯಿಂದಲೇ ಸುರೇಂದ್ರ ಬೆಚ್ಚಿಬಿದ್ದಿದ್ದ.

ಸುರೇಂದ್ರ ಕೂರಲಾಗದೆ ಎದ್ದು ಕ್ಯಾಂಟೀನಿನ ಕಡೆ ನಡೆಯಲಾರಂಭಿಸಿದ. ಸಹದ್ಯೋಗಿಗಳು ಸುರೇಂದ್ರನನ್ನು ಮಿಕಿ ಮಿಕಿ ನೋಡುತ್ತಿದ್ದರು. ಏಕೆಂದರೆ ಒಂಟಿಯಾಗಿ ಕ್ಯಾಂಟೀನ್‌ಗೆ ಹೋಗಿ ಯಾರೂ ಸಹ ಕಾಫಿ ಕುಡಿಯುತ್ತಿರಲಿಲ್ಲ. ಗುಂಪಾಗಿ ಹೋಗಿ ಕಾಫಿ ಕುಡಿಯುತ್ತಾ ಹರಟೆ ಹೊಡೆದು, ಸಿಗರೇಟ್ ಸೇದಿ ನಂತರ ನಿಧಾನವಾಗಿ ಹಿಂತಿರುಗುತ್ತಿದ್ದರು.

ಸುರೇಂದ್ರ ಕಾಫಿ ಕುಡಿಯುತ್ತಾ ಸಿಗರೇಟ್ ಸೇದಲಾರಂಭಿಸಿದ. ಯೋಚನೆಗಳು ಸಾಗಿತ್ತು.

ರುದ್ರಯ್ಯ ಮಾವನನ್ನು ಕೊಲೆ ಮಾಡಬೇಕು!

ಹೌದು, ರುದ್ರಯ್ಯ ಮಾವನ ಸತ್ತರೆ ಮಾತ್ರ ನಮಗೆ ಹಣವನ್ನು ಸುಲಭವಾಗಿ ಪಡೆಯಲು ಸಾಧ್ಯ.

ಆದರೆ ಮಾವ ಸಾಯೋದು, ಹಣ ಕದಿಯೋದು ರಹಸ್ಯವಾಗಿರಬೇಕು. ಇದು ಬಹು ಮುಖ್ಯ.

ಸುರೇಂದ್ರ ಗಡ್ಡ ಕೆರೆದುಕೊಂಡ.

ಮಾವನನ್ನು ಯಾವ ರೀತಿ ಕೊಲೆ ಮಾಡಬೇಕು?

ರಕ್ತ ಹರಿಯಬಾರದು. ಗುಂಡು ಹಾರಿಸಬಾರದು...ಮುಖ್ಯವಾಗಿ ಈ ಮಾವನ ಧ್ವನಿಯೇ ಹೊರಬರದಂತೆ ಸಾಯಿಸಬೇಕು.

ಸುರೇಂದ್ರ ಗಾಢವಾಗಿ ಚಿಂತಿಸುತ್ತಿದ್ದ.

ವಿಷ ಪ್ರಯೋಗ ಮಾಡಬಾರದು. ಆದರೆ ಅದನ್ನು ಬೇರೆ ಕಡೆಯಿಂದ ತರಬೇಕು. ಆಕಸ್ಮಾತ್ ತನಿಖೆ ನಡೆದರೆ ಬಯಲಾಗುವ ಸಾಧ್ಯತೆಗಳಿವೆ. ಇದು ಅಪಾಯಕಾರಿ!

ಇನ್ನು ಚಾಕುವಿನಿಂದ ಕೊಲೆ ಮಾಡಬಹುದು. ಏಕೆಂದರೆ ಅದು ಮನೆಯಲ್ಲೇ ಇದೆ. ಆದರೆ ರಕ್ತ ಕಂಡರೆ ಸಾಕು ನನಗೆ ತಲೆ ತಿರುಗುತ್ತದೆ. ಆದ್ದರಿಂದ ಈ ಪ್ರಯತ್ನ ಬೇಡ.

ಮೂರು ಸಿಗರೇಟ್ ಬೂದಿಯಾಯಿತು.

ಮೂರು ಕಪ್ ಕಾಫಿ ಹೀರಿಯಾಯಿತು.

ಆದರೆ ಯಾವುದೇ ಐಡಿಯಾ ಹೊಳೆಯಲಿಲ್ಲ. ಸುರೇಂದ್ರ ಅಲ್ಲಿಂದ ಎದ್ದು ಜೇಬಿನೊಳಗೇ ಕೈ ಇರಿಸಿಕೊಂಡು ನಡೆಯಲಾರಂಭಿಸಿದ.

ಮಾವಿನ ಮರದ ಕೆಳಗೆ ನಿಂತಿದ್ದ ಸುರೇಂದ್ರನಿಗೆ ಹತ್ತು ನಿಮಿಷಗಳ ನಂತರ ಫ್ಲಾಶ್ ಆಗಿತ್ತು!

ಉಸಿರು ಕಟ್ಟಿ ಸಾಯಿಸುವುದು!

ರುದ್ರಯ್ಯ ಮಾವ ಮಲಗಿರುವಾಗ ಅವನ ಕೈ, ಕಾಲುಗಳನ್ನು ಕಟ್ಟಿ ಕಿರುಚದಂತೆ ಬಾಯಿಗೆ ಬಟ್ಟೆ ತುರುಕಬೇಕು. ಇದಕ್ಕೆ ಸುಮ ಸಹಾಯ ಮಾಡುತ್ತಾಳೆ. ನಂತರ ಹಣವಿರುವ ಸೂಟ್‌ಕೇಸನ್ನು ಎಲ್ಲಾದರೂ ರಹಸ್ಯವಾಗಿ ಮುಚ್ಚಿಡಬೇಕು. ಒಂದೆರಡು ತಿಂಗಳು ಆ ಹಣವನ್ನು ಉಪಯೋಗಿಸಬಾರದು.

ಸುರೇಂದ್ರನಿಗೆ ತಟ್ಟನೆ ಮತ್ತೊಂದು ಆಲೋಚನೆ ಬಂದಿತು. ಕೊಲೆ ಮಾಡುವುದೇನೋ ಸರಿ. ಆದರೆ ಹಣವನ್ನು ಏನು ಮಾಡೋದು?

ಸುರೇಂದ್ರನಿಗೆ ನಿಜವಾಗಿಯೂ ಗಾಬರಿಯಾಯಿತು. ಇದರ ಬಗ್ಗೆ ಅವನು ಆಲೋಚಿಸಿಯೇ ಇರಲಿಲ್ಲ.

ಅದೇ ಸಮಯಕ್ಕೆ ಆಫೀಸಿನ ಜವಾನ ಅವನನ್ನು ಹುಡುಕಿಕೊಂಡು ಬಂದು, ''ಸಾರ್...ನಾನು ಕ್ಯಾಂಟೀನ್ ಜಾಲಾಡಿದೆ. ನೀವು ಸಿಗಲಿಲ್ಲ ಅಲ್ಲಾ ಸಾರ್...ಈ

ಮಾವಿನ ಮರದ ಕೆಳಗೆ ನಿಂತುಕೊಂಡು ತಪಸ್ಸು ಮಾಡ್ತಾ ಇದ್ದಾ, ಸಾರ್...'' ಎಂದ.

ಸುರೇಂದ್ರ ರೇಗುತ್ತಾ, ''ಯಾಕೆ...ಏನು ವಿಷಯ?''

''ನಿಮ್ಮ ಮನೆಯಿಂದ ಎರಡು ಸಾರಿ ಫೋನ್ ಬಂದಿತ್ತು. ಕ್ಯಾಂಟೀನ್‌ಗೆ ಹೋಗಿದ್ದಾರೆ ಅಂತ ಹೇಳಿದೆ. ನೀವು ಈಗಲೇ ಮನೆಗೆ ಫೋನ್ ಮಾಡಬೇಕಂತೆ'' ಹೇಳಿದ.

''ಸರಿ ಸರಿ ನಡಿ ಬರ್ತೀನಿ'' ಎಂದು ಸುರೇಂದ್ರ ಫೋನ್ ಇರಿಸಿದ್ದ ಜಾಗಕ್ಕೆ ಬಂದು ಡಯಲ್ ಮಾಡಿದ.

''ಹಲೋ...'' ಅತ್ತಕಡೆಯಿಂದ ಸುಮಳ ಮಧುರವಾದ ಧ್ವನಿ ಕೇಳಿಬಂದಿತು.

''ನಾನು ಸುರೇಂದ್ರ....''

ಗಂಡನ ಧ್ವನಿ ಕೇಳಿದ ಕೂಡಲೇ ಪ್ರವಾಹದಂತೆ ವಾಗ್ಝರಿ ಹರಿಯಲಾರಂಭಿಸಿತು. ''ಅಲ್ರೀ...ಇನ್ನು ಕೆಲಸಕ್ಕೆ ಹೋಗಿ ಅರ್ಧ ಗಂಟೆ ಆಗಿಲ್ಲ ಆಗಲೆ ಕ್ಯಾಂಟೀನ್‌ಗೆ ಹೋಗಿದ್ರಾ? ದಿನಕ್ಕೆ ನಾಲ್ಕು ಸಾರಿ ಅರ್ಧಗಂಟೆಯಂತೆ ಕ್ಯಾಂಟೀನ್‌ನಲ್ಲೇ ಕಾಲ ಕಳೆದರೆ ಆಫೀಸ್ ಕೆಲಸ ಯಾವಾಗ ಮಾಡ್ತೀರ. ಹೋಗಲಿ ಕ್ಯಾಂಟೀನ್‌ಗೆ ಫೋನ್ ಹಾಕಿಸಲು ನಿಮ್ಮ ಆಫೀಸರ್‌ಗೆ ಹೇಳಿ.''

ಸುರೇಂದ್ರನಿಗೆ ಮೈಯೆಲ್ಲಾ ಉರಿದುಹೋಯಿತು.

ಕೋಪದಿಂದ ರೇಗುತ್ತಾ ''ಸುಮಿ...ತಲೆಹರಟೆ ಸಾಕು. ಈಗ ಫೋನ್ ಮಾಡಿದ್ದು ಯಾಕೆ ಅಂತ ಹೇಳು?''

''ನಿಮ್ಮ ಫ್ರೆಂಡ್ ಮನೋಹರ್ ಬಂದಿದ್ದರು.''

ಸುರೇಂದ್ರ ಗಾಬರಿಯಿಂದ, ''ಏನು...ಮನೋಹರ್ ಬಂದಿದ್ದ? ಯಾಕೆ...ಯಾಕಂತೆ. ಪಿ.ಸಿ.ಗಳು ಬಂದಿದ್ದರ?''

ಸುಮ ಕೋಪದಿಂದ, ''ರೀ...ಯಾಕ್ರೀ ಅಷ್ಟೊಂದು ಗಾಬರಿಯಾಗ್ತೀರ, ಪಿ.ಸಿ.ಗಳು ಯಾಕೆ ಬರ್ತಾರೆ? ನಿಮ್ಮ ಸ್ನೇಹಿತರು ಡ್ಯೂಟಿಯ ಮೇಲೆ ಬಂದಿರಲಿಲ್ಲ. ನಿಮ್ಮನ್ನು ಹುಡುಕಿಕೊಂಡು ಬಂದಿದ್ದರು.''

''ಯಾಕಂತೆ?''

''ಗೊತ್ತಿಲ್ಲ.''

''ಮಾವ ಅಲ್ಲಿ ಇರೋದು ಮನೋಹರನಿಗೆ ಗೊತ್ತಾಗಿಲ್ಲ ತಾನೇ?''

''ಹ್ಯಾಗೆ ಗೊತ್ತಾಗೊಕ್ಕೆ ಸಾಧ್ಯ. ಯಾಕೆ ಅಂದರೆ ನಿಮ್ಮಾವ ರೂಮಿನಿಂದ ಹೊರಗೇ ಬಂದಿಲ್ಲ. ಡೋರ್ ಲಾಕ್ ಮಾಡಿಕೊಂಡಿದ್ದಾರೆ.''

ಸುರೇಂದ್ರ ಗಾಬರಿಯಿಂದ, ''ಸುಮ...ನಿನಗೆ ಮನೋಹರನ ವಿಷಯ ಗೊತ್ತಿಲ್ಲ. ಅವನಿಗೆ ಸ್ವಲ್ಪ ಸಂಶಯ ಬಂದರೂ ಮೂಲವನ್ನೇ ಪತ್ತೇ ಮಾಡಿ ಬಿಡುತ್ತಾನೆ'' ಎಂದ.

''ಸರಿಸರಿ ನೀವು ಬೇಗ ಬನ್ನಿ.''

''ಸುಮ...ನಾನು ಬಂದ ಕೂಡಲೇ ಇಬ್ಬರೂ ಸೇರಿ ಒಂದು ಕಾರ್ಯವನ್ನು ಮಾಡಿ ಮುಗಿಸೋಣ''

ಅದು ಸ್ವಲ್ಪ ಕಷ್ಟ ಅಂತ ಅನಿಸುತ್ತೆ.''

''ಯಾಕೆ...ಯಾಕೆ...?'' ಗಾಬರಿಯಿಂದ ಕೇಳಿದ.

''ನಿಮ್ಮ ತಾಯಿ ಬಂದಿದ್ದಾರೆ.''

ಸುರೇಂದ್ರ ಹೌಹಾರುತ್ತಾ, ''ಏನು...ಏನಂದೆ ಅಮ್ಮಾ ಬಂದಿದ್ದಾಳೆ? ಅಯ್ಯೋ ದೇವರೆ! ಅಮ್ಮಾ ಇಷ್ಟು ಬೇಗ ಯಾಕೆ ಬಂದಳು?''

ಸುಮ ರೇಗುತ್ತಾ ''ಇದನ್ನೇ ದೊಡ್ಡ ಬೆಟ್ಟದಂತೆ ಮಾಡಿಕೊಂಡು ತಲೆ ಕೆಡಿಸಿಕೊಳ್ಳಬೇಡಿ. ಆಫೀಸ್‌ಗೆ ರಜ ಹಾಕಿ ಈಗಲೇ ಬನ್ನಿ ಈ ಸಮಸ್ಯೆಯನ್ನು ಹೇಗಾದರೂ ನಿಭಾಯಿಸಬಹುದು.''

''ಹಾಗಂತೀಯ. ಸರಿ ಫೋನಿಡು. ನಾನು ಇನ್ನು ಒಂದು ಗಂಟೆಯೊಳಗೆ ಮನೆಯಲ್ಲಿ ಇರುತ್ತೇನೆ.''

ಫೋನ್ ಡಿಸ್‌ಕನೆಕ್ಟ್ ಆಯಿತು.

ಸುರೇಂದ್ರ ತನ್ನ ಹಿರಿಯ ಅಧಿಕಾರಿಯ ಹತ್ತಿರ ಸುಳ್ಳನ್ನು ಹೇಳಿ ಮನೆಗೆ ಹೊರಟ.

ಅದು ವ್ಯೂಹ...!

ತುಂಬಾ ಬುದ್ಧಿವಂತಿಕೆಯಿಂದ ರಚಿಸಿರುವ ಗರುಡ ವ್ಯೂಹ! ಇದರೊಳಗೆ ತಾನು ಪ್ರವೇಶಿಸುತ್ತಿದ್ದೇನೆ.. ಇದರೊಳಗೆ ಒಂದು ಸಾರಿ ನುಸುಳಿದರೆ ಹಿಂತಿರುಗುವುದು ಅಸಾಧ್ಯ.

ಇದೆ ದುಷ್ಟರು ದುರಾಸೆಯಿಂದ ರಚಿಸಿರುವ ಗರುಡ ವ್ಯೂಹ!

★★★

ಅದು ಚಿಲ್ಲರೆ ಅಂಗಡಿ!

ಬೀಡಿ, ಸಿಗರೇಟ್, ಬಾಳೇಹಣ್ಣು, ಚಾಕುಲೋಟ್, ಬಿಸ್ಕತ್ತನ್ನು ಮಾರುತ್ತಿದ್ದ

ರ್ಣ

ಆಗ ಹನ್ನೆರಡು ಗಂಟೆಯ ಸಮಯ.

ಸೈಕಲ್ ಚೈನ್ ಕೃಷ್ಣ ಮತ್ತು ಗಡ್ಡ ಕಣ್ಣಿನ ಡೇವಿಡ್ ಮೈಮೇಲಿನ ದೂಳನ್ನು ಕೊಡವಿಕೊಳ್ಳುತ್ತಾ ಅಂಗಡಿಯ ಹತ್ತಿರ ಬಂದು ಎರಡೆರಡು ಸೋಡಾ ಕುಡಿದು ಅದನ್ನೇ ಮುಖಕ್ಕೆ ಎರಚಿಕೊಂಡರು.

ಎರಡು ನಿಮಿಷ ಕಳೆಯಿತು.

ಇಬ್ಬರೂ ಮುಖ ಒರೆಸಿಕೊಂಡು ಬಾಳೇಹಣ್ಣು ತಿಂದು ಒಂದು ಪ್ಯಾಕ್ ವಿಲ್ಸ್ ಸಿಗರೇಟ್ ತೆಗೆದುಕೊಂಡರು. ಇವರು ಸಿಗರೇಟ್ ಸೇದುತ್ತಿರುವಾಗ ಅಲ್ಲಿಗೆ ಕನಕಮ್ಮ ಬಂದಳು.

ಗಂಡ ಅಂಗಡಿಯ ವ್ಯಾಪಾರ ಮಾಡಿದರೆ ಕನಕಮ್ಮ ಆ ಏರಿಯಾದಲ್ಲಿ ಹಾಲನ್ನು ಮಾರಿ ಜೀವಿಸುತ್ತಿದ್ದರು. ಕನಕಮ್ಮನ ಎದುರಿಗೆ ಕೃಷ್ಣ ನೂರರ ನೋಟನ್ನು ತೂಗೆದುಕೊಟ್ಟನು. ನಂತರ, ''ನೋಡಯ್ಯ...ನಮಗೆ ಮೊದಲೋ ಚಿಲ್ಲರೆ ಕೊಡಬೇಡ. ಇನ್ನೂ ತುಂಬಾ ವ್ಯಾಪಾರ ಮಾಡುತ್ತೇವೆ.''

ಅಂಗಡಿಯವನ ಮುಖ ಸಂತೋಷದಿಂದ ಅರಳಿತು. ಅವನು ಅದೇ ಭಾವದಿಂದ ಹೆಂಡತಿಯ ಕಡೆ ನೋಡಿದ.

ಡೇವಿಡ್ ಸಿಗರೇಟ್ ಸೇದುತ್ತಾ ಎದುರಿಗಿದ್ದ ಮನೆಯತ್ತಲೇ ಆಗಾಗ ನೋಡುತ್ತಿದ್ದ. ರುದ್ರಯ್ಯ ಇಲ್ಲಿ ಅಡಗಿಕೊಂಡಿರಬಹುದೆಂಬ ಸಂಶಯ ಇವನಿಗೇನೂ ಬಂದಿರಲಿಲ್ಲ. ಆದರೆ ಎಸ್. ಐ. ಮನೋಹರ್ ಆ ಮನೆಗೆ ಹಿಗಿ ಅದೇ ತಾನೇ ಹಿಂತಿರುಗಿದ್ದನ್ನು ನೋಡಿದ್ದ ಆದ್ದರಿಂದಲೇ ಕುತೂಹಲದಿಂದ ನೋಡುತ್ತಿದ್ದ.

ಕೃಷ್ಣ ಕನಕಮ್ಮನನ್ನೇ ನೋಡುತ್ತಾ, ''ಆ ಮನೆಯಲ್ಲಿ ಯಾರು ವಾಸವಾಗಿದ್ದಾರೆ?'' ಕೇಳಿದ.

ಕನಕಮ್ಮ ಮಾತಾಡುವ ಮೊದಲೇ ಅವಳ ಗಂಡ, ''ಸುರೇಂದ್ರ ಅಂತ ಆಗ್ರಿಕಲ್ಚರ್ ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ.''

ಡೇವಿಡ್ ಗಡ್ಡ ಕೆರೆದುಕೊಳ್ಳುತ್ತಾ. ''ಈಗ ಸ್ವಲ್ಪ ಹೊತ್ತಿಗೆ ಮುಂಚೆ ಆ ಮನೆಗೆ ಹಿಗಿ ಬಂದರಲ್ಲ...ಅವರ್ಯಾರು?''

ಕನಕಮ್ಮ ರಾಗವಾಗಿ, ''ಓ...ಅವ್ರಾ...ಈ ಏರಿಯಾದ ಹೊಸ ಇನ್‌ಸ್ಪೆಕ್ಟ್ರು. ಸುರೇಂದ್ರಪ್ಪೋರ ಸ್ನೇಹಿತರಂತೆ''

''ಆ ಮನೆಯಲ್ಲಿ ಯಾರ‍್ಯಾರು ಇದ್ದಾರೆ?''

ಅಂಗಡಿಯ ಮಾಲೀಕ, ''ಸುರೇಂದ್ರ, ಅವನ ಹೆಂಡತಿ ಮತ್ತು ಅವನ ತಾಯಿ ಪಾರ್ವತಮ್ಮ''

ಕೃಷ್ಣ, ''ಬೇರೆ ಯಾರೂ ಇಲ್ವ?''

ಅಂಗಡಿಯವನು ತಲೆಯಾಡಿಸುತ್ತಾ ''ಇಲ್ಲ...''

ಕನಕಮ್ಮ ರೇಗುತ್ತಾ '4ಸದಾ ಬೀಡಿ ಅಂಗಡಿಯಲ್ಲಿ ಕುಕ್ಕರುಬಡ್ಕೊಂಡಿರೋ ನಿಮಗೆ ಏನ್ರೀ ಗೊತ್ತಾಗುತ್ತೆ?''

ಡೇವಿಡ್ ಆತುರದಿಂದ, ''ಅಂದರೆ...ಆ ಮನೆಯಲ್ಲಿ ಬೇರೆ ಯಾರ‍್ಯಾರು ಇದ್ದಾರೆ?'' ಎಂದು ಕೇಳಿದ.

ಕನಕಮ್ಮ ಮೂಡಿ ಸೊಟ್ಟಗೆ ಮಾಡಿಕೊಂಡು, ''ಏ ತುಂಬಾ ಜನ ಇಲ್ಲ. ಯಾರೋ ಕುಂಟ ಬಂದು ಸೇರಿಕೊಂಡಿದ್ದಾನೆ.''

ಕುಂಟ ಎಂಬ ಪದ ಕೇಳಿದೊಡನೆ ಕೃಷ್ಣ ಮತ್ತು ಡೇವಿಡ್ ಪರಸ್ಪರ ಮುಖ ನೋಡಿಕೊಂಡರು.

ಡೇವಿಡ್, ''ಯಾವಾಗ ಬಂದನಂತೆ?''

''ನೆನ್ನೆ ರಾತ್ರಿಯಂತೆ.''

''ಆ ಮನೆಗೂ, ಕುಂಟನಿಗೂ ಯಾವ ರೀತಿ ಸಂಬಂಧ?''

''ಸುರೇಂದ್ರಪ್ಪನ ಸೋದರ ಮಾವನಂತೆ.''

''ಹೆಸರೇನು ಅಂತ ಗೊತ್ತಾ?''

ಕನಕಮ್ಮ ಎಲೆಗೆ ಸುಣ್ಣ ಹಾಕಿ ಮಡಚಿ ಅದನ್ನು ಬಾಯಿಗೆ ತುರುಕಿಕೊಳ್ಳುತ್ತಾ. ''ಏ...ಹೆಸರು ಪಸರು ಎಲ್ಲಾನಾನ್ಯಾಕೆ ಕೇಳಲಿ...?!''

''ನೀನವನನ್ನು ನೋಡಿದ್ದೀಯಾ?''

''ಹೂಂ...''

''ಅವನು ನೋಡೊಕ್ಕೆ ಹ್ಯಾಗಿದ್ದಾ..?''

''ದಪ್ಪಗೆ ಇದ್ದ. ಸ್ವಲ್ಪ ಕುಳ್ಳು ಮುಖದಲ್ಲಿ ಸಿಡುಬಿನ ಕಲೆ ಇತ್ತು. ಚೊತ್ತಕಾಲು

ಹಾಕಿಕೊಂಡು ನಡೆಯುತ್ತಿದ್ದ.''

ಬೇರೆ ಗಂಡಸರೊಡನೆ ತನ್ನ ಹೆಂಡತಿ ಇಷ್ಟೊಂದು ಮಾತಾಡುತ್ತಿರುವುದನ್ನು ಕಂಡು ಅಂಗಡಿಯ ಮಾಲೀಕ ಕೋಪದಿಂದ, ''ಏ...ಸಾಕು ನಿಲ್ಲಮ್ಮ...ನಿನ್ನ ಪುರಾಣಾನ. ಅಲ್ಲ...ಕಂಡವರ ವಿಷಯ ನಿನಗೆ ಯಾಕೆ ಅಂತೀನಿ. ಏ...ಎದ್ದು ಕೆಲ್ಸ ನೋಡೋ ಗೋಗು'' ಎಂದು ರೇಗಿದಾಗ ಕನಕಮ್ಮ ಮುಖ ಗಂಟಿಕ್ಕಿಕೊಂಡು ಎದ್ದು ಹೋದಳು.

ಮುಖ್ಯವಾದ ವಿಷಯ ತಿಳಿದಿದ್ದರಿಂದ ಕೃಷ್ಣ ಮತ್ತು ಡೇವಿಡ್ ಅಲ್ಲಿಂದ ಹೊರಟರು. ದಾರಿಯಲ್ಲಿ ನಡೆಯುತ್ತಿರುವಾಗ ಕೃಷ್ಣ, ''ಡೇವಿಡ್...ನನ್ನ ಊಹೆ ನಿಜವಾಯಿತು. ರುದ್ರ ಈ ಮನೆಯಕ್ಲೆ ಅಡಗಿಕೊಂಡಿದ್ದಾನೆ. ಆ ಮನೆಯವರೇ ಅವನಿಗೆ ಆಶ್ರಯ ನೀಡಿದ್ದಾರೆ'' ಎಂದ.

''ಯೂ ಆರ್ ರೈಟ್ ರತನ್‌ಲಾಲ್‌ನಿಂದ ಅಪಹರಿಸಿಕೊಂಡು ಬಂದಿರುವ ಹಣ ಸಹ ಅವನ ಜೊತೆಯೆ ಇರಬೇಕು.''

''ಮುಂದೇನು ಮಾಡೋದು?''

''ಇಲ್ಲೇ ಕಾದುಕೊಂಡಿರೋಣ ರಾತ್ರಿ ಹತ್ತು ಗಂಟೆಯ ನಂತರ ಆ ಮನೆಗೆ ನುಗ್ಗಿ ರುದ್ರನನ್ನು ಕೊಂದು ಹಣ ಎತ್ತಿಕೊಂಡು ಬರೋಣ.''

ಡೇವಿಡ್ ತಲೆಯಾಡಿಸಿದ.

ತಾನು ಇರುವುದು ಯಾರಿಗೂ ತಿಳಿದಿಲ್ಲ ತಾನು ಸುರಕ್ಷಿತವಾಗಿದ್ದೇನೆ ಎಂದು ರುದ್ರಯ್ಯ ತಿಳಿದುಕೊಂಡಿದ್ದ ಆದರೆ ಅವನಿಗೆ ಆಶ್ರಯ ನೀಡಿದ್ದ ಸುರೇಂದ್ರನೇ ಹಣಕ್ಕಾಗಿ ರುದ್ರಯ್ಯನನ್ನು ರಹಸ್ಯವಾಗಿ ಸಾಯಿಸಬೇಕು ಎಂದುಕೊಂಡಿದ್ದ!

★★★

ತಿರುಪತಿ ಮತ್ತು ಇನ್ನಿತರ ಯಾತ್ರಾ ಸ್ಥಳಗಳಿಗೆ ಹೋಗಿ ಬರುತ್ತೇನೆ ಎಂದು ಹೇಳಿಹೋಗಿದ್ದ ಪಾರ್ವತಮ್ಮ ಅನಾರೋಗ್ಯದ ನಿಮಿತ್ತ ಎರಡು ದಿವಸ ಮೊದಲೇ ಮನೆಗೆ ಹಿಂತಿರುಗಿದ್ದರು.

ತನ್ನ ಅತ್ತೆ ಬಂದಿದ್ದರಿಂದ ತಾವು ಮಾಡಬೇಕೆಂದಿರುವ ಕಾರ್ಯಕ್ಕೆ ತೊಂದರೆಯಾಗಬಹುದೆಂದು ಸುಮಳಿಗೆ ಅನಿಸಿತ್ತು. ಆದರೆ ಬುದ್ಧಿವಂತೆಯಾದ ಅವಳು ಸಣ್ಣ ವಿಷಯಕ್ಕಾಗಿ ತಲೆ ಕೆಡಿಸಿಕೊಳ್ಳದೆ ಅತ್ತೆಯನ್ನು ಬಾಯಿ ತುಂಬಾ ಮಾತಾಡಿಸಿ ಉಪಚರಿಸಿದ್ದಳು. ಆದರೆ ಅವಳಾಗಿಯೇ ರುದ್ರಯ್ಯನ ವಿಷಯ ಹೇಳಿರಲಿಲ್ಲ.

ಆದರೆ ಪಾರ್ವತಮ್ಮ ಸ್ನಾನ ಮುಗಿಸಿ ತಿಂಡಿ ತಿನ್ನುತ್ತಾ ಸೋಫಾದಲ್ಲಿ ಕುಳಿತಿದ್ದಾಗ ಅವರಿಗೆ ಮಗನ ರೂಮಿನಿಂದ ಹೊಗೆ ಬರುವುದು ಕಂಡಿತು. ಸಿಗರೇಟಿನ ವಾಸನೆಯನ್ನು ಮೂಗು ಗ್ರಹಿಸಿತು.

ಅವರು ಕೋಪದಿಂದ, ''ಸುಮ...ನಿನ್ನ ಗಂಡ ಸಿಗರೇಟ್ ಸೇದೊಕ್ಕೆ ಕಲಿತ್ತಿದ್ದಾನಾ? ನಾನು ಬಂದು ಇಷ್ಟು ಹೊತ್ತಾದರೂ ಎದ್ದು ಬಂದು ಮಾತಾಡಿಸದೆ ಒಳಗೆ ಕುಳಿತುಕೊಂಡು ಏನು ಮಾಡುತ್ತಿದ್ದಾನೆ?''

ಸುಮ ಅಳುಕುತ್ತಾ, ''ಅಲ್ಲಿ ಇರೋದು ನಿಮ್ಮ ಮಗ ಅಲ್ಲ ಅತ್ತೆ.''

ಪಾರ್ವತಮ್ಮ ಕೋಪದಿಂದ, ''ನಿನ್ನ ಬೆಡ್‌ರೂಮಿನಲ್ಲಿ ನನ್ನ ಮಗ ಅಲ್ಲದೆ ಬೇರೆ ಇನ್ಯಾರು ಇರಲು ಸಾಧ್ಯ?''

''ನಿಮ್ಮ ತಮ್ಮ ರುದ್ರಯ್ಯ.''

ಪಾರ್ವತಮ್ಮ ಬೆಚ್ಚಿ ಬೀಳುತ್ತಾ ''ಏನಂದೆ...ರುದ್ರನಾ...''

ಸುಮ ತಲೆಯಾಡಿಸಿದಳು.

ಪಾರ್ವತಮ್ಮ ಕೋಪದಿಂದ ಹಲ್ಲು ಕಡಿಯುತ್ತಾ ''ಅವನು ಇಲ್ಲಿಗೆ ಯಾವಾಗ ಬಂದ?''

''ನೆನ್ನೆ ರಾತ್ರಿ'' ಹೆದರುತ್ತಾ ಹೇಳಿದಳು.

''ಒಬ್ಬ ಕಳ್ಳನಿಗೆ, ರೌಡಿಗೆ ಆಶ್ರಯ ಯಾಕೆ ಕೊಟ್ಟರಿ? ರುದ್ರ...ಲೋ ರುದ್ರ...'' ಎಂದು ಅಬ್ಬರಿಸಿದರು.

ದಡಕ್ಕನೆ ಬಾಗಿಲು ತೆರೆದುಕೊಂಡಿತು.

ರುದ್ರಯ್ಯ ಅಳುಕುತ್ತಲೇ ರೂಮಿನಿಂದ ಹೊರಬಂದ. ಸುಮಳಿಗೆ ತುಂಬಾ ಗಾಬರಿಯಾಯಿತು. ಅಯ್ಯೋ ದೇವರೇ...ಈ ಅತ್ತೆ ಕಿರುಚಾಡಿ ರಂಪ ಮಾಡಿದರೆ ವಿಷಯ ಬಹಿರಂಗವಾಗುತ್ತದೆ. ಏನು ಮಾಡೋದು ಎಂದು ಅಸಹಾಯಕತೆಯಿಂದ ಚಡಪಡಿಸುತ್ತಿರುವಾಗ ಆಫೀಸ್‌ನಿಂದ ಸುರೇಂದ್ರ ಬಂದ.

ಅಲ್ಲಿನ ಪರಿಸ್ಥಿತಿ ಅರಿತ ಸುರೇಂದ್ರ ಕೂಡಲೇ ಮುಂಬಾಗಿಲು ಮತ್ತು ಕಿಟಕಿಯ ಬಾಗಿಲುಗಳನ್ನು ಹಾಕಿ ತಾಯಿಯ ಹತ್ತಿರ ಬಂದು ಪರಿಪರಿಯಾಗಿ ಸಮಾಧಾನ ಮಾಡಿದ.

ಪಾರ್ವತಮ್ಮ, ''ಈ ರುದ್ರನನ್ನು ನನ್ನ ತಮ್ಮ ಅಂತ ಹೇಳಿಕೊಳ್ಳೋಕ್ಕೆ ನನಗೆ ಅಸಹ್ಯವಾಗುತ್ತೆ. ಈ ಚಾಂಡಾಲ ನಾಲ್ಕು ವರ್ಷಗಳ ಹಿಂದೆ ನನ್ನ ಹಣವನ್ನೇ ಕದ್ದುಕೊಂಡು

ಹೋಗಿದ್ದ ಆದಕ್ಕೆ ಮುಖ ತೋರಿಸಲು ನಾಚಿಕೆಯಾಗಿ ಸಂಬಂಧವನ್ನೇ ಮರೆತಿದ್ದ ಅಂತ ಕಾಣುತ್ತೆ'' ಎಂದಳು.

ರುದ್ರಯ್ಯ ತಲೆ ತಗ್ಗಿಸಿದ.

ಸುರೇಂದ್ರ ತಾಯಿಯನ್ನು ಸಮಾಧಾನಪಡಿಸಲು ದೊಡ್ಡ ಸಾಹಸವನ್ನೇ ಮಾಡಬೇಕಾಯಿತು. ನಾಲ್ಕು ವರ್ಷಗಳ ಹಿಂದೆ ರುದ್ರಯ್ಯ ಮನೆಗೆ ಬಂದಿದ್ದಾಗ ತನ್ನ ಅಕ್ಕನ ಹಳೆಯ ಟ್ರಂಕಿನಲ್ಲಿದ್ದ ಎರಡು ಸಾವಿರ ರೂಪಾಯಿಯನ್ನು ಕದ್ದುಕೊಂಡು ಹೋಗಿದ್ದ. ಆದರೆ ತನ್ನ ಅಕ್ಕ ಈಗಲೂ ಅದನ್ನು ನೆನಪಿಟ್ಟುಕೊಂಡು ಆಕ್ಷೇಪಿಸುತ್ತಾಳೆ ಎಂದುಕೊಂಡಿರಲಿಲ್ಲ. ಅಕ್ಕ ಒಂದೇ ಸಮ ಬೈಯುತ್ತಿದ್ದರೆ ತಾನು ಯಾಕಾದರೂ ಈ ಮನೆಗೆ ಬಂದೆನೋ ಎಂದುಕೊಂಡಿದ್ದ ಆದರೆ ರೌಡಿಗಳಿಂದ, ಪೋಲೀಸರಿಂದ ತಪ್ಪಿಸಿಕೊಂಡು ಹಣವನ್ನು ಉಳಿಸಿಕೊಳ್ಳುವ ಆತುರದಲ್ಲಿ ಬೇರೆ ದಾರಿ ಕಾಣದೆ ತನ್ನ ಅಕ್ಕನ ಮನೆಗೆ ಬಂದಿದ್ದ.

ಪಾರ್ವತಮ್ಮ ಗೊಣಗುತ್ತಿರುವಾಗ ಸುರೇಂದ್ರ ತನ್ನ ಮಾವನನ್ನು ರೂಮಿಗೆ ಕರೆದುಕೊಂಡು ಹೋಗುತ್ತಾ ''ಮಾವ...ಅಮ್ಮ ಕೋಪದಿಂದ ಹೀಗಾಡುತ್ತಿದ್ದಾಳೆ. ಸ್ವಲ್ಪ ಹೊತ್ತು ಕಳೆದರೆ ಎಲ್ಲಾ ಸರಿಹೋಗುತ್ತದೆ. ನೀವು ಒಳಗೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳಿ.''

ರುದ್ರಯ್ಯ ಒಳಗೆ ಹೋದ ಕೂಡಲೇ ಸುರೇಂದ್ರ ರೂಮಿನ ಬಾಗಿಲನ್ನು ಹಾಕಿಕೊಂಡು ಹೊರಬಂದ. ಅಡುಗೆಯ ಕೋಣೆಯಲ್ಲಿ ತಲೆಯ ಮೇಲೆ ಕೈ ಇಟ್ಟುಕೊಂಡು ಚಿಂತಿಸುತ್ತಾ ಕುಳಿತಿದ್ದ ಹೆಂಡತಿಯ ಹತ್ತಿರ ಬಂದು, ''ಸುಮ...ಈಗೇನು ಮಾಡೋದು?''

''ನಂಗೇನೂ ತೋಚ್ತಾ ಇಲ್ಲ ಕಣ್ರಿ.''

ಸುರೇಂದ್ರ ದೃಢವಾಗಿ, ''ಏನೇ ಆಗಲಿ ಅಂದುಕೊಂಡಿರುವುದನ್ನು ಮಾಡಿ ಮುಗಿಸಲೇಬೇಕು.''

''ಅತ್ತೆಗೆ ಗೊತ್ತಾದರೆ...'' ಭಯದಿಂದ ಕೇಲಳಿದಳು.

''ಗೊತ್ತಾಗದಂತೆ ಮಾಡಿ ಮುಗಿಸಬೇಕು.''

''ಅದೇ...ಅದೇ...ಹೇಗೆ ಅಂತ?''

ಸುರೇಂದ್ರ ಎದ್ದು ಹೋಗಿ ಯಾರಾದರೂ ಇರುವರೇನೋ ಎಂದು ನೋಡಿದ. ಹಾಲ್‌ನಲ್ಲಿ ಹಾಕಿದ್ದ ಸೋಫಾದಲ್ಲಿ ಪಾರ್ವತಮ್ಮ ಮಲಗಿದ್ದರು. ರುದ್ರಯ್ಯ

ಇದ್ದ ರೂಮಿನ ಬಾಗಿಲು ಹಾಕಿತ್ತು.

ಸುರೇಂದ್ರ ಹೆಂಡತಿಯ ಹತ್ತಿರ ಬಂದು ಪಿಸು ಧ್ವನಿಯಲ್ಲಿ ''ಸುಮ...ಇವತ್ತು ರಾತ್ರಿ ಹತ್ತು ಗಂಟೆಗೆ ನಮ್ಮ ಕಾರ್ಯ ಪ್ರಾರಂಭಿಸಬೇಕು.''

''ಆದರೆ ಅತ್ತೇ...''

''ಅದೇ ವಿಷಯ ಹೇಳ್ತಾ ಇರೋದು. ಅಮ್ಮನಿಗೆ ಗಸಗಸೆ ಪಾಯಸ ಅಂದರೆ ತುಂಬಾ ಇಷ್ಟ. ಪಾಯಸಕ್ಕೆ ಇದನ್ನು ಬೆರೆಸಿ ಕೊಡು'' ಎಂದು ಜೇಬಿನಿಂದ ಸೀಸೆಯೊಂದನ್ನು ತೆಗೆದ.

ಸುಮ ಗಾಬರಿಯಿಂದ ''ಏನ್ರೀ ಇದು...?''

''ನಿದ್ದೆ ಬರುವ ಔಷಧಿ.''

ಸುಮಳ ಮುಖ ಅರಳಿತು.

''ಇದನ್ನು ಕುಡಿದರೆ ಅಮ್ಮನಿಗೆ ಬೆಳಗಿನ ತನಕ ಗಾಢವಾದ ನಿದ್ದೆ ಬರುತ್ತೆ. ಆಗ ನಾವು ಅಂದುಕಂಡಿದ್ದನ್ನ ಸುಲಭವಾಗಿ ಮಾಡಿ ಮುಗಿಸಬಹುದು'' ಹೇಳಿದ.

ಸುಮ ಸೀಸೆಯನ್ನು ತೆಗೆದುಕೊಂಡಳು.

''ನಾನು ನಗರಕ್ಕೆ ಹೋಗಿ ಬರುತ್ತೇನೆ.''

ಸುಮ ಚಕಿತಳಾಗಿ ''ಯಾಕೆ?'' ಕೇಳಿದಳು.

''ಏಕೆ, ಗುದ್ದಲಿ, ಹಗ್ಗ ತೆಗೆದುಕೊಂಡು ಬರೋಕ್ಕೆ ನೀನು ಈಗಲೇ ಅಟ್ಟದ ಮೇಲಿಂದ ಗೋಣಿಚೀಲ ತೆಗೆದಿಡು.''

ಸುಮ ತಲೆಯಾಡಿಸುತ್ತಾ ''ಅಲ್ರೀ...ಹಾರೆ, ಗುದ್ದಲಿ ತರೋಕ್ಕೆ ನಗರಕ್ಕೆ ಯಾಕೆ ಹೋಗಬೇಕು? ಈ ಏರಿಯಾದಲ್ಲಿ ಸಿಗೋಲ್ವೇ?'' ಎಂದು ರಾಗ ಎಳೆದಳು.

''ಅದಕ್ಕೆ ನಿನ್ನನ್ನು ಮೊದ್ದು ಅನ್ನೋದು ಈ ಬಾದಿಯಲ್ಲಿರೋ ಅಂಗಡಿಯಲ್ಲಿ ಇದೆಲ್ಲವನ್ನು ತೆಗೆದುಕೊಂಡರೆ ಅನುಮಾನ ಬರುವುದಿಲ್ಲವೆ ಸುಮ..? ಅದೂ ಅಲ್ಲದೆ ನಾನು ರಾತ್ರಿ ತುಂಬಾ ಹೊತ್ತಿನ ತನಕ ಊರಿನಲ್ಲಿ ಇರಲಿಲ್ಲ ಅಂತ ನಂಬಿಕೆ ಬರುವಂತೆ ಸನ್ನಿವೇಶ ಸೃಷ್ಟಿಸಬೇಕು'' ಎಂದ.

''ನೀವು ಯಾವಾಗ ವಾಪಸ್ ಬರ್ತೀರಾ?''

''ರಾತ್ರಿ ಒಂಭತ್ತು ಗಂಟೆಗೆ. ಆದರೆ ಯಾರಿಗೂ ತಿಳಿಯದಂತೆ ಹಿತ್ತಲಿನ ಬಾಗಿಲಿನ ಮೂಲಕ ಮನೆ ಸೇರಿಕೊಳ್ಳುತ್ತೇನೆ. ಯಾರಾದರೂ ಕೇಳಿದರೆ ಬೊಂಗಳೂರಿಗೆ

ಹೋಗಿದ್ದಾರೆ ಅಂತ ಹೇಳು. ಏನು... ಗೊತ್ತಾಯಿತೆ?''

ಸುಮ ತಲೆಯಾಡಿಸಿದಳು.

''ಅಮ್ಮನ ಹತ್ತಿರ ಮಾವನ ವಿಷಯ ಮಾತಾಡಬೇಡ. ರಾತ್ರಿ ಎಂಟು ಗಂಟೆಯೊಳಗೆ ಅಮ್ಮ ಪಾಯಸ ಕುಡಿದು ಮಲಗಿರಬೇಕು.''

ಸುಮ ಮೆಲ್ಲಗೆ ''ನೀವು ಎಚ್ಚರಿಕೆಯಿಂದ ಇರಿ.''

ಸುರೇಂದ್ರ ತಲೆಯಾಡಿಸುತ್ತಾ ''ನೀನು ಮನೆಯಿಂದ ಎಲ್ಲೂ ಹೊರಗೆ ಹೋಗಬೇಡ. ಯಾರೇ ಬಂದರೂ ಅವರೊಡನೆ ತುಂಬಾ ಹೊತ್ತು ಮಾತಾಡುತ್ತಾ ನಿಲ್ಲಬೇಡ. ನಾನು ಬರುತ್ತೇನೆ'' ಎಂದು ಹೆಂಡತಿಯನ್ನು ತಬ್ಬಿಕೊಂಡು ಚುಂಬಿಸಿ ಹೊರಬಂದ.

ಸುಮ ಗಂಡ ಹೋದ ಕೂಡಲೇ ಏಣಿಯನ್ನು ಹಾಕಿಕೊಂಡು ಅಟ್ಟದಿಂದ ಗೋಣಿ ಚೀಲವನ್ನು ತೆಗೆದಳು.

ಗೋಣಿ ಚೀಲ ಯಾಕೆ? ರುದ್ರಯ್ಯನನ್ನು ಸಾಯಿಸಿದ ನಂತರ ಅವನ ಹೆಣವನ್ನು ಗೋಣಿ ಚೀಲದಲ್ಲಿ ಸೇರಿಸಿ ಇಡಲು. ಮನೆಯ ಹಿಂಭಾಗದಲ್ಲಿ ಗುಂಡಿ ತೆಗೆದು ಚೀಲದ ಸಮೇತ ಹೆಣವನ್ನು ಹೂಳಬೇಕು ಎಂದು ಸುರೇಂದ್ರ ಪ್ಲಾನ್ ಮಾಡಿದ್ದ.

ಈ ಪ್ಲಾನಿನಲ್ಲಿ ತಣ್ಣ-ಪುಟ್ಟ ತಪ್ಪುಗಳಿದ್ದವು!

4

ರಾತ್ರಿ ಎಂಟೂವರೆಯ ಸಮಯ!

ಸುಮ ಗಂಡನ ಆದೇಶದಂತೆ ನಡೆದುಕೊಂಡಿದ್ದಳು. ಅವಳು ಮನೆಯಿಂದ ಹೊರಬಂದಿರಲಿಲ್ಲ. ಸುರೇಂದ್ರ ಹೋದ ಮೇಲೆ ಬೇರೆ ಯಾರೂ ಸಹ ಬಂದಿರಲಿಲ್ಲ.

ಸುಮ ತನ್ನ ಅತ್ತೆಗೆ ಕುಡಿಯಲು ನಿದ್ದೆ ಬರುವ ಔಷಧಿ ಹಾಕಿದ್ದ ಗಸಗಸೆ ಪಾಯಸ ಕೊಟ್ಟಿದ್ದಳು. ಪಾರ್ವತಮ್ಮ ಮಹಾ ಮೊಂಡು ಹೆಂಗಸು. ಆಸೆಯಿದ್ದರೂ ಪಾಯಸವನ್ನು ಕುಡಿದಿರಲಿಲ್ಲ. ತಮ್ಮ ಹಣವನ್ನೇ ಕದ್ದಿದ್ದ ರುದ್ರಯ್ಯನಿಗೆ ಮಗ-ಸೊಸೆ ಆಶ್ರಯ ಕೊಟ್ಟಿದ್ದರಿಂದ ಅವರಿಗೆ ವಿಪರೀತ ಕೋಪ ಬಂದಿತ್ತು. ಲೊಡಲೊಡ ಎಂದು ಬೈಯುತ್ತಾ ಕುಳಿತಿದ್ದರೆ ವಿನಃ ಪಾಯಸದ ಲೋಟವನ್ನು ಮುಟ್ಟಿರಲಿಲ್ಲ.

ಎಂಟುಗಂಟೆ ಮೂವತ್ತೈದು ನಿಮಿಷ!

ವಿದ್ಯುತ್ ದೀಪ ಬೆಳಗುತ್ತಿತ್ತು..

ಸುಮಳಿಗೆ ಪಾಯಸ ಕುಡಿಯದೆ ಸತಾಯಿಸುತ್ತಿರುವ ಅತ್ತೆಯ ಬಗ್ಗೆ ಕೋಪ ಬಂದಿರೂ ಸಹಿಸಿಕೊಂಡಳು.

ಎರಡು ನಿಮಿಷ ಕಳೆಯಿತು.

ಪಕ್ಕನೆ ಕರೆಂಟ್ ಫೆಯಿಲ್ಯೂರ್ ಆಯಿತು.

ಕತ್ತಲು...ಗವ್ ಎನ್ನುವ ಕತ್ತಲು.

ಕರೆಂಟ್ ಬರಬಹುದೆಂದು ಸುಮ ಸ್ವಲ್ಪ ಹೊತ್ತು ಸುಮ್ಮನೆ ಕುಳಿತುಕೊಂಡಿದ್ದಳು. ಬೆಂಕಿಪೊಟ್ಟಣ ಅಥವಾ ಟಾರ್ಚನ್ನು ಮುಂಜಾಗ್ರತೆಯಾಗಿ ತಂದಿಟ್ಟುಕೊಳ್ಳದೆ ಇದ್ದುದಕ್ಕಾಗಿ ತನ್ನನ್ನು ತಾನೇ ಶಪಿಸಿಕೊಂಡಳು.

ಹತ್ತು ನಿಮಿಷ ಕಳೆಯಿತು.

79424CR

ಕರೆಂಟ್ ಬರಲಿಲ್ಲ. ಸುಮ ಕತ್ತಲಲ್ಲಿ ತಡಕಾಡುತ್ತಾ ಎದ್ದು ಅಡುಗೆ ಮನೆಯ ಕಡೆ ನಡೆದಳು. ಬೆಂಕಿ ಪೊಟ್ಟಣ ಇದ್ದದ್ದು ಅಲ್ಲಿಯೇ. ಮಾಮೂಲಿ ಜಾಗದಲ್ಲಿ ಕೈ ಹಾಕಿದಳು ಸಿಗಲಿಲ್ಲ. ಆತುರದಿಂದ ಎಲ್ಲಾ ಕಡೆ ತಡಕಾಡಿದಳು ಸಿಗಲಿಲ್ಲ.

'ಛೇ...' ಎಂದು ತನ್ನಷ್ಟಕ್ಕೆ ತಾನೇ ಗೊಣಗಿಕೊಂಡು ಪುನಃ ಹೊರಬಂದಳು. ಪಾತ್ರೆಯೊಂದು ದಡಾಲನೆ ಬಿದ್ದ ಶಬ್ದ ಸುಮ ಬೆಚ್ಚಿಬಿದ್ದಳು. ಅರೆ...ಇದೇನು ಇಷ್ಟು ಹೊತ್ತಾದರೂ ಕರೆಂಟ್ ಬರಲಿಲ್ಲವಲ್ಲ ಎಂದುಕೊಂಡಳು.

ಏನು ಮಾಡಬೇಕೋ ತಿಳಿಯದೆ ಕತ್ತಲಲ್ಲಿ ತಡಕಾಡುತ್ತಾ ಪುನಃ ಹಾಲ್‌ಗೆ ಬಂದಳು.

ಪುನಃ ಹತ್ತು ನಿಮಿಷ ಕಳೆಯಿತು.

ಸುಮಳಿಗೆ ಕತ್ತಲಲ್ಲಿ ಕುಳಿತು ತಲೆ ಚಿಟ್ಟು ಹಿಡಿದುಹೋಯಿತು. ಎದ್ದು ಬಾಗಿಲಿನ ಹತ್ತಿರ ನಿಧಾನವಾಗಿ ಬಂದಳು.

ಐದು ನಿಮಿಷ ಕಳೆಯಿತು.

ವಿದ್ಯುತ್ ದೀಪ ಬೆಳಗಿತು!

ಇಪ್ಪತ್ತೈದು ನಿಮಿಷಗಳು ಕತ್ತಲಲ್ಲಿ ಇದ್ದುದ್ದರಿಂದ ಕಣ್ಣುಗಳು ತಕ್ಷಣ ಬೆಳಕಿಗೆ ಹೊಂದಿಕೊಳ್ಳಲಿಲ್ಲ. ಸುಮ ಎರಡು ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡಳು.

ಕ್ಷಣಗಳು ಉರುಳುತ್ತಿತ್ತು.

ಸುಮ ಈಗ ನಿಧಾನವಾಗಿ ಕಣ್ಣುಗಳನ್ನು ತೆರೆದು ನೋಡಿದಳು. ಎದುರಿಗೆ ಅವಳ

ಗಂಡ ಸುರೇಂದ್ರ ನಿಂತಿದ್ದ!

ಸುಮ ಬೆಚ್ಚಿಬಿದ್ದಳು.

ಅವಳು ಆಶ್ಚರ್ಯದಿಂದ ನೋಡುತ್ತಾ ''ರೀ...ರೀ...ನೀವು...ನೀವು...''

ಸುರೇಂದ್ರ ಅವಳ ಹತ್ತಿರ ಬಂದು ಪಿಸುಧ್ವನಿಯಲ್ಲಿ

''ಅದ್ಯಾಕೆ ಗಾಬರಿಯಾಗಿದ್ದೀಯ ರಾತ್ರಿ ಒಂಭತ್ತು ಗಂಟೆಯ ಹೊತ್ತಿಗೆ ಹಿತ್ತಲಿನ ಬಾಗಿಲಿನ ಮೂಲಕ ಬರುತ್ತೇನೆ ಎಂದಿದ್ದೆನಲ್ಲ.''

ಸುಮ ಸರ್ರನೆ ಮುಂಬಾಗಿಲನ್ನು ನೋಡಿದಳು. ಅದಕ್ಕೆ ಲಾಕ್ ಮಾಡಲಾಗಿತ್ತು ಅವಳು ವಿಸ್ಮಯದಿಂದ ಮತ್ತು ತುಸು ಭಯದಿಂದ ''ನೀವು ಈಗ ಹಿತ್ತಲಿನ ಕಡೆಯಿಂದ ಬಂದಿರಾ?''

''ಹೂಂ...ಯಾಕೆ ಹೀಗೆ ಕೇಳ್ತಾ ಇದ್ದೀಯ ಹೇಳು?'' ಗಾಬರಿಯಿಂದ ಕೇಳಿದ.

ಸುಮ ಏನನ್ನೋ ಹೇಳಬೇಕು ಎಂದುಕೊಂಡವಳು ಅದೇಕೋ ಸುಮ್ಮನಾದಳು. ಏಕೆಂದರೆ ಮೂಲೆಯಲ್ಲಿ ಕುಳಿತಿದ್ದ ಪಾರ್ವತಮ್ಮ ಇವಳನ್ನೇ ದುರುದುರು ನೋಡುತ್ತಿದ್ದರು.

ಸುಮಳ ಮುಖ ಭಯದಿಂದ ಬಿಳುಚಿಕೊಂಡಿತು. ಪಾರ್ವತಮ್ಮ ಕೋಪದಿಂದ, ''ಲೋ ಸುರೇಂದ್ರ...ಎಲ್ಲಿ ಹಾಳಾಗಿ ಹೋಗಿದ್ದೆಯೋ? ಅಲ್ಲೋ...ನಿನ್ನ ಹೆಂಡತಿಗೆ ಸರಿಯಾಗಿ ಸಂಸಾರ ಮಾಡಲು ಗೊತ್ತಿಲ್ಲವಲ್ಲ. ರಾತ್ರಿಯ ಹೊತ್ತು ಕರೆಂಟ್ ಹೋಗುತ್ತದೆ ಬೆಂಕಿ ಪೊಟ್ಟಣ, ಮೇಣದ ಬತ್ತಿಯನ್ನು ಕೈಗೆ ಸಿಕ್ಕುವ ಹಾಗೆ ಇಟ್ಟುಕೊಳ್ಳಬೇಕು ಅಂತಾನೇ ಗೊತ್ತಿಲ್ಲವಲ್ಲೋ ಇನ್ನೇನು ಸಂಸಾರ ಮಾಡ್ತಾಳೋ...''

ಸುರೇಂದ್ರ ತಾಯಿಯ ಪಕ್ಕದಲ್ಲಿ ಕುಳಿತುಕೊಂಡು ಮೃದುವಾಗಿ ''ಅಮ್ಮ...ಸುಮ ನಿನ್ನ ಸೊಸೆ. ಅವಳನ್ನು ನಿನಗೆ ಹೇಗೆ ಬೇಕೋ ಹಾಗೆ ತಿದ್ದಿಕೊಳ್ಳುವ ಜವಾಬ್ದಾರಿ ನಿನ್ನದು. ಅದು ಸರಿ...ಗಸಗಸೆ ಪಾಯಸ ಕುಡಿದ್ಯಾ?'' ಎಂದ.

''ಇಲ್ಲಾ ಕಣೋ ಮಗು...''

''ಸುಮ...ಅಮ್ಮನಿಗೆ ಪಾಯಸ ಬಿಸಿ ಮಾಡಿ ತಂದುಕೊಡು'' ಎಂದು ಅವಳತ್ತ ನೋಡಿದ. ಸುಮಳಿಗೆ ಗಾಬರಿಯಾಗಿತ್ತು ಅವಳು ಏನನ್ನೋ ಹೇಳಲು ತವಕಿಸುತ್ತಿದ್ದಳು.

ಸುರೇಂದ್ರ ಗಂಭೀರವಾಗಿ, ''ಸುಮ...ಮೊದಲು ಪಾಯಸ...'' ಎಂದು ಕಣ್ಣು ಮಿಟುಕಿಸಿದಾಗ ಸುಮ ಅಡುಗೆಯ ಮನೆಗೆ ಹೋದಳು.

ಎರಡು ನಿಮಿಷ ಕಳೆಯಿತು.

ಸುಮ ಈ ಮೊದಲೇ ನಿದ್ದೆ ಬರುವ ಔಷಧಿಯನ್ನು ಹಾಕಿದ್ದ ಪಾಯಸವನ್ನೇ ಬಿಸಿ ಮಾಡಿ ತಂದಳು. ಸುರೇಂದ್ರ ತುಂಬಾ ಒತ್ತಾಯ ಮಾಡಿದ ಮೇಲೆ ಪಾರ್ವತಮ್ಮ ಎರಡು ಗ್ಲಾಸ್ ಪಾಯಸ ಕುಡಿದರು.

ಹತ್ತು ನಿಮಿಷ ಕಳೆಯಿತು.

ಮಗನೊಡನೆ ತಮ್ಮ ಅನಾರೋಗ್ಯದ ಬಗ್ಗೆ ರುದ್ರಯ್ಯ ಈ ಹಿಂದೆ ತಮ್ಮ ಹಣವನ್ನೇ ಕದ್ದಿದ್ದರ ಬಗ್ಗೆ ಮಾತಾಡುತ್ತಲೇ ಗೊರಕೆ ಹೊಡೆಯಲಾರಂಭಿಸಿದರು. ಸುರೇಂದ್ರ ತಾಯಿಯನ್ನು ಎತ್ತಿಕೊಂಡು ಹಿಗಿ ಸೋಫಾದಲ್ಲಿ ಮಲಗಿಸಿ ರಗ್ಗನ್ನು ಹೊದಿಸಿದ.

ಇನ್ನು ಬೆಳಗಿನ ತನಕ ತಾಯಿಗೆ ಎಚ್ಚರವಾಗೋಲ್ಲ. ನಿರಾತಂಕವಾಗಿ ಮುಂದಿನ ಕೆಲಸವನ್ನು ಮಾಡಿಕೊಳ್ಳಬಹುದು ಎಂದುಕೊಂಡು ಹಿತ್ತಲಿನ ಕಡೆ ಬಂದ. ಸುಮ ಗಂಡನ ಹಿಂದೆಯೇ ಬರುತ್ತಾ ''ರೀ...ರೀ...'' ಎಂದು ಕೂಗಿದಳು.

ಸುರೇಂದ್ರ ನಗರದಿಂದ ತಂದಿದ್ದ ಹಾರೆ, ಗುದ್ದಲಿ ಮತ್ತು ಹಗ್ಗವನ್ನು ತುಂಡು ಗೋಣಿಚೀಲದಲ್ಲಿ ಸುತ್ತಿದ್ದ ಹಿತ್ತಲ್ಲಿನ ಬಾಗಿಲಿನ ಮೂಲಕ ಮನೆಯೊಳಗೆ ಬಂದಿದ್ದರಿಂದ ಎಲ್ಲವನ್ನೂ ಸೀಬೆಗಿಡದ ಕೆಳಗೆ ಇರಿಸಿದ್ದ.

ಸುಮ ಗಂಡನ ಭುಜ ಹಿಡಿದುಕೊಂಡು ನಿಲ್ಲಿಸುತ್ತಾ ಗಾಬರಿಯಿಂದಲೇ, ''ರೀ...ಮೊದಲು ನನ್ನ ಪ್ರಶ್ನೆಗಳಿಗೆ ಉತ್ತರ ಹೇಳಿ.''

''ಏನೇ...ಅದು...''

''ನೀವು ಹಿತ್ತಲಿನ ಬಾಗಿಲಿನಿಂದ ಮನೆಯೊಳಗೆ ಬಂದ್ರಾ?''

''ಹೂಂ...ಯಾಕೆ?''

''ನಿಮಗೆ ಬಾಗಿಲನ್ನು ತೆರೆದದ್ದು ಯಾರು?''

ಸುರೇಂದ್ರ ನಗುತ್ತಾ ''ನೀನೇ ತೆಗೆದಿದ್ದೀಯ ಅಲ್ವೇ...ನಾನು ಮನೆಯಿಂದ ಹೋಗುವಾಗಲೇ ಹೇಳಿದ್ದೆನಲ್ಲ. ಹಿತ್ತಲಿನ ಬಾಗಿಲು ತೆಗೆದಿರು ರಾತ್ರಿ ಒಂಭತ್ತು ಗಂಟೆಗೆ ಬರುತ್ತೇನೆ ಅಂತ'' ಎಂದ.

ಸುಮ ಭಯಾತುರದಿಂದ ''ನೀವು ಹೇಳಿದ್ದು ನಿಜ ಆದರೆ ನಾನು ಹಿತ್ತಲ ಬಾಗಿಲನ್ನು ತೆರೆದಿರಲಿಲ್ಲ!'' ಎಂದಳು.

ಸುರೇಂದ್ರ ಗಾಬರಿಯಿಂದ ''ಏನಂದೆ?''

ಸುಮ ತಲೆಯಾಡಿಸುತ್ತಾ ''ಹೌದ್ರೀ...ನೀವು ಹೇಳಿದ್ದು ನನಗೆ ಮತ್ತೇ ಹಿಗಿದ್ದರಿಂದ ನಾನು ಬಾಗಿಲನ್ನು ತೆರೆದಿರಲಿಲ್ಲ.''

ಇದನ್ನು ಕೇಳಿದ ಸುರೇಂದರನಿಗೆ ಭಯವಾಯಿತು ಸ್ವಲ್ಪ ಹೊತ್ತು ಆಲೋಚಿಸಿದ ನಂತರ, ''ಸುಮ...ಈ ವಿಷಯಕ್ಕೆ ಯಾಕೆ ತಲೆ ಕೆಡಿಸಿಕೊಳ್ಳುತ್ತೀಯ. ಬೆಳಿಗ್ಗೆಯೋ, ಮಧ್ಯಾಹ್ನವೋ ತೆಗೆದಿದ್ದ ಹಿತ್ತಲ ಬಾಗಿಲನ್ನು ರಾತ್ರಿ ಹಾಕಲು ನೀನು ಮರೆತಿರಬೇಕು.''

''ಅಯ್ಯೋ ಇಲ್ಲಾರೀ...''

''ಓಕೆ...ಓಕೆ...ನೀನು ಬಾಗಿಲನ್ನು ಹಾಕಿದ್ದೆ ಅಂತಾನೆ ಇಟ್ಕೊ...ಆದರೆ ಅಮ್ಮ ಮಲ ಅಥವಾ ಮೂರ್ತ ವಿಸರ್ಜನೆಗೆ ಹೋದಾಗ ತೆಗೆದಿದ್ದಾಳೆ. ಬರುವಾಗ ಅವಳೇ ಬಾಗಿಲು ಹಾಕುವುದನ್ನು ಮರೆತಿರಬೆಕು ನೀನೀಗ ಒಳಗೆ ಬಾ'' ಎಂದು ಹೆಂಡತಿಯ ತೋಳನ್ನು ಹಿಡಿದುಕೊಂಡು ಒಳಗೆ ಬಂದ.

ಸುಮಳಿಗೆ ಅದೇಕೋ ಸಮಾಧಾನವಾಗಲಿಲ್ಲ. ಎಲ್ಲೋ ಏನೋ ಸಂಶಯ ಕಾಡುತ್ತಿತ್ತು.

ಗಡಿಯಾರ, 'ಡಣ್...ಡಣ್...' ಎಂದು ಶಬ್ದ ಮಾಡಿತು.

ಆಗ ರಾತ್ರಿ ಹತ್ತು ಗಂಟೆ!

ಸುರೇಂದ್ರ ಪಿಸು ಧ್ವನಿಯಲ್ಲಿ ''ಸುಮ...ಪ್ಲಾನಿನಲ್ಲಿ ಸ್ವಲ್ಪ ಬದಲಾವಣೆ ಮಾಡಿದ್ದೇನೆ. ಈಗಲೇ ಹೋಗಿ ಮಾವನಿಗೆ ಉಪಾಯವಾಗಿ ಗಸಗಸೆ ಪಾಯಸ ಕುಡಿಸು. ಸ್ವಲ್ಪ ಜಾಸ್ತಿಯೇ ನಿದ್ದೆ ಬರೋ ಔಷಧಿಯನ್ನು ಪಾಯಸಕ್ಕೆ ಹಾಕು.''

ಸುಮ ತಲೆಯಾಡಿಸಿ ಕಾರ್ಯತತ್ಪರಳಾದಳು. ಗಂಡ ಜೊತೆಯಲ್ಲೇ ಇದ್ದುದರಿಂದ ಅವಳಿಗೆ ಧೈರ್ಯ ಬಂದಿತ್ತು ಪಾಯಸದ ಲೋಟ ಹಿಡಿದುಕೊಂಡು ಮಾವನ ರೂಮಿಗೆ ಬಂದಳು.

ಹೆಂಡತಿ ಅತ್ತ ಹೋದ ಕೂಡಲೇ ಸುರೇಂದ್ರ ಸಿಗರೇಟ್ ಸೇದಲಾರಂಭಿಸಿದ. ಸಿಗರೇಟಿನ ಗಬ್ಬು ವಾಸನೆಯೆಂದರೆ ಸುಮ ಮುಖ ಸಿಂಡರಿಸುತ್ತಿದ್ದರಿಂದ ಸುರೇಂದ್ರ ಅವಳ ಎದುರಿಗೆ ಸೇದುತ್ತಿರಲಿಲ್ಲ.

ಸುಮ ಪಾಯಸದ ಲೋಟ ಹಿಡಿದುಕೊಂಡು ರೂಮಿನ ಹತ್ತಿರ ಬಂದಳು. ಮೆಲ್ಲಗೆ, ''ಮಾವ...ಮಾವ...''

ಕ್ಷಣಗಳು ಉರುಳುತ್ತಿತ್ತು.

ಸುಮಳ ಗಮನ ಈಗ ಬಾಗಿಲಿನ ಕಡೆ ಹರಿಯಿತು. ಬಾಗಿಲು ತುಸು ಓರೆಯಾಗಿ ತೆರೆದುಕೊಂಡಿತ್ತು.

ಸುಮ ಆಶ್ಚರ್ಯದಿಂದಲೇ ಬಾಗಿಲನ್ನು ನೂಕಿದಳು. ರೂಮಿನೊಳಗೆ ಕತ್ತಲು ತುಂಬಿಕೊಂಡಿತ್ತು ಸುಮ ಗೋಡೆಯ ಮೇಲೆ ಕೈ ಸರಿಸಿ ತಡಲಾಡಿದಳು ಸ್ವಿಚ್ ತಗುಲಿತು ಪ್ರೆಸ್ ಮಾಡಿದಳು.

ದಿಗ್ಗನೆ ದೀಪ ಹತ್ತಿಕೊಂಡಿತು!

ಕಣ್ಣು ಕೋರೈಸುವಂತಹ ಬೆಳಕು!

ಸುಮ ಕೈಯನ್ನು ಅಡ್ಡ ಇರಿಸಿಕೊಂಡು ಮಂಚದ ಕಡೆ ನೋಡಿದಳು.

ರುದ್ರಯ್ಯ ಮಂಚದ ಮೆಲೆ ಮಲಗಿದ್ದ.

ಸುಮ ಮಂಚದ ಹತ್ತಿರ ಬರುತ್ತಾ ''ಮಾವ...ಏಳಿ...ಎದ್ದು ಪಾಯಸ ಕುಡಿದು ಮಲಗಿಕೊಳ್ಳಿ'' ಎಂದಳು.

ರುದ್ರಯ್ಯನಿಂದ ಉತ್ತರವಿಲ್ಲದ.

''ಮಾ...ಮಾವ...'' ತುಸು ಜೋರಾಗಿ ಕಿರುಚಿದಳು.

ಊ...ಹೂಂ...ಉತ್ತರವಿಲ್ಲ.

ಅದೇಕೋ ಅನುಮಾನ ಬಂದು ಎರಡು ಹೆಜ್ಜೆ ಮುಂದೆ ಸರಿದು ಕತ್ತನ್ನು ಬಾಗಿಸಿ ನೋಡಿದಳು.

'ಪಳಾರ್...' ಎಂಬ ಶಬ್ದ.

ಪಾಯಸದ ಲೋಟ ಕೈಯಿಂದ ಜಾರಿತ್ತು.

ಅಡುಗೆ ಮನೆಯೊಳಗೆ ಸಿಗರೇಟ್ ಸೇದುತ್ತಾ ಕುಳಿತಿದ್ದ ಸುರೇಂದ್ರ ಈ ಶಬ್ದ ಕೇಳಿ ಆತುರದಿಂದ ರೂಮಿಗೆ ಬಂದ.

ಸುಮ ಭಯದಿಂದ ಗಡಗಡನೆ ನಡುಗುತ್ತಾ ರುದ್ರಯ್ಯನ ದೇಹವನ್ನೇ ನೋಡುತ್ತಿದ್ದಾಳೆ. ಮುಖದ ತುಂಬಾ ಬೆವರಿನ ಹನಿಗಳು ಮೂಡಿದೆ. ಪಾಯಸ ನೆಲದ ಮೇಲೆ ಚೆಲ್ಲಿದೆ ಸ್ಟೀಲ್ ಲೋಟ ಮೂಲೆಯಲ್ಲಿ ಬಿದ್ದಿದೆ.

ಸುರೇಂದ್ರ ಜಹೆಂಡತಿಯ ಭುಜ ಹಿಡಿದು ಅಲುಗಿಸುತ್ತಾ ''ಸುಮ...ಸುಮ...ಯಾಕೇ...ಏನಾಯ್ತೇ...?'' ಕೇಳಿದ.

ಸುಮ ಬೆರಳನ್ನು ಗುರಿ ಮಾಡಿ ತೋರಿಸಿದಳು.

ಸುರೇಂದ್ರ ಅತ್ತ ಕಡೆ ನೋಡಿದ. ರುದ್ರಯ್ಯನ ದೇಹ ಸೆಟೆದುಕೊಂಡಿತ್ತು. ಕಣ್ಣು ಗುಡ್ಡೆಗಳು ಹೊರ ಕಾಣುತ್ತಿತ್ತು ರುದ್ರಯ್ಯ ಹೆಣವಾಗಿದ್ದ!

★★★

ಹೆಂಡತಿಯ ಜೊತೆ ಸುರೇಂದ್ರ ಸಹ ಭಯಗೊಂಡಿದ್ದರಿಂದ ಸ್ವಲ್ಪ ಹೊತ್ತು ಮಂಕಾಗಿ ನಿಂತಿದ್ದ. ಇನ್ನು ಇಲ್ಲಿಯೇ ತುಂಬಾ ಹೊತ್ತು ಇದ್ದರೆ ಹೆಂಡತಿ ಹೆದರುತ್ತಾಳೆಂದು ಅವಳನ್ನು ಕರೆದುಕೊಂಡು ಹೊರಬಂದ. ಅಡುಗೆ ಮನೆಗೆ ಹೋಗಿ ದೊಡ್ಡ ಚೊಂಬಿನ ತುಂಬಾ ನೀರನ್ನು ತೆಗೆದುಕೊಂಡು ಬಂದು ಮೊದಲು ತಾನು ಕುಡಿದು ನಂತರ ಹೆಂಡತಿಗೂ ಕುಡಿಸಿದ.

ಒಂದು ನಿಮಿಷ ಕಳೆಯಿತು.

ಸುಮ ಸೋಫಾದಲ್ಲಿ ಕುಳಿತುಕೊಂಡು ಸೆರಗಿನಿಂದ ಮುಖ, ಕುತ್ತಿಗೆ, ಎದೆಯಲ್ಲಿ ಮೂಡಿದ್ದ ಬೆವರನ್ನು ಒರೆಸಿಕೊಂಡು ಗಂಡನತ್ತ ನೋಡಿದಳು. ಸುರೇಂದ್ರ ಮಂಕಾಗಿ ಕುಳಿತಿದ್ದ.

ಸುಮ ನಿಟ್ಟುಸಿರು ಬಿಡುತ್ತಾ ''ರೀ...ನೀವು ಈ ರೀತಿ ದಿಢೀರ್ ಅಂತ ಪ್ಲಾನ್ ಬದಲಾಯಿಸುತ್ತೀರ ಅಂತ ಅಂದುಕೊಂಡಿರಲಿಲ್ಲ'' ಎಂದಳು.

ಸುರೇಂದ್ರ ಗಾಬರಿಯಿಂದ ''ನೀನು ಏನ್ ಹೇಳ್ತಾ ಇದ್ದೀಯ ಸುಮ... ಪ್ಲಾನ್ ಚೇಂಜ್ ಮಾಡಿದ್ದೇನಾ?'' ಕೇಳಿದ.

''ಮತ್ತೆ ಇನ್ನೇನ್ರಿ? ರಾತ್ರಿ ಹತ್ತು ಗಂಟೆಯ ಮೇಲೆ ಇಬ್ಬರೂ ಸೇರಿ ರುದ್ರ ಮಾವನನ್ನು ಸಾಯಿಸೋದು ಅಂತ ತೀರ್ಮಾನ ಮಾಡಿಕೊಂಡಿರಲಿಲ್ಲವೇ?''

''ಹೌದು...ಇಲ್ಲ ಅಂತ ಯಾರು ಹೇಳಿದ್ರು?''

''ಆದರೆ ಒಬ್ಬರೇ ಒಂದು ಗಂಟೆ ಮೊದಲೇ ರುದ್ರ ಮಾವನನ್ನು ಕೊಂದು ಬಂದಿದ್ದೀರ. ನೀವು ತುಂಬಾ ಧೈರ್ಯವಂತರಪ್ಪ ಕತ್ತಲಲ್ಲಿ ಸುಳಿವೇ ಕೊಡದೆ ಕೊಲೆ ಮಾಡಿದ್ದೀರಲ್ಲ''

ಸುರೇಂದ್ರ ವಿಪರೀತ ಗಾಬರಿಯಿಂದ ದಡಕ್ಕನೆ ಎದ್ದು ನಿಂತುಕೊಂಡು ''ಏನಂದೆ...ರುದ್ರಮಾವನನ್ನು ನಾನು ಕೊಲೆ ಮಾಡಿದ್ನ ತಮಾಷೆ ಮಾಡ್ತಾ ಇದ್ದೀಯ'' ಎಂದ.

ಸುಮ ಹುಸಿ ಕೋಪದಿಂದ ''ಕೊಲೆಯಂತಹ ವಿಚಾರದಲ್ಲಿ ಯಾರಾದರೂ ತಮಾಷೆ ಮಾಡ್ತಾರ?'' ಎಂದಳು.

ಸುರೇಂದ್ರ ಭಯಾತುರದಿಂದ ''ಇಲ್ಲ...ಇಲ್ಲ...ನಾನು ಕೊಲೆ ಮಾಡಿಲ್ಲ...ನಾನು ಆ ರೂಮಿಗೇ ಹೋಗಿಲ್ಲ!'' ಎಂದ.

ಸುಮ ತತ್ತರಿಸಿ ಹೋದಳು. ಗಂಡನ ಭುಜಗಳನ್ನು ತನ್ನೆರಡು ಕೈಗಳಿಂದ ಹಿಡಿದು ಅಲುಗಿಸುತ್ತಾ ''ರೀ...ನೀವು...ನೀವು ನಿಜವಾಗಿಯೂ ಕೊಲೆ ಮಾಡಿಲ್ವಾ?'' ಕೇಳಿದಳು.

''ಗಾಡ್ ಪ್ರಾಮಿಸ್ ಕೊಲೆ ಮಾಡಿಲ್ಲ. ನನ್ನ ಮಾತನ್ನು ನಂಬು ಸುಮ. ನಾನ್ಯಾಕೆ ಸುಳ್ಳು ಹೇಳಲಿ ಹೇಳು...''

ಸುಮ ಕಂಪಿಸುವ ಸ್ವರದಿಂದ ''ಹಾಗಾದರೆ...ಹಾಗಾದರೆ ಈ ಕೊಲೆಯನ್ನು ಮಾಡಿದ್ದು ಯಾರು?'' ಕೇಳಿದಳು.

''ಗೊತ್ತಿಲ್ಲ ಸುಮ ಬೇಗ ನಡಿ ಮುಖ್ಯವಾದ ಸಂಗತಿಯನ್ನೇ ನಾವಿಬ್ಬರೂ ಮರೆತಿದ್ದೇವಏ'' ಎಂದು ಹೆಂಡತಿಯ ಕೈ ಹಿಡಿದುಕೊಂಡು ಆತುರದಿಂದ ನುಗ್ಗಿದ.

ಸುರೇಂದ್ರ ರೂಮಿಗೆ ಬಂದ ಕೂಡಲೇ ಮಂಚದ ಕೆಳಗೆ ನೋಡಿದ. ಅಲ್ಲಿ ಸೂಟ್‌ಕೇಸ್ ಇರಲಿಲ್ಲ! ಇಪ್ಪತ್ತೈದು ಲಕ್ಷ ರೂಪಾಯಿಗಳಿಟ್ಟ ಸೂಟ್‌ಕೇಸ್ ಇರಲಿಲ್ಲ!

★★★

ಅದು ಅಡುಗೆ ಮನೆ.

ಸುರೇಂದ್ರ ಗೋಡೆಗೆ ಒರಗಿಕೊಂಡು ತಲೆಯ ಮೇಲೆ ಕೈ ಹೊತ್ತು ಮಂಕಾಗಿ ಕುಳಿತಿದ್ದಾನೆ. ಅವನ ಮುಖ ಬಾಡಿದೆ. ಅವನ ಎದೆಗೆ ಒರಗಿಕೊಂಡು ಸುಮ ಕುಳಿತಿದ್ದಾಳೆ.

ಸುಮ ಅಳುತ್ತಿದ್ದಾಳೆ.

ಕಣ್ಣೀರಿನಿಂದ ಅವನ ಎದೆ ತೊಯ್ದು ಹೋಗಿದೆ. ಹೆಂಡತಿಯನ್ನು ಸುರೇಂದ್ರ ಸಂತೈಸುತ್ತಿಲ್ಲ. ಏಕೆಂದರೆ ಅವನೇ ಪೂರ್ತಿಯಾಗಿ ನಿರಾಸೆಯಿಂದ ಕುಗ್ಗಿಹೋಗಿದ್ದಾನೆ ಗಂಡ-ಹೆಂಡತಿ ಆಗಾಗ ಜೋರಾಗಿ ನಿಟ್ಟುಸಿರು ಬಿಡುತ್ತಿದ್ದಾರೆ.

ಅವರಿಬ್ಬರು ಅಂದುಕೊಂಡಿದ್ದೇನು?

ಈಗ ಆಗಿರುವುದು ಏನು?

ಇಪ್ಪತ್ತನಾಲ್ಕು ಗಂಟೆಗಳಿಂದ ಬಗೆ, ಬಗೆಯಾಗಿ ಕಟ್ಟಿದ್ದ ರಂಗು ರಂಗಾದ ಕನಸಿನ

ಮಹಾ ಸೌಧ, ಆಸೆಗಳ ಆಶಾಗೋಪುರ ಈಗ ನುಚ್ಚುನೂರಾಗಿತ್ತು. ಗಾಳಿಯಲ್ಲಿ ಲೀನಾವಾಗಿತ್ತು.

ಕಾರು, ಬಂಗಲೆ, ಒಡವೆಗಳು...

ಜೊತೆಗೆ ಲಕ್ಷಾಂತರ ರೂಪಾಯಿ ಹಣ...!

ಈಗ ಯಾವುದೂ ಇಲ್ಲ. ಮಧ್ಯವರ್ಗದ ಗಾರೆ ನೆಲದ ಮನೆಯಲ್ಲಿ ಉಳಿದುಕೊಂಡಿರುವುದು ಒಂದೇ ಒಂದು.

ಅದೇ ಹೆಣ...ರುದ್ರಯ್ಯನ ಹೆಣ...

ಕೈ, ಕಾಲುಗಳು ಸೆಟೆದುಕೊಂಡು, ಕಣ್ಣಿನ ಗುಡ್ಡೆಗಳು ಬಹುಭಾಗ ಹೊರಬಂದಿರುವ ರುದ್ರಯ್ಯನ ಹೆಣ!

ಸುಮ ಭಯದಿಂದ ಕೇಳಿದಳು ''ರೀ...ರೀ...ಏನ್ರೀ ಇದು. ನೀವು ಕೊಲೆ ಮಾಡಿಲ್ಲ ಅಂತೀರ ಹಾಗಾದರೆ ಇನ್ಯಾರು ಮಾಡಿದ್ದು?''

ಸುರೇಂದ್ರ ಉತ್ತರಿಸಲಿಲ್ಲ.

ಸುಮ ಕೋಪದಿಂದ ''ರೀ...ಮಾತಾಡ್ರೀ...'' ಎಂದಳು.

ಸುರೇಂದ್ರ ಹತಾಶನಾಗಿ ''ನನಗೇನು ಗೊತ್ತು ಸುಮ. ಮಾವನ ಜೊತೆ ಸದಾ ಮನೆಯಲ್ಲಿ ಇದ್ದವಳು ನೀನು. ನಗರಕ್ಕೆ ಹೋಗಿದ್ದವನು ಒಂಬತ್ತು ಗಂಟೆಗೆ ಸ್ವಲ್ಪ ಮೊದಲು ಬಂದೆ'' ಎಂದ.

ಸುಮ ಹಣೆ ಚಚ್ಚಿಕೊಂಡು ಅಳುತ್ತಾ ''ಎಲ್ಲಾ ನನ್ನ ಕರ್ಮ, ಕೈ ತುಂಬಾ ಹಣ ಸಿಗುತ್ತೆ ಮುಂದಾವರೂ ಶ್ರೀಮಂತಿಕೆಯ ಜೀವನ ನಡೆಸಬಹುದು ಅಂತ ಕನಸು ಕಂಡಿದ್ದೆ'' ಎಂದಳು.

ಸುರೇಂದ್ರ ಹೆಂಡತಿಯ ತಲೆ ಸವರುತ್ತಾ ''ಸು...ನಿನಗಾಗಿರೋ ನಿರಾಸೆ ನನಗೆ ಅರ್ಥವಾಗುತ್ತೆ. ಏನು ಮಾಡಲು ಸಾಧ್ಯ? ಒಟ್ಟಿನಲ್ಲಿ ಮಾವನ ಹಣ ಹೊಂದುವ ಅದೃಷ್ಟವಿಲ್ಲ'' ಹೇಳಿದ.

ಇಬ್ಬರೂ ಸ್ವಲ್ಪ ಹೊತ್ತು ಮೌನವಾಗಿದ್ದರು.

ಸುರೇಂದ್ರ, ''ಸುಮ...ಏಳು...ಮುಂದಿನ ಕಾರ್ಯ ಮುಗಿಸೋಣ'' ಎಂದ.

ಸುಮ ಹುಬ್ಬೇರಿಸಿ ''ಅಂದರೆ...?'' ಎಂದಳು.

''ಹೆಣಕ್ಕೆ ಒಂದು ಗತಿ ಕಾಣಿಸಬೇಕು'' ಅಂದ.

''ಅಂದರೆ...'' ಪ್ರಶ್ನಾರ್ಥಕ ನೋಟ ಬೀರಿದಳು.

''ಹಣ ಸಿಗಲಿಲ್ಲ ಅಂತ ಹೆಣವನ್ನು ಮಣ್ಣು ಮಾಡದಿದ್ದರೆ ಈ ಕೊಲೆಯ ಆಪಾದನೆಯೂ ಸಹ ನಮ್ಮ ಮೇಲೇ ಬರುತ್ತದೆ.''

ಸುಮ ಭಯದಿಂದ ನಡುಗಿದಳು.

ಸುರೇಂದ್ರ ಎದ್ದು ನಿಂತುಕೊಂಡು, ''ರುದ್ರ ಮಾವ ಬಂದದ್ದನ್ನು ಯಾರೂ ನೋಡಿಲ್ಲ. ಒಂದು ವೇಳೆ ನೋಡಿದ್ದರೂ ತೊಂದರೆಯೇನಿಲ್ಲ ಮಾವ ರಾತ್ರಿಯೇ ಹೊರಟುಹೋದರು ಅಂತ ಯಾರೇ ಕೇಳಿದರೂ ಹೇಳೋಣ. ಮುಖ್ಯವಾಗಿ ಮಾವ ಸತ್ತಿರೋ ವಿಚಾರ, ಈ ಮನೆಯಲ್ಲೇ ಹೆಣವಾಗಿ ಬಿದ್ದಿರೋ ವಿಚಾರ ಬೇರೆಯವರಿಗೆ ತಿಳಿಯಬಾರದು'' ಎಂದ.

ಸುಮ ನಿಟ್ಟುಸಿರುಬಿಡುತ್ತಾ ತಲೆಯಾಡಿಸಿದಳು. ಇಬ್ಬರೂ ರೂಮಿಗೆ ಬಂದರು.

ಸುರೇಂದ್ರ ಮಂಚದಲ್ಲಿದ್ದ ಹೆಣವನ್ನು ತುಂಬಾ ಕಷ್ಟದಿಂದ ಕೆಳಗೆ ನೂಕಿದ ಹೆಣ ಅವಳ ಕಾಲಿನ ಹತ್ತಿರ ಬಿದ್ದಿತು ತೆರೆದ ಕಣ್ಣುಗಳಿಂದ ತನ್ನನ್ನೇ ನೋಡುತ್ತಿರುವಂತೆ ಭಾಸವಾಗಿ ಸುಮ ಭಯದಿಂದ ಕಿರುಚಿಕೊಂಡಳು.

ಸುರೇಂದ್ರ ಹೆಂಡತಿಯ ಹತ್ತಿರ ಬಂದು ಸರ್ರನೆ ಅವಳ ಬಾಯನ್ನು ಅದುಮುತ್ತಾ ''ಸುಮ...ನೀನು ಈ ರೀತಿ ಕಿರುಚಿಕೊಂಡರೆ ಹೊರಗಿನವರಿಗೆ ಗೊತ್ತಾಗುತ್ತದೆ. ಹಣ ಸಿಗದಿದ್ದರೆ ಬೇಡ. ಆಮೇಲೆ ಕೊಲೆಯ ಕೇಸಿನಲ್ಲಿ ಸಿಕ್ಕಿಕೊಂಡು ಪಜೀತಿ ಅನುಭವಿಸಬೇಕಾಗುತ್ತದೆ'' ಎಂದ.

ಮುಖದ ತುಂಬಾ ಬೆವರಿನ ಹನಿಗಳು...

ಸುಮ ಗಡಗಡನೆ ನಡುಗುತ್ತಿದ್ದಳು.

ಸುರೇಂದ್ರ ಹೆಂಡತಿಯನ್ನು ದೂರ ಸರಿಸಿ ಹೆಣದ ಕಾಲುಗಳನ್ನು ಹಿಡಿದುಕೊಂಡು ಎಳೆಯಲಾರಂಭಿಸಿದ. ರೂಮಿನ ಹೊಸಿಲನ್ನು ದಾಟುವ ಹೊತ್ತಿಗೆ ಸುರೇಂದ್ರ ಬೆವರುತ್ತಿದ್ದ.

ಗಂಡನ ಅವಸ್ಥೆ ನೋಡಲಾರದೆ ಸುಮ ತಾನೂ ಸಹ ಹೆಣದ ಮತ್ತೊಂದು ಕಾಲನ್ನು ಹಿಡಿದುಕೊಂಡು ಎಳೆಯಲಾರಂಭಿಸಿದಳು.

ಹತ್ತು ನಿಮಿಷ ಕಳೆಯಿತು.

ಹೆಣವನ್ನು ಹಿತ್ತಲಿನಲ್ಲಿ ಬೆಳೆಸಿದ್ದ ಸೀಬೆ ಗಿಡದ ಕೆಳಗೆ ತಂದು ಹಾಕಿದರು.

ಸುರೇಂದ್ರ, ಬೆವರನ್ನು ಒರೆಸಿಕೊಳ್ಳುತ್ತಾ "ಸುಮ...ಎಲ್ಲಾ ದೀಪಗಳನ್ನು ಆರಿಸಿ, ಸೀಮೆಎಣ್ಣೆ ಲ್ಯಾಂಪ್ ಹತ್ತಿಸಿಕೊಂಡು ಬಾ" ಎಂದು ಮರದ ಕೆಳಗೆ ಕುಳಿತ.

ಸುಮ ಗಂಡ ಹೇಳಿದಂತೆ ಎಲ್ಲಾ ಮುಗಿಸಿಕೊಂಡು ಕೈಯಲ್ಲಿ ಸೀಮೆಎಣ್ಣೆ ಲ್ಯಾಂಪ್ ಹಿಡಿದುಕೊಂಡು ಬಂದಳು. ಆಗ ಸುರೇಂದ್ರ ಮರದ ಕೆಳಗೆ ಸಿಗರೇಟ್ ಸೇದುತ್ತಿದ್ದ ಸುಮ ಈಗ ಮಾತ್ರ ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಲಿಲ್ಲ.

ಆಗ ರಾತ್ರಿ ಹನ್ನೊಂದರ ಸಮಯ.

ತಂಗಾಳಿ ಹಿತವಾಗಿ ಬೀಸುತ್ತಿತ್ತು.

ಸುರೇಂದ್ರ ಏದುಸಿರುಬಿಡುತ್ತಾ ಹಾರೆಯಿಂದ ಗುಂಡಿ ಅಗೆಯುತ್ತಿದ್ದರೆ ಸುಮ ಗಂಡನತ್ತ ಮರುಕದಿಂದ ನೋಡಿದಳು. ಪಾಪ...ನನ್ನಷ್ಟೇ ನಿರಾಸೆ ಇವರಿಗೂ ಆಗಿದೆ ಎಂದುಕೊಂಡಳು.

ಸಮಯ ಉರುಳುತ್ತಿತ್ತು.

ಗುಂಡಿ ಸಿದ್ಧವಾಯಿತು. ಸುರೇಂದ್ರ ಮೇಲಕ್ಕೆ ಹತ್ತಿ ಬಂದಾಗ ಅವನ ದೇಹದಿಂದ ಬೆವರು ಧಾರಾಕಾರವಾಗಿ ಸುರಿಯುತ್ತಿತ್ತು. ಸುಮ ಸೆರಗಿನಿಂದ ಬೆವರನ್ನು ಒರೆಸಿದಳು.

ಸುರೇಂದ್ರ ಎಷ್ಟು ಉದ್ವಿಗ್ನಗೊಂಡಿದ್ದನೆಂದರೆ ಸಿಗರೇಟಿನ ಅಭ್ಯಾಸ ಇಲ್ಲದವನು ಮೇಲೆ, ಮೇಲೆ ಸೇದುತ್ತಿದ್ದ.

ಕ್ಷಣ ಸುಧಾರಿಸಿಕೊಂಡ ನಂತರ ಸುರೇಂದ್ರ ಮತ್ತು ಸುಮ ಹೆಣವನ್ನು ಎಳೆದು ಗುಂಡಿಯೊಳಗೆ ಹಾಕಿದರು. ನಂತರ ಇಬ್ಬರೂ ಸೇರಿ ಮಣ್ಣನ್ನು ಮುಚ್ಚಿದ್ದರು. ಇಷ್ಟೆಲ್ಲ ಆಗುವ ಹೊತ್ತಿಗೆ ಅರ್ಧಗಂಟೆ ಕಳೆಯಿತು.

ಸುರೇಂದ್ರ ಅನುಮಾನ ಬಾರದಂತೆ ನೆಲವನ್ನು ಸಮತಟ್ಟು ಮಾಡಿ ಮೊದಲೆ ಆಲೋಚಿಸಿ ಸಿದ್ಧಪಡಿಸಿದಂತೆ ಕೆಲವು ಮಾಪಿನ ಗಿಡಗಳನ್ನು ಅಲ್ಲಿ ನೆಟ್ಟು ನೀರನ್ನು ಹಾಕಿದ.

ಇದೆಲ್ಲಾ ಮುಗಿಯುವ ಹೊತ್ತಿಗೆ ರಾತ್ರಿ ಒಂದು ಗಂಟೆಯಾಗಿತ್ತು ಗಂಡನ ಕೋರಿಕೆಯ ಮೇರೆಗೆ ಸುಮ ಕಾಫಿ ಮಾಡಿ ತಂದಳು. ಇಬ್ಬರೂ ಕಾಫಿ ಕುಡಿದ ನಂತರ ಹೆಣವಿದ್ದ ರೂಮನ್ನು ಕ್ಲೀನ್ ಮಾಡಿದರು. ರೂಮಿನ ತುಂಬಾ ಸಿಗರೇಟಿನ ತುಂಡುಗಳು, ಹಳೆಯ ಚಪ್ಪಲಿ ಬಿದ್ದಿತ್ತು. ಅದನ್ನೆಲ್ಲಾ ತೆಗೆದು ಕಸಗುಡಿಸಿದರು.

ಸುಮ ಬೆಡ್‌ರೂಮಿನಲ್ಲಿ ಮಲಗಲು ಹೆದರಿಕೊಂಡಿದ್ದರಿಂದ ಇಬ್ಬರೂ

ಜಾಲ್‌ನಲ್ಲಿಯೇ ಮಲಗಿಕೊಂಡರು. ನಿದ್ದೆ ಬರಲು ಸಾಧ್ಯವೇ? ಅಲ್ಲೇ ಇದ್ದ ಸೋಫಾದಲ್ಲಿ ಪಾರ್ವತಮ್ಮ ಸಹ ಗೊರಕೆ ಹೊಡೆಯುತ್ತಾ ಮಲಗಿದ್ದರು.

ಸುಮ ಮುಸಿ ಮುಸಿ ಅಳುತ್ತಿದ್ದರೆ ಸುರೇಂದ್ರ ಈಗ ನಡೆದುಹೋಗಿರುವುದರ ಬಗ್ಗೆ ಚಿಂತಿಸಲಾರಂಭಿಸಿದ.

ರುದ್ರಯ್ಯ ಮಾವ ಇದ್ದದ್ದು ನಮ್ಮ ಮನೆಯಲ್ಲಿ ಹಣದ ವಿಚಾರ ಗೊತ್ತಿದ್ದು ನಮಗೆ ಮಾತ್ರ. ಆದರೆ ನಾವು ಮಾಡಬೇಕು ಎಂದುಕೊಂಡಿದ್ದ ಕೊಲೆಯನ್ನು ಮಾಡಿ ಹಣದ ಸೂಟ್‌ಕೇಸನ್ನು ಎತ್ತಿಕೊಂಡು ಹೋದವರು ಯಾರು?

ಅಂದರೆ ಈ ವಿಚಾರವೆಲ್ಲಾ ಹೊರಗಿನ ವ್ಯಕ್ತಿಗೆ ತಿಳಿದಿದೆ. ಮುಂದೆ ಏನು ಅಪಾಯ ಕಾದಿದೆಯೋ ಎಂದು ಸುರೇಂದ್ರ ಚಿಂತೆಯಿಂದ ಹಣೆಯನ್ನು ಉಜ್ಜಿಕೊಂಡ.

ಬುದ್ಧಿವಂತಿಕೆಯಿಂದ ಹೆಣೆದಿದ್ದ ಗರುಡ ವ್ಯೂಹದಲ್ಲಿ ದಂಪತಿಗಳು ಸಿಕ್ಕಿಕೊಂಡಿದ್ದರು!

5

ಬೆಳಗಿನ ಎಂಟು ಗಂಟೆಯ ಸಮಯ!

ಪಾರ್ವತಮ್ಮ ಸಹಸ್ರನಾಮ ಪ್ರಾರಂಭಿಸಿದ್ದರು. ಹಾಲ್‌ನಲ್ಲಿ ಮಲಗಿದ್ದ ಮಗ, ಸೊಸೆಯನ್ನು ಕಂಡು, ''ಅಯ್ಯೋ...ಅಯ್ಯೋ...ರಾಮ ರಾಮ...ಸರಿಯಾಗಿ ಸಂಸಾರ ಮಾಡೋ ಹೆಣ್ಣಿನ ಲಕ್ಷಣವೇ ಇದು. ಬೇಗ ಎದ್ದು ಹೊಸಿಲು ಸಾರಿಸಿ, ರಂಗೋಲಿ ಇಡದೆ ನಾಗಸಾನಿಯ ತರಹ ನಡು ಮನೆಯಲ್ಲಿ ಬಿದ್ದುಕೊಂಡಿರೋದು ನೋಡು'' ಎಂದು ಕೂಗಾಡಲಾರಂಭಿಸಿದರು.

ಈ ದಂಪತಿಗಳು ರಾತ್ರಿ ಮಲಗಿಕೊಂಡಾಗಲೇ ಮೂರು ಗಂಟೆಯಾಗಿತ್ತು. ಅದಕ್ಕೇ ಗಾಢವಾದ ನಿದ್ದೆ ಪಾರ್ವತಮ್ಮನ ಕೂಗಾಟ ಕೇಳಿ ಇಬ್ಬರೂ ದಡಕ್ಕನೆ ಎದ್ದು ಕುಳಿತರು.

ಪಾರ್ವತಮ್ಮ ಬೈಗುಳ ಮುಂದುವರೆಸಿದಾಗ ಮೊದಲೆ ಕೊಲೆಯ ಪ್ರಕರಣದಿಂದ ತಲೆ ಕೆಡಿಸಿಕೊಂಡಿದ್ದ ಸುರೇಂದ್ರನಿಗೆ ಕೋಪ ಉಕ್ಕೇರಿತು.

ಅವನು ''ಅಮ್ಮಾ...ಈಗ ಏನಾಗಿ ಹೋಯಿತು ಅಂತ ಊರು ಹೊಲಗೇರಿ ಒಂದು ಮಾಡೋ ಹಾಗೆ ಕಿರುಚಿಕೊಳ್ಳುತ್ತಿದ್ದೀಯ ಸುಮ ಏನು ದಿನಾ ಈ ರೀತಿ ಮಲಗ್ತಾಳ?'' ಎಂದ.

ತಮಗೆ ತಿರುಗಿ ಮಾತಾಡದ ಮಗ ಈಗ ವೀರಭದ್ರನ ಅವತಾರ ತಾಳಿರುವುದನ್ನು ಕಂಡು ಪಾರ್ವತಮ್ಮ ತೆಪ್ಪಗಾದರು ಸುಮ ಸಹ ಗಂಡನತ್ತ ಹುಬ್ಬೇರಿಸಿ ನೋಡಿದ್ದಳು.

ಸ್ವಲ್ಪ ಹೊತ್ತಿನ ನಂತರ ಪಾರ್ವತಮ್ಮ ತೆರೆದಿದ್ದ ರೂಮಿನ ಬಾಗಿಲನ್ನು ನೋಡುತ್ತಾ ''ರುದ್ರ ಎಲ್ಲಿಗೆ ಹೋದನೋ?'' ಕೇಳಿದರು.

ಸುರೇಂದ್ರನಿಗೆ ಇನ್ನೂ ಕೋಪದ ಕಾವು ಕಡಿಮೆಯಾಗಿರಲಿಲ್ಲವಾದ್ದರಿಂದ ''ಎಲ್ಲಿ ನೆಗೆದು ಬಿದ್ದು ಹೋದನೋ ಯಾರಿಗೆ ಗೊತ್ತು ರಕ್ತ ಸಂಬಂಧ ಅಂತ ಆಶ್ರಯ ನೀಡಿದ್ದಕ್ಕೆ ಅದು ನನಗೇ ಮುಳುವಾಗಿದೆ'' ಎಂದ.

ಪಾರ್ವತಮ್ಮ ಧ್ವನಿಯೇರಿಸಿ ''ರಾಮ ರಾಮ..ಇವನಿಗೆ ಏನೋ ಆಗಿಹೋಗಿದೆ. ಏ...ಸುರರೇಂದ್ರ....ಯಾಕೋ...ಏನಾಯಿತೋ...'' ಎಂದು ಮಗನ ಹತ್ತಿರ ಬಂದಾಗ ಸುರೇಂದ್ರ ಹೊರಟುಹೋದ. ಆಗ ಸುಮ, ''ಅತ್ತೆ...ಪಾಪ...ಆಫೀಸ್‌ನಲ್ಲಿ ವಿಪರೀತ ಕೆಲಸ ಅದಕ್ಕೆ ಹೀಗಾಡುತ್ತಿದ್ದಾರೆ ಸ್ವಲ್ಪ ಹೊತ್ತು ಅವರನ್ನು ಮಾತಾಡಿಸಲೇ ಬೇಡಿ'' ಎಂದಳು.

ಪಾರ್ವತಮ್ಮ ಹಣೆ ಚಚ್ಚಿಕೊಳ್ಳುತ್ತಾ ''ತ್ತಾ''ಎಲ್ಲಾ ನನ್ನ ಕರ್ಮ ಅದು ಸರಿ...ರುದ್ರ ಯಾವಾಗ ಹೋದನೆ?'' ಕೇಳಿದರು.

''ರಾತ್ರಿ ನೀವು ಮಲಗಿಕೊಂಡಿದ್ದಾಗ ಹೋದರು.''

ಪಾರ್ವತಮ್ಮ ಕೋಪದಿಂದ ''ಕಳ್ಳ...ಕೊರಮ. ನನಗೆ ಹೇಳದೆ ಕದ್ದು ಹೋಗಿದ್ದಾನೆ. ಎಲ್ಲಾದರೂ ಸಾಯಲಿ ಸರಿ ಸರಿ ನನಗೆ ಕಾಫಿ ಕೊಡು ಸ್ನಾನ ಮಾಡಬೇಕು'' ಎಂದರು.

ಸುಮ ಕಾಫಿ ಮಾಡಿಕೊಂಡು ಬಂದು ತನ್ನ ಅತ್ತೆಗೆ ಕೊಟ್ಟು ತಾನು ಕುಡಿಯಲಾರಂಭಿಸಿದಳು.

ಕಾಲಿಂಗ್ ಬೆಲ್ ಶಬ್ದ ಮಾಡಿತು.

ಸುಮ ಎದ್ದು ಹೋಗಿ ಬಾಗಿಲನ್ನು ತೆರೆದಳು ಎದುರಿಗೆ ಎಸ್. ಐ. ಮನೋಹರ್ ನಿಂತಿದ್ದ!

ಮನೋಹರ್ ಯೂನಿಫಾರಂ ಧರಿಸಿದ್ದ!

★★★

ಅದೊಂದು ಕೊರಡಿ.

ವಿಸ್ಕಿಯನ್ನು ಗಟಗಟನೆ ಕುಡಿದು ಸೈಕಲ್ ಚೈನ್ ಕೃಷ್ಣ ಸೀಸೆಯನ್ನು ಗೋಡೆಗೆ ಅಪ್ಪಳಿಸಿದ.

'ಪಳಾರ್' ಎಂದು ಸಿಡಿಯಿತು.

ಅಲ್ಲಿದ್ದ ಮೂರು ಮಂದಿ ರೌಡಿಗಳು ತಮ್ಮ ಬಾಸ್‌ನ ಕೋಪವನ್ನು ಕಡು ಹೆದರಿ ಹಿಂದೆ ಸರಿದರು.

ಕೃಷ್ಣನ ಕೋಪಕ್ಕೆ ಎರಡು ಬಲವಾದ ಕಾರಣಗಳಿದ್ದವು. ತನ್ನ ಕ್ಲೋಸ್ ಫ್ರೆಂಡ್ ಡಡೇವಿಡ್ ರುದ್ರಯ್ಯನನ್ನು ಕೊಲೆ ಮಾಡಿ ಹಣ ತೆಗೆದುಕೊಂಡು ಬರಲು ಸಹಾಯ ಮಾಡುತ್ತೇನೆ ಎಂದಿದ್ದವನು ಬಂದಿರಲಿಲ್ಲ. ಅವನು ತನಗೆ ಮತ್ತು ಗ್ಯಾಂಗಿಗೆ ಮೋಸ ಮಾಡಿದನೇನೋ ಎಂಬ ಸಂಶಯ ಬಂದಿತ್ತು ಡೇವಿಡ್‌ನನ್ನು ಕಂಡರೆ ತುಂಡು ತುಂಡಾಗಿ ಕತ್ತರಿಸಬೇಕು ಎಂದುಕೊಂಡ.

ಎರಡನೆಯ ಕಾರಣ ಫೆಯಿಲ್ಯೂರ್ ರುದ್ರಯ್ಯನನ್ನು ಕೊಂದು ಹಣದ ಸೂಟ್‌ಕೇಸ್ ಎತ್ತಿಕೊಂಡು ಬರಬೇಕು ಎಂಬ ಪ್ರಯತ್ನ ವಿಫಲವಾಗಿತ್ತು ಅದಕ್ಕೇ ಈ ಕೋಪ.

ತನ್ನ ಫ್ರೆಂಡ್ ಡೇವಿಡ್ ಬಾರದೆ ಇದ್ದುದರಿಂದ ಕೃಷ್ಣ ಹಿಂದಿನ ರಾತ್ರಿ ಒಂಭತ್ತು ಗಂಟೆಯ ಸಮಯದಲ್ಲಿ ತಾನೊಬ್ಬನೇ ಸುರೇಂದ್ರನ ಮನೆಗೆ ಹೋಗಿದ್ದನು.

ಹಿತ್ತಲಿನ ಕಾಂಪೌಂಡನ್ನು ಹಾರಿದ್ದನು ಹೆಂಚನ್ನು ತೆಗೆದು ಒಳಗೆ ಇಳಿಯಬೇಕು ಎಂದುಕೊಂಡು ಸಿದ್ಧತೆ ನಡೆಸಿಕೊಂಡು ಬಂದಿದ್ದನು ಆದರೆ ಹಿಂಬಾಗಿಲು ತೆರೆದಿತ್ತು ಇದೇ ಪರಮಾಶ್ಚರ್ಯದ ಸಂಗತಿ ಇವನು ಮನೆಯೊಳಗೆ ಹೋದಾಗ ಎಲ್ಲಾ ಕಡೆ ಕತ್ತಲಾಗಿತ್ತು.

ಹಗಲಿನ ವೇಳೆಯಲ್ಲಿ ಬೈನಾಕ್ಯುಲರ್ ಮೂಲಕ ನೋಡಿದಾಗ ರೂಮಿನಲ್ಲಿ ರುದ್ರಯ್ಯ ಇದ್ದದ್ದನ್ನು ಕಂಡಿದ್ದನು. ಆ ಅಂದಾಜಿನ ಮೇಲೆ ಕತ್ತಲಲ್ಲೇ ಸದ್ದಾಗದಂತೆ ತಡಕಾಡುತ್ತಾ ರೂಮಿನ ಹತ್ತಿರ ಬಂದಿದ್ದನು. ಟಾರ್ಚ್ ಬೆಳಗಿಸಿದರೆ ಮನೆಯವರಿಗೆ ಗೊತ್ತಾಗುತ್ತದೆ ಎಂದು ರೂಮನ್ನು ಸೇರಿ ಬಾಗಿಲನ್ನು ಹಾಕಿಕೊಂಡಿದ್ದನು.

ರೂಮಿನಲ್ಲಿ ಪೆನ್ ಟಾರ್ಚನ್ನು ಬೆಳಗಿಸಿ ನೋಡಿದಾಗ ಮಂಚದಲ್ಲಿ ರುದ್ರಯ್ಯ ಮಲಗಿರುವುದನ್ನು ಕಂಡಿದ್ದನು. ಸೂಕ್ಷ್ಮವಾಗಿ ನೋಡಿದ್ದಾಗ ರುದ್ರಯ್ಯ ಸತ್ತಿರುವುದು ಗಮನಕ್ಕೆ ಬಂದಿತ್ತು ಕೂಡಲೇ ಆತುರದಿಂದ ಸೂಟ್‌ಕೇಸ್ ಎಲ್ಲಿದೆಯೋ ಎಂದು

ರೂಮನ್ನೆಲ್ಲಾ ಹುಡುಕಾಡಿದ್ದನು ಆದರೆ ಸೂಟ್‌ಕೇಸ್ ಸಿಕ್ಕಿರಲಿಲ್ಲ ಅಲ್ಲಿಯೇ ಇದ್ದರೆ ತೊಂದರೆ ಆಗಬಹುದೆಂದು ಹೆದರಿ ಅಲ್ಲಿಂದ ಪರಾರಿಯಾಗಿದ್ದನು.

ಕೃಷ್ಣನಿಗೆ ಆ ಕ್ಷಣದಿಂದ ಡೇವಿಡ್‌ನ ಮೇಲೆ ಅನುಮಾನ ಬಂದಿತು. ಏಕೆಂದರೆ ರುದ್ರಯ್ಯನ ವಿಚಾರದಲ್ಲಿ ಡೇವಿಡ್‌ಗೆ ಗೊತ್ತಿತ್ತು ಅದೂ ಅಲ್ಲದೆ ಕೃಷ್ಣ ಮನೆಗೆ ಬಂದಿದ್ದಾಗ ಹಿಂಬಾಗಿಲು ತೆರೆದಿತ್ತು ಅಂದರೆ ತನಗಿಂತ ಮೊದಲೇ ಹೋಗಿ ರುದ್ರಯ್ಯನನ್ನು ಕೊಂದು ಡೇವಿಡ್ ಹಣದ ಸೂಟ್‌ಕೇಸ್ ಎತ್ತಿಕೊಂಡು ಹೋಗಿದ್ದಾನೆ.

ಕೃಷ್ಣ ಕೋಪದಿಂದ ಕರಕರನೆ ಹಲ್ಲು ಕಡಿದ. ಇಪ್ಪತ್ತೈದು ಲಕ್ಷ ರೂಪಾಯಿ ಕೈ ತಪ್ಪಿಹೋಗಿತ್ತು ಇದೇನು ಸಣ್ಣ ಮೊತ್ತವಲ್ಲ.

ಅದೇ ಸಮಯಕ್ಕೆ ಗ್ಯಾಂಗಿನ ರೌಡಿಯೊಬ್ಬ ಬಂದು ಆತುರದಿಂದ ಉಸುರಿದ.

''ಅಣ್ಣ...ಡೇವಿಡ್‌ನ ನಾನು ನೋಡಿದೆ.''

ಕೃಷ್ಣ ಆತುರದಿಂದ ''ಎಲ್ಲಿ...ಎಲ್ಲಿ...?''

'4ಸುಭಾಷ್‌ನಗರದಲ್ಲಿ''

''ಏನಂದೆ?'' ನಂಬಿಕೆ ಬಾರದೆ ಕೇಳಿದ.

''ಹೂಂ ಅಣ್ಣ...ನಾನೇ ನೋಡಿದ್ದೇನೆ. ಡೇವಿಡ್ ಸುಭಾಷ್‌ನಗರದಲ್ಲೇ ಓಡಾಡುತ್ತಿದ್ದಾನೆ'' ಎಂದ.

ಕೃಷ್ಣ ಕೋಪದಿಂದ ''ಅವನನ್ನು ಹಿಡಿದುಕೊಳ್ಳದೆ ನೋಡಿದ್ದೇನೆ ಅಂತ ಹೇಳಲು ಬಂದೆಯಾ?'' ಎಂದ ದುರುಗುಟ್ಟಿ ನೋಡುತ್ತ.

''ಹಾಗಲ್ಲ ಅಣ್ಣ ಆಗ ಅಲ್ಲಿ ಇದ್ದವರು ಇಬ್ಬರು ಮಾತ್ರ ಡೇವಿಡ್ ಹತ್ತಿರ ಹೋಗಿದ್ದರೆ ಅವನು ನಮ್ಮನ್ನು ಖಂಡಿತಾ ಉಳಿಸುತ್ತಿರಲಿಲ್ಲ'' ಎಂದು ಹೆದರುತ್ತಾ ಹೇಳಿದ.

ಕೃಷ್ಣ ಹೊರಡುತ್ತಾ ''ಆ ನನ್ನ ಮಗ ಡೇವಿಡ್ ನನ್ನನ್ನೇ ಏಮಾರಿಸಿ ಹಣ ತಾನೊಬ್ಬನೇ ಹೊಡೆದುಕೊಂಡಿದ್ದಾನೆ. ಅವನನ್ನು ನಾನು ಖಂಡಿತಾ ಉಳಿಸುವುದಿಲ್ಲ ಎಲ್ಲಾ ಬನ್ನಿ.''

ಎಂದು ತನ್ನವರೊಂದಿಗೆ ಹೊರಟನು!

★★★

ಸುಮಳ ಮುಖ ಬಿಳುಚಿಕೊಂಡಿತು.

ಏಕೆಂದರೆ ಎಸ್. ಐ. ಮನೋಹರ್ ಯೂನಿಫಾರಂನಲ್ಲಿ ಬಂದಿದ್ದ ಇದೇನು

ಹೊಸತಲ್ಲ ಸ್ನೇಹಿತನನ್ನು ನೋಡಲು ಈ ಡ್ರೆಸ್ಸಿನಲ್ಲಿ ಹಿಂದೆ ತುಂಬಾ ಸಲ ಬಂದಿದ್ದ ಆದರೆ ಈಗ ಪರಿಸ್ಥಿತಿಯೇ ಬೇರೆಯಾಗಿತ್ತು. ಮನೋಹರ್ ಸ್ನೇಹಿತನ ಹೆಂಡತಿಯನ್ನು ತೀಕ್ಷ್ಣವಾಗಿ ನೋಡುತ್ತಿದ್ದ ಈ ನೋಟವನ್ನು ಎದುರಿಸಲಾರದೆ ಸುಮ ತಲೆ ತಗ್ಗಿಸಿದಳು.

ಅಲ್ಲೇ ನಿಂತಿದ್ದ ಪಾರ್ವತಮ್ಮ ''ಓ...ಮನೋಹರ, ಬಾರಪ್ಪ ಬಾ. ಚೆನ್ನಾಗಿದ್ದೀಯ?'' ಎಂದರು

ಮನೋಹರ್ ಒಳಗೆ ಪ್ರವೇಶಿಸುತ್ತಾ ''ಚೆನ್ನಾಗಿದ್ದೀನಿ'' ಎಂದ ಮಾತ್ರ ಹೇಳಿ ಸೋಫಾದಲ್ಲಿ ಕುಳಿತ.

ಸುಮ ಭಯದಿಂದ ಅವನತ್ತ ನೋಡಿದಳು. ಆದರೆ ಮನೋಹರ ರೂಮನ್ನೇ ನೋಡುತ್ತಿದ್ದನು ರೂಮಿನ ಬಾಗಿಲು ತೆರೆದಿದ್ದರಿಂದ ಒಂದು ಸಾರಿ ಸಂಶಯದಿಂದಲೇ ಸುಮಳತ್ತ ನೋಡಿದ.

ಏಕೆಂದರೆ ಹಿಂದಿನ ದಿವಸ ಬೆಳಗ್ಗೆ ಹನ್ನೊಂದರ ಸಮಯದಲ್ಲಿ ಮನೋಹರ ಅಲ್ಲಿಗೆ ಬಂದಿದ್ದಾಗ ರೂಮಿನ ಬಾಗಿಲು ಹಾಕಿತ್ತು ತೆರೆದಿದ್ದ ಕಿಟಕಿಯ ಮೂಲಕ ಸಿಗರೇಟಿನ ಹೊಗೆ ಬಂದಿದ್ದರಿಂದ ಸುಮ ಒಳಗೆ ಇದ್ದಾಗ ಹೋಗಿ ನೋಡಿದ್ದ.

ಆಗ ಮನೋಹರನ ಕಣ್ಣಿಗೆ ಮಂಚದಲ್ಲಿ ಮಲಗೀದ್ದ ರುದ್ರಯ್ಯ ಕಂಡಿದ್ದ ಮಂಚದ ಕೆಳಗೆ 'ಜಾಕ್ ಸನ್' ಎಂದು ಬರೆದಿದ್ದ ಕಪ್ಪು ಬಣ್ಣದ ಸೂಟ್ ಕೇಸನ್ನು ಕಂಡಿದ್ದ ಈಗ ರೂಮಿನಲ್ಲಿ ರುದ್ರಯ್ಯ ಇರಲಿಲ್ಲ. ಸಹಜವಾಗಿಯೇ ಕುತೂಹಲ ಕಾಡಲಾರಂಭಿಸಿತು.

''ಸುರೇಂದ್ರ ಎಲ್ಲಿ?''

'ಹೊರಗೆ ಹೋಗಿದ್ದಾರೆ.''

''ಒಂದು ಲೋಟ ಕಾಫಿ ಕೊಡ್ತೀರ ಸುಮ?''

ಸುಮ ತಲೆಯಾಡಿಸುತ್ತಾ ಒಳಗೆ ಹೋದಳು.

ಮನೋಹರ ಎದ್ದು ರೂಮಿನ ಹತ್ತಿರ ಬಂದ. ಆಗ ಹಿಂದಿನಿಂದ ಬಂದ ಪಾರ್ವತಮ್ಮ ''ಮನೋಹರ...ನ್ನಿ ತಾಯಿ, ಹೆಂಡತಿ ಚೆನ್ನಾಗಿದ್ದರೇನೋ?'' ಕೇಳಿದರು.

ಮನೋಹರ ರೂಮನ್ನು ಪರಿಶೀಲಿಸುವ ಕಾರ್ಯವನ್ನು ಮರೆತು ''ಹೂಂ...ಚೆನ್ನಾಗಿದ್ದಾರೆ'' ಎಂದ. ತಕ್ಷಣ ಏನೋ ಫ್ಲಾಷ್ ಆಗಿ ''ಹುಂ...ಇನ್ನೊಂದು ವಿಷಯ ಕೇಳೋದನ್ನು ಮರೆತಿದ್ದೆ'' ಎಂದ.

''ಅದೇನು ಕೇಳಪ್ಪ...''

''ನೆನ್ನೆಯ ದಿವಸ ನಾನು ಬಂದಿದ್ದಾಗ ಈ ರೂಮಿನಲ್ಲಿ ಯಾರೋ ಇದ್ದ ಹಾಗೆ ಕಂಡಿತು ಯಾರದು?'' ನಿಟ್ಟಿಸಿ ಕೇಳಿದ.

''ಓ...ಅವನಾ...ನನ್ನ ತಮ್ಮ ರುದ್ರ'' ಎಂದರು ಪಾರ್ವತಮ್ಮ ಸಹಜವಾಗೇ.

''ಅವರೇನು ಮಾಡಿಕೊಂಡಿದ್ದಾರೆ?''

ಪಾರ್ವತಮ್ಮ ಕೋಪದಿಂದ ''ಇನ್ನೊಬ್ಬರ ತಲೆ ಒಡೆದು ಬದುಕುತ್ತಿದ್ದಾನೆ. ಪೋಲೀಸ್ ಆಗಿರೋ ನಿನಗೆ ಗೊತ್ತಿಲ್ಲವ?'' ಎಂದರು.

''ಗೊತ್ತಿದೆ ಹಾಂ...ರುದ್ರಯ್ಯ ಇಲ್ಲಿಂದ ಯಾವಾಗ ಹೋದರು?''

''ನೆನ್ನೆ ರಾತ್ರಿ ಹೋದನಂತೆ.''

''ಯಾಕೇ...ನಿಮಗೆ ಗೊತ್ತಿಲ್ಲವೆ?''

''ಹೋಗುವಾಗ ಹೇಳಿ ಹೋಗಿದ್ದರೆ ತಾನೇ ಗೊತ್ತಾಗಲು ರಾತ್ರಿಯೇ ಹೊರಟು ಹೋದ ಅಂತ ನನ್ನ ಸೊಸೆ ಹೇಳಿದ ಮೇಲೆ ಗೊತ್ತಾಯಿತು.''

ಮನೋಹರ ತನ್ನ ಅತ್ತೆಯಿಂದ ರುದ್ರನ ಬಗ್ಗೆ ಕೇಳಿ ತಿಳಿದುಕೊಂಡಿದ್ದನ್ನು ಸುಮ ಅಡುಗೆಮನೆಯಿಂದಲೇ ಕೇಳಿಸಿಕೊಂಡಿದ್ದಳು. ಇವರು ಈ ರೀತಿ ವಿಚಾರಿಸುತ್ತಿರಬೇಕಾದರೆ ಏನಾದರೂ ಅನುಮಾನ ಬಂದಿರಬಹುದೆ ಎಂದುಕೊಂಡು ಭಯದಿಂದಲೇ ಕಾಫಿ ಲೋಟ ಹಿಡಿದುಕೊಂಡು ಬಂದು ಕೊಟ್ಟಳು.

ಮನೋಹರ ಕಾಫಿ ಕುಡಿಯುತ್ತಾ ''ಮಿಸೆಸ್ ಸುರೇಂದ್ರ...ನಾನೊಂದು ಸಾರಿ ನಿಮ್ಮ ಬೆಡ್‌ರೂಮನ್ನು ನೋಡಬಹುದೆ?'' ಕೇಳಿದ.

''ಯಾಕೆ?'' ಗಾಬರಿಯಿಂದ ಕೇಳಿದಳು.

''ಪೋಲೀಸರಿಗೆ ಬೇಕಾಗಿರುವ ರಪಡಿ ರುದ್ರಯ್ಯನಿಗೆ ನೀವು ನಿಮ್ಮ ಮನೆಯಲ್ಲಿ ಆಶ್ರಯ ನೀಡಿದ್ದಿರಿ ಅಂತ ನನಗೆ ಗೊತ್ತಾಯಿತು ಅದು ಅಪರಾಧ ಅಂತ ಗೊತ್ತಿಲ್ಲವೇ?'' ಎಂದು ಗಡುಸಾಗಿ ಕೇಳಿದ.

ಸುಮ ಗಂಭೀರವಾಗಿ ''ರುದ್ರಯ್ಯ ಪೋಲೀಸರಿಗೆ ಬೇಕಾಗಿರೋ ವ್ಯಕ್ತಿ ಅಂತ ನಮಗೆ ಗೊತ್ತಿರಲಿಲ್ಲ'' ಎಂದಳು.

''ಏನೇ ಆಗಲಿ ನಾನೊಂದು ಸಾರಿ ರೂಮ್ ನೋಡಬೇಕು''

''ಧಾರಾಳವಾಗಿ ನೋಡಿ.''

ಎಸ್. ಐ. ಮನೋಹರ್ ರೂಮಿನೊಳಗೆ ಪ್ರವೇಶಿಸಿದ ಅತ್ತೆ, ಸೊಸೆ ಗಾಬರಿಯಿಂದ ಪರಸ್ಪರ ಮುಖ ನೋಡಿಕೊಂಡರು.

ಮನೋಹರ ರೂಮಿನ ಅಂಗುಲ, ಅಂಗುಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದ ರೂಮನ್ನು ಹಿಂದಿನ ರಾತ್ರಿಯೇ ಶುಚಿಗೊಳಿಸಿದ್ದರಿಂದ ಅಲ್ಲಿ ಅನುಮಾನ ಬರುವಂತಹ ಯಾವ ವಸ್ತುವೂ ಸಿಗಲಿಲ್ಲ. ಹಿಂದಿನ ದಿವಸ ಬೆಳಿಗ್ಗೆ ಆ ರೂಮಿನಲ್ಲಿ ಸೂಟ್‌ಕೇಸನ್ನು ಮಂಚದ ಕೆಳಗೆ ನೋಡಿದ್ದ. ಆದರೆ ಈಗ ಅದು ಅಲ್ಲಿರಲಿಲ್ಲ.

ಅಯೋಧ್ಯ ಹೋಟೆಲ್‌ನಲ್ಲಿ ರತನ್‌ಲಾಲ್ ಕೊಲೆಯಾಗಿದ್ದ. ಅವನ ರೂಮಿನಲ್ಲಿದ್ದ ಹಣ ತುಂಬಿದ್ದ ಸೂಟ್‌ಕೇಸನ್ನು ರುದ್ರಯ್ಯ ಎತ್ತಿಕೊಂಡು ಬಂದಿದ್ದನೆಂದು ತನಿಖೆಯಿಂದ ತಿಳಿದಿತ್ತು.

ಎಸ್. ಐ. ಮನೋಹರ್ ಹೊರಗೆ ಬಂದ. ಮನೆಯನ್ನು ಒಂದು ಸಾರಿ ಪರಿಶೀಲಿಸಿ "ಸುಮ... ಸುರೇಂದ್ರ ಬಂದ ಕೂಡಲೇ ನನ್ನನ್ನು ಭೇಟಿ ಮಾಡಲು ತಿಳಿಸಿ" ಎಂದು ಹೊರಬಂದ.

ಸುಮ ಕೂಡಲೇ ಬಾಗಿಲನ್ನು ಹಾಕಿಕೊಂಡಳು 'ಛಲೀ...ಇವತ್ತಾದರೂ ಮನೆಯಲ್ಲಿ ಇರದ ಇವರು ಎಲ್ಲಿಗೆ ಹೋಗಿದ್ದಾರೆ?' ಎಂದು ಸುಮ ಗೊಣಗಿಕೊಂಡಳು. ತನ್ನ ಅತ್ತೆ ಕೇಳುತ್ತಿದ್ದ ಯಾವ ಪ್ರಶ್ನೆಗೂ ಉತ್ತರಿಸದೆ ಸೀದಾ ಅಡುಗೆ ಮನೆಗೆ ಬಂದಳು.

ಅರ್ಧ ಗಂಟೆ ಕಳೆಯಿತು.

ಕಾಲಿಂಗ್ ಬೆಲ್ ಶಬ್ದ ಮಾಡಿತು!

ಸುಮ ಪುನಃ ಹೊರಗೆ ಬಂದು ಬಾಗಿಲನ್ನು ತೆರೆದಳು. ಬಾಗಿಲು ತೆರೆದ ಕೂಡಲೇ ಅಪರಿಚಿತ ವ್ಯಕ್ತಿಯೊಂದು ಸರ್ರನೆ ಒಳಗೆ ನುಗ್ಗಿತು! ಸುಮ ಭಯ, ಗಾಬರಿಯಿಂದ ದೂರ ಸರಿದು ನಿಂತಳು. ಆ ಅಪರಿಚಿತ ವ್ಯಕ್ತಿ ತಾನೇ ಬಾಗಿಲನ್ನು ಭದ್ರಪಡಿಸಿತು!

ಸೋಫಾದಲ್ಲಿ ಕುಳಿತಿದ್ದ ಪಾರ್ವತಮ್ಮ ದಾಂಡಿಗನಂತೆ ಕಾಣುತ್ತಿದ್ದ ಅಪರಿಚಿತ ವ್ಯಕ್ತಿಯನ್ನು ಕಂಡು ಗಾಬರಿಯಿಂದ "ಏ...ಯಾರಪ್ಪಾ ನೀನು? ನಿನಗೆ ಯಾರು ಬೇಕು?" ಕೇಳಿದರು.

ಆ ವ್ಯಕ್ತಿ ಸರ್ರನೆ ಚಾಕು ಹೊರ ತೆಗೆದ.

ಅದು ಫಳಫಳನೆ ಹೊಳೆಯುತ್ತಿತ್ತು!

ಸುಮ ಭಯದಿಂದ ಕಿರುಚಲು ಬಾಯಿ ತೆರೆದಾಗ ಆ ವ್ಯಕ್ತಿ ಅವಳ ಹತ್ತಿರ ಸರಿದು

ಗಬಕ್ಕನೆ ಬಾಯನ್ನು ಮುಚ್ಚಿತು. ಆ ವ್ಯಕ್ತಿಯ ಒರಟು ಕೈಗಳು ಇವಳ ಶರೀರವನ್ನು ಬಳಸಿ ಬಾಯನ್ನು ಅದುಮಿದ್ದರಿಂದ ಸುಮ ಒದ್ದಾಡುತ್ತಿದ್ದಳು.

ಆ ವ್ಯಕ್ತಿ ಚಾಕುವನ್ನು ಅವಳ ನುಣುಪಾದ ಕೆನ್ನೆಯ ಮೇಲೆ ಸವರಿಸುತ್ತಾ ''ಏ...ಏನಾದರೂ ಕೂಗಾಡಿ ತರ್ಲೆ ಮಾಡಿದರೆ ಪ್ರಾಣ ತೆಗೆದುಬಿಡುತ್ತೇನೆ'' ಎಂದು ಅಬ್ಬರಿಸಿದ.

ಪಾರ್ವತಮ್ಮ ಗಡಗಡನೆ ನಡುಗುತ್ತಿದ್ದರೆ ಸುಮ ಮೌನವಾಗಿ ತಲೆಯಾಡಿಸಿದಳು.

ಕಾಲಿಂಗ್ ಬೆಲ್ ಶಬ್ದ ಮಾಡಿತು!

ಸುಮಳ ಮುಖ ಅರಳಿತು.

ಆ ವ್ಯಕ್ತಿ ಗಡುಸಾಗಿ ''ಏ ಮುದುಕಿ...ನೀನೇ ಹೋಗಿ ಬಾಗಿಲನ್ನು ತೆಗಿ. ಗಲಾಟೆ ಮಾಡಿದರೆ ನಿನ್ನ ಸೊಸೆ ಬದುಕೋಲ್ಲ'' ಎಂದು ಸುಮಳನ್ನು ಎಳೆದುಕೊಂಡು ಬೆಡ್‌ರೂಮಿಗೆ ಬಂದ.

ಆ ವ್ಯಕ್ತಿಯೇ ಡೇವಿಡ್!

ಸೈಕಲ್ ಚೈನ್ ಕೂಷ್ಣನ ಗ್ಯಾಂಗಿನ ರೌಡಿ ಆದರೆ ಹಿಂದಿನ ದಿವಸ ರಾತ್ರಿ ಅವನೊಬ್ಬನೇ ಕಾರ್ಯಾಚರಣೆ ನಡೆಸಲು ಈ ಮನೆಗೆ ಬಂದಿದ್ದ ಅದಕ್ಕೆ ಕಾರಣ ಹಣ!

ಸೂಟ್‌ಕೇಸ್‌ನಲ್ಲಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ತಾನೊಬ್ಬನೇ ಹೊಡೆಯಬೇಕು ಎಂಬ ದುರಾಸೆ.

ಆದು ಸರಿ...ಪುನಃ ಈ ಮನೆಗೆ ಏಕೆ ಬಂದಿದ್ದಾನೆ?

ಪಾರ್ವತಮ್ಮ ಬಾಗಿಲನ್ನು ತೆರೆದಾಗ ಎದುರಿಗೆ ಮಗ ಸುರೇಂದ್ರ ನಿಂತಿದ್ದ ಕಂಡು ಅವರಿಗೆ ಸ್ವಲ್ಪ ಧೈರ್ಯ ಬಂದಿತು.

ಸುರೇಂದ್ರ ''ಅಮ್ಮ...ತಿಂಡಿ ತಿಂದೆಯಾ?'' ಎಂದು ಒಳಗೆ ಬಂದ.

ಪಾರ್ವತಮ್ಮ ಭಯದಿಂದ ರೂಮಿನತ್ತ ನೋಡುತ್ತಿದ್ದರು ಸುರೇಂದ್ರ ''ಸುಮ...ಸುಮ...'' ಎನ್ನುತ್ತಾ ಬಂದವನು ಬೆಕ್ಕಸ ಬೆರಗಾಗಿ ನಿಂತುಬಿಟ್ಟ.

ಏಕೆಂದರೆ ಡೇವಿಡ್ ಈಗ ಸುಮಳನ್ನು ತಬ್ಬಿ ಹಿಡಿದುಕೊಂಡು ಅವಳೆದೆಗೆ ಚಾಕು ಅದುಮಿದ್ದ.

''ಏ...ಯಾರೋ ನೀನು?'' ಎಂದ.

''ನನ್ನ ಹೆಸರು ಡೇವಿಡ್ ಅಂತ''

''ನಿನಗೇನು ಬೇಕು'' ರೇಗಿದ.

''ನಿನ್ನ ಹೆಂಡತಿ ಅಂತೂ ಖಂಡಿತಾ ಬೇಡ'' ಎಂದ.

ಸುರೇಂದ್ರ ಮುಂದೆ ಬರಲು ಪ್ರಯತ್ನಿಸಿದಾಗ ಡೇವಿಡ್ ಗಡುಸಾಗಿ, '4ಸಾಹಸ ತೋರಿಸಲು ಪ್ರಯತ್ನಿಸಬೇಡ ತರ್ಲೆ ಮಾಡಿದರೆ ಈ ಚಾಕು ನಿನ್ನ ಹೆಂಡತಿಯ ತುಟಿಗಳನ್ನು ಕತ್ತರಿಸುತ್ತೆ'' ಎಂದು ಅವಳ ಕೋಮಲವಾದ ಗುಲಾಬಿ ತುಟಿಗಳನ್ನು ಸವರಿದ.

ಸುಮ ಗಡಗಡ ನಡುಗುತ್ತಿದ್ದಳು.

ಸುರೇಂದ್ರ ಭಯದಿಂದ ದೂರ ಸರಿದು ನಿಂತ ಡೇವಿಡ್ ತನ್ನ ಹಿಡಿತವನ್ನು ಸಡಿಲಿಸುತ್ತಾ ''ಸುರೇಂದ್ರ...ಈ ರೂಮಿನಲ್ಲಿ ಇದ್ದ ರುದ್ರಯ್ಯ ಎಲ್ಲಿ?'' ಎಂದ.

ಸುರೇಂದ್ರ ಗಾಬರಿಯಿಂದ ''ಯಾ...ಯಾವ ರುದ್ರಯ್ಯ...'' ಎಂದ.

ಡೇವಿಡ್ ಕೋಪದಿಂದ ''ನಾಟಕ ಸಾಕು. ನನಗೆಲ್ಲಾ ಗೊತ್ತಿದೆ ನಿನ್ನ ಸೋದರ ಮಾವ ರುದ್ರಯ್ಯ ಇದೇ ರೂಮಿನಲ್ಲಿ ಇದ್ದ ನೆನ್ನೆಯ ದಿವಸ ರಾತ್ರಿ ನೀವು ಅವನನ್ನು ಕೊಂಡಿದ್ದೀರ...'' ಎಂದ.

ಸುರೇಂದ್ರ ಬೆಚ್ಚಿಬಿದ್ದ. ಗಾಬರಿಯಿಂದ ಹೆಂಡತಿಯ ಮುಖ ನೋಡಿದ. ಸುಮಳ ಮುಖ ಬಿಳುಚಿಕೊಂಡಿತ್ತು.

ಪಾರ್ವತಮ್ಮ ಗಾಬರಿಯಿಂದ '4ಸುರೇಂದ್ರ...ಏನೋ ಇದೆಲ್ಲಾ...'' ಎಂದರು.

ಡೇವಿಡ್ ಗಡುಸಾಗಿ ''ಏ ಮುದುಕಿ...ಬಾಯಿ ಮುಚ್ಚಿಕೊಂಡು ಸುಮ್ಮನೆ ಇರು. ಸುರೇಂದ್ರ...ನಿನಗೆ ಇನ್ನೂ ಅನುಮಾನವಿದ್ದರೆ ಹೆಣ ಹೂತಿರುವ ಜಾಗವನ್ನು ತಿಳಿಸುತ್ತೇನೆ. ಹಿತ್ತಲಲ್ಲಿ...ಸೀಬೆ ಗಿಡದ ಹತ್ತಿರ...ಗುಂಡಿ...ಗೆಣ...'' ಎಂದ.

ಸುರೇಂದ್ರ ತತ್ತರಿಸಿಹೋದ. ಗಾಬರಿಯಿಂದ ತೊದಲುತ್ತಾ ''ಅದು...ಅದು...ನಿನಗೆ ಹೇಗೆ ಗೊತ್ತಾಯಿತು?'' ಕೇಳಿದ.

ಡೇವಿಡ್ ನಗುತ್ತಾ ''ನೆನ್ನೆಯ ದಿವಸ ರಾತ್ರಿ ನಾನು ಮರೆಯಲ್ಲಿ ಇದ್ದುಕೊಂಡು ಎಲ್ಲವನ್ನೂ ನೋಡಿದೆ. ಜಸ್ಟ್ ಫೋನ್ ಕಾಲ್ ಮಾಡಿದರೆ ಸಾಕು ಪೋಲೀಸರು ಬಂದುಬಿಡುತ್ತಾರೆ. ಅದರಲ್ಲೂ ಆ ಎಸ್. ಐ. ಮನೋಹರನಿಗೆ ಈಗಾಗಲೇ ಅಂಶಯ ಬಂದು ನಿನ್ನ ಮನೆಯ ಹತ್ತಿರ ನಾಯಿಯಂತೆ ತಿರುಗುತ್ತಿದ್ದಾನೆ'' ಎಂದ.

ಸುರೇಂದ್ರ ಹೆಂಡತಿಯ ಮುಖ ನೋಡಿದ ಸುಮ ಹೌದು ಎನ್ನುವಂತೆ

ತಲೆಯಾಡಿಸಿದಳು ಸುರೇಂದ್ರ, ನಡುಕವನ್ನು ನಿಯಂತ್ರಿಸಿಕೊಳ್ಳಲು ಪ್ರಯತ್ನಿಸುತ್ತಾ ''ಡೇವಿಡ್...ನ

ಇನಗೇನು ಬೇಕು? ನೀನ್ಯಾಕೆ ನಮ್ಮ ಹಿಂದೆ ಬಿದ್ದಿದ್ದೀಯ?'' ಕೇಳಿದ.

''ನಿನ್ನ ಸೋದರ ಮಾವ ರುದ್ರಯ್ಯನ ಹತ್ತಿರ ಇದ್ದ ಸೂಟ್‌ಕೇಸ್ ನನಗೆ ಕೊಟ್ಟರೆ ಸಾಕು'' ಎಂದ.

ಸುರೇಂದ್ರ ಗಡುಸಾಗಿ, ''ಏನೂ ಗೊತ್ತಿಲ್ಲದವನಂತೆ ನಾಟಕ ಆಡಬೇಡ. ರುದ್ರಯ್ಯನನ್ನು ಕೊಂದಿದ್ದು ಈ ಹಣಕ್ಕಾಗಿ ತಾನೇ?'' ಎಂದ.

ಸುರೇಂದ್ರ ಭಯಾತುರದಿಂದ ''ಇಲ್ಲ...ಇಲ್ಲ...ನಾನು ರುದ್ರಯ್ಯ ಮಾವನನ್ನು ಕೊಲೆ ಮಾಡಿಲ್ಲ'' ಹೇಳಿದ.

''ನನಗೆ ನಿನ್ನ ಪುರಾಣವೆಲ್ಲಾ ಬೇಕಿಲ್ಲ ನಿನ್ನ ಮೆಯಲ್ಲಿದ್ದ ರುದ್ರಯ್ಯ ಸತ್ತಿದ್ದಾನೆ. ಸಾರಿ ಕೊಲೆಯಾಗಿದ್ದಾನೊ. ಹಣ ನಿನ್ನ ಮನೆಯ ಹಿತ್ತಲಿನಲ್ಲಿ ಇದೆ. ರುದ್ರಯ್ಯ ಈ ಮನೆಯಲ್ಲಿ ಇದ್ದದ್ದನ್ನು ಎಸ್. ಐ. ಮನೋಹರ ಮತ್ತು ಹಾಲು ಮಾರುವ ಕನಕಮ್ಮ ಸಹ ನೋಡಿದ್ದಾರೆ ರುದ್ರಯ್ಯನ ಹಣ ಇಂತಹ ಕಡೆ ಇದೆ ಅಂತ ಆಲೋಚಿಸು'' ಎಂದ.

ಎಲ್ಲರಿಗೂ ವಿಪರೀತ ಭಯವಾಗಿತ್ತು.

ಸುರೇಂದ್ರ ಸೋತ ಧ್ವನಿಯಲ್ಲಿ ''ಡೇವಿಡ್...ನನ್ನ ಮಾತು ನಂಬು. ಹಣದ ಆಸೆಯಿಂದ ರುದ್ರಯ್ಯ ಮಾವನನ್ನು ಕೊಲೆ ಮಾಡಬೇಕು ಅಂತ ಅಂದುಕೊಂಡಿದ್ದು ನಿಜ. ಆದರೆ ನನಗಿಂತ ಮೊದಲೇ ಯಾರೋ ಕೊಲೆ ಮಾಡಿದ್ದರು ನಾನು ನೆನ್ನೆ ರಾತ್ರಿ ರೂಮಿಗೆ ಬಂದು ನೋಡಿದಾಗ ಮಾವ ಸತ್ತಿದ್ದರು. ಅಲ್ಲಿ ಸೂಟ್‌ಕೇಸ್ ಸಹ ಇರಲಿಲ್ಲ'' ಎಂದ.

ಡೇವಿಡ್ ಕೋಪ, ಆವೇಶದಿಂದ, 'ರಪ್' ಎಂದು ಕೆನ್ನೆಗೆ ಹೊಡೆದ. ಆ ರಭಸಕ್ಕೆ ಸುರೇಂದ್ರ ನೋವಿನಿಂದ ಕಿರುಚುತ್ತಾ ಹಿಂದಕ್ಕೆ ವಾಲಿಕೊಂಡ ಸುಮ ಭಯದಿಂದ ಕಿರುಚುತ್ತಾ ಗಂಡನತ್ತ ಓಡಿಬಂದಳು ಪಾರ್ವತಮ್ಮ ಲಬಲಬೋ ಎಂದು ಬಾಯಿ ಬಡಿದುಕೊಳ್ಳಲಾರಂಭಿಸಿದರು.

ಡೇವಿಡ್ ಪಿಸ್ತೂಲನ್ನು ಹೊರತೆಗೆದು ಸುರೇಂದ್ರನ ತಲೆಗೆ ಬಡಿಯುತ್ತಾ ''ಚುಪ್...! ಯಾರಾದರೂ ಅತ್ತು ರಂಪ ಮಾಡಿದರೆ ಇವನ ತಲೆ ಸಿಡಿದುಹೋಗುತ್ತದೆ'' ಎಂದ.

ಪಾರ್ವತಮ್ಮ ಭಯದಿಂದ ಸುಮ್ಮನಾದರು.

ಸುಮ ಗಂಡನನ್ನೇ ನೋಡುತ್ತಾ ಭಯದಿಂದ ನಡುಗುತ್ತಿದ್ದಳು. ಕಣ್ಣೀರು ಕೆನ್ನೆಯ ಮೇಲೆ ಇಳಿಯುತ್ತಿತ್ತು.

ಡೇವಿಡ್ ಸುರೇಂದ್ರನ ಷರಟಿನ ಕಾಲರನ್ನು ಹಿಡಿದು ಮೇಲಕ್ಕೆ ಎತ್ತಿ ನಿಲ್ಲಿಸುತ್ತಾ ''ಕಮಾನ್... ಹಣದ ಸೂಟ್‌ಕೇಸ್ ಎಲ್ಲಿದೆ ಅಂತ ಹೇಳು. ಇಲ್ಲದಿದ್ದರೆ...'' ಎಂದ.

ಸುರೇಂದ್ರ ಕಂಪಿಸುವ ಸ್ವರದಿಂದ, ''ಪ್ಲೀಸ್...ನನಗೆ ಗೊತ್ತಿಲ್ಲ ನಮ್ಮ ತಾಯಿಯಾಣೆ, ದೇವರಾಣೆ, ನಾನು ತುಂಬಾ ಪ್ರೀತಿಸುವ ನನ್ನ ಹೆಂಡತಿಯಾಣೆ ಮಾಡಿ ಹೇಳುತ್ತಿದ್ದೇನೆ ಹಣದ ಸೂಟ್‌ಕೇಸ್ ಎಲ್ಲಿದೆ ಅಂತ ನನಗೆ ಗೊತ್ತಿಲ್ಲ'' ಎಂದ.

ಮರುಕ್ಷಣ...

'ರಪ್...ಫಎಡ್...ದಡ್...' ಎಂದು ಹೊಡೆತಗಳು ಬೀಳಲಾರಂಭಿಸಿದವು. ಸುರೇಂದ್ರನ ಮೂಗು ಬಾಯಿಂದ ರಕ್ತ ಬರಲಾರಂಭಿಸಿತು ಸುರೇಂದ್ರನನ್ನು ನೆಲಕ್ಕೆ ನೂಕಿ ಬೂಟು ಕಾಲಿನಿಂದ ಅವನ ಕತ್ತನ್ನು ಹಿಸುಕಲು ಪ್ರಾರಂಭಿಸಿದ.

ಇದನ್ನು ನೋಡಲಾರದೆ ಪಾರ್ವತಮ್ಮ ಮತ್ತು ಸುಮ ಡೇವಿಡ್‌ನನ್ನು ಎಳೆದಾಡಲಾರಂಭಿಸಿದರು. ಡೇವಿಡ್ ಕೋಪದಿಂದ ನೂಕಿದಾಗ ಹೆಂಗಸರಿಬ್ಬರು ಕಿರುಚುತ್ತಾ ದಡಾಲನೆ ಬಿದ್ದರು. ಈಗ ಡೆವಿಡ್ ಸುರೇಂದ್ರನನ್ನು ಮೇಲಕ್ಕೆ ಎತ್ತಿನಿಲ್ಲಿಸುತ್ತಾ. 'ಏ... ಸುರೇಂದ್ರ...ನಿನ್ನನ್ನು ಹಿಂಸಿಸಿ ಬಾಯಿ ಬಿಡಿಸೋಲ್ಲ. ನಾನು ಪೋಲೀಸರ ಹತ್ತಿರ ಹೋಗುತ್ತೇನೆ. ವಿಷಯ ತಿಳಿದರೆ ಅವರೇ ಬಂದು ಕೋಳ ಹಾಕಿ ಕರೆದುಕೊಂಡು ಹೋಗುತ್ತಾರೆ'' ಎಂದು ಬಾಗಿಲಿನ ತನಕ ಬಂದ.

ಸುರೇಂದ್ರ ಅಂಗಲಾಚಿ ಬೇಡಿಕೊಳ್ಳುತ್ತಾ ''ಬೇಡ...ಪ್ಲೀಸ್...ಪೋಲೀಸರಿಗೆ ತಿಳಿಬೇಡ. ನನ್ನ ಮಾತು ಕೇಳು'' ಎಂದ.

ಡೇವಿಡ್ ಸರ‍್ರನೆ ಹಿಂತಿರುಗಿ, ''ಹಾಗಾದರೆ ಹಣದ ಸೂಟ್‌ಕೇಸ್ ಕೊಡು ಸುರೇಂದ್ರ...'' ಕೇಳಿದ.

ಸುರೇಂದ್ರ ತಲೆ ತಗ್ಗಿಸಿದ.

ಡೇವಿಡ್ ಗಡುಸಾಗಿ, ''ಸುರೇಂದ್ರ...ನಿನಗೆ ಒಂದು ಗಂಟೆಯ ಕಾಲಾವಕಾಶ ಕೊಡುತ್ತೇನೆ. ಚೆನ್ನಾಗಿ ಯೋಚಿಸು. ಕೊಲೆಯ ಆಪಾದನೆಯ ಮೇಲೆ ನೀನು ಜೈಲಿಗೆ ಹೋದರೆ ಆ ಹಣ ಇದ್ದು ಏನು ಪ್ರಯೋಜನ. ನಿನಗೆ ಐದು ಲಕ್ಷ ಕೊಡುತ್ತೇನೆ. ಆ ಹಣದಿಂದ ಸುಖವಾಗಿ ಬದುಕಬಹುದು. ದುರಾಸೆಯಿಂದ ಎಲ್ಲವನ್ನೂ ಒಬ್ಬನೇ

ಹೊಂದಬೇಕು ಅಂತ ಪ್ರಯತ್ನಿಸಿದರೆ ಜೈಲಿಗೆ ಹೋಗೋದು ಗ್ಯಾರಂಟಿ. ಒಂದು ಗಟೆ ಅವಕಾಶ ಕೊಡುತ್ತೇನೆ'' ಎಂದ.

ಸುರೇಂದ್ರ, ಹೆಂಡತಿಯ ಮುಖ ನೋಡಿದ. ಅವಳು ವಿಪರೀತ ಭಯ, ದುಃಖದಿಂದ ಕಂಗಾಲಾಗಿದ್ದಳು.

ಡೇವಿಡ್ ಬೆಡ್ ರೂಮಿನಲ್ಲಿದ್ದ ಮಂಚದ ಮೇಲೆ ಕೂರುತ್ತಾ, ''ನಾನು ಇಲ್ಲಿಯೇ ಇರುತ್ತೇನೆ. ಇನ್ನೊಂದು ಗಂಟೆಯೊಳಗೆ ಹಣದ ಸೂಟ್‌ಕೇಸ್ ತಂದುಕೊಡದಿದ್ದರೆ ನೇರವಾಗಿ ಪೋಲೀಸ್ ಸ್ಟೇಷನ್‌ಗೆ ಹೋಗುತ್ತೇನೆ'' ಎಂದು ಹೇಳಿದ.

ಸುಮ, ಸುರೇಂದ್ರ, ಮತ್ತು ಪಾರ್ವತಮ್ಮ ರೂಮಿನಿಂದ ಹೊರಬಂದರು. ಸುರೇಂದ್ರನ ಮುಖ ಡೇವಿಡ್ ಸುಮ್ಮನೆ ಬಿಡುವುದಿಲ್ಲ.

ಮುಂದೇನು ಗತಿ?

ಸುಮ ಸಹ ತಲೆ ಕೆಡಿಸಿಕೊಂಡಿದ್ದಳು. ಹಣದ ಆಸೆಗೆ ಬಲಿಬಿದ್ದು ಗಂಡನನ್ನು ಪ್ರಚೋದಿಸಿ ಇಂತಹ ಬಿಕ್ಕಟ್ಟಿನ ಪರಿಸ್ಥಿತಿ ಬರಲು ನಾನೇ ಕಾರಣಳಾದೆನಲ್ಲ ಎಂದು ಸುಮ ಪಶ್ಚಾತ್ತಾಪ ಪಡಲಾರಂಭಿಸಿದಳು.

ಹತ್ತು ನಿಮಿಷ ಕಳೆಯಿತು.

ಏನು ಮಾಡಬೇಕೋ ತಿಳಿಯದೆ ಮಂಕು ಹಿಡಿದವರಂತೆ ತಲೆಯ ಮೇಲೆ ಕೈ ಇಟ್ಟುಕೊಂಡು ಕುಳಿತಿದ್ದರು.

ಒಳಗೆ ಮಲಗಿಕೊಂಡಿದ್ದ ಡೇವಿಡ್‌ನನ್ನು ಹಲವಾರು ಸಂದೇಹ ಕಾಡುತ್ತಿತ್ತು.

ರುದ್ರಯ್ಯನನ್ನು ನಿಜವಾಗಿಯೂ ಕೊಂದವರು ಯಾರು?

ಸುರೇಂದ್ರ ತಾನು ಕೊಲೆ ಮಾಡಿಲ್ಲ ಎನ್ನುತ್ತಿದ್ದಾನೆ. ಆದರೆ ನೆನ್ನೆ ರಾತ್ರಿ ನಾನು ಈ ರೂಮಿಗೆ ಬಂದಿದ್ದಾಗ ರುದ್ರಯ್ಯ ಬದುಕಿರಲಿಲ್ಲ. ಹಣದ ಸೂಟ್‌ಕೇಸ್ ಸಹ ಇರಲಿಲ್ಲ.

ಸುರೇಂದ್ರ ಅಲ್ಲ ಎನ್ನುವುದಾದರೆ ರುದ್ರಯ್ಯನನ್ನು ಕೊಂದು ಸೂಟ್‌ಕೇಸ್ ಎತ್ತಿಕೊಂಡು ಹೋದವರು ಯಾರು?

ಕೃಷ್ಣ...ಸೈಕಲ್ ಚೈನ್ ಕೃಷ್ಣ!

ಡೇವಿಡ್ ದಡಕ್ಕನೆ ಎದ್ದು ಕುಳಿತ. ಮೈ ಗಾಡ್...! ಮುಖ್ಯವಾದ ವ್ಯಕ್ತಿಯನ್ನೇ ಮರೆತಿದ್ದೆನಲ್ಲ...

ಇಪ್ಪತ್ತೈದು ಲಕ್ಷ ರೂಪಾಯಿಯನ್ನು ರತನ್‌ಲಾಲ್‌ನಿಂದ ಅಪಹರಿಸುವ ಯೋಜನೆ ರೂಪಿಸಿ ರುದ್ರಯ್ಯನನ್ನು ನೇಮಿಸಿದವನೇ ಈ ಕೂಷ್ಣ. ನೆನ್ನೆ ಮಧ್ಯಾಹ್ನದ ತನಕ ನಾವಿಬ್ಬರೂ ಕೂಡಿಯೇ ಹಣ ಅಪಹರಿಸಲು ಪ್ರಯತ್ನಿಸಿದ್ದೇವೆ. ಅವನಿಗಿಂತ ಮೊದಲೇ ನಾನು ಪ್ರಯತ್ನಿಸಿ ಹಣವನ್ನು ಒಬ್ಬನೇ ಹೊಂದನೇಕು ಎಂಬ ಆಸೆಯಿಂದ ತಾನೇ ಅವನಿಂದ ದೂರಾಗಿದರುವುದು.

ಡೇವಿಡ್ ಎದ್ದು ನಿಂತನು. ಅವನ ಯೋಚನಾಲಹರಿ ಸಾಗಿತ್ತು. ಹೌದು... ಕೂಷ್ಣ ಸಾಮಾನ್ಯನಲ್ಲ. ಖಂಡಿತಾ ಈ ಕೆಲಸ ಅವನೇ ಮಾಡಿದ್ದಾನೆ. ರುದ್ರಯ್ಯನನ್ನುಕೊಂದು ಹಣದ ಸೂಟ್‌ಕೇಸ್ ಎತ್ತಿಕೊಂಡು ಹಿಗಿದ್ದಾನೆ. ಇಲ್ಲದಿದ್ದರೆ ಇಷ್ಟು ಹೊತ್ತಿಗೆ ನನ್ನ ಹಾಗೆಯೇ ಸುರೇಂದ್ರನನ್ನು ಪೀಡಿಸಿರುತ್ತಿದ್ದ. ಹಣದ ಸೂಟ್‌ಕೇಸ್ ಅವನ ಕೈಎಗೆ ಸೇರಿರುವುದರಿಂದಲೇ ಕೂಷ್ಣ ಯಾವ ತಂಟೆಗೂ ಬಾರದೆ ಸುಮ್ಮನಿದ್ದಾನೆ.

ಸಿಗರೇಟ್‌ಗಳು ಸುಟ್ಟು ಬೂದಿಯಾಗುತ್ತಿತ್ತು.

ಇತ್ತ ಕಡೆ...

ಸುಮ ಗಂಡನ ಹತ್ತಿರ ಸರಿದು ಪಿಸು ಧ್ವನಿಯಲ್ಲಿ, ''ರೀ...ಹೀಗೆ ಸುಮ್ಮನೆ ಕುಳಿತುಕೊಂಡರೆ ಆಗೋಲ್ಲ. ಏನಾದರೂ ಮಾಡಿ ಈಗ ಬಂದಿರೋ ಅಪಾಯದಿಂದ ಪಾರಾಗಬೇಕು'' ಎಂದಳು.

ಸುರೇಂದ್ರ ಅಸಹಾಯಕತೆಯಿಂದ, ''ನನಗೆ ಏನು ಮಾಡಬೇಕು ಅಂತಾನೆ ತೋಚ್ತಾಯಿಲ್ಲಸುಮ'' ಎಂದ.

''ಈಗ ಉಳಿದಿರೋದು ಒಂದೇ ದಾರಿ.''

''ಏನದು?''

'ಎಸ್. ಐ. ಮನೋಹರ್ ಹೇಗಿದ್ದರೂ ನಿಮ್ಮ ಕ್ಲೋಸ್ ಫ್ರೆಂಡ್. ನಿಮ್ಮ ಹಿತೈಷಿ. ಅವರನ್ನು ಕಂಡು ನೀವೇ ನಡೆದಿರುವುದನ್ನೆಲ್ಲಾ ಹೇಳಿಬಿಡಿ. ಅವರು ಖಂಡಿತಾ ಸಹಾಯ ಮಾಡುತ್ತಾರೆ'' ಎಂದಳು.

ಸಟರೇಂದ್ರ ಹೆದರುತ್ತಾ, ''ಏನಂದೆ...ಮನೋಹರನಿಗೆ ಸತ್ಯ ತಿಳಿಸೋದ? ಮೈ ಗಾಡ್... ಅವನು ಪೋಲೀಸ್ ಬುದ್ಧಿ ತೋರಿಸಿ ನನ್ನನ್ನೇ ಒಳಗೆ ತಳ್ಳಿದರೆ ?'' ಕೇಳಿದ.

ಸುಮ ಕೋಪದಿಂದ, ''ಈಗಾಗಲೇ ಸಮಯ ಮೀರುತಿದೆ. ಆ ದಾಂಡಿಗ

ಕೊಟ್ಟಿರುವ ಗಡುವಿನೊಳಗೆ ಹಣದ ಸೂಟ್‌ಕೇಸ್ ಕೊಡದೆ ಇದ್ದರೆ ಅವನೇ ಪೋಲೀಸರಿಗೆ ತಿಳಿಸುತ್ತಾನೆ. ಹೇಗಿದ್ದರೂ ಜೈಲು ಶಿಕ್ಷೆ ಗ್ಯಾರಂಟಿ. ನೀವಾಗಿಯೇ ನಿಮ್ಮ ಸ್ನೇಹಿತನಿಗೆ ಸತ್ಯ ತಿಳಿಸಿದರೆ ಅವರು ಸಹಾಯ ಮಾಡಿದರೂ ಮಾಡಬಹುದು.'' ಎಂದಳು.

ಹೆಂಡತಿಯ ಮಾತಿನಲ್ಲಿ ಅರ್ಥವಿದೆ ಎನಿಸಿತು. ಮನೋಹರ ಆತ್ಮೀಯ ಸ್ನೇಹಿತ ಎನ್ನುವುದರಲ್ಲಿ ಎರಡು ಮಾತಿಲ್ಲ. ಮನಸ್ಸು ಕರಗಿ ಸಹಾಯ ಮಾಡಿದರೂ ಮಾಡಬಹುದು ಎಂದು ಸುರೇಂದ್ರನಿಗೆ ಅನಿಸಿತು.

ಕಾಲಿಂಗ್ ಬೆಲ್ ಶಬ-ದ ಮಾಡಿತು.

ದಬದಬನೆ ಬಾಗಿಲು ಬಡಿಯುತ್ತಿರುವ ಶಬ್ದ. ಸುರೇಂದ್ರ ಕಿಟಕಿಯ ಮೂಲಕ ನೋಡಿದಾಗ ಯಾರೋ ರೌಡಿಗಳು ನಿಂತಿರುವುದು ಕಂಡಿತು.

ಬಾಗಿಲು ಅಲ್ಲಾಡಲಾರಂಭಿಸಿತು.

ಒಳಗಿದ್ದ ಡೇವಿಡ್ ಚುರುಕಾದ.

ಸುರೇಂದ್ರ ಭಯ, ಗಾಬರಿಯಿಂದ, ''ಸುಮ...ನೀನು ಹಿತ್ತಲ ಕಡೆಯಿಂದ ಈಗಲೇ ಮನೋಹರನ ಮನೆಗೆ ಹೋಗು. ಇಲ್ಲಿಯ ಪರಿಸ್ಥಿತಿ ತಿಳಿಸಿ ಅವನನ್ನು ಕರೆದುಕೊಂಡು ಬಾ'' ಎಂದ.

ಸುಮ ಓಡಿದಳು!

ಪಾರ್ವತಮ್ಮ ಗಾಬರಿ, ಭಯದಿಂದ ನಡುಗುತ್ತಾ ಅಡುಗೆ ಮನೆಗೆ ಸೇರಿಕೊಂಡರು.

ಡೇವಿಡ್‌ಗೆ ಬಂದಿರುವವರು ಯಾರೆಂದು ಗೊತ್ತಾಗಿಹೋಯಿತು. ಪಿಸ್ತೂಲ್ ಸಮೇತ ಹೊರಬಂದ.

ಬಾಗಿಲು ಮುರಿದುಕೊಂಡಿತು.

ದಾಂಡಿಗರು ಒಳಗೆ ನುಗ್ಗಿದರು.

ಡೇವಿಡ್ ಪಿಸ್ತೂಲಿನಿಂದ ಗುಂಡು ಹಾರಿಸಲು ಪ್ರಯತ್ನಿಸುವ ಮೊದಲೇ ಕೃಷ್ಣನ ಸೈಕಲ್ ಚೈನ್ ಅವನ ಕೈಎಗೆ ಸುತ್ತಿಕೊಂಡಿತು.

ಒಳಗೆ ನುಗ್ಗಿದ್ದ ನಾಲ್ಕು ಮಂದಿ ದಾಂಡಿಗರು ಡೇವಿಡ್ ಮತ್ತು ಸುರೇಂದ್ರನನ್ನು ಸುತ್ತುವರೆದರು.

ಕೃಷ್ಣ ಗಹಗಹಿಸಿ ನಗುತ್ತಾ ''ಲೋ ಡೇವಿಡ್...ರೌಡಿಸಂ, ಮೋಸ, ಕೊಲೆ

ಮಾಡೋದನ್ನು ನಿಗೆ ಕಲಿಸಿದ್ದೇ ನಾನು...ನನಗೆ ಕೈ ಕೊಡಲು ಪ್ರಯತ್ನಿಸುತ್ತೀಯ...?'' ಎಂದ.

ಡೇವಿಡ್‌ಗೆ ಕೋಪ ಬಂದರೂ ಸುಮ್ಮನಿದ್ದ. ಮಿಸುಕಾಡಿದರೆ ಗುಂಡನ್ನು ಹಾರಿಸಲು ನಾಲ್ಕು ಪಿಸ್ತೂಲುಗಳು ಸಿದ್ಧವಾಗಿದ್ದವು.

ಸುರೇಂದ್ರ ಗಡಗಡನೆ ನಡುಗುತ್ತಿದ್ದ.

ಕೃಷ್ಣ ಕೋಪದಿಂದ ಡೇವಿಡ್‌ನ ಮುಖಕ್ಕೆ ಹೊಡೆಯುತ್ತಾ, ''ಏ...ನೆನ್ನೆ ರಾತ್ರಿ ನನಗಿಂತ ಮೊದಲೇ ಬಂದು ರುದ್ರಯ್ಯನನ್ನು ಕೊಂದು ಹಣದ ಸೂಟ್‌ಕೇಸ್ ಎತ್ತಿಕೊಂಡು ಹೋಗಿದ್ದೀಯ. ಮರ್ಯಾದೆಯಿಂದ ಅದನ್ನು ಕೊಡು'' ಎಂದ.

ಡೇವಿಡ್ ಗಂಭೀರವಾಗಿ, ''ಕೃಷ್ಣ...ನಿನಗೆ ಮೋಸ ಮಾಡಲು ಪ್ರಯತ್ನಿಸಿದ್ದು ನಿಜ. ಆದರೆ ಹಣದ ಸೂಟ್‌ಕೇಸ್ ನನಗೆ ಸಿಕ್ಕಿಲ್ಲ'' ಎಂದ.

''ಸುಳ್ಳು...ಸುಳ್ಳು...ಹೇಳುತ್ತಿದ್ದೀಯ.'' ಅಬ್ಬರಿಸಿದ ಕೃಷ್ಣ.

ಡೇವಿಡ್ ಕೋಪದಿಂದ, ''ನಿನಗೆ ಕಾಮನ್ ಸೆನ್ಸ್ ಇಲ್ಲವೆ. ಹಣ ನನಗೆ ಸಿಕ್ಕಿದರೆ ನಾನ್ಯಾಕೆ ಪುನಃ ಈ ಮನೆಗೆ ಬಂದು ಸುರೇಂದ್ರನನ್ನು ಕೇಳುತ್ತಿದ್ದೆ?'' ಎಂದ.

ಕೃಷ್ಣ ವಿಸ್ಮಯದಿಂದ, ''ರುದ್ರಯ್ಯನನ್ನು ನೀನು ಕೊಲ್ಲಲಿಲ್ಲವೇ ಡೇವಿಡ್?'' ಕೇಳಿದ.

''ಇಲ್ಲ...ಇಲ್ಲ...''

''ಅರೇ...ನಾನೂ ಸಹ ಅವನನ್ನು ಕೊಂದಿಲ್ಲ. ನಮ್ಮಿಬ್ಬರಿಗಿಂತಲೂ ಮೊದಲೇ ಬಂದಿದ್ದ ವ್ಯಕ್ತಿಯೇ ರುದ್ರಯ್ಯನನ್ನು ಕೊಂದು ಹಣದ ಸೂಟ್‌ಕೇಸ್ ಎತ್ತಿಕೊಂಡು ಹೋಗಿರೋದು.''

ಡೇವಿಡ್ ಕೂಡಲೇ, ''ನಿಜ...ನೀನು ಹೇಳೋದು ನಿಜ. ಆ ವ್ಯಕ್ತಿ ಬೇರೆ ಯಾರೂ ಅಲ್ಲ. ಸುರೇಂದ್ರ...!'' ಎಂದ.

ಸುರೇಂದ್ರ ಹೌಹಾರಿದ.

ಕೃಷ್ಣನ ದೃಷ್ಟಿ ಸುರೇಂದ್ರನತ್ತ ಹೊರಳಿತು. ಸೈಕಲ್ ಚೈನ್ ಸುರುಳಿಯಾಗತೊಡಗಿತು.

ಸುರೇಂದ್ರ ಪ್ರಾಣ ಭಯದಿಂದ ನಡುಗುತ್ತಿದ್ದರೆ ಡೇವಿಡ್, ''ಈ ಸುರೇಂದ್ರನೇ ಕೊಲೆಗಾರ. ಹಣದ ಆಸೆಯಿಂದ ಮಧ+ಯರಾತ್ರಿಯಲ್ಲಿ ಬಂದ ತನ್ನ ಸೋದರ ಜೊತೆ

ಮಾವನಿಗೆ ಆಶ್ರಯ ನೀಡಿದ. ಅವನು ಯಾರಿಗೂ ತಿಳಿಸದಂತೆ ಕೊಲೆ ಮಾಡಿ ಹಣದ ಸೂಟ್‌ಕೇಸನ್ನು ಎಲ್ಲೋ ಮುಚ್ಚಿಟ್ಟಿದ್ದಾನೆ. ಹಣವನ್ನು ಉಳಿಸಿಕೊಳ್ಳಲು ಈ ಸುರೇಂದ್ರ ದೊಡ್ಡ ನಾಟಕ ಆಡುತ್ತಿದ್ದಾನೆ.'' ಎಂದ.

ಮರುಕ್ಷಣ...

ಸೈಕಲ್ ಚೈನ್ 'ಸೊಂಯ್' ಎಂದು ತಿರುಗುತ್ತಾ ಸುರೇಂದ್ರನ ದೇಹಕ್ಕೆ ಸುತ್ತಿಕೊಂಡಿತು. ಕತ್ತು, ತೋಳು, ಎದೆಯ ಚರ್ಮ ಹರಿದು ರಕ್ತ ಬರಲಾರಂಭಿಸಿತು.

ಡೇವಿಡ್ ಮುಷ್ಠಿ ಬಿಗಿದು, 'ರಪ್' ಎಂದು ಮುಖಕ್ಕೆ ಒಂದು ಹೊಡೆದ. ಸುರೇಂದ್ರ ನೋವಿನಿಂದ ಕಿರುಚುತ್ತಾ ಹಿಂದಕ್ಕೆ ವಾಲಿದ.

ಆದರೆ ಕೃಷ್ಣ ಮತ್ತೊಂದು ಸಾರಿ ಸೈಕಲ್ ಚೈನಿನಿಂದ ಸುರೇಂದ್ರನ ಮುಖಕ್ಕೆ ರಾಚಿದ.

ರಕ್ತ ಬುಳುಬುಳು ಎಂದು ಬರಲಾರಂಭಿಸಿತು.

ಪ್ರಾಣಾಂತಿಕ ಕೂಗು...

ಕೃಷ್ಣ ಹುಚ್ಚನಂತೆ ಆಡುತ್ತಿದ್ದ.

ಸುರೇಂದ್ರನನ್ನು ಎಳೆದಾಡುತ್ತಾ, ''ಏ...ಏ...ಎಲ್ಲೋ...'' ಎಂದು ಕೇಳುತ್ತಿದ್ದಾನೆ.

ಮುಖದ ತುಂಬಾ ಗಾಯ... ಜಿನಗುತ್ತಿದ್ದ ರಕ್ತ...ದೇಹದ ತುಂಬಾ ಗಾಯ...ಗಡಗಡನೆ ನಡುಗುತ್ತಿದ್ದ ಶರೀರ.

''ಬೊಗಳೋ ನಾಯಿ...'' ಮತ್ತೊಂದು ಹೊಡೆತ ಬಿತ್ತು.

ಸುರೇಂದ್ರ ಕಿಟಾರನೆ ಕಿರುಚಿದ.

ಕೃಷ್ಣ ಸುರೇಂದ್ರನನ್ನು ಚೆಂಡಾಡುತ್ತಿದ್ದರೆ ಡೇವಿಡ್ ಸುತ್ತಲೂ ನೋಡಿದ. ಸುಮ ಕಾಣಲಿಲ್ಲ. ಡೇವಿಡ್, ''ಕೃಷ್ಣ...ಇವನ ಹೆಂಡತಿ ಕಾಣುತ್ತಿಲ್ಲ. ನನಗೆ ಅನಿಸುತ್ತೆ. ಹಣವನ್ನು ಸುರೇಂದ್ರ ಬೇರೆ ಎಲ್ಲೋ ಮುಚ್ಚಿಟ್ಟಿದ್ದಾನೆ. ಆ ಸ್ಥಳಕ್ಕೆ ಹೆಂಡತಿಯನ್ನು ಕಳಿಸಿದ್ದಾನೆ. ನಾವು ಈಗಲೇ ಅಲ್ಲಿಗೆ ಹೋದರೆ ಖಂಡಿತಾ ಹಣ ಸಿಗುತ್ತದೆ. ಇಲ್ಲದಿದ್ದರೆ ಸುಮ ಹಣದ ಸೂಟ್‌ಕೇಸನ್ನು ತೆಗೆದುಕೊಂಡು ಇನ್ನೆಲ್ಲಾದರೂ ಹೋಗಬಹುದು'' ಎಂದ.

ಕೃಷ್ಣ ಚಾಕು ಹೊರತೆಗೆದ. ಅದು ಪಳಪಳನೆ ಹೊಳೆಯುತ್ತಿತ್ತು. ಅದನ್ನು ಮೇಲಕ್ಕೆ ಎತ್ತುತ್ತಾ ''ಏ...ನಿನ್ನ ಹೆಂಡತಿ ಎಲ್ಲಿ ಹಿಗಿದ್ದಾಳೆ ಅಂತ ಹೇಳದಿದ್ದರೆ ಸಾಯಿಸಿಬಿಡುತ್ತೇನೆ'' ಎಂದು ಅಬ್ಬರಿಸಿದ.

ಬರುತ್ತೇನೆ'' ಎಂದು ನಡುಗುತ್ತಾ ಹೇಳಿದ.

''ಏ...ಎಳ್ಕೊಂಡು ನಡಿರ್‍ರೋ...'' ಎಂದು ಕೃಷ್ಣ ಹೇಳಿದಾಗ ದಾಂಡಿಗರು ಸುರೇಂದ್ರನನ್ನು ದರದರನೆ ಎಳೆದುಕೊಂಡು ಹೊರಟರು.

ಅಪಾಯ...ಅಪಾಯ ಕಾದಿತ್ತು!

★★★

ಸುಮ ಬಿರುಬಿರನೆ ನಡೆಯುತ್ತಿದ್ದಳು.

ಬೇಗ ಹೋಗಬೇಕು...ಎಸ್. ಐ. ಮನೋಹರನನ್ನು ಕರೆದುಕೊಂಡು ಬರಬೇಕು. ಇನ್ಯಾರೋ ರೌಡಿಗಳು ಬೇರೆ ನುಗ್ಗಿದ್ದಾರೆ. ಇವರಿಗೆ ಏನು ತೋಂದರೆ ಮಾಡುತ್ತಾರೋ ಏನೋ ಎಂದುಕೊಂಡಳು.

ಬೆವರು ಸುರಿಯುತ್ತಿತ್ತು.

ಆಯಾಸದಿಂದ ಏದುಸಿರು ಬಿಡುತ್ತಿದ್ದಳು.

ದಾರಿಯಲ್ಲಿ ಬರುವಾಗ ಪಬ್ಲಿಕ್ ಟೆಲಿಫೋನ್ ಬೂತಿನಿಂದ ಮನೋಹರನಿಗೆ ಫೋನ್ ಮಾಡಿದ್ದಳು. ಅವನು ಮನೆಯಲ್ಲಿದ್ದಾನೆಂದು ಪೋಲೀಸ್ ಸ್ಟೇಷನ್‌ನಿಂದ ಪಿ.ಸಿ. ಉತ್ತರಿಸಿದ.

ಸುಮ ಎಸ್. ಐ. ಮನೋಹರನ ಬಂಗಲೆಗೆ ಬಂದಳು. ಗೇಟು ತೆರೆದಿತ್ತು. ಸುಮ ಒಳಗೆ ಬಂದಳು. ಮೆಟ್ಟಿಲುಗಳು ಹತ್ತಿ ಆತುರದಿಂದ ಕಾಲಿಂಗ್ ಬೆಲ್‌ನ ಸ್ವಿಚ್ ಅದುಮಿದಳು. ಕರೆಂಟ್ ಇರಲಿಲ್ಲವಾದ್ದರಿಂದ ಬೆಲ್ ಶಬ್ದ ಮಾಡಲಿಲ್ಲ.

ಸುಮ ಬಾಗಿಲನ್ನು ಬಡಿಯಬೇಕು ಎಂದುಕೊಂಡಾಗ ಏನೋ ಸದ್ದಾಂತಾಗಿ ಶಬ್ದ ಬಂದತ್ತ ನೋಡಿದಳು.

ಹಾಲ್‌ಗೆ ಹೋಗುವ ಎಡಭಾಗದಲ್ಲೇ ರೂಮಿತ್ತು. ಆ ರೂಮಿನ ಕಿಟಕಿ ತೆರೆದಿತ್ತು. ಸುಮ ಅದಕ್ಕೋ ಕುತೂಹಲದಿಂದ ಇಣುಕಿ ನೋಡಿದಳು.

ರೂಮಿನಲ್ಲಿ ಕಂಡ ದೃಶ್ಯದಿಂದ ಬೆಚ್ಚಿಬಿದ್ದಳು. ಆ ರೂಮಿನಲ್ಲಿ ಎಸ್. ಐ. ಮನೋಹರ್ ಕುಳಿತಿದ್ದ.

ಆದರೆ ಸುಮ ಬೆಚ್ಚಿಬೀಳಲು ಕಾರಣ ಸೂಟ್‌ಕೇಸ್!

ಆ ರೂಮಿನಲ್ಲಿ 'ಜಾಕ್ಸನ್' ಎಂಬ ಬರಹವಿದ್ದ ಕಪ್ಪು ಬಣ್ಣದ ಸೂಟ್‌ಕೇಸ್ ನೋಡಿದ್ದಳು!

ತನ್ನ ಗಂಡನ ಸೋದರ ಮಾವ ರುದ್ರಯ್ಯ ದಿದ್ದ ಹಣದ ಸೂಟ್‌ಕೇಸ್ ನೋಡಿದ್ದಳು!

ತನ್ನ ಗಂಡನ ಸೋದರ ಮಾವ ರುದ್ರಯ್ಯ ತಂದಿದ್ದ ಹಣದ ಸೂಟ್‌ಕೇಸ್ ಎಸ್. ಐ. ಮನೋಹರನ ಹತ್ತಿರವಿತ್ತು!

ಮನೋಹರ ಅದನ್ನು ಈಗ ತೆರೆದು, ನೋಟನ ಕಂತೆಗಳನ್ನು ಲೆಕ್ಕ ಮಾಡುತ್ತಿದ್ದನು. ಒಂದು...ಎರಡು...ಮೂರು...

ಕಲ್ಲಿನ ಮೇಲೆ ನಿಂತು ಕಿಟಕಿಯ ಮೂಲಕ ಈ ದೃಶ್ಯ ನೋಡುತ್ತಿದ್ದಸುಮ ಬ್ಯಾಲೆನ್ಸ್ ತಪ್ಪಿದಡಾಲನೆ ಬಿದ್ದಳು.

ಹಣೆ ಕಲ್ಲಿಗೆ ಬಡಿದಿದ್ದರಿಂದ ನೋವಿನಿಂದ ಕಿರುಚುತ್ತಾ ಉರುಳಿದ್ದಳು.

ಮನೋಹರ್ ಭಯ, ಗಾಬರಿಯಿಂದ ಹೊರ ಬಂದು ನೋಡಿದ.

ಸ್ನೇಹಿತನ ಹೆಂಡತಿ ಸುಮ!

ಯಾರ ಮನೆಯಲ್ಲಿ ರುದ್ರಯ್ಯನನ್ನು ಕೊಂದು ಹಣದ ಸೂಟ್‌ಕೇಸ್ ತಂದಿದ್ದನೋ ಅವಳೀಗ ಎಲ್ಲವನ್ನೂ ನೋಡಿದ್ದಳು. ಸುಮಳಿಗೆ ನಂಬಿಕೆಯೇ ಬರುತ್ತಿಲ್ಲ.

ಅತ್ಯಾಶ್ಚರ್ಯದಿಂದ ಎಸ್. ಐ. ಮನೋಹರನನ್ನು ನೋಡುತ್ತಿದ್ದಾಳೆ.

ಈ ಕಾಲದಲ್ಲಿ ಯಾರನ್ನೂ ನಂಬಲು ಸಾಧ್ಯವಿಲ್ಲ. ಗಂಡನ ಪರಮಾಪ್ತ ಸ್ನೇಹಿತ, ಪೋಲೀಸ್ ಅಧಿಕಾರಿ ಹಣದ ಆಸೆಯಿಂದ ಇಂತಹ ಕೆಲಸ ಮಾಡಿದ್ದಾನೆಂದರೆ ನಂಬಲು ಸಾಧ್ಯವೆ?

ಮನೋಹರ ಅವಳನ್ನೇ ದುರುದುರು ನೋಡುತ್ತಾ ''ಸುಮ...ಈ ರಹಸ್ಯ ನಿನಗೆ ತಿಳಿಯಬಾರದಿತ್ತು. ತಿಳಿದು ಹೋಯಿತು. ಅಂದರೆ ನೀನು ಇನ್ನು ಬದುಕಲು ಸಾಧ್ಯವೇ ಇಲ್ಲ'' ಎಂದ.

ಸುಮ ಪ್ರಾಣ ಭಯದಿಂದ ಹಿಂದೆ, ಹಿಂದೆ ತವಳುತ್ತಿದ್ದಳು.

ಸಾವು ಸಮೀಪಿಸುತ್ತಿತ್ತು.

''ಸುಮ... ರುದ್ರಯ್ಯ ಸೂಟ್‌ಕೇಸ್ ಎತ್ತಿಕೊಂಡು ಬಂದದ್ದನ್ನು ನಾನು ಹೋಟೆಲ್‌ನಲ್ಲಿ ನೋಡಿದ್ದೆ. ಆದರೆ ಆಗ ನನಗೆ ಈ ಆಲೋಚನೆಗಳನು ಇರಲಿಲ್ಲ. ತನಿಖೆಯಿಂದ ಇಪ್ಪತ್ತೈದು ಲಕ್ಷ ರೂಪಾಯಿ ಇದ್ದ ಸೂಟ್‌ಕೇಸನ್ನು ರುದ್ರಯ್ಯ ಎತ್ತಿಕೊಂಡು ಹೋದದ್ದು ಗೊತ್ತಾಯಿತು. ಅದೇ ರುದ್ರಯ್ಯನನ್ನು ನಿನ್ನ ಮನೆಯ ಬೆಡ್ ರೂಮಿನಲ್ಲಿ

ನೋಡಿದ್ದ. ಆಗಲೇ ನಾನು ಪ್ಲಾನ್ ಮಾಡಿದ್ದು. ನಿನ್ನ ಮನೆಗೆ ಬಂದು ಮೊದಲು ವಿದ್ಯುತ್ ಸಂಪರ್ಕ ತಪ್ಪಿಸಲು ಫ್ಯೂಜ್ ತೆಗೆದ. ನಂತರ ಹಿಂದುಗಡೆಯಿಂದ ಬಂದೆ. ಹಿಂಬಾಗಿಲು ಹಾಕಿತ್ತು. ಮೇಲೆ ಹತ್ತಿ ಹೆಂಚನ್ನು ತೆಗೆದು ಒಳಗೆ ಇಳಿದೆ. ನಿನ್ನ ಮನೆ ನನಗೆ ಚೆನ್ನಾಗಿ ಪರಿಚಯವಿದೆ. ಸರಿ...ಸದ್ದಾಗದಂತೆ ಬೆಡ್‌ರೂಮಿಗೆ ಬಂದು ರುದ್ರಯ್ಯನನ್ನು ಉಸಿರು ಕಟ್ಟಿಸಿ ಸಾಯಿಸಿ ಮಂಚದ ಕೆಳಗೆ ಇದ್ದ ಸೂಟ್‌ಕೇಸನ್ನು ಎತ್ತಿಕೊಂಡು ಬಂದೆ. ಆದರೆ ನಾನೇ ಆಗ ಹಿತ್ತಲಿನ ಬಾಗಿಲನ್ನು ತೆಗೆದು ಹೊರಬಂದೆ. ಒಂದು ಕಡೆಯಿಂದ ಡೇವಿಡ್ ಮತ್ತೊಂದು ಕಡೆಯಿಂದ ಸೈಕಲ್ ಚೈನ್ ಕೃಷ್ಣ ಬರುವುದನ್ನು ನೋಡಿದೆ. ಇಬ್ಬರಿಗೂ ತುಂಬಾ ಅಂತರವಿತ್ತು. ಕತ್ತಲಿನಲ್ಲಿ ಏನೂ ಕಾಣುತ್ತಿರಲಿಲ್ಲ. ಈ ಹಣ ಪಡೆಯುವುದರಲ್ಲಿ ನಾನು ಸಕ್ಸಸ್ ಆದೆ. ಒಬ್ಬ ಪೋಲೀಸ್ ಅಧಿಕಾರಿ ಕೊಲೆ ಮಾಡುತ್ತಾನೆ ಅಂದರೆ ನಂಬಲು ಸಾಧ್ಯವೇ? ಈ ನಂಬಿಕೆಯೇ ನನ್ನ ಯಶಸ್ಸಿಗೆ ಮೂಲ ಕಾರಣ'' ಎಂದು ನಗಲಾರಂಭಿಸಿದ.

ಆಗ...

ಇದ್ದಕ್ಕಿದಂತೆ ಹತ್ತಾರು ಕಲ್ಲುಗಳು 'ರಪರಪನೆ' ಬಂದು ಎಸ್. ಐಐ ಮನೋಹರನಿಗೆ ಬಿದ್ದಿತು.

ಮನೋಹರ ಏಟುಗಳನ್ನು ತಡೆಯಲಾರದೆ ತತ್ತರಿಸುತ್ತಾ ಓಡಲಾರಂಭಿಸಿದ.

ಆಗ ಎಲ್ಲಾ ಕಡೆಯಿಂದ ರೌಡಿಗಳು ನುಗ್ಗಿದರು. ಕೃಷ್ಣ ಮತ್ತು ಡೇವಿಡ್‌ಗೆ ವಿಷಯ ತಿಳಿದಿದ್ದರಿಂದ ಅವರು ನೇರವಾಗಿ ಎಸ್. ಐ. ಮನೋಹರನ ಮೇಲೆ ದಾಳಿ ಮಾಡಿದ್ದರು.

ಸುರೇಂದ್ರ ಹಿಂಸೆ ತಡೆಯಲಾರದೆ ರೌಡಿಗಳೊಂದಿಗೆ ಸ್ನೇಹಿತನಾದ ಮನೋಹರನ ಬಂಗಲೆಗೆ ಬಂದಿದ್ದ. ಎಸ್. ಐ. ಮನೋಹರ್ ರೌಡಿಗಳಿಂದ ತನ್ನ ಪ್ರಾಣ ಉಳಿಸಬಹುದು ಎಂದು ನಂಬಿಕೆಯಿಂದ ಅಲ್ಲಿಗೆ ಬಂದಿದ್ದ. ಆದರೆ ಮನೋಹರ ಸುಮಳೊಂದಿಗೆ ಆಡಿದ್ದ ಮಾತುಗಳನ್ನು ಕೇಳಿದ ಮೇಲೆ ಪ್ರಾಣ ಭಯದಿಂದ ಕಂಗಾಲಾಗಿದ್ದ.

ರೌಡಿಗಳು ಮನೋಹರನನ್ನು ಹೊಡೆದು ಸಾಯಿಸಲು ಪ್ರಯತ್ನಿಸುತ್ತಿದ್ದರೆ ಕೃಷ್ಣ ಮತ್ತು ಡೇವಿಡ್ ರೂಮಿನೊಳಗೆ ನುಗ್ಗಿ ಹಣದ ಸೂಟ್‌ಕೇಸ್ ಎತ್ತಿಕೊಳ್ಳಲು ಪರಸ್ಪರ ಹೊಡೆದಾಡಲು ಪ್ರಾರಂಭಿಸಿದರು.

ಸುಮ ನೆಲದಲ್ಲಿ ಬಿದ್ದಿದ್ದಳು ಚಂಗನೆ ಎದ್ದು ಗಂಡನ ಹತ್ತಿರ ಬಂದಿದ್ದಳು.

ಜನಗಳು ಗುಂಪು, ಗುಂಪಾಗಿ ಸೇರುತ್ತಿದ್ದರು. ದೇವಹೆಲ್ಲಾ ರಕ್ತಮಯವಾಗಿ ಸೋತು ಸೊರಗಿದ್ದ ಗಂಡನನ್ನು ಬಲವಂತವಾಗಗಿ ಎಳೆದುಕೊಂಡು ಅಲ್ಲಿಂದ ಹೊರಟಳು.

ಮನೆಗೆ ಸೇರುವ ಮೊದಲು ಪಬ್ಲಿಕ್ ಟೆಲಿಫೋನ್ ಬೂತಿನಿಂದ ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡುತ್ತಾ.

''ಹಲೋ...ಎಸ್.ಐ. ಮನೋಹರ್ ಅವರ ಬಂಗಲೆಯಲ್ಲಿ ಹೊಡೆದಾಟ ನಡೆಯುತ್ತಿದೆ. ಎಸ್. ಐ. ಅವರನ್ನು ರೌಡಿಗಳು ಹಣಕ್ಕಾಗಿ ಕೊಲೆ ಮಾಡಿದ್ದಾರೆ'' ಇದಾದ ಮೇಲೆ ದಂಪತಿಗಳು ಮನೆ ಸೇರಿಕೊಂಡಿದ್ದರು.

ಪೋಲೀಸರು ಬರುವ ಹೊತ್ತಿಗೆ ಹೆಣಗಳು ಬಿದ್ದಿದ್ದವು.

ನೋಟುಗಳು ಗಾಳಿಯಲ್ಲಿ ಹಾರಾಡುತ್ತಿದ್ದರೆ ಜನಗಳು ಅದನ್ನು ಬಾಚಿಕೊಳ್ಳಲು ನುಗ್ಗುತ್ತಿದ್ದರು.

ಪರಸ್ಪರ ತುಳಿಯುತ್ತಿದ್ದರು.

ರೌಡಿಗಳು, ದೇವಿಡ್, ಕೃಷ್ಣಮತ್ತು ಎಸ್. ಐ. ಮನೋಹರ್ ಸತ್ತು ಬಿದ್ದಿದ್ದರು. ಹಣಕ್ಕಾಗಿ ಕಿತ್ತಾಡುತ್ತಿದ್ದ ಜನಗಳಲ್ಲಿ ಇಬ್ಬರು ಸತ್ತಿದ್ದರು.

ಪೋಲೀಸರು ಬಂದು ತುಂಬಾ ಹೊತ್ತು ಪ್ರಯತ್ನಿಸಿದ ನಂತರ ಪರಿಸ್ಥಿತಿ ಶಾಂತವಾಯಿತು.

ರುದ್ರಯ್ಯನ ಹೆಣ ಈಗಲೂ ಸಹ ಸುರೇಂದ್ರನ ಮನೆಯ ಹಿತ್ತಲಿನಲ್ಲಿ ಇರೋ ಗುಂಡಿಯಲ್ಲಿ ಇದೆ. ಆದರೆ ಈ ವಿಷಯ ಗೊತ್ತಿರೋ ರೌಡಿಗಳು ಮತ್ತು ಎಸ್. ಐ. ಮನೋಹರ್ ಈಗ ಬದುಕಿಲ್ಲ. ಈ ಪ್ರಕರಣದ ಬಗ್ಗೆ ಪೋಲೀಸ್ ತನಿಖೆ ನಡೆಯುತ್ತಿದೆ.

ಹಣದ ಮೇಲಿನ ಅತಿಯಾದ ವ್ಯಾಮೋಹ, ದುರಾಸೆಯಿಂದ, ಇಂತಹ ಪರಿಸ್ಥಿತಿ ಬಂದಿದ್ದರಿಂದ ದಂಪತಿಗಳು ಇದರಿಂದ ಪಾಠ ಕಲಿಯುತ್ತಿದ್ದಾರೆ.

ಆತ್ಮೀಯ ಸ್ನೇಹಿತನೆಂದು ನಂಬಿದ್ದ ಪೋಲೀಸ್ ಅಧಿಕಾರಿ ಮನೋಹರ್ ಸೃಷ್ಟಿಸಿದ್ದ ಗರುಡ ವ್ಯೂಹದಿಂದ ಸುರೇಂದ್ರ, ಸುಮ ಈಗ ಪಾರಾಗಿದ್ದಾರೆ.

# ಮಾವಿನ ತೋಪಿನಲ್ಲಿ

ಕಾರು ವೇಗವಾಗಿ ಚಲಿಸುತ್ತಿದೆ.

ಆಗ ಮಧ್ಯಾಹ್ನ ಒಂದು ಗಂಟೆ.

ಗಾಳಿಯ ರಭಸಕ್ಕೆ ಅವಳ ಮುಂಗುರುಳು ಮುಖದ ಮೇಲೆ ಲಾಸ್ಯವಾಡುತ್ತಿದೆ, ಸೆರಗು ಪಟಪಟನೆ ಹಾರಾಡುತ್ತಿದೆ.

ಅವಳು ಸೀಟಿಗೆ ಜರಗಿಕೊಂಡಿದ್ದಾಳೆ.

ಕಣ್ಣುಗಳಲ್ಲಿ ಭಯ, ಚಿಂತೆ, ಆತಂಕದ ಛಾಯೆ ಎದ್ದು ಕಾಣುತ್ತಿದೆ. ಮನಸ್ಸು ತಹತಹಿಸಯತ್ತಿದೆ.

ಅವನು ಅವಳತ್ತ ತಿರುಗಿದ.

ಅವಳು ಗಾಬರಿಯಿಂದ ಅವನ ಕಡೆ ನೋಡಿದಳು. ಅವನು ಡ್ರೈವ್ ಮಾಡುತ್ತಲೇ ಅವಳ ಕೈ ಅದುಮಿದ.

ಅದು ಭರವಸೆ, ಧೈರ್ಯದ ಸಂಕೇತ.

ಅವಳು ಮೆಲ್ಲಗೆ, ''ಗುರು...ಲೆಫ್ಟ್ ಸೈಡ್‌ಗೆ ತಿರುಗಿಸು. ಇನ್ನು ಮುಂದೆ ರಸ್ತೆ ಕಿರಿದಾಗಿದೆ. ಬೀ ಕೇರ್ ಫುಲ್''

ಗುರು ಕಾರಿನ ವೇಗ ಕಡಿಮೆ ಮಾಡಿದ.

ಸಹನಾ ಕಂಪಿಸುವ ಸ್ವರದಿಂದ ''ನನಗ್ಯಾಕೋ ತುಂಬಾ ಭಯ ಆಗ್ತಾ ಇದೆ ಗುರು. ನನ್ನ ತಂದೆ ಈ ರೀತಿ ಯಾವತ್ತೂ ಹೋಗಿರಲಿಲ್ಲ. ಎರಡು ದಿವಸಗಳಾದುವಂತೆ.''

ಗುರು, ''ಸಹನಾ...ನಿನ್ನ ತಂದೆಯೇನೂ ಚಿಕ್ಕ ಮಗು ಅಲ್ಲ. ವ್ಯವಹಾರಕ್ಕೋಸ್ಕರವೋ ಅಥವಾ ಬೇರೆ ಯಾವುದೋ ಕಾರಣದಿಂದಲೋ

ಹೋಗಿದ್ದಾರೆ ಅಂತ ಕಾಣುತ್ತೆ.''

ಸಹನಾ ಹಣೆಯನ್ನು ಉಜ್ಜಿಕೊಳ್ಳುತ್ತಾ, ''ಕಾರಣ ಏನೇ ಆಗಿದ್ದರೂ ಊರಿನಲ್ಲಿ ತಿಳಿಸದೆ ಈ ರೀತಿ ಹೋಗುತ್ತಿರಲಿಲ್ಲ. ಒಂದು ವೇಳೆ ತಿಳಿಸಲು ಆಗದೆ ಇದ್ದಿದ್ದರೆ ಕೊನೆಯ ಪಕ್ಷ ಹೋದ ಮೇಲಾದರೂ ಫೋನ್ ಮಾಡಿರುತ್ತಿದ್ದರು.''

ಗುರು ಅವರ ಬಗ್ಗೆಯೇ ಚಿಂತಿಸುತ್ತಿದ್ದ.

ಸಹನಾ ಮುಂದುವರೆಸುತ್ತಾ, ''ನಿನಗೊಂದು ವಿಷಯ ಗೊತ್ತೆ?''

ಗುರು ಏನೆಂಬಂತೆ ನೋಡಿದ.

''ನನ್ನ ತಂದೆಗೆ ತಾನೆಂದರೆ ತುಂಬಾ ಪ್ರೀತಿ. ಅವರು ಎಷ್ಟೇ ಕೆಲಸವಿದ್ದರೂ ದಿನಕ್ಕೊಂದು ಸಲ ಫೋನ್ ಮಾಡುತ್ತಿದ್ದರು. ಎರಡು ದಿವಸಗಳಿಂದ ನನಗೂ ಸಹಾ ಫೋನ್ ಮಾಡಿಲ್ಲ.''

''ನಿನ್ನ ತಂದೆ ಕಾಣುತ್ತಿಲ್ಲ ಅಂತ ನಿನಗೆ ಫೋನ್ ಮಾಡಿ ತಿಳಿಸಿದವರು ಯಾರು?''

''ನನ್ನ ಸೋದರಮಾವ ನರಸಿಂಹಯ್ಯ.''

''ಏನಂತ ಹೇಳಿದರು?''

''ಎರಡು ದಿನಗಳಿಂದ ನಿನ್ನ ತಂದೆ ಊರಿಗೆ ಬಂದಿಲ್ಲ. ನನಗ್ಯಾಕೋ ಭಯವಾಗುತ್ತಿದೆ. ನೀನೊಂದು ಸಲ ಬಂದು ಹೋಗು ಅಂತ ಹೇಳಿದ್ದರು.''

''ಬೇರೆ ಇನ್ನೇನು ಹೇಳಿದರು?''

''ಇಲ್ಲ, ಇನ್ನೇನೂ ಹೇಳಿರಲಿಲ್ಲ.''

ಗುರು ಅವಳಿಗೆ ಹಲವಾರು ಪ್ರಶ್ನೆಗಳನ್ನು ಕೇಳಿ, ಮತ್ತಷ್ಟು ವಿವರಗಳನ್ನು ತಿಳಿದುಕೊಂಡನು.

ಸಹನಾ ಸೊರಗೂರಿನ ಶ್ರೀಮಂತ ರಾಜಾರಾಯರ ಮುದ್ದಿನ ಮಗಳು. ಅವಳು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಓದುತ್ತಿದ್ದಳು. ಅವಳಿಗೆ ಅಂದು ಬೆಳಿಗ್ಗೆ ತಾನೇ ಅವಳ ಸೋದರಮಾವ ನರಸಿಂಹಯ್ಯನಿಂದ ಫೋನ್ ಬಂದಿತ್ತು. ಶ್ರೀಮಂತ ರಾಜಾರಾಯರು ಕಣ್ಮರೆಯಾಗಿದ್ದರು.

ಸಹನಾ ತನ್ನೂರಿಗೆ ಬರುವಾಗ ತನ್ನ ಜೊತೆಯಲ್ಲಿ ಆತ್ಮೀಯ ಗೆಳೆಯ ಗುರುವನ್ನೂ ಕರೆತಂದಿದ್ದಳು.

ಕಾರು ಸೊರಗೂರನ್ನು ತಲುಪಿತು.

ಆಗ ಮಧ್ಯಾಹ್ನ ಮೂರು ಗಂಟೆ.

ಸೊರಗೂರು ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾಗಿದ್ದ ಸ್ಥಳ. ಇಲ್ಲಿನ ದಟ್ಟವಾದ ಕಾಡು, ಗುಡ್ಡ, ಬೆಟ್ಟ ಮತ್ತು ನದಿಯನ್ನು ನೋಡಲು ಜನಗಳು ಬರುತ್ತಿದ್ದರು.

ಕಾರು ಮಾವಿನ ತೋಪಿನ ಹತ್ತಿರ ಬಂದಿತು.

ಸುತ್ತಮುತ್ತಲಿನ ಪ್ರಾಂತ್ಯದಲ್ಲೇ ಅಂತಹ ದೊಡ್ಡ ಮಾವಿನತೋಪು ಇರಲಿಲ್ಲ.

ಅದು ರಾಜಾರಾಯರ ಮಾವಿನ ತೋಪು!

ಸಹನಾ, ''ಗುರು...ನನ್ನ ತಂದೆಗೆ ಮಾವಿನ ತೋಪು ಎಂದರೆ ತುಂಬಾ ಇಷ್ಟ. ಅವರು ದಿನದ ಬಹುಸಮಯವನ್ನೆಲ್ಲಾ ಇಲ್ಲೇ ಕಳೆಯುತ್ತಿದ್ದರು.''

ಗುರು ಕಾರಿನಿಂದ ಇಳಿದು, ಮಾವಿನ ತೋಪನ್ನು ನೋಡಿದ. ಹಸಿರು ಎಲೆಗಳಿಂದ ಮಾವಿನ ಮರಗಳು ಮನಸೂರಗೊಳ್ಳುತ್ತಿದ್ದವು.

ಸಾವಿರಾರು ಮರಗಳ ಸಂಗಮ!

ನಯನ ಮನೋಹರ ದೃಶ್ಯ!

ಆಗ ಚರಪರನೆ ಹೆಜ್ಜೆ ಶಬ್ದ ಕೇಳಿಸಿತು.

ಇಬ್ಬರೂ ಹಿಂತಿರುಗಿ ನೋಡಿದರು.

ಚಡ್ಡಿ, ಬನಿಯನ್ ಹಾಕಿಕೊಂಡಿದ್ದ ಸದೃಢ ಮೈಕಟ್ಟಿನ, ತುಂಬು ಪ್ರಾಯದ ಯುವನೊಬ್ಬ ನಿಂತಿದ್ದನು.

ಸಹನಾಳ ಮುಖ ಕಂಡ ಕೂಡಲೇ ಅವನು ಸಂತೋಷ ಮತ್ತು ಸಡಗರದಿಂದ ಹತ್ತಿರ ಬಂದನು.

''ಸಹನಾ ಚೆನ್ನಾಗಿದ್ದೀಯ?''

ಸಹನಾ ಮೌನವಾಗಿ ತಲೆಯಾಡಿಸಿದಳು.

ಅವನು ಮೆಲ್ಲಗೆ, ''ಮೊದಲು ಮನೆಯ ಹತ್ತಿರ ಹೋಗು ಸಹನಾ, ನಿನ್ನ ಸೋದರಮಾವಂದಿರು ಕಾಯುತ್ತಿದ್ದಾರೆ.''

''ನಿನ್ನ ಅಮ್ಮ ಎಲ್ಲಿ?''

''ಮನೆಯಲ್ಲಿ ಅಡುಗೆ ಮಾಡ್ತಾ ಇದ್ದಾಳೆ.''

ಸಹನಾ ಸರಸರನೆ ಕಾರಿನಿಂದ ಇಳಿದು, ''ಗುರು...ಬೇಗ ಇವನ ತಾಯಿಯನ್ನು

ನೋಡಿಕೊಂಡು ಹೋಗಿಬಿಡೋಣ.''

''ಆಮೇಲೆ ನೋಡಿದರೆ ಆಗದೇ?''

ಚಡ್ಡಿ, ಬನಿಯನ್ ಧರಿಸಿದ್ದ ಯುವ, ''ಸಹನಾ ಊರಿಗೆ ಬಂದ ಕೂಡಲೇ ನನ್ನನ್ನು, ಅಮ್ಮನನ್ನು ನೋಡದೇ ಮನೆಗೆ ಹೋಗೋದಿಲ್ಲ.''

ಸಹನಾ ನಸುನಕ್ಕಳು.

ಇಬ್ಬರೂ ತೋಟದ ಹಾದಿಯಲ್ಲಿ ನಡೆಯುತ್ತಿದ್ದಾರೆ. ಎತ್ತ ಕಣ್ಣು ಹಾಯಿಸಿದರೂ ಹಸಿರು ತುಂಬಿರುವ ಮಾವಿನ ಮರಗಳು. ಫಸಲು ಬಂದಿರುವುದರಿಂದ ಅವುಗಳ ಸೊಗಸು ಹೆಚ್ಚಿದೆ.

ಹಸಿರೆಲೆಗಳ ನಡುವೆ ಮಾವಿನ ಹಣ್ಣುಗಳು!

ಹಳದಿ-ಹಸಿರು.

ಅಪರೂಪದ ಅಪೂರ್ವ ಸಂಗಮ!

ಸಹನಾ ನಡೆಯುತ್ತಲೇ, ''ಇವನು ವಾಸು ಅಂತ. ಹೆಸರಿಗೆ ಇವನು, ಇವನ ತಾಯಿ ಕೆಲಸಗಾರರು. ಆದರೆ ನಾನು ನನ್ನ ರಕ್ತಸಂಬಧಿಗಳಿಗಿಂತ ಹೆಚ್ಚಾಗಿ ಪ್ರೀತಿಸೋದು, ನಂಬಿರೋದು ಇವರಿಬ್ಬರನ್ನು ಮಾತ್ರ.''

ಗುರು ವಾಸುವಿನ ಕಡೆ ನೋಡಿದ.

ಸಹನಾ ಹೊಗಳಿದ್ದರಿಂದ ವಾಸುವಿಗೆ ತುಂಬಾ ಸಂಕೋಚವಾಗಿ ಮುಖವನ್ನು ಬೇರೆ ಕಡೆಗೆ ತಿರುಗಿಸಿಕೊಂಡ.

ಎಲ್ಲರೂ ತೋಟದ ಮನೆಗೆ ಬಂದರು.

ಅದು ಮಾವಿನ ತೋಟದ ಮನೆ!

ಶ್ರೀಮಂತ ರಾಜಾರಾಯರು ತೋಟದ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದಾಗಲೆಲ್ಲಾ ಅನಸೂಯಮ್ಮನೇ ಅವರ ತಿಂಡಿ, ಊಟಗಳನ್ನೆಲ್ಲಾ ಗಮನಿಸಿಕೊಳ್ಳುತ್ತಿದ್ದರು.

ತಂಪನೆಯ ವಾತಾವರಣ.

ಅದು ಬಹು ದೊಡ್ಡ ಹಾಲ್. ಅಲ್ಲಿ ಸೋಫಾಗಳನ್ನು ಹಾಕಲಾಗಿತ್ತು. ಮಧ್ಯೆ ಟೀಪಾಯಿ ಇಡಲಾಗಿತ್ತು.

ನೆಲಕ್ಕೆ ರತ್ನಗಂಬಳಿ ಹಾಸಲಾಗಿತ್ತು.

ಗೋಡೆಯಲ್ಲಿ ರಾಜಾರಾಯರ ದೊಡ್ಡ ಫೋಟೋ ಇತ್ತು. ಅದರ ಮತ್ತೊಂದು ಕಡೆ ದೇವರ ಫೋಟೋಗಳು, ಕಲಾಕೆತ್ತನೆಗಳು ಸಹಾ ಅಲಂಕರಿಸಿದ್ದವು.

ದೊಡ್ಡ ಟೇಬಲ್ಲಿನ ಮೇಲೆ ಫೋನಿತ್ತು.

ಅದರ ಎಡ ಭಾಗದಲ್ಲಿ ಕಲರ್ ಟಿ.ವಿ.

ವಾಸು, ''ಅಮ್ಮಾ...ಯಾರು ಬಂದಿದ್ದಾರೆ ನೋಡು.''

ಒಳಗಿನಿಂದ ಬಳೆಗಳ ಶಬ್ದ.

ಗುರು ಕುತೂಹಲದಿಂದ ನೋಡಿದನು.

ತಲೆಯ ತುಂಬಾ ಮಲ್ಲಿಗೆಯ ಹೂವನ್ನು ಮುಡಿದು, ಹಣೆಯಲ್ಲಿ ಅಗಲವಾಗಿ ಕುಂಕುಮ ಇರಿಸಿಕೊಂಡಿದ್ದ ಮುತ್ತೈದೆ ಹೊರಬಂದರು.

ಆಕೆಗೆ ನಲವತ್ತೈದರ ಪ್ರಾಯವಿರಬಹುದು. ಆದರೆ ಅಷ್ಟು ವಯಸ್ಸೆಂದು ಹೇಳಲು ಸಾಧ್ಯವೇ ಇರಲಿಲ್ಲ.

ತಲೆಯಲ್ಲಿ ಒಂದೇ ಒಂದು ಸಹಾ ಬಿಳಿಯ ಕೂದಲು ಇರಲಿಲ್ಲ. ಮುಖದ ಕೆಂಪು ಕಡಿಮೆಯಾಗಿರಲಿಲ್ಲ.

ನರಗಳು ಕಾಣುತ್ತಿರಲಿಲ್ಲ.

ಚರ್ಮ ಸುಕ್ಕುಗಟ್ಟಿರಲಿಲ್ಲ.

ದಂತದ ಮೈ ಬಣ್ಣದ ಆಕೆ ಈಗಲೂ ಸಹಾ ಪ್ರಾಯದ ಚೆಲುವನ್ನು, ಮೈ ಬಿಗಿಯನ್ನು ಉಳಿಸಿಕೊಂಡಿದ್ದರು.

ಆಕೆಗೆ ಇಪ್ಪತ್ತು ವರ್ಷ ಪ್ರಾಯದ ಮಗ ಇದ್ದಾನೆ ಎಂದರೆ ನಂಬುವುದಕ್ಕೇ ಆಗುತ್ತಿರಲಿಲ್ಲ.

ಅನಸೂಯಮ್ಮ ಪ್ರೀತಿ, ಕಕ್ಕುಲತೆಯಿಂದ ಸಹನಾಳನ್ನು ತಬ್ಬಿಕೊಂಡು ಸಂತೈಸುತ್ತಿದ್ದಾರೆ.

ಸಹನಾ ಗಾಬರಿಯಿಂದ, ''ಅನಸೂಯಮ್ಮ...ಈಗ ನಡೆದಿರುವುದಾದರೂ ಏನು? ನನ್ನ ತಂದೆ ಎರಡು ದಿನಗಳಿಂದ ಯಾಕೆ ಮನೆಗೆ ಬಂದಿಲ್ಲ?''

ಅನಸೂಯಮ್ಮ ಮಗನ ಮುಖ ನೋಡಿದರು. ನಂತರ ಗಂಭೀರವಾಗಿ, ''ಸಹನಾ...ನೀನು ಈಗಲೇ ನಿನ್ನ ಸೋದರಮಾವಂದಿರನ್ನು ನೋಡುವುದು ಒಳ್ಳೆಯದು.''

''ಏಕೆ?''

ವಾಸು ವಿಷಾದದಿಂದ, ''ನೀನು ಊರಿಗೆ ಬಂದ ಕೂಡಲೇ ಮೊದಲು ನಮ್ಮನ್ನು ನೋಡಲು ಬರುತ್ತೀಯ ಅಂತ ಅವರಿಗೆ ಕೋಪ ಇದೆ.''

ಅನಸೂಯಮ್ಮ ಗಾಬರಿಯಿಂದ, ''ಈಗ ಪರಿಸ್ಥಿತಿ ಸರಿಯಿಲ್ಲದೇ ಇರುವುದರಿಂದ ಮೊದಲು ನೀನು ಅವರನ್ನು ಕಂಡು ಮಾತಾಡುವುದು ಒಳ್ಳೆಯದು.''

ವಾಸು, ''ಮೊದಲು ಊರಿನ ಬಂಗಲೆಗೆ ಹೋಗು. ನಾಳೆ ಹೇಗಿದ್ದರೂ ತೋಟಕ್ಕೆ ಬಂದೇ ಬರುತ್ತೀಯಲ್ಲ. ಆಗ ನಿನಗೆ ಯಾವ ವಿಷಯ ಬೇಕಿದ್ದರೂ ಹೇಳುತ್ತೇನೆ.''

ಸಹನಾ ತಲೆಯಾಡಿಸಿದಳು.

ಕಾರು ಊರಿನತ್ತ ಚಲಿಸುತ್ತಿದೆ.

ಗುರು ಸಿಗರೇಟನ್ನು ಹಚ್ಚಿಕೊಂಡು, ''ಸಹನಾ... ಈ ತಾಯಿ-ಊಗನ ಬಗ್ಗೆ ನಿನಗೆ ತುಂಬಾ ವಿಶ್ವಾಸವಿದೆ. ಅವರೂ ಸಹ ತುಂಬಾ ಒಳ್ಳೆಯವರಂತೆ ಕಾಣುತ್ತಾರೆ.''

ಸಹನಾ ತಲೆಯಾಡಿಸಿದಳು.

''ವಾಸು ಎಲ್ಲಿಯವರೆಗೆ ಓದಿದ್ದಾನೆ?''

''ಎಸ್.ಎಸ್.ಎಲ್.ಸಿ.''

''ಓದನ್ನು ಯಾಕೆ ಮುಂದುವರೆಸಲಿಲ್ಲ?''

''ಅದೇನೋ ನನಗೆ ಗೊತ್ತಿಲ್ಲ.''

''ಇಲ್ಲಿ ಎಷ್ಟು ವರ್ಷಗಳಿಂದ ಇದ್ದಾನೆ?''

''ಇಪ್ಪತ್ತೆರಡು ವರ್ಷಗಳಿಂದ ಅಂತೆ.''

''ಅಂದರೆ ನೀನು ಹುಟ್ಟುವುದಕ್ಕೂ ಮೊದಲು?''

ಸಹನಾ ತಲೆಯಾಡಿಸಿದಳು.

''ಅನಸೂಯಮ್ಮ ಮುತ್ತೈದೆ ತಾನೆ?''

''ಆಕೆಯನ್ನು ನೋಡಿದರೆ ಗೊತ್ತಾಗೋಲ್ವೆ?''

''ಆಕೆಯ ಗಂಡ ಬದುಕಿದ್ದಾರೆ ತಾನೆ?''

''ಹಾಗಂತ ಅವರೇ ಹೇಳುತ್ತಾರೆ.''

''ಹಾಗಾದರೆ ಆಕೆಯ ಗಂಡ ಎಲ್ಲಿ?''

ಸಹನಾ ಜೋರಾಗಿ ನಿಟ್ಟುಸಿರು ಬಿಡುತ್ತಾ, ''ಅಯ್ಯೋ...ಅದೊಂದು ದೊಡ್ಡ

ಕತೆ. ಈಕೆಗೆ ಮೋಸಮಾಡಿ, ದೇಶಾಂತರ ಹೋಗಿದ್ದಾನಂತೆ. ಇಂತಹ ಹೆಣ್ಣಿನ ಜೊತೆ ಬಾಳಲು ಆ ಗಂಡ ಎನಿಸಿಕೊಳ್ಳುವ ಪ್ರಾಣಿಗೆ ಅದೃಷ್ಟವಿಲ್ಲ.''

ಕಾರು ಊರನ್ನು ತಲುಪಿತು.

ಸೊರಗೂರು ದೊಡ್ಡ ಗ್ರಾಮ. ಅಲ್ಲಿ ಸ್ಕೂಲು, ಆಸ್ಪತ್ರೆಗಳಲ್ಲದೆ ಪೋಲೀಸ್ ಸ್ಟೇಷನ್ ಸಹಾ ಇತ್ತು,

ಕಾರು ಬಂಗಲೆಯನ್ನು ತಲುಪಿತು.

ಕಾರಿನ ಹಾರ್ನ್ ಶಬ್ದ ಕೇಳಿದ ಕೂಡಲೇ ಮೊದಲು ತನ್ನ ಜೊತೆಯಿದ್ದ ಗುರುವನ್ನು ಎಲ್ಲರಿಗೂ ಪರಿಚಯ ಮಾಡಿಸಿದಳು.

ಸಹನಾ ತುಸು ವಯಸ್ಸಾಗಿದ್ದ ಇಬ್ಬರು ವ್ಯಕ್ತಿಗಳನ್ನು ತೋರಿಸಿ, ''ನನ್ನ ಸೋದರಮಾವಂದಿರು, ರಂಗಯ್ಯ, ಸೋಮಯ್ಯ ಅಂತ'' ಎಂದು ಹೇಳಿದಳು.

ರಂಗಯ್ಯ, ಸೋಮಯ್ಯ ಪರಸ್ಪರ ಮುಖ ನೋಡಿಕೊಂಡು ಕಾಟಾಚಾರಕ್ಕೆ ಕೈ ಮುಗಿದರು.

ಅವರ ಮುಖದಲ್ಲಿ ಅಸಹನೆ, ಅಸಮಾಧಾನವಿದ್ದು ಕಾಣುತ್ತಿದ್ದವು. ಗುರು ಬಂದಿದ್ದು ಅವರ್‍ಯಾರಿಗೂ ಹಿಡಿಸಿರಲಿಲ್ಲ.

ಅಲ್ಲಿ ಇನ್ನಿಬ್ಬರು ಯುವಕರಿದ್ದರು.

ಪರವಾಗಿಲ್ಲ ಎನ್ನಬಹುದಾದ ರೂಪವಂತರು.

ಸಹನಾ ಅವರ ಕಡೆ ನೋಡುತ್ತಾ, ''ಇವರಿಬ್ಬರು ರವಿ, ಮೋಹನ ಅಂತ. ನನ್ನ ಸೋದರಮಾವಂದಿರ ಮಕ್ಕಳು.''

ಅವರಿಬ್ಬರೂ ನಗುತ್ತಾ, ''ಹಲೋ'' ಎಂದು ಕೈ ಚಾಚಿದಾಗ ಗುರು ನಗುತ್ತಾ ವಿಶ್ ಮಾಡಿದನು.

ಅವರಿಬ್ಬರೂ ವಿದ್ಯಾವಂತ ತರುಣರು.

ರವಿ, ಮೋಹನ ಸಂದೇಹದಿಂದ ಗುರುವನ್ನು ನೋಡುತ್ತಿದ್ದರು. ಅವರಿಗೆ ಭಯ, ಗಾಬರಿ. 'ಬೇರೆ ಊರಿನಿಂದ ತನ್ನ ಜೊತೆಗೆ ಇವಳ್ಯಾಕೆ ಈ ಯುವಕನನ್ನು ಕರೆತಂದಿದ್ದಾಳೆ?

'ಗುರು ಬರೀ ಸ್ನೇಹಿತನೆ?'

'ಸ್ನೇಹವನ್ನೂ ಮೀರಿದ್ದು ಏನಾದರೂ ಇದೆಯೆ?'

'ಹಾಗೇನಾದರೂ ಇದ್ದರೆ ದೇವರೇ ಗತಿ!'

ಪಾಪ... ಶ್ರೀಮಂತಳಾದ ಸುಂದರ ಕನ್ಯೆ ಸಹನಾಳನ್ನು ಮದುವೆ ಮಾಡಿಕೊಳ್ಳಲೂ ರವಿ, ಮೋಹನ ತುದಿಗಾಲಲ್ಲಿ ನಿಂತಿದ್ದರು, ಕಾತರಿಸುತ್ತಿದ್ದರು.

ಅವರಿಬ್ಬರ ನಡುವೆಯೇ ಪೈಪೋಟಯಿತ್ತು.

ಪೈಪೋಟ ಅವರಿಬ್ಬರ ನಡುವೆ ಮಾತ್ರವಲ್ಲ!

ದೊಡ್ಡವರ ನಡುವೆಯೂ ಇತ್ತು!

ದೊಡ್ಡವರೆಂದರೆ ಸಹನಾಳ ಸೋದರಮಾವಂದಿರು, ಸಹನಾಳನ್ನು ತಮ್ಮ ಮಗನಿಗೇ ತಂದುಕೊಳ್ಳಬೇಕೆಂದು ಆಸೆಯಿರಿಸಿಕೊಂಡಿದ್ದರು. ಆದಕ್ಕಾಗಿ ಏನೆಲ್ಲಾ ಸರ್ಕಸ್ ನಡೆಸಿದ್ದರು.

ಆದರೆ ಸಹನಾ ಒಪ್ಪಬೇಕಲ್ಲ!

ಅವಳು ಇವರಿಬ್ಬರಲ್ಲಿ ಯಾರನ್ನು ಬಯಸಿದ್ದಾಳೊ?

ಯಾರನ್ನೂ ಬಯಸದೆ ಇದ್ದರೆ...?

ಎಲ್ಲರೂ ಬಂಗಲೆಯೊಳಗೆ ಬಂದರು.

ಸಹನಾಳ ಸೋದರಮಾವ ರಂಗಯ್ಯ, "ಸಹನಾ... ನಿನ್ನ ಸ್ನೇಹಿತ ಊಟ ಮಾಡಿ, ವಿಶ್ರಾಂತಿ ತೆಗೆದುಕೊಳ್ಳುತ್ತಿರಲಿ. ನೀನು ನಮ್ಮ ಜೊತೆ ಬಾ."

ಸಹನಾ ಗುರುವಿನ ಮುಖ ನೋಡಿದಳು.

ಗುರು ಹೋಗಲು ಸೂಚನೆ ನೀಡಿದ.

ಇದನ್ನು ಎಲ್ಲರೂ ಗಮನಿಸಿದರು.

ಮೊದಲೇ ಇದ್ದ ಸಂದೇಹ ಜಾಸ್ತಿಯಾಯಿತು. ಇದೇನು ತಮ್ಮ ತಂಗಿಯ ಮಗಳು ಪ್ರತಿಯೊಂದಕ್ಕೂ ಅವನ ಮುಖ ನೋಡುತ್ತಾಳಲ್ಲ! ಅವನು ಹೇಳದೆ ಇವಳು ಯಾವ ಕೆಲಸವನ್ನೂ ಮಾಡುವುದಿಲ್ಲವೆ?

ಎಲ್ಲರೂ ಕೊಠಡಿಗೆ ಬಂದರು.

ರಂಗಯ್ಯ, ಸೋಮಯ್ಯ ಕೋಪದಿಂದ ರೂಮಿನಲ್ಲಿ ಅತ್ತಿತ್ತ ಚಡಪಡಿಸುತ್ತಾ ತಿರುಗುತ್ತಿದ್ದಾರೆ.

ಸಹನಾ ಅವರನ್ನೇ ನೋಡುತ್ತಿದ್ದಾಳೆ.

ರಂಗಯ್ಯ ಕೋಪದಿಂದ, "ಸಹನಾ...ನಿನ್ನನ್ನು ಇಲ್ಲಿಗೆ ಕರೆಸಿಕೊಂಡಿದ್ದು ಯಾಕೆ ಹೇಳು?"

''ಅದನ್ನು ನೀವೇ ಹೇಳಬೇಕು.''

''ನಿನ್ನ ತಂದೆಯ ಬಗ್ಗೆ ಮಾತಾಡಲು ತಾನೆ?''

ಸಹನಾ ತಲೆಯಾಡಿಸಿದಳು.

''ಅವನು ಯಾರು?''

ಸಹನಾ ತಿರಸ್ಕಾರದಿಂದ, ''ಆಗಲೆ ಪರಿಚಯ ಮಾಡಿಸಿದೆನಲ್ಲ.''

''ಅವನನ್ನು ಈಗ್ಯಾಕೆ ಕರೆತಂದೆ?''

''ಮಾವಿನ ತೋಪನ್ನು ನೋಡಲಿ ಅಂತ.''

ಸೋಮಯ್ಯ ರೇಗುತ್ತಾ, ''ಅದಕ್ಕೆ ಇದು ಸಮಯವೆ?''

''ಈಗ ಅಂಥಾದ್ದು ಏನಾಗಿದೆ?''

''ನಿನ್ನ ತಂದೆ ಮನೆಗೆ ಬಂದಿಲ್ಲ.''

ಸಹನಾ ಕೋಪದಿಂದ, ''ಹಾಗಾದರೆ ಮೊದಲು ಅದರ ಬಗ್ಗೆ ಮಾತಾಡಿ. ನನ್ನ ಸ್ನೇಹಿತನ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ.''

ರಂಗಯ್ಯ, ''ನಮ್ಮ ಸಂಸಾರದ ಪರಿಸ್ಥಿತಿ ಸರಿಯಿಲ್ಲದೆ ಇರುವಾಗ ಅವನು ಇಲ್ಲಿರೋದು ನನಗಿಷ್ಟವಿಲ್ಲ.''

''ಸಹನಾ!''

ಸೋಮಯ್ಯ ಗದರಿಸಿದಾಗ ಸಹನಾ ಕೋಪದಿಂದ, ''ನಿಮಗೆ ನಿನ್ನ ತಂದೆಯ ಕಣ್ಮರೆಗಿಂತ ಉಳಿದ ವಿಷಯವೇ ಹೆಚ್ಚಾಗಿದೆ. ಪೋಲೀಸರಿಗೆ ದೂರು ನೀಡಿದ್ದೀರಿ?''

''ನೀನು ಬರಲಿ ಅಂತ ಕಾಯುತ್ತಿದ್ದೆವು.''

''ಮೊದಲು ಆ ಕೆಲಸ ಮಾಡಬೇಕಿತ್ತು.''

ರಂಗಯ್ಯ, ಸೋಮಯ್ಯ ಪರಸ್ಪರ ಮುಖ ನೋಡಿಕೊಂಡರು ನಂತರ, ''ವ್ಯಾಪಾರದ ನಿಮಿತ್ತ ಊರಿಗೆ ಹೋಗಿರಬಹುದು, ಬರಬಹುದು ಅಂತ ಸುಮ್ಮನಿದ್ದೆವು.''

''ಅಪ್ಪಯ್ಯ ಹೋಗಿದ್ದು ಯಾವಾಗ?''

''ಎರಡು ದಿನಗಳ ಹಿಂದೆ.''

''ಅಂದರೆ ಗುರುವಾರ...''

ಇಬ್ಬರೂ ತಲೆಯಾಡಿಸಿದರು.

''ಅವರು ಯಾವ ಊರಿಗೆ ಹೋಗುತ್ತೇನೆ ಅಂದರು?''

''ಮೈಸೂರಿಗೆ ಅಂತ.''

"ಇಲ್ಲಿಂದ ಎಷ್ಟು ಗಂಟೆಗೆ ಹೋದರು?"

"ಸಂಜೆ ಐದು ಗಂಟೆಗೆ."

ಸಹನಾ ಆಶ್ಚರ್ಯದಿಂದ, "ಏನು...? ಸಂಜೆಯ ಹೊತ್ತಿನಲ್ಲಿ...?"

ಇಬ್ಬರೂ ತಲೆಯಾಡಿಸಿದರು.

"ಬೇರೆ ಊರಿಗಾದರೆ ಅವರು ಸಂಜೆಯ ಹೊತ್ತಿನಲ್ಲಿ ಹೋಗೊಲ್ಲವಲ್ಲ!"

"ಅವತ್ತು ಹೋದರು ಸಹನಾ."

"ಕಾರಿನಲ್ಲಿ ಹೋದರೆ?"

"ಇಲ್ಲ. ಕೊನೆಯ ಬಸ್ಸಿಗೆ ಹೋಗುತ್ತೇನೆ ಅಂದರು."

"ನೀವ್ಯಾರೂ ಜೊತೆಯಲ್ಲಿ ಹೋಗಲಿಲ್ಲವೆ?"

"ಅವರೇ ಬರಬೇಡ ಅಂದರು."

ಸಹನಾ ಮುಂಗುರುಳನ್ನು ಹಿಂದಕ್ಕೆ ತೀಡಿಕೊಳ್ಳುತ್ತಾ, "ಅದು ಸರಿ...ಮೈಸೂರಿನಲ್ಲಿ ಇಂಥವರನ್ನು ನೋಡುತ್ತೇನೆ ಅಂತ ಏನಾದರೂ ಅಪ್ಪಯ್ಯ ಹೇಳಿದ್ದರೆ?"

"ಲಾಯರ್ ಸೀತಾರಾಮಯ್ಯನವರನ್ನ ನೋಡಬೇಕು ಅಂತ ನನ್ನ ಹತ್ತಿರ ಹೇಳಿದ್ದರು." ರಂಗಯ್ಯ ಹೇಳಿದ.

ಸಹನಾ ಹುಬ್ಬೇರಿಸಿ, "ಯಾಕಂತೆ?"

"ಕಾರಣ ಹೇಳಲಿಲ್ಲ."

"ಆಮೇಲೆ ಫೋನ್ ಮಾಡಿದ್ದಾರೆ?"

ಇಲ್ಲವೆಂಬಂತೆ ಇಬ್ಬರೂ ತಲೆಯಾಡಿಸಿದರು.

"ಅಪ್ಪಯ್ಯ ಮಾಮೂಲಿ ಸ್ಥಳಗಳಿಗೆ ಹೋಗುತ್ತಿದ್ದಲ್ಲೆಲ್ಲಾ ವಿಚಾರಿಸಿದ್ದೀರ ಮಾವ?"

"ವಿಚಾರಿಸಿದೆವು. ಅಲ್ಲಿಗೆಲ್ಲೂ ಹೋಗಿಲ್ಲವಂತೆ."

ಸಹನಾ ಹೊರಡುತ್ತಾ "ನನಗ್ಯಾಕೋ ಭಯ ಆಗ್ತಾ ಇದೆ. ಈ ಕೂಡಲೆ ಪೋಲೀಸ್ ಕಂಪ್ಲೇಂಟ್ ಕೊಡೋಣ."

ಇಬ್ಬರೂ ಒಪ್ಪಿಕೊಂಡರು.

* * *

ಅದು ಸಹನಾಳ ಬೆಡ್‌ರೂಮು.

ಸಹನಾ ಮೈಸೂರಿಗೆ ಟ್ರಂಕ್‌ಕಾಲ್ ಬುಕ್ ಮಾಡಿದ್ದಳು.

ಫೋನಿನ ಕರೆಗಂಟೆ ಮೊಳಗಿತು.

ಸಹನಾ ರಿಸೀವರ್ ಎತ್ತಿ, ''ಹಲೋ...''

ಎಕ್ಸ್‌ಚೇಂಜ್ ಆಪರೇಟರ್ ಧ್ವನಿ.

ಸಮಯ ಉರುಳುತ್ತಿತ್ತು.

''ಹಲೋ...''

ಅತ್ತಕಡೆಯಿಂದ ಗೊಗ್ಗರು ಧ್ವನಿ.

''ಯಾರು...? ಸೀತಾರಾಮಯ್ಯನವರೆ?''

''ಹೂಂ...ಕಣಮ್ಮ.''

''ಅಂಕಲ್, ನಾನು ಸಹನಾ ಮಾತಾಡ್ತಾ ಇರೋದು.''

''ಓ...ಸಹನಾ! ಚೆನ್ನಾಗಿದ್ದೀಯ?''

''ಹೂಂ...ಅಂಕಲ್.''

''ವಿಷಯ ಏನಮ್ಮ?''

''ಅಪ್ಪಯ್ಯ ಅಲ್ಲಿಗೆ ಬಂದಿದ್ದರೆ?''

''ಬಂದಿದ್ದರು ಕಣಮ್ಮ.''

ಸಹನಾ ಕುತೂಹಲದಿಂದ, ''ಯಾವತ್ತು?''

''ಗುರುವಾರ ರಾತ್ರಿ.''

''ಎಷ್ಟು ಗಂಟೆಗೆ ಅಂಕಲ್?''

''ರಾತ್ರಿ ಎಂಟು ಗಂಟೆಗೆ.''

''ಅಲ್ಲಿ ಎಷ್ಟು ಹೊತ್ತಿದ್ದರು?''

''ಹತ್ತು ಗಂಟೆಯತನಕ.''

''ಅಂಕಲ್...ಅಪ್ಪಯ್ಯ ಅಲ್ಲಿಗ್ಯಾಕೆ ಬಂದಿದ್ರು?''

''ವಿಲ್ ಮಾಡಿಸಲು.''

ಸಹನಾ ಬೆಚ್ಚಿಬೀಳುತ್ತಾ, ''ವಿಲ್ ಯಾಕೆ ಮಾಡಿದರು?''

''ಅದನ್ನು ನನಗೂ ಹೇಳಲಿಲ್ಲ.''

''ಅಲ್ಲಾ ಅಂಕಲ್...ನನ್ನ ತಂದೆಯ ಆಸ್ತಿಯೆಲ್ಲಾ ಅವರ ನಂತರ ಸಹಜವಾಗಿ

ಬರುವಾಗ ಅದಕ್ಕಾಗಿ ವಿಲ್ ಮಾಡುವ ಅಗತ್ಯವೇನಿತ್ತು?''

''ಅದೆ ನನಗೂ ಅರ್ಥ ಆಗ್ತಾ ಇಲ್ಲ.''

''ವಿಲ್‌ನಲ್ಲಿ ಏನು ಬರೆಸಿದ್ದಾರೆ?''

''ಹೂಂ...ಆಗಿದೆ.''

''ಅದು ಸರಿ...ವಿಲ್ ಮಾಡಿದ ಮೇಲೆ ಅಪ್ಪಯ್ಯ ಏನಂತ ಹೇಳಿದರು?'''

''ಊರಿಗೆ ಹೋಗುತ್ತೇನೆ ಅಂತ''

''ಅವತ್ತೇ ಊರಿಗೆ ಹಿಂತಿರುಗಿದರೆ?''

''ಊರಿಗೆ ಈಗಲೇ ಹೋಗಬೇಕು. ಮುಖ್ಯವಾದ ಕೆಲಸ ಇದೆ ಅಂತ ಇದ್ದರು. ಅದು ಸರಿ, ಇದನ್ನೆಲ್ಲಾ ಯಾಕೆ ಕೇಳ್ತಾ ಇದ್ದೀಯ? ನಿನ್ನ ತಂದೆ ಕ್ಷೇಮವಾಗಿದ್ದಾರೆ ತಾನೆ?''

''ಗೊತ್ತಿಲ್ಲ, ಅಂಕಲ್.''

''ಅರೆ, ಇದೇನಮ್ಮ ಹೀಗಂತೀಯ?''

''ಅಪ್ಪಯ್ಯ ಊರಿಗೇ ಬಂದಿಲ್ಲ.''

''ಮೈ ಗಾಡ್...! ಹೌದೇ?''

''ನಂಗೆ ಭಯ ಆಗ್ತಾ ಇದೆ ಅಂಕಲ್.''

''ಮೊದಲು ಪೋಲೀಸರಿಗೆ ದೂರು ಕೊಡಮ್ಮಪ.''

''ಕೊಡ್ತೀನಿ ಅಂಕಲ್.''

''ಹೆದರಬೇಡ. ನಿನ್ನ ತಂದೆ ಬಂದೆ ಬರ್ತಾರೆ.''

''ಅಂಕಲ್, ನಾಳೆ ಊರಿಗೆ ಬರ್ತೀರ?''

''ಖಂಡಿತಾ ಬರ್ತೀನಿ.''

ಫೋನ್ ಡಿಸ್‌ಕನೆಕ್ಟ್ ಆಯಿತು.

ಸಹನಾ ರಿಸೀವರನ್ನು ಕ್ರೆಡಲ್ ಮೇಲೆ ಇರಿಸಿ, ತನ್ನ ಸೋದರಮಾವಂದಿರ ಜೊತೆ ಪೋಲೀಸ್ ಸ್ಟೇಷನ್ನಿಗೆ ಹೋದಳು.

ಎಸ್. ಐ. ಶ್ರೀಕಾಂತ್ ರಾಜಾರಾಯರ ಬಗ್ಗೆ ಹತ್ತು ಹಲವಾರು ಪ್ರಶ್ನೆಗಳನ್ನು ಕೇಳಿ, ತನ್ನ ಸಂದೇಹ ನಿವಾರಿಸಿಕೊಂಡ.

ರಾಜಾರಾಯರ ಫೋಟೋ ಪಡೆದುಕೊಂಡು ಎಲ್ಲಾ ಕಡೆ ಹುಡುಕುವುದಾಗಿ ಭರವಸೆ ನೀಡಿದ.

* * *

ಪ್ರತ್ಯೇಕ ಕೊಠಡಿಯಲ್ಲಿ ಸಹನಾ ಮತ್ತು ಗುರು ಎದುರುಬದಿರಾಗಿ ಕುಳಿತುಕೊಂಡು, ರಾಜಾರಾಯರ ಕಣ್ಮರೆಯ ಬಗ್ಗೆ ಮಾತಾಡುತ್ತಿದ್ದಾರೆ.

''ಸಹನಾ...ನಿನ್ನ ತಂದೆ ವಿಲ್ ಯಾಕೆ ಮಾಡಿದರು?''

''ಅದೇ ನನಗೂ ಅರ್ಥವಾಗುತ್ತಿಲ್ಲ.''

''ಈ ಆಸ್ತಿಯೆಲ್ಲಾ ಯಾರಿಗೆ ಸೇರುತ್ತದೆ?''

''ಅವರ ಮಗಳಾದ ನನಗೆ ತಾನೆ?''

'4ಇದರಲ್ಲಿ ಬೇರೆ ಯಾರಿಗೂ ಪಾಲಿಲ್ಲವೆ?''

''ಅಂದರೆ...''

ಗುರು ನಗುತ್ತಾ, ''ನಿನ್ನ ಸೋದರಮಾವಂದಿರು ತುಂಬಾ ವರ್ಷಗಳಿಂದ ಇಲ್ಲೇ ಇದ್ದಾರಲ್ಲ. ಅವರಿಗೆ ಏನಾದರೂ...''

ಸಹನಾ ಕೋಪದಿಂದ, ''ದೊಡ್ಡವರ ಬಗ್ಗೆ ಹೀಗೆ ಮಾತಾಡುತ್ತೇನೆ ಅಂತ ತಪ್ಪು ತಿಳಿಯಬೇಡ ಗುರು.''

ಗುರು ನಗುತ್ತಾ, ''ಇಲ್ಲಾ, ಹೇಳು.''

''ನನ್ನ ಸೋದರಮಾವಂದಿರನ್ನು, ಅವರ ಸಂಸಾರದವರನ್ನು ನನ್ನ ತಂದೆ ಸಾಕುತ್ತಿಲ್ಲವೆ? ಆಸ್ತಿಯಲ್ಲಿ ಅವರಿಗೆ ಪಾಲು ಬೇರೆ ಕೊಡಬೇಕೆ?''

ಗುರು ಅವಳ ಕೈ ಅದುಮುತ್ತಾ, ''ಬೀ ಕಾಮ್ ಸಹನಾ. ನಿನ್ನ ತಂದೆ ಸೀಕ್ರೇಟ್ ವಿಲ್ ಯಾಕೆ ಮಾಡಿದರು ಅಂತ ನೀನು ತಿಳಿದುಕೊಳ್ಳಲು ಸಾಧ್ಯವೆ?''

''ಹೇಗೆ...? ಹೇಗೆ ತಿಳಿಯಲು ಸಾಧ್ಯ?''

''ನಿನ್ನ ಸೋದರಮಾವಂದಿರಿಂದ.''

''ನೋಡೋಣ. ಪ್ರಯತ್ನಿಸುತ್ತೇನೆ.''

ಗುರು ಮತ್ತೊಂದು ಸಿಗರೇಟ್ ಹೊತ್ತಿಸಿಕೊಳ್ಳುತ್ತಾ, ''ನಿನ್ನ ತಂದೆ ಮೈಸೂರಿನಲ್ಲಿರೋ ಲಾಯರ್ ಮನೆಗೆ ಗುರುವಾರ ರಾತ್ರಿ ಹೋದರು. ಅವರು ಅಲ್ಲಿಂದ ಊರಿಗೆ ಹೋಗುತ್ತೇನೆ ಅಂತ ಹೇಳಿ ಹೊರಟು ಬಂದರು. ಆದರೆ ಅವರು ಪುನಃ ಊರಿಗೆ ಬಂದರೇ, ಇಲ್ಲವೇ ಅಂತ ಗೊತ್ತಾಗೋದು ಹೇಗೆ?''

''ಏನೋ ಎಲ್ಲಾ ವಿಚಿತ್ರವಾಗಿದೆ''

''ವರು ಕಾರಿನಲ್ಲಿ ಹೋಗಿದ್ದರೆ.''

"ಇಲ್ಲ. ಬಸ್ಸಿನಲ್ಲಂತೆ."

ಗುರು ಗಡ್ಡಕೆರೆದುಕೊಳ್ಳುತ್ತಾ, "ಅಂದರೆ ಅವರು ಅದೇ ರಾತ್ರಿ ಊರಿಗೆ ಬಂದಿದ್ದರೋ, ಇಲ್ಲವೋ ಅಂತ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಸಮಸ್ಯೆ ಕಠಿಣವಾಗಿದೆ."

ಸಹನ ಮಾತಾಡಲಿಲ್ಲ. ಗುರು ಸ್ವಲ್ಪಹೊತ್ತು ಆಲೋಚಿಸಿ, "ಸಹನ...ನೀನು ನಿನ್ನ ಮಾವಂದಿರ ಹತ್ತಿರ ಮಾತಾಡುತ್ತಿರು. ನಾನು ಮಾವಿನ ತೋಟದ ಕಡೆ ಒಂದು ರೌಂಡ್ ಹೋಗಿ ಬರುತ್ತೇನೆ."

"ಏನು...? ಈ ರಾತ್ರಿ ಯಹೋಗುತ್ತೀನಲ್ಲೇ?"

"ರಹಸ್ಯಗಳು ಬಯಲಾಗದ ರಾತ್ರಿ ಯಹೋತ್ತೀನಲ್ಲಿ."

"ನನಗ್ಯಾಕೋ ಭಯವಾಗುತ್ತೆ."

ಗುರು ಅವಳ ಕೈ ಅದುಮುತ್ತಾ, "ಹೆದರಬೇಡ ಸಹನ. ನಿನ್ನ ಜೊತೆ ಸದಾ ನಾನಿರುತ್ತೇನೆ."

ಸಹನ ಕೃತಜ್ಞತೆಯಿಂದ ನೋಡಿದಳು. ಇಬ್ಬರು ರೂಮಿನಿಂದ ಹೊರಬಂದರು. ಅದೇ ರಾತ್ರಿ ಮಹಾರಹಸ್ಯವೊಂದು ಬಯಲಾಗುತ್ತದೆ ಎಂಬ ಅರಿವು ಇಬ್ಬರಿಗೂ ಇರಲಿಲ್ಲ.

**2**

ಅದು ಏಕಾಂತ ಕೊಠಡಿ.

ರಂಗಯ್ಯ ಮತ್ತು ಅವರ ಮಗ ಮೋಹನ ಕೊಠಡಿಯಲ್ಲಿದ್ದಾರೆ. ಕೋಪ, ಅಸಹನೆಯಿಂದ ಚಡಪಡಿಸುತ್ತಿದ್ದಾರೆ.

ಆಗ ರಾತ್ರಿ ಹನ್ನೊಂದರ ಸಮಯ.

ಮೋಹನ, "ಡ್ಯಾಡಿ...ನನಗ್ಯಾಕೋ ಆ ಗುರು ಮೇಲೆ ಸಂದೇಹ. ಅವನು...ಅವನು..."

ರಂಗಯ್ಯ ಅಸಹನೆಯಿಂದ, "ಏನೋ ಅದು ನಿನ್ನ ಅನುಮಾನದ ರಾಗ?"

ಮೋಹನ ಕೋಪದಿಂದ, "ಸಹನಾ ಅವನ ಜೊತೆ ತುಂಬಾ ಕ್ಲೋಸ್ ಆಗಿ ಮೂವ್ ಮಾಡ್ತಾಳೆ. ಗುರು ಅವಳ ಕೈ ಹಿಡಿದುಕೊಂಡಿದ್ದನ್ನೂ ಸಹಾ ನೋಡಿದೆ."

ರಂಗಯ್ಯ ಉತ್ತರಿಸಲಿಲ್ಲ, ಚಿಂತಿಸುತ್ತಿದ್ದಾರೆ.

''ನನಗೆ ಅನ್ನಿಸುತ್ತೆ ಅವರಿಬ್ಬರೂ ಪ್ರೀತಿಸುತ್ತಿರಬಹುದು ಅಂತ. ಹಾಗೇನಾದರೂ ಆದರೆ ನನ್ನ ಗತಿ ಏನು?''

ರಂಗಯ್ಯ ಗಂಭೀರವಾಗಿ, ''ಮೋಹನ, ನಿರಾಸೆಗೊಳ್ಳಬೇಡ, ಸಹನಾಳನ್ನು ಆಕರ್ಷಿಸಲು ಪ್ರಯತ್ನಿಸು.''

'4ಅವಳು ನನ್ನ ಕಡೆ ನೋಡೋದೇ ಇಲ್ಲ ಡ್ಯಾಡಿ.''

''ಒಂದು ಕೆಲಸ ಮಾಡು''

ಮೋಹನ ಆತುರದಿಂದ, ''ಜಹಾಂ...ಹೇಳಿ, ಹೇಳಿ.''

''ಒಂದಿಷ್ಟು ಕತ್ತೆ ಲದ್ದಿ ತಿನ್ನು.''

ಮೋಹನನ ಮುಖ ಪೆಚ್ಚಾಯಿತು.

ರಂಗಯ್ಯ ಕೋಪದಿಂದ, ''ಸುಂದರ ಯುವತಿಯನ್ನು ನೀನು ನಿನ್ನ ಕಡೆಗೆ ಆಕರ್ಷಿಸಲು ಪ್ರಯತ್ನಿಸಬೇಕು. ಆಗದೇ ಇದ್ದರೆ ಅವಳನ್ನು ರೇಪ್ ಮಾಡಿ, ಮದುವೆಯಾಗಬೇಕು.''

ಮೋಹನ್ ಗಾಬರಿಯಿಂದ, ''ಡ್ಯಾಡಿ...ನೀವು...ನೀವು ಏನು ಹೇಳ್ತಾ ಇದೀರ! ನಾನು ಅವಳನ್ನು...''

ರಂಗಯ್ಯ ಅಸಹನೆಯಿಂದ, ''ನೀನು ಇದೆ ರೀತಿ ನನ್ನ ಮುಂದೆ ರಾಗ ಎಳೆಯುತ್ತಾ ಕೂತಿರು. ಅಲ್ಲಿ ಇದೇ ಕೆಲಸವನ್ನು ರವಿ ಮಾಡಿರುತ್ತಾನೆ.''

ಮೋಹನ ಬೆಚ್ಚಿಬಿದ್ದನು.

ರವಿ ಈ ವಿಷಯದಲ್ಲಿ ಮೋಹನನಿಗೆ ಪ್ರತಿಸ್ಪರ್ಧಿ. ರವಿ ಬೇರೆ ಯಾರೂ ಅಲ್ಲ. ಸಹನಾಳ ಮತ್ತೊಬ್ಬ ಸೋದರಮಾವ ಸೋಮಯ್ಯನ ಮುದ್ದಿನ ಮಗ.

ಸಹನಾಳಿಗಾಗಿ ಹಾತೊರೆಯುತ್ತಿರುವ ವ್ಯಕ್ತಿ.

ರಂಗಯ್ಯ ವಿಸ್ಕಿಯನ್ನು ಸುರಿದುಕೊಳ್ಳುತ್ತಾ, ''ಮೋಹನ... ಎಚ್ಚರಿಕೆಯಿಂದ ಕೇಳು. ಸಹನಾಳನ್ನು ಬೇರೆ ಯಾರೇ ಮದುವೆ ಮಾಡಿಕೊಂಡರೂ ಸಹಾ ಈ ಆಸ್ತಿಯೆಲ್ಲಾ ನಮ್ಮ ಕೈಬಿಡುತ್ತದೆ. ನೀನು, ನಾನು ಕೇರ್ ಆಫ್ ಫುಟ್‌ಪಾತ್ ಆಗಬೇಕಾಗುತ್ತದೆ. ಬೀ ಕೇರ್‌ಫುಲ್.''

ಮೋಹನ ಅಸಹಾಯಕತೆಯಿಂದ, ''ಹಾಗಾದರೆ ನಾನು ಈಗ ಏನು ಮಾಡಲಿ ಡ್ಯಾಡಿ?''

"ಸಹನಾಳನ್ನು ಸದಾ ಹಿಂಬಾಲಿಸು. ಅವಳು ಏನೇನು ಮಾಡುತ್ತಾಳೋ ಗಮನಿಸು."

ಮೋಹನ ಸಂತೋಷದಿಂದ ತಲೆಯಾಡಿಸಿದನು.

ರಂಗಯ್ಯ ಗಡುಸಾಗಿ, "ಶತಾಯ ಗತಾಯ ಈ ಆಸ್ತಿ ನಮಗೆ ಸೇರಲೇಬೇಕು. ಇದಕ್ಕಾಗಿ ಎಷ್ಟು ಹೆಣಗಳು ಬೇಕಾದರೂ ಉರುಳಲಿ, ಸಹನಾಳ ಆಸ್ತಿ ನಿನಗೇ ಬರಬೇಕು."

ಮೋಹನ ಭಯದಿಂದ ನಡುಗಿದನು.

ಈ ಮಾತುಗಳನ್ನು ಬಾಗಿಲಿನ ಮರೆಯಲ್ಲಿ ನಿಂತುಕೊಂಡಿದ್ದ ವ್ಯಕ್ತಿಯೊಂದು ಕೇಳಿಸಿಕೊಂಡಿತ್ತು!

* * *

ರಾತ್ರಿ ಹನ್ನೊಂದರ ಸಮಯ.

'ಗವ್' ಎನ್ನುವ ಕತ್ತಲು ಆವರಿಕೊಂಡಿದೆ.

ಗಾಳಿ 'ಬರ್ರೋ' ಎಂದು ಬೀಳುತ್ತಿದೆ.

ಗುರು ಟಾರ್ಚನ್ನು ಹಿಡಿದು ನಡೆದುಕೊಂಡು ಬರುತ್ತಿದ್ದಾನೆ. ಎದುರಿಗೆ ಮಾವಿನ ತೋಪು ಕಾಣುತ್ತಿದೆ.

ಗುರು ಗೇಟಿನ ಹತ್ತಿರ ನಿಂತುಕೊಂಡ.

ಸುತ್ತಲೂ ದಟ್ಟವಾಗಿ ಮರಗಳು ಬೆಳೆದುಕೊಂಡಿವೆ. ಕತ್ತಲಿನ ಛಾಯೆಯಲ್ಲಿ ಭಯಂಕರ ಆಕಾರ ತಳೆದಂತೆ ಕಾಣುತ್ತಿದೆ.

ದೂರದಲ್ಲಿ ನಾಯಿ ಬೊಗಳುತ್ತಿರುವ ಶಬ್ದ.

ಕತ್ತಲಲ್ಲಿ ಮಿಣುಕು ಹುಳುಗಳು ಹಾರಡುತ್ತಿವೆ.

ಗುರು ಸದ್ದಾಗದಂತೆ ತೋಪಿನ ಗೇಟನ್ನು ತೆರೆದುಕೊಂಡು ಒಳಪ್ರವೇಶಿಸಿದ.

ತೋಪಿನ ಮನೆಯ ದೀಪ ಆರಿದೆ.

ಗುರು ಮಾವಿನ ಮರಗಳ ನಡುವೆ ನಡೆಯುತ್ತಿದ್ದಾನೆ. ನಿಧಾನವಾಗಿ, ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿದ್ದಾನೆ.

ಬೆಳಕು ತೂರಿ ಬರುತ್ತಿದೆ.

ಗುರು ಮನೆಯ ಹತ್ತಿರ ಬಂದು, ತೆರೆದಿದ್ದ ಕಿಟಕಿಯ ಮೂಲಕ ಬೆಳಕನ್ನು ಬೀರಿ ನೋಡಿದ.

ಹಾಲ್‌ನಲ್ಲಿ ವಾಸು ಮಲಗಿದ್ದಾನೆ.

ಅಡುಗೆ ಮನೆಯಲ್ಲಿ ಅನಸೂಯಮ್ಮ ಮಲಗಿದ್ದಾರೆ.

ಗುರು ಅಲ್ಲಿ ನಿಲ್ಲದೆ ಬೆಳಕನ್ನು ಬೀರುತ್ತಾ ಮರಗಳ ನಡುವೆ ನಡೆಯಲಾರಂಭಿಸಿದ.

ಆಗ ತೋಟದ ಮೂಲೆಗೆ ಬಂದ.

ಅದೇ ತೋಟದ ಕೊನೆಯ ಹಂತ.

ಅಲ್ಲಿ ನಿಂತುಕೊಂಡು ಎಲ್ಲಾ ಕಡೆ ಬೆಳಕನ್ನು ಬೀರುತ್ತಿರುವಾಗ ಅವನ ಕಣ್ಣಿಗೆ ಏನೋ ಕಂಡಿತು.

ಹತ್ತಿರ ಬಂದು ನೋಡಿದ.

ಅದು ಗಂಡಸರ ಚಪ್ಪಲಿ!

ಅದರ ಮೇಲೆ ಕರ್ಚಿಫ್ ಹಾಕಿ. ಅದನ್ನು ಕೈಗೆ ಎತ್ತಿಕೊಂಡು ನೋಡಿದ.

ಕೆಂಪು ಪಟ್ಟಿಯಿದ್ದ ಬಾಟಾ ಶೂ ಕಂಪನಿಯ ಚಪ್ಪಲಿ. ಅದು ತುಂಬಾ ದುಬಾರಿ ಬೆಲೆಯ ಚಪ್ಪಲಿ.

ಅಲ್ಲೇ ತುಂಬಾ ಎಚ್ಚರಿಕೆಯಿಂದ ನೋಡಿದ. ದೊಡ್ಡ ಮಾವಿನ ಮರದಿಂದ ತುಸು ಮುಂದೆ ಪೇಪರ್ ಉಂಡೆಯೊಂದು ಬಿದ್ದಿರುವುದು ಕಂಡಿತು.

ಗುರು ಅದನ್ನು ಬಿಡಿಸಿ ನೋಡಿದ.

ಗುರು ಬೆಚ್ಚಿಬಿದ್ದ!

ಅದು ರಿಸರ್ವೇಷನ್ ಟಿಕೆಟ್. ರಾತ್ರಿ ಹತ್ತು ಗಂಟೆಗೆ ಮೈಸೂರಿನಿಂದ ಸೊರಗೂರಿಗೆ ಹೊರಡುವ ಕೊನೆಯ ಬಸ್ಸಿನ ರಿಸರ್ವೇಷನ್ ಟಿಕೆಟ್!

ದಿನಾಂಕ ನೋಡಿದ. ಅದರ ಪ್ರಕಾರ ಅದನ್ನು ಗುರುವಾರ ರಾತ್ರಿಯ ಪ್ರಯಾಣಕ್ಕೆ ಕಾದಿರಿಸಲಾಗಿತ್ತು!

* * *

ಕಾಲಿಂಗ್ ಬೆಲ್ ಶಬ್ದ ಮಾಡಿತು. ದಿಂಬನ್ನು ತನ್ನ ತೊಡೆಗಳ ನಡುವೆ ಸೇರಿಸಿಕೊಂಡು ಸಹನಾಳ ಬಗ್ಗೆ ರವಿ ಕನಸು ಕಾಣುತ್ತಿದ್ದ.

ಹಾಸಿಗೆ ಸುಖದ ರಂಗುರಂಗಿನ ಕನಸು.

**ಕರ್ಕಶವಾದ ಕಾಲಿಂಗ್ ಬೆಲ್ ಶಬ್ದ!**

''ಛೆ...ಛೆ! ಎಂತಹ ರಸಭಂಗ!''

ರವಿ ಗೊಣಗುತ್ತಲೇ ಎದ್ದು ಬಂದ. ಇವನ ತಂದೆ ಸೋಮಯ್ಯ ರೂಮಿಗೆ ಬಂದು ಮಗನಿಗೆ ಗೀತೋಪದೇಶ ಮಾಡಿದರು. ತಲೆ ಕೊರೆದರು.

''ಸಹನಾಳನ್ನು ಒಲಿಸಿಕೋ, ನೀನು ದಿಂಬನ್ನು ತಬ್ಬಿಕೊಂಡು ಕನಸು ಕಾಣುತ್ತಾ ಕುಳಿತಿದ್ದರೆ, ನಿನಗೆ ಕೊನೆಗೆ ದಿಂಬು ಮಾತ್ರ ಉಳಿಯುತ್ತದೆ. ಸಹನಾ ಮೋಹನನನ್ನು ಒಲಿಯುತ್ತಾಳೆ.''

ಸಹನಾಳಂತಹ ಯುವತಿಯನ್ನು ಯಾವ ರೀತಿ ಒಲಿಸಿಕೊಳ್ಳಬೇಕೆಂದು ಸೋಮಯ್ಯ ಉಪದೇಶಿಸಿದರು.

ಸೋಮಯ್ಯ ಹೋಗಿ ಹತ್ತು ನಿಮಿಷಗಳಾಗಿದ್ದವು.

ಪುನಃ ಕಾಲಿಂಗ್ ಬೆಲ್‌ನ ಶಬ್ದ ಕೇಳಿ ತಂದೆಯೇ ಬಂದಿರಬೇಕು ಎಂದುಕೊಂಡು ಕೋಪದಿಂದಲೇ ಬಾಗಿಲನ್ನು ತೆರೆದವನು, ಬೆಚ್ಚಿ ಹಿಂದೆ ಸರಿದ.

ಇಲ್ಲ...ಇಲ್ಲ...ನಂಬಿಕೆಯೇ ಬರುತ್ತಿಲ್ಲ.

ಕಣ್ಣುಗಳನ್ನು ಉಜ್ಜಿಕೊಂಡು ನೋಡಿದ.

ಸಂದೇಹವೇ ಇಲ್ಲ. ಅವಳು ಸಹನಾ!

ಯಾರ ಬಗ್ಗೆ ಕನಸು ಕಾಣುತ್ತಾ ದಿಂಬನ್ನು ಹಿಸುಕುತ್ತಿದ್ದನೋ ಅವಳೇ ಇವನೆದುರು ಪ್ರತ್ಯಕ್ಷಳಾಗಬೇಕೆ?

'ಈ ರಾತ್ರಿಯಲ್ಲಿ...ತನ್ನ ಬೆಡ್ ರೂಮಿನಲ್ಲಿ!'

'ಇದು...ಇದು ಕನಸಲ್ಲ ತಾನೆ?'

ಸಹನಾ ಒಳಗೆ ಪ್ರವೇಶಿಸಿದಳು.

ಸಹನಾಳನ್ನೇ ಬೆರಗಾಗಿ ನೋಡುತ್ತಿದ್ದಾನೆ. ಏಕೆಂದರೆ ಅವಳು ಈಗ ಗುಲಾಬಿ ಬಣ್ಣದ ಪಾರದರ್ಶಕ ನೈಟಿ ಧರಿಸಿದ್ದಳು.

ಚೆಲುವೆಯ ಚೆಲುವು ಕಾಣುತ್ತಿದೆ.

ದಂತದ ಬಣ್ಣದ ಆಕರ್ಷಕ ಮೈಮಾಟ.

ವಿಶ್ವಾಮಿತ್ರನ ತಪಸ್ಸನ್ನು ಕೆಡಿಸಲು ಬಂದಿರುವ ಮೇನಕೆಯಂತೆ ಇವನೆದುರು ನಿಂತಿದ್ದಾಳೆ.

''ರವಿ...ನಾನ್ಯಾಕೆ ಬಂದೆ ಗೊತ್ತೆ?''

ರವಿ ಆಸೆಯಿಂದಲೇ ಅವಳತ್ತ ನೋಡಿದ.

''ನಿನ್ನ ಹತ್ತಿರ ಮುಖ್ಯವಾದ ವಿಷಯ ಮಾತಾಡಲು.''

ರವಿ ಆಶ್ಚರ್ಯದಿಂದ ನೋಡಿದನು.

ಸಹನಾ ತನ್ನ ಚಿಗುರು ಉಗುರನ್ನು ಕಡಿಯುತ್ತಾ, ''ರವಿ...ನನ್ನ ತಂದೆಯ ಜೊತೆ ನೀನು ಸದಾ ಇರುತ್ತಿದ್ದೆ. ಅವರ ಬಹುಪಾಲು ಕೆಲಸಗಳಲ್ಲಿ ಸಹಾಯಕನಾಗಿರುತ್ತಿದ್ದೆ. ಅವರು ನಿನ್ನನ್ನೂ ನಂಬಿದ್ದರು.''

ರವಿ ಸಂತೋಷದಿಂದ ಉಬ್ಬಿಹೋದನು. ಸಹನಾ ಹೇಳಿದ್ದರಲ್ಲಿ ಅತಿಶಯವೇನಿರಲಿಲ್ಲ. ನೋಡಲು ಚೆನ್ನಾಗಿದ್ದ ಹಾಗೂ ಬುದ್ಧಿವಂತನಾದ ರವಿಯನ್ನು ರಾಜಾರಾಯರು ಮೆಚ್ಚಿಕೊಂಡಿದ್ದರು. ಎಲ್ಲೇ ಹೋಗಬೇಕಾದರೂ ಅವನನ್ನು ಜೊತೆಗೆ ಕರೆದುಕೊಂಡು ಹೋಗುತ್ತಿದ್ದರು.

ಸಹನಾ ದುಃಖ, ಗಾಬರಿಯಿಂದ, ''ಅಪ್ಪಯ್ಯ ಮನೆಗೆ ಬಂದಿಲ್ಲ. ನನಗೆ ಭಯವಾಗಿದೆ.. ಅವರ‍್ಯಾಕೆ ಮನೆಗೆ ಬಂದಿಲ್ಲ ಅಂತ ನಿನಗೇನಾದರೂ ಗೊತ್ತೆ?''

ರವಿ ಇಲ್ಲವೆಂಬಂತೆ ತಲೆಯಾಡಿಸಿದನು.

''ಆತುರ ಪಡಬೇಡ. ಆಲೋಚಿಸಿ ಹೇಳು.'',ರವಿ ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ ಗಂಭೀರವಾಗಿ, ''ಸಹನಾ...ಇತ್ತೀಚೆಗೆ ಮಾವ ಸದಾ ಮಂಕಾಗಿರುತ್ತಿದ್ದರು. ಯಾವುದೋ ಚಿಂತೆ ಅವರನ್ನು ಕಾಡುತ್ತಿತ್ತು.''

ಸಹನಾ ಹುಬ್ಬೇರಿಸಿ, ''ಏನು...? ಅಪ್ಪಯ್ಯನನ್ನು ಚಿಂತೆ ಕಾಡುತ್ತಿತ್ತೆ? ಏನದು ರವಿ?''

''ನನಗದನ್ನು ಅವರು ಹೇಳಿರಲಿಲ್ಲ.''

ಅದೇನೆಂದು ಊಹಿಸಬಲ್ಲೆಯಾ?''

ರವಿ ಗಂಭೀರವಾಗಿ, ''ಇನ್ನೊಬ್ಬರನ್ನು ಕಾಡುತ್ತಿರುವ ಚಿಂತೆಯನ್ನು ಊಹಿಸಿ ಹೇಳಲು ಸಾಧ್ಯವೆ?''

ಸಹನಾ ತಲೆಯಾಡಿಸುತ್ತಾ, ''ಓಕೆ...ಓಕೆ...ನೀನು ಅಪ್ಪಯ್ಯನನ್ನು ಕೊನೆಯಲ್ಲಿ ನೋಡಿದ್ದು ಯಾವಾಗ?''

''ಗುರುವಾರ ಸಂಜೆ.''

''ಎಷ್ಟು ಹೊತ್ತಿನಲ್ಲಿ?''

''ಸಂಜೆ ಐದು ಗಂಟೆ ಇರಬೇಕು.''

''ಅವರು ಮೈಸೂರಿಗೆ ಹೊರಟದ್ದು ವಿಚಾರ ಗೊತ್ತಿತ್ತೆ?''

''ಅದು ಮೊದಲು ಗೊತ್ತಾಗಿದ್ದೇ ನನಗೆ.''

''ಕಾರಣ ಏನು ಅಂತ ಹೇಳಿದ್ದರೆ?''

ರವಿ ಅವಳನ್ನೇ ನೋಡುತ್ತಾ, ''ಮೈಸೂರಿನ ಲಾಯರ್ ಸೀತಾರಾಮಯ್ಯನವರ ಹತ್ತಿರ ವಿಲ್ ಮಾಡಿಸಬೇಕು ಅಂದಿದ್ದರು.''

''ಈಗ ವಿಲ್‌ನ ಅಗತ್ಯ ಏನಿತ್ತು ರವಿ?''

ರವಿ ನಗುತ್ತಾ, ''ಅದು ನನಗೆ ಹೇಗೆ ಗೊತ್ತಾಗಲು ಸಾಧ್ಯ?''

''ನಿನಗೆ ಇನ್ನೇನಾದರೂ ಹೇಳಿದ್ದರೆ?''

ರವಿ ಇಲ್ಲವೆಂಬಂತೆ ತಲೆಯಾಡಿಸಿದನು.

ಸಹನಾ ಸ್ವಲ್ಪ ಹೊತ್ತು ಕುಳಿತಿದ್ದು, ಬಳಿಕ ಹೊರಡುತ್ತಾ, ''ರವಿ...ನಾನು ಅಪ್ಪಯ್ಯನನ್ನು ಎಷ್ಟು ಹಚ್ಚಿಕೊಂಡಿದ್ದೇನೆ ಅಂತ ನಿನಗೆ ಗೊತ್ತಿದೆ. ಅವರನ್ನು ಪತ್ತೆ ಮಾಡಲು ನೀನೇ ಸಹಾಯ ಮಾಡಬೇಕು.''

ರವಿ ಆಗಲಿ ಎಂಬಂತೆ ತಲೆಯಾಡಿಸಿದನು.

ಸಹನಾ ಸ್ವಲ್ಪ ಹೊತ್ತು ಕುಳಿತಿದ್ದು, ಬಳಿಕ ಹೊರಡುತ್ತಾ, ''ರವಿ...ನಾನು ಅಪ್ಪಯ್ಯನನ್ನು ಎಷ್ಟು ಹಚ್ಚಿಕೊಂಡಿದ್ದೇನೆ ಅಂತ ನಿನಗೆ ಗೊತ್ತಿದೆ. ಅವರನ್ನು ಪತ್ತೆ ಮಾಡಲು ನೀನೇ ಸಹಾಯ ಮಾಡಬೇಕು.''

ರವಿ ಆಗಲಿ ಎಂಬಂತೆ ತಲೆಯಾಡಿಸಿದನು.

ಸಹನಾ ಬಾಗಿಲಿನ ತನಕ ಬಂದಾಗ ರವಿ, ''ಸಹನಾ...ನಿನ್ನ ತಂದೆ ಇನ್ನೊಂದು ವಿಚಾರ ಹೇಳಿದ್ದರು.''

ಸಹನಾ ಕುತೂಹಲದಿಂದ ನೋಡಿದಳು.

ರವಿ ಅವಳ ಹತ್ತಿರ ಬಂದು, ''ನಿನ್ನ ತಂದೆಗೆ ತಪ್ಪತ್ತೈದು ಲಕ್ಷ ರೂಪಾಯಿ ನಗದು ಹಣ ಬಂದಿತಂತೆ.''

''ಯಾವುದಾದರೂ ಆಸ್ತಿ ಮಾರಿದರೆ?''

ರವಿ ಇಲ್ಲವೆಂಬಂತೆ ತಲೆಯಾಡಿಸಿದನು.

''ಆಸ್ತಿ ಮಾರದೆ ಇಷ್ಟೊಂದು ಹಣ ಹೇಗೆ ಬಂದಿತು? ವ್ಯಾಪಾರದಲ್ಲಿ ಒಂದೇ

ಬಾರಿಗೆ ಇಪ್ಪತ್ತೈದು ಲಕ್ಷ ಲಾಭ ಬರುವಂತಹ ವ್ಯಾಪಾರ ಮಾಡುತ್ತಿರಲಿಲ್ಲವಲ್ಲ!''

''ಅದೇನೋ ನನಗೆ ಗೊತ್ತಿಲ್ಲ.''

''ನಿನ್ನ ಹತ್ತಿರ ಇನ್ನೇನು ಹೇಳಿದರು?''

''ಇಪ್ಪತ್ತೈದು ಲಕ್ಷ ಬಂದಿದೆ. ಮೈಸೂರಿಗೆ ಹೋಗಿ ಅದರ ಬಗ್ಗೆ ಫಿಲ್ ಮಾಡಬೇಕು ಅಂತ ಅಂದರು.''

ಸಹನಾಳಿಗೆ ಭಯ, ಆಶ್ಚರ್ಯವಾಗುತ್ತಿದೆ. 'ತಂದೆಗೆ ಇಪ್ಪತ್ತೈದು ಲಕ್ಷ ಯಾರಿಂದ ಬಂತು? ಅದನ್ನು ಫಿಲ್ ಮಾಡಿ, ಯಾರ ಹೆಸರಿಗೆ ಮಾಡಿದ್ದಾರೆ?'

'ಇದೇನು, ಎಲ್ಲಾ ನಿಗೂಢವಾಗಿದೆಯಲ್ಲ!'

ರವಿ ಹತ್ತಿರ ಬಂದು ಸಹನಾಳ ತುಟಿಗಳನ್ನೇ ನೋಡುತ್ತಾ ಆಸೆಯಿಂದ, '4ಸಹನಾ...ನಿನ್ನ ತಂದೆಗೆ ಇನ್ನೊಂದು ಆಸೆ ಇತ್ತು. ಅದು ನಿನಗೂ ಗೊತ್ತಿದೆ.''

ಸಹನಾ ಅವನತ್ತ ನೋಡಿದಳು.

''ನನ್ನನ್ನೇ ಅವರ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದು ಆಸೆಯಿತ್ತು. ಅದನ್ನು ನಿನಗೂ ಹೇಳಿದ್ದಾರೆ.''

ಸಹನಾಳ ಮುಖ ನಾಚಿಕೆಯಿಂದ ಕೆಂಪೇರಿತು. ಅವಳು ಅವನ ನೋಟ ಎದುರಿಸಲಾರದೆ ತಲೆ ತಗ್ಗಿಸಿದಳು.

ರವಿ ಅವಳ ಕೈ ಹಿಡಿದುಕೊಂಡು, ''ಸಹನಾ...ನಿನ್ನ ಅಭಿಪ್ರಾಯ ಏನು ಅಂತ ಗೊತ್ತಾಗಲಿಲ್ಲ.''

ಸಹನಾ ಅವನ ಕೈ ಬಿಡಿಸಿಕೊಂಡು, ''ಅಪ್ಪಯ್ಯ ಕಾಣದೆ ಇರುವುದರಿಂದ ನನ್ನ ಮನಸ್ಸು ಗೊಂದಲಗೊಂಡಿದೆ. ಈ ಸಮಯದಲ್ಲಿ ನಾನು ಏನನ್ನೂ ಹೇಳಲಾರೆ. ನನ್ನ ತಂದೆಯ ಆಯ್ಕೆ ಸರಿ ಅಂತ ನನ್ನ ಮನಸ್ಸಿಗೆ ಅನ್ನಿಸಿದರೆ ನಾನು ಖಂಡಿ ಬೆಲೆ ಕೊಡುತ್ತೇನೆ.''

ರವಿ ಸಂತೋಷ, ಗಾಬರಿಯಿಂದ ತಡವರಿಸುತ್ತಾ, ''ಅಂದರೆ...ಅಂದರೆ...ನೀನು...ನೀನು...''

''ನನಗೆ ಕಾಲಾವಕಾಶ ಕೊಡು.''

''ಹಾಗಲ್ಲ, ನಿನ್ನ ಜೊತೆ ಬಂದಿರೋ ಗುರು.''

ಸಹನಾ ನಗುತ್ತಾ, ''ಹೀ ಈಸ್ ಒನ್ಲಿ ಮೈ ಫ್ರೆಂಡ್. ಅವನು ನಿನಗೆ ಖಂಡಿತಾ ಪ್ರತಿಸ್ಪರ್ಧಿಯಾಗಲಾರ'' ಎಂದು ಸರಸರನೆ ಹೊರಬಂದಳು.

ರವಿ ನಿಂತಲ್ಲೇ ಕನಸು ಕಾಣಲಾರಂಭಿಸಿದನು. ಇವರಿಬ್ಬರ ಮಾತುಗಳನ್ನು ವ್ಯಕ್ತಿಯೊಂದು, ಮರೆಯಲ್ಲಿ ನಿಂತುಕೊಂಡು ಕೇಳಿಸಿಕೊಂಡಿತ್ತು!

ಆ ವ್ಯಕ್ತಿ ಅಲ್ಲಿಂದ ಮರೆಯಾಯಿತು!

3

ಗುರು ಬೆಳಕನ್ನು ಬೀರುತ್ತಾ ಮಾಪಿನ ತೋಪಿನ ಈಶಾನ್ಯ ದಿಕ್ಕಿಗೆ ಬಂದ. ಚುರುಕಾಗಿ ನೋಡುತ್ತಿದ್ದಾನೆ.

ಅವನನ್ನು ಏನೋ ಸಂದೇಹ ಕಾಡುತ್ತಿದೆ.. 'ರಾಜಾರಾಯರು ಊರಿಗೆ ಬಂದಿದ್ದಾರೆ. ಅವರು ನೇರವಾಗಿ ಬಂಗಲೆಗೆ ಹೋಗದೆ ಮಾಪಿನ ತೋಪಿಗೆ ಬಂದಿದ್ದಾರೆ.'

'ಅದಕ್ಕೆ ಸಾಕ್ಷಿ ರಿಸರ್ವೇಷನ್ ಟಿಕೆಟ್!'

'ಮರದ ಕೆಳಗೆ ಸಿಕ್ಕಿರುವ ಅವರ ಚಪ್ಪಲಿ!'

'ಮೈಸೂರಿನಿಂದ ರಾತ್ರಿ ಬಂದವರು ನೇರವಾಗಿ ಬಂಗಲೆಗೆ ಹೋಗದೆ ಮಾಪಿನ ತೋಪಿಗೆ ಏಕೆ ಬಂದರು?'

'ಇಲ್ಲಿಂದ ಪುನಃ ಎಲ್ಲಿಗೆ ಹೋದರು?'

ಈಶಾನ್ಯ ದಿಕ್ಕಿನಲ್ಲಿ ನಡೆಯುತ್ತಿರುವಾಗ ಅವನ ಕಾಲಿಗೆ ಏನೋ ತಗುಲಿತು. ಕಾಲಿನಿಂದ ಅದುಮಿದನು.

ತುಸು ಒಳಕ್ಕೆ ಸರಿಯಿತು.

ನೆಲದ ಆ ಭಾಗ ಸಡಿಲವಾಗಿದೆ.

ಗುರುವಿಗೆ ಅನುಮಾನ ಬಂದು ನೆಲದತ್ತ ಬಾಗಿ. ಉಬ್ಬಿಕೊಂಡಿದ್ದ ಆ ಭಾಗವನ್ನು ಕೈಯಿಂದ ಕೆದಕಲಾರಂಭಿಸಿದನು.

ಸಡಿಲಗೊಂಡಿದ್ದ ಮಣ್ಣು ಹೊರಬಂದಿತು.

ಗುರು ಸುತ್ತಲೂ ನೋಡಿದನು. ಮಾಪಿನ ಮರವೊಂದರ ಕೆಳಗೆ ತೋಪಿನ ಕೆಲಸಕ್ಕೆ ಉಪಯೋಗಿಸಿ ಇರಿಸಿದ್ದ ಹಾರೆ, ಗುದ್ದಲಿ, ಪಿಕಾಸಿ, ಮಂಕರಿ ಕಂಡಿತು.

ಹಾರೆ, ಗುದ್ದಲಿ ಎತ್ತಿಕೊಂಡು ಬಂದನು.

ಎರಡು ನಿಮಿಷಗಳು ಕಳೆದವು.

ಗಾಳಿ 'ಬರ್ರೋ' ಎಂದು ಬೀಸುತ್ತಿದೆ.

ಮಾವಿನ ತೋಪಿನ ಏಕಾಂತ ರಾತ್ರಿಯ ನಿಶ್ಯಬ್ದತೆಯನ್ನು ಸೀಳಿಕೊಂಡು, 'ಕಚ್...ಕಚ್' ಎಂಬ ಶಬ್ದ ನಿರಂತರವಾಗಿ ಕೇಳಿ ಬರಲಾರಂಭಿಸಿತು.

ಗುರು ಹಾರೆಯಿಂದ ಅಗೆಯುತ್ತಿದ್ದಾನೆ.

ಅರ್ಧ ಗಂಟೆ ಕಳೆಯಿತು.

ಬೆವರನ್ನು ಒರೆಸಿಕೊಂಡು, ಒಂದು ಸಿಗರೇಟನ್ನು ಸೇದಿ, ಸುಧಾರಿಸಿಕೊಂಡು ಪುನಃ ಅಗೆಯಲಾರಂಭಿಸಿದನು.

'ಕಚ್...ಕಚ್' ಎಂಬ ಶಬ್ದ!

ಮಣ್ಣನ್ನೆಲ್ಲಾ ಹೊರಗೆ ಹಾಕಿದನು.

ಗುಂಡಿಯಲ್ಲಿ ಹೆಣವಿತ್ತು!

ಗುರು ಗುಂಡಿಯೊಳಗೆ ಇಳಿದು, ಹೆಣದ ಮುಖಕ್ಕೆ ಮೆತ್ತಿಕೊಂಡಿದ್ದ ಮಣ್ಣನ್ನು ಒರೆಸಿದನು.

ಅದು ರಾಜಾರಾಯರ ಹೆಣ!

**4**

ಬೆಳಗಿನ ಎಂಟು ಗಂಟೆಯ ಸಮಯ.

ಬಿಸಿಲಿನ ಪ್ರಖರತೆ ತೀವ್ರವಾಗಿದೆ.

ಅದು ಸೊರಗೂರಿನ ಮಾವಿನ ತೋಪು!

ಈಗ ಗೇಟಿನ ಮುಂದೆ ಪೋಲೀಸ್ ಜೀಪು ನಿಂತುಕೊಂಡಿದೆ. ಜನಗಳ ದೊಡ್ಡ ಗುಂಪೇ ನೆರೆದಿದೆ.

ಜನಗಳ ಸಂಖ್ಯೆ ಜಾಸ್ತಿಯಾಗುತ್ತಲೇ ಇದೆ. ಏಕೆಂದರೆ ಆ ಊರಿನ ಶ್ರೀಮಂತ, ಗಣ್ಯ ವ್ಯಕ್ತಿಯಾಗಿದ್ದ ರಾಜಾರಾಯರು ಕೊಲೆಯಾಗಿದ್ದಾರೆ. ಹೆಣ ಮಾವಿನ ತೋಪಿನಲ್ಲಿ ಸಿಕ್ಕಿದೆ.

ಹೆಣ ಗುಂಡಿಯಲ್ಲಿ ಬಿದ್ದಿದೆ.. ಪಿ.ಸಿ.ಗಳು ಟೇಪನ್ನು ಹಿಡಿದುಕೊಂಡು ಳೆಯುತ್ತಿದ್ದಾರೆ.

ಕ್ಯಾಮೆರಾ ಬೆಳಕು ಚೆಲ್ಲುತ್ತಿದೆ.

ಎಸ್.ಐ. ಶ್ರೀಕಾಂತ್ ಅಲ್ಲಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾನೆ.

ಸಹನಾ ಬಿಕ್ಕಳಿಸಿಕೊಂಡು ಅಳುತ್ತಿದ್ದಾಳೆ. ಗುರು ಅವಳನ್ನು ತಬ್ಬಿಕೊಂಡು ಸಂತೈಸುತ್ತಿದ್ದಾನೆ.

ಪಾಪ... ಅವಳಿಗೆ ತಂದೆಯಲ್ಲದೆ ಫ್ರೆಂಡ್, ಫಿಲಾಸಫರ್, ಗೈಡ್ ಎಲ್ಲಾ ಆಗಿದ್ದರು. ಅವಳನ್ನು ಅತಿ ಪ್ರೀತಿಯಿಂದ, ಕಳಕಳಿಯಿಂದ ನೋಡಿಕೊಳ್ಳುತ್ತಿದ್ದ ವ್ಯಕ್ತಿ ಇನ್ನಿಲ್ಲ.

ಅದೂ ಸಹಜ ಸಾವಲ್ಲ!

ನಿಗೂಢ ರೀತಿಯ ಕೊಲೆ!

ಸೋಮಯ್ಯ, ರಂಗಯ್ಯ ಮೂಲೆಯಲ್ಲಿ ನಿಂತಿದ್ದಾರೆ. ಅವರೂ ಸಹಾ ವಿಪರೀತ ಗಾಬರಿಯಾಗಿದ್ದಾರೆ. ಅದೇನೋ ಭಯ, ಗೊಂದಲದಿಂದ ಚಡಪಡಿಸುತ್ತಿದ್ದಾರೆ.

ರವಿ, ಮೋಹನ ಪೆಚ್ಚಾಗಿ ನಿಂತಿದ್ದಾರೆ. ಪಾಪ... ಅನಿರೀಕ್ಷಿತವಾದ ಭಯಾನಕ ಘಟನೆಯಿಂದ ತತ್ತರಿಸಿ ಹೋಗಿದ್ದಾರೆ!

ಎಸ್.ಐ. ಶ್ರೀಕಾಂತ್ ಈಗ ಸಹನಾಳ ಪಕ್ಕದಲ್ಲಿ ನಿಂತಿದ್ದ ಗುರುವನ್ನೇ ನೋಡುತ್ತಾ, ''ನಿಮ್ಮ ಹೆಸರೇನು?''

''ಗುರುಮೂರ್ತಿ ಅಂತ.''

''ನೀವು ಈ ಊರಿಗೆ ಬಂದ ಕಾರಣವೇನು?''

''ಸಹನಾಳೇ ಬಲವಂತವಾಗಿ ಕರೆತಂದಳು.''

ಎಸ್.ಐ. ಶ್ರೀಕಾಂತ್ ಸಹನಾಳ ಕಡೆ ನೋಡಿದಾಗ, ಅವಳು 'ಹೌದು' ಎನ್ನುವಂತೆ ತಲೆಯಾಡಿಸಿದಳು.

''ನೀವು ಇಲ್ಲಿಗೆ ರಾತ್ರಿ ಎಷ್ಟು ಹೊತ್ತಿಗೆ ಬಂದ್ರಿ?''

''ಹನ್ನೊಂದು ಗಂಟೆಯ ಸಮಯದಲ್ಲಿ.''

''ನೀವ್ಯಾಕೆ ಇಲ್ಲಿಗೆ ಬಂದ್ರಿ?''

''ನನಗೆ ಅನುಮಾನ ಬಂದಿದ್ದರಿಂದ.''

''ನಿಮಗೆ ಯಾವುದರ ಬಗ್ಗೆ ಅನುಮಾನ ಬಂತು?''

''ರಾಯರ ಕಣ್ಮರೆಯ ಬಗ್ಗೆ.''

ಶ್ರೀಕಾಂತ್ ಗಂಭೀರವಾಗಿ, ''ರಾಯರ ರಕ್ತಸಂಬಂಧಿಗಳಿಗೇ ಬಾರದಿರುವ ಅನುಮಾನ ನಿಮಗೆ ಮಾತ್ರ ಯಾಕೆ ಬಂತು?''

''ಸಹನಾಳ ಹೇಳಿಕೆಯನ್ನು ಕೇಳಿದ್ದರಿಂದ.''

''ಅವಳೇನು ಹೇಳಿದ್ದಳು?''

ಗುರು ಗಡ್ಡ ಕೆರೆದುಕೊಳ್ಳುತ್ತಾ, ''ರಾಯರು ಮೈಸೂರಿನಿಂದ ಊರಿಗೆ ಅಂತ ಲಾಯರ್ ಹತ್ತಿರ ಹೇಳಿ ಅಲ್ಲಿಂದ ಹೊರಟದ್ದಾರೆ. ಆದರೆ ಊರಿಗೆ ಬಂದಿಲ್ಲ. ಆ ರೀತಿ ಸಂಬಂಧಿಗಳಿಗೆ ತಿಳಿಸದೇ ಬೇರೆ ಕಡೆ ಎಲ್ಲಿಗೂ ಹೋಗುವವರಲ್ಲ ಅಂತ ಸಹನಾಳಿಂದ ಗೊತ್ತಾಯಿತು.''

ಶ್ರೀಕಾಂತ್ ತೀಕ್ಷ್ಣವಾಗಿ, ''ಅದು ಸರಿ...ಆದರೆ ಮಾವಿನ ತೋಪಿಗೆ ಬಂದಿರಬಹುದು ಎಂಬ ಅನುಮಾನ ನಿಮಗೆ ಬರಲು ಕಾರಣ ಏನು?''

ಗುರು, ''ರಾಯರು ಊರಿಗೆ ಬಂದರೆ ಬಂಗಲೆಗೆ ಬರಬೇಕು. ಇಲ್ಲದಿದ್ದರೆ ತೋಪಿಗೆ ಹೋಗಬೇಕು. ಬಂಗಲೆಗೆ ಬಂದಿಲ್ಲ ಎಂದರೆ ತೋಪಿಗೆ ಬಂದಿರಬಹುದು ಎಂಬ ಊಹೆಯ ಮೇಲೆ ಇಲ್ಲಿಗೆ ಬಂದೆ.''

ಶ್ರೀಕಾಂತ್, ''ಆದರೆ ಮಾವಿನ ತೋಪಿನಲ್ಲೇ ಹಣ ಹೂತಿರುತ್ತಾರೆ ಅಂತ ನಿಮಗೆ ಕನಸೇನಾದರೂ ಬಿದ್ದಿತ್ತ ಗುರುಮೂರ್ತಿ?'' ಎಂದು ವ್ಯಂಗ್ಯವಾಗಿ ಕೇಳಿದನು.

ಗುರು ಅಷ್ಟೇ ಹರಿತವಾಗಿ, ''ಕಂಡ ಕನಸನ್ನೆಲ್ಲಾ ನಿಜ ಅಂತ ಭ್ರಮಿಸಿ ಬರುವ ಪೆದ್ದ ನಾನಲ್ಲ.''

ಶ್ರೀಕಾಂತ್ ಕೋಪದಿಂದ, ''ಹಾಗಾದರೆ ಇಲ್ಲಿ ಹಣ ಇದೆ ಅಂತ ನಿಮಗೆ ಹ್ಯಾಗೆ ಗೊತ್ತಾಯಿತು?''

''ಇವುಗಳಿಂದ...''

ರಿಸರ್ವೇಷನ್ ಟಿಕೆಟ್ ಮತ್ತು ಚಪ್ಪಲಿ ತೋರಿಸಿದನು.

ಎಲ್ಲರೂ ತತ್ತರಿಸಿಹೋದರು.

''ಇವುಗಳು ನಿಮಗೆ ಎಲ್ಲಿ ಸಿಕ್ಕಿದವು.''

ಅದುವರೆಗೂ ಮೌನವಾಗಿದ್ದ ಸಹನಾ ಕಣ್ಣೀರನ್ನು ಒರೆಸಿಕೊಂಡು, ''ಇನ್‌ಸ್ಪೆಕ್ಟರ್...ನನ್ನ ಸ್ನೇಹಿತ ಗುರುವನ್ನು ಅನುಮಾನಿಸಬೇಡಿ. ಅವನನ್ನು ಇಲ್ಲಿಗೆ ಬಲವಂತವಾಗಿ ಕರೆದುಕೊಂಡು ಬಂದಿದ್ದೇ ನಾನು. ಮಿಸ್ಟರ್ ಗುರುಮೂರ್ತಿ ಸಹಾ

ಪೋಲೀಸ್ ಇಲಾಖೆಯವರೆಗೆ.''

''ವಾಟ್...?'' ಶ್ರೀಕಾಂತ್ ಬೆಚ್ಚಿಬಿದ್ದನು.

ಗುರು ತನ್ನ ಐಡೆಂಟಿಟಿ ಕಾರ್ಡ್ ತೋರಿಸಿದನು.

ಗುರುಮೂರ್ತಿ ಮೈಸೂರಿನ ಡಿ.ವೈ.ಎಸ್.ಪಿ.!

ಕೂಡಲೇ ಶ್ರೀಕಾಂತ್ ಪೋಲೀಸ್ ಪದ್ಧತಿಯಲ್ಲಿ ಗೌರವ ಸೂಚಿಸಿದನು.

ಗುರು ಗಂಭೀರವಾಗಿ, ''ಮಿಸ್ಟರ್ ಶ್ರೀಕಾಂತ್...ಈ ಕೊಲೆಯ ಹಿಂದೆ ದೊಡ್ಡ ರಹಸ್ಯವೇ ಅಡಗಿದೆ. ರಾಮರಾಯರಿಗೆ ಸಂಬಂಧ ಪಡುವ ಪ್ರತಿಯೊಬ್ಬರನ್ನೂ ವಿಚಾರಣೆ ಮಾಡಿ.''

ಎಸ್.ಐ. ಶ್ರೀಕಾಂತ್ ಮರವೊಂದರ ಕೆಳಗೆ ಮಂಕಾಗಿ ನಿಂತಿದ್ದ ಅನಸೂಯಮ್ಮ ಮತ್ತು ಕೆಲಸದಾಳು ವಾಸುವನ್ನು ಕಂಡು ಹತ್ತಿರ ಬಂದನು.

ಅನಸೂಯಮ್ಮನವರ ಮುಖ ಬಾಡಿದೆ.

ವಾಸು ತುಂಬಾ ಭಯಗೊಂಡಿದ್ದಾನೆ.

ಎಸ್.ಐ. ಶ್ರೀಕಾಂತ್ ಗಂಭೀರವಾಗಿ, ''ವಾಸು, ಅನಸೂಯಮ್ಮ, ನಿಮ್ಮಿಬ್ಬರನ್ನೂ ನಾನು ತುಂಬಾ ವರ್ಷಗಳಿಂದ ಇಲ್ಲಿ ನೋಡುತ್ತಿದ್ದೇನೆ. ಈಗ ನೀವು ಹೇಳುವ ಹೇಳಿಕೆಯ ಆಧಾರದ ಮೇಲೆ ಕೊಲೆಗಾರನನ್ನು ಪತ್ತೆ ಮಾಡಬೇಕು.''

ತಾಯಿ-ಮಗ ಪರಸ್ಪರ ಮುಖ ನೋಡಿಕೊಂಡರು.

ಸೋಮಯ್ಯ, ರಂಗಯ್ಯ ಭಯಗೊಂಡಿದ್ದಾರೆ. ಸಹನಾ ಕರೆತಂದಿರುವ ವ್ಯಕ್ತಿ ದೊಡ್ಡ ಪೋಲೀಸ್ ಅಧಿಕಾರಿ!

ರವಿ, ಮೋಹನ ಸಹಾ ಇದೇ ಕಾರಣದಿಂದ ಹೆದರಿಹೋಗಿದ್ದಾರೆ. ಮುಖ್ಯವಾಗಿ ಮೋಹನನನ್ನು ವಿಪರೀತ ಭಯ ಕಾಡುತ್ತಿದೆ. ಅವನು ಗಾಬರಿಯಾಗಿದ್ದಾನೆ.

ಶ್ರೀಕಾಂತ್, ''ವಾಸು...ಗುರುವಾರ ರಾತ್ರಿ ನೀನು ಇದೇ ಮಾವಿನ ತೋಪಿನಲ್ಲಿ ಇದ್ದೆ ತಾನೆ?''

ವಾಸು ಮೆಲ್ಲಗೆ, ''ಇದ್ದೆ ಸಾರ್.''

''ಹಾಗಾದರೆ ರಾಜಾರಾಯರು ಮಾವಿನ ತೋಪಿಗೆ ರಾತ್ರಿ ಬಂದದ್ದು ನಿನಗೆ ಗೊತ್ತಿರಬೇಕಲ್ಲ?''

''ಇಲ್ಲ ಸಾರ್...ನನಗೆ ಗೊತ್ತಿಲ್ಲ.''

ಶ್ರೀಕಾಂತ್ ಕೋಪದಿಂದ, "ಗೊತ್ತಿಲ್ಲಬಿ ಅಂದರೆ ನಾನು ನಂಬೊಲ್ಲ. ನೀನೇನು ಮಾವಿನ ತೋಪಿನಲ್ಲಿ ಕತ್ತೆ ಕಾಯುತ್ತೀಯ?"

ವಾಸು ಪೆಚ್ಚಾದನು. ಅವಮಾನದಿಂದ ತಲೆ ತಗ್ಗಿಸಿದನು. ಆಗ ಅನಸೂಯಮ್ಮ, "ಅವನಿಗೆ ವಿಪರೀತ ನಿದ್ದೆ ಸಾರ್, ರಾತ್ರಿ ಊಟ ಮಾಡಿ ಮಲಗಿದರೆ ಅವನ ಮೇಲೆ ಹೆಗ್ಗಣವೇ ಓಡಾಡಿದರೂ ಎಚ್ಚರವಾಗೊಲ್ಲ."

ಗುರು ನಗುತ್ತಾ, "ಅದು ಸರಿ ಇನ್‌ಸ್ಪೆಕ್ಟರ್. ಯಾಕೆ ಅಂದರೆ ನೆನ್ನೆ ರಾತ್ರಿ ನಾನು ಟಾರ್ಚ್ ಬೆಳಕು ಬೀರಿನೋಡಿದೆ. ಈ ಪುಣ್ಯಾತ್ಮ ಗಡದ್ದಾಗಿ ನಿದ್ದೆ ಹೊಡೆಯುತ್ತಿದ್ದ. ನಾನು ಇಲ್ಲಿ ಸುಮಾರು ಎರಡು ಗಂಟೆಗಳ ಕಾಲ ಇದ್ದರೂ ಸಹಾ ಇವನು ಒಂದು ಸಲವೂ ಮನೆಯಿಂದ ಹೊರಬರಲಿಲ್ಲ."

ಅಲ್ಲಿಗುಂಪುಗೂಡಿದ್ದ ಜನಗಳು ರಾಯರ ಕೊಲೆಯ ಬಗ್ಗೆ ಬಾಯಿಗೆ ಬಂದಂತೆ ಮಾತಾಡುತ್ತಿದ್ದಾರೆ.

ಸಹನಾ ಮೌನವಾಗಿ ರೋದಿಸುತ್ತಿದ್ದಾಳೆ.

ಶ್ರೀಕಾಂತ್, "ವಾಸು...ರಾಜಾರಾಯರು ಗುರುವಾರ ರಾತ್ರಿ ಇಲ್ಲಿಗೆ ಬಂದಿದ್ದಾಗ ಮನೆಗೆ ಬಂದು ನಿನ್ನನ್ನು ಎಬ್ಬಿಸಲಿಲ್ಲವೆ? ಸಹಾಯಕ್ಕೆ ಕರೆಯಲಿಲ್ಲವೆ?"

"ರಾಯರು ಬಂದದ್ದೇ ನನಗೆ ಗೊತ್ತಿಲ್ಲ ಸಾರ್."

ವಾಸು ಭಯ, ಗಾಬರಿಯಿಂದ ಹೇಳಿದನು.

"ಅನಸೂಯಮ್ಮ, ನಿಮಗೆ ಗೊತ್ತಿರಬೇಕಲ್ಲ?"

ಅನಸೂಯಮ್ಮ ನಿಟ್ಟುಸಿರು ಬಿಡುತ್ತಾ, "ಈ ಮನೆಯ ಉಪ್ಪು ತಿಂದು ಬೆಳೆಯುತ್ತಿರುವವರು ನಾವು. ರಾಯರು ಬಂದಿದ್ದು ಗೊತ್ತಿದ್ದರೆ ನಾವು ಮನೆಯೊಳಗೆ ಬೆಚ್ಚಗೆ ಇರುತ್ತಿದ್ದೆವಾ? ಆ ಪುಣ್ಯಾತ್ಮ ಚಳಿ, ಗಾಳಿಯಲ್ಲಿ ನಡುಗುತ್ತಿರುವಾಗ ನಾವು ಸುಮ್ಮನಿರುತ್ತಿದ್ದೆವಾ! ಅವರು ಯಾವಾಗ ಬಂದರೋ, ಯಾವ ಪಾಪಿ ಅವರನ್ನು ಕೊಲೆಮಾಡಿ ಅಲ್ಲಿ ಹೂತು ಹಾಕಿದನೋ ಗೊತ್ತಿಲ್ಲ" ಎಂದು ದುಃಖ, ಕೋಪ, ಆವೇಶದಿಂದ ಹೇಳಿದರು.

ಶ್ರೀಕಾಂತ್ ಏನನ್ನೋ ಕೇಳಬೇಕು ಎಂದುಕೊಂಡಿರುವಾಗ, "ಇನ್‌ಸ್ಪೆಕ್ಟರ್...ನೆಕ್ಸ್ಟ್ ವಿಟ್‌ನೆಸ್ ಅನ್ನು ವಿಚಾರಣೆ ಮಾಡಿ" ಎಂದು ಗುರು ಹೇಳಿದನು.

ಹೆಣವನ್ನು ಗುಂಡಿಯಿಂದ ಮೇಲಕ್ಕೆ ತೆಗೆದಿದ್ದರು. ಕತ್ತನ್ನು ಹಿಸುಕಿ ಕೊಲೆ

ಮಾಡಿದ್ದರಿಂದ ಕಣ್ಣಿನ ಗುಡ್ಡೆಗಳು, ನಾಲಿಗೆ ಹೊರಬಂದು ಭಯಂಕರವಾಗಿ ಕಾಣುತ್ತಿತ್ತು.

ಎಸ್.ಐ. ಶ್ರೀಕಾಂತ್ ಈಗ ಪ್ರತ್ಯೇಕವಾಗಿ ಸೋಮಯ್ಯ, ರಂಗಯ್ಯ, ರಫಿ, ಮೋಹನನನ್ನು ವಿಚಾರಣೆ ಮಾಡಿದನು.

ಶ್ರೀಕಾಂತ್ ಸಿಗರೇಟನ್ನು ಸೇದುತ್ತಾ, ''ಸೋಮಯ್ಯ...ನೀವು ಗುರುವಾರ ರಾತ್ರಿ ಎಲ್ಲಿದ್ದಿರಿ?''

ಸೋಮಯ್ಯ ಸಹನಾಳ ಸೋದರಮಾವ.

ಸೋಮಯ್ಯ ಬೆಚ್ಚಿಬೀಳುತ್ತಲೇ, ''ಬಂಗಲೆಯಲ್ಲೇ ಇದ್ದೆ.''

''ರಾತ್ರಿ ಹನ್ನೊಂದರ ನಂತರ ಹೊರಗೆ ಬಂದಿರಬೇಕಲ್ಲ?''

ಸೋಮಯ್ಯ ಬೆಚ್ಚಿಬೀಳುತ್ತಾ, ''ಇಲ್ಲ...ನಾನೇಕೆ ರಾತ್ರಿಯ ಹೊತ್ತಿನಲ್ಲಿ ಮಾವಿನ ತೋಟಿಗೆ ಬರಲಿ?''

ಶ್ರೀಕಾಂತ ನಗುತ್ತಾ, ''ಮಾವಿನ ತೋಟಿಗೆ ನೀವು ಬಂದಿದ್ದೀರ ಅಂತ ನಾನೆಲ್ಲಿ ಹೇಳಿದೆ? ಅಂತೂ ಸತ್ಯ ಒಪ್ಪಿಕೊಂಡಿರಿ..''

ಸೋಮಯ್ಯ ಗಾಬರಿಯಿಂದ, ''ಅರೆ...ನೀವು ಏನು ಹೇಳ್ತಾ ಇದ್ದೀರ ಇನ್‌ಸ್ಪೆಕ್ಟರ್ ಸಾರ್?''

''ನೀವು ಮಾವಿನ ತೋಟಿಗೆ ಬಂದಿದ್ದಿರಿ ಅಂತ.''

ಸೋಮಯ್ಯ ಹೌಹಾರಿದರು.

ಶ್ರೀಕಾಂತ ಗಡುಸಾಗಿ, ''ನಿಮಗೆ ನಿಮ್ಮ ಬಾವ ರಾಜಾರಾಯರು ಮೈಸೂರಿಗೆ ಹೋಗಿದ್ದು ಗೊತ್ತಿತ್ತೆ?''

''ಹೂಂ...ಗೊತ್ತಿತ್ತು?''

'4ಅವರು ಅದೇ ರತ್ರಿ ಹಿಂತಿರುಗುತ್ತಾರೆ ಅಂತ ಗೊತ್ತಿರಬೇಕಲ್ಲ?''

ಸೋಮಯ್ಯ ಗಾಬರಿಯಿಂದ, ''ಇಲ್ಲ...ಇಲ್ಲ...ಗೊತ್ತಿರಲಿಲ್ಲ.''

''ಗಾಬರಿಯಾಗಬೇಡಿ. ಹಾಗಾದರೆ ನೀವೇಕೆ ಮಾವಿನ ತೋಟಿಗೆ ಬಂದಿದ್ದಿರಿ ಸೋಮಯ್ಯ?''

ಸೋಮಯ್ಯ ಗಾಬರಿ, ಭಯ, ಆತುರದಿಂದ, ''ಅರೆ... ಇದೇನು ಒಳ್ಳೇ ಕಂಡವರಂತೆ ಮಾತಾಡುತ್ತಿದ್ದೀರಲ್ಲ! ನಾನು ಬಂಗಲೆಯಿಂದ ಹೊರಗೇ ಬಂದಿಲ್ಲ.''

''ನೀವು ಹೇಳ್ತಾ ಇರೋದು ನಿಜ ತಾನೆ?''

''ಖಂಡಿತಾ ನಿಜ ಹೇಳುತ್ತಿದ್ದೇನೆ.''

''ನೀವು ಬಂಗಲೆಯಲ್ಲೇ ಇದ್ದಿರಿ ಅನ್ನೋದಕ್ಕೆ ಸಾಕ್ಷಿ ಇದೆಯೇ?''

ಸೋಮಯ್ಯ ಕೋಪದಿಂದ ವ್ಯಂಗ್ಯವಾಗಿ, ''ನನ್ನ ಬಾವ ಸಾಯುತ್ತಾರೆ ಅಂತ ಮೊದಲೇ ಗೊತ್ತಿದ್ದಿದ್ದರೆ ನಾನು ಸಾಕ್ಷಿಯನ್ನು ರೆಡಿ ಮಾಡಿಕೊಳ್ಳುತ್ತಿದ್ದೆ.''

''ಮಿಸ್ಟರ್ ಸೋಮಯ್ಯ.''

'4ಸಾಕು ಸುಮ್ನೆ ಇರಿ ಸಾರ್. ಇಲ್ದೇ ಇರೋ ಸಾಕ್ಷಿ, ಆಧಾರವನ್ನು ನಾನೆಲ್ಲಿಂದ ತೋರಿಸಲಿ? ಗುರುವಾರ ರಾತ್ರಿ ಕಂಠ ಪೂರ್ತಿ ಕುಡಿದು ಮಲಗಿದ್ದೆ. ಯಾರು ಬಂದರೋ, ಯಾರು ಹೋದರೋ ಒಂದೂ ನನಗೆ ಗೊತ್ತಿರಲಿಲ್ಲ.''

ಎಸ್.ಐ. ಶ್ರೀಕಾಂತ್ ಈಗ ರಂಗಯ್ಯನನ್ನು ವಿಚಾರಣೆ ಮಾಡಿದನು. ರಂಗಯ್ಯನಿಂದಲೂ ಅದೇ ಹೇಳಿಕೆ ಬಂದಿತು. ರಂಗಯ್ಯ, ''ಇನ್‌ಸ್ಪೆಕ್ಟರ್ ...ಗುರುವಾರ ರಾತ್ರಿ ನಾನು ಬಂಗಲೆಯಲ್ಲೇ ಇದ್ದೆ. ಆದರೆ ಅದನ್ನು ನಿರೂಪಿಸಲು ನಾನು ಸಾಕ್ಷಿ-ಪುರಾವೆ ಕೊಡಲಾರೆ. ಐ ಯಾಮ್ ಸಾರಿ.''

ಶ್ರೀಕಾಂತ್ ಗಡುಸಾಗಿ, ''ನಿಮ್ಮ ರಾಜಾರಾಯರು ಮೈಸೂರಿನಿಂದ ಅದೇ ರಾತ್ರಿ ಹಿಂತಿರುಗುತ್ತಾರೆ ಅಂತ ನಿಮಗೆ ಗೊತ್ತಿರಲಿಲ್ಲವೆ ಮಿಸ್ಟರ್ ರಂಗಯ್ಯ?''

''ಖಂಡಿತಾ ಗೊತ್ತಿರಲಿಲ್ಲ.''

''ಹೊರಡುವಾಗ ಅದರ ಬಗ್ಗೆ ಕೇಳಲಿಲ್ಲವೇ?''

''ಮೊದಲಿನಿಂದಲೂ ಅಷ್ಟೊಂದು ಸಲಿಗೆಯೇ ಇರಲಿಲ್ಲ.''

''ಅಂದರೆ...''

ರಂಗಯ್ಯ ಬೇಸರದಿಂದ, ''ನಮ್ಮ ತಂಗಿ ಸತ್ತಾಗಿನಿಂದ ನಾವು ಇಲ್ಲೇ ಇದ್ದೇವೆ. ಅವರು ನಮ್ಮ ಸಂಸಾರವನ್ನು ಸಾಕುತ್ತಿರುವುದರಿಂದ ಏನೋ, ನಮ್ಮ- ಕೈಲಾದ ಕೆಲಸ ಮಾಡಿಕೊಂಡಿದ್ದೇವೆ. ನಮ್ಮ ಬಾವನನ್ನು ನಾವು ಸಲಿಗೆಯಿಂದ ಯಾವತ್ತೂ, ಏನನ್ನೂ ಕೇಳಿರಲಿಲ್ಲ.''

ಶ್ರೀಕಾಂತ ಸಹನಾಳ ಕಡೆ ನೋಡುತ್ತಾ, ''ಸಹನಾಳನ್ನು ನಿಮ್ಮಿಬ್ಬರಲ್ಲಿ ಇಂಥೋರ ಮಗನಿಗೆ ಕೊಡಬೇಕು ಅಂತ ಹೇಳಿದ್ದರೆ?''

ರಂಗಯ್ಯ, ''ಅವರು ಬಹಿರಂಗವಾಗಿ ಹೇಳಿರಲಿಲ್ಲ. ಆದರೆ ಅವರಿಗೆ ರವಿಯ ಮನಸ್ಸಿನಲ್ಲಿ ಸಹನಾಳನ್ನು ರವಿಗೂ ಕೊಡಬೇಕು ಅಂತ ಇತ್ತೇನೋ ನನಗೆ ಗೊತ್ತಿಲ್ಲ.

ಅರು ಏನನ್ನೂ ಹೇಳಿರಲಿಲ್ಲ.''

''ರವಿ ಅಂದರೆ ಯಾರು?''

''ನನ್ನ ತಮ್ಮ ಸೋಮಯ್ಯನ ಮಗ.''

ಎಸ್. ಐ. ಶ್ರೀಕಾಂತ್ ರವಿ ಮತ್ತು ಮೋಹನನನ್ನು ಪ್ರತ್ಯೇಕವಾಗಿ ವಿಚಾರಣೆ ಮಾಡಿದನು. ಆದರೆ ಉಪಯೋಗವಾಗಲಿಲ್ಲ. ಹೆಣವನ್ನು ವೈದ್ಯಕೀಯ ಪರೀಕ್ಷೆಗಾಗಿ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು.

ಸಹನಾಳನ್ನು ಅನಸೂಯಮ್ಮ ಸಂತೈಸಿದರು. ವಾಸು, ಪಾಪ! ಪೆಚ್ಚಾಗಿ ನಿಂತಿದ್ದನು.

ಸಂಜೆಯ ಹೊತ್ತಿಗೆ ಶವ ಸಂಸ್ಕಾರ ಮುಗಿಯಿತು.

ಎಸ್. ಐ. ಶ್ರೀಕಾಂತ್, ಪೋಲೀಸ್ ಇಲಾಖೆಯ ಗುರು ಕೊಲೆಯ ಬಗ್ಗೆ ಚರ್ಚೆ ನಡೆಸುತ್ತಿದ್ದರು.

ರಾಜಾರಾಯರು ಮಾವಿನ ತೋಪಿಗೆ ಏಕೆ ಬಂದರು?

ಅವರನ್ನು ಅಲ್ಲಿ ಯಾರು ಕೊಲೆ ಮಾಡಿದರು?

ಈ ಕೊಲೆಯ ಹಿಂದಿರುವ ಉದ್ದೇಶ ಏನು?

ಇದು ನಿಗೂಢವಾಗಿಯೇ ಉಳಿಯಿತು.

## 5

ರಾತ್ರಿ ಏಳು ಗಂಟೆಯ ಸಮಯ.

ಬಂಗಲೆಯ ಹಾಲ್‌ನಲ್ಲಿದ್ದ ಗೋಡೆಗೆ ರಾಜಾರಾಯರ ದೊಡ್ಡ ಫೋಟೋ ಹಾಕಿ, ಅದಕ್ಕೆ ಹಾರಹಾಕಲಾಗಿದೆ.

ಕೆಳಗೆ ನಂದಾದೀಪ ಉರಿಯುತ್ತಿದೆ.

ಗುರು ಸಹನಾಳ ತಲೆ ಸವರುತ್ತಾ ಸಂತೈಸುತ್ತಿದ್ದಾನೆ. ಅದೇ ಸಮಯಕ್ಕೆ ಬಂಗಲೆಯ ಮುಂದೆ ಕಾರು ಬಂದು ನಿಂತಿತು.

ಎಲ್ಲರೂ ಕತ್ತೆತ್ತಿ ನೋಡಿದರು.

ಮೈಸೂರಿನ ಲಾಯರ್ ಸೀತಾರಾಮಯ್ಯನವರು ಕಾರಿನಿಂದ ಕೆಳಗೆ ಇಳಿದು ಸೂಟ್‌ಕೇಸನ್ನು ಹಿಡಿದುಕೊಂಡು ಬಂದರು.

ಅವರನ್ನು ಕಂಡಕೂಡಲೇ ಸಹನಾಳ ದುಃಖ ಹೆಚ್ಚಾಗಿ, ಓಡಿ ಬಂದು ಅವರನ್ನು ತಬ್ಬಿಕೊಂಡಳು.

ಸಹನಾ ಬಿಕ್ಕಳಿಸಿಕೊಂಡು ಅಳುತ್ತಿದ್ದಾಳೆ.

ಸೀತಾರಾಮಯ್ಯನವರು ಅವಳನ್ನು ಸಂತೈಸಿದರು.

ಗುರು ಫೋನಿನ ಹತ್ತಿರಕ್ಕೆ ಬಂದು ಪೋಲೀಸ್ ಸ್ಟೇಷನ್ನಿಗೆ ಡಯಲ್ ಮಾಡಿದನು.

ಅತ್ತ ಕಡೆಯಿಂದ, ''ಹಲೋ...''

''ಶ್ರೀಕಾಂತ್ ತಾನೇ?''

''ಹೌದು ಸಾರ್...''

''ನೀವು ಈಗಲೇ ಬಂಗಲೆಗೆ ಬನ್ನಿ.''

''ಯಾಕೆ ಸಾರ್?''

''ಲಾಯರ್ ಸೀತಾರಾಮಯ್ಯ ಬಂದಿದ್ದಾರೆ.''

''ಗೊತ್ತಾಯಿತು ಸಾರ್.''

''ಬಹು ಮುಖ್ಯ ಸಾಕ್ಷಿ. ನೀವು ಬೇಗ ಬಂದರೆ ಅವರನ್ನು ವಿಚಾರಣೆ ಮಾಡಬಹುದು.''

''ಓ.ಕೆ. ಸಾರ್, ನಾನು ಈಗಲೇ ಬರ್ತೀನಿ.''

ಫೋನ್ ಡಿಸ್‌ಕನೆಕ್ಟ್ ಆಯಿತು.

ಸೀತಾರಾಮಯ್ಯನವರು ಸಹನಾಳನ್ನು ತಬ್ಬಿಕೊಂಡು ನಿಟ್ಟುಸಿರು ಬಿಡುತ್ತಾ, ''ರಾಯರಿಗೆ ತಮ್ಮ ಸಾವಿನ ಬಗ್ಗೆ ಮೊದಲೇ ಗೊತ್ತಿತ್ತೋ, ಏನೋ, ಅದಕ್ಕೇ ಹೊಸ ವಿಲ್ ಸಹಾ ಮಾಡಿದರು.''

ಸಹನಾ ಕಣ್ಣೀರನ್ನು ಒರೆಸಿಕೊಂಡಳು

ಅಲ್ಲೇ ಇದ್ದ ರಂಗಯ್ಯ, ಸೋಮಯ್ಯ ಆಶ್ಚರ್ಯದಿಂದ ಪರಸ್ಪರ ಮುಖ ನೋಡಿಕೊಂಡರು. 'ಈ ವಿಲ್ ವಿಚಾರ ಅವರಿಗೆ ಗೊತ್ತಿರಲಿಲ್ಲ. ಒಬ್ಬಳೇ ಮಗಳಿಗೆ ಎಲ್ಲಾ ಆಸ್ತಿ ಸೇರಲಿರುವ ವಿಲ್ ಯಾಕೆ ಮಾಡಿದರು?'

ಆದರೆ ಈ ವಿಲ್ ವಿಚಾರ ರವಿಗೆ ಗೊತ್ತಿತ್ತು.

ಅದನ್ನು ರಾಜಾರಾಯರೇ ಹೇಳಿದ್ದರು.

ಪ್ರತ್ಯೇಕ ಕೊಠಡಿಯಲ್ಲಿ...

ಲಾಯರ್ ಸೀತಾರಾಮಯ್ಯ, ಸಹನಾ, ಗುರು ಮತ್ತು ಎಸ್. ಐ. ಶ್ರೀಕಾಂತ್ ಎದುರುಬದಿರಾಗಿ ಕುಳಿತುಕೊಂಡಿದ್ದಾರೆ.

"ರಾಜಾರಾಯರು ಮೈಸೂರಿಗೆ ಯಾವಾಗ ಬಂದರು?"

"ಗುರುವಾರ ರಾತ್ರಿ ಎಂಟು ಗಂಟೆಗೆ."

"ಎಷ್ಟು ಹೊತ್ತಿಗೆ ಹೋದರು?"

"ಹತ್ತು ಗಂಟೆಗೆ ಸ್ವಲ್ಪ ಮೊದಲು."

"ಎಲ್ಲಿಗೆ ಹೋಗುತ್ತೇನೆ ಅಂತ ಹೇಳಿದರು?"

ಸೀತಾರಾಮಯ್ಯನವರು ಪೇಟತೆಗೆದು, ತಮ್ಮ ಬೋಳು ತಲೆ ಸವರಿಕೊಳ್ಳುತ್ತಾ, "ಊರಿಗೆ ಹೋಗುತ್ತೇನೆ ಅಂತ ಹೇಳಿದರು. ಅವರು ನನ್ನ ಮನೆಗೆ ಬರುವಾಗಲೇ ರಿಸರ್ವೇಷನ್ ಮಾಡಿಸಿಕೊಂಡೇ ಬಂದಿದ್ದರು."

"ಅಲ್ಲಿದ್ದ ರಾಯರ ಕಂಡೀಷನ್ ಹೋಗಿತ್ತು?"

"ಸ್ವಲ್ಪ ಭಯಗೊಂಡಂತೆ ಕಾಣುತ್ತಿದ್ದರು."

"ಹೊಸ ವಿಲ್ ಬಗ್ಗೆ ಏನು ಹೇಳುತ್ತೀರ?"

"ರಾಯರು ಗುರುವಾರ ಹೊಸ ಸೀಕ್ರೇಟ್ ವಿಲ್ ಮಾಡಿದರು. ಅದನ್ನು ಆ ದಿನದಿಂದ ಒಂದು ತಿಂಗಳಿಗೆ ಸರಿಯಾಗಿ ತೆರೆದು ನೋಡಲು ಸೂಚನೆ ನೀಡಿದ್ದಾರೆ."

ಎಲ್ಲರೂ ಬೆಚ್ಚಿಬಿದ್ದರು.

ಶ್ರೀಕಾಂತ, "ಹೊಸ ವಿಲ್ ಅನ್ನು ಒಂದು ತಿಂಗಳಿನ ನಂತರ ಬಹಿರಂಗಪಡಿಸಲು ಕಾರಣವೇನು?"

"ಅದನ್ನು ಅವರು ಹೇಳಲಿಲ್ಲ."

"ಬೇರೆ ಏನು ಹೇಳಿದರು?"

ಶ್ರೀಕಾಂತ, "ಹೊಸ ವಿಲ್ ಅನ್ನು ಒಂದು ತಿಂಗಳಿನ ನಂತರ ಬಹಿರಂಗಪಡಿಸಲು ಕಾರಣವೇನು?"

"ಅದನ್ನು ಅವರು ಹೇಳಲಿಲ್ಲ."

"ಬೇರೆ ಏನು ಹೇಳಿದರು?"

ಸಹನಾಳಿಗೆ ದುಃಖದಲ್ಲೂ ಕುತೂಹಲವಾಗುತ್ತಿದೆ.

ಸೀತಾರಾಮಯ್ಯನವರು ಸ್ವಲ್ಪ ಹೊತ್ತು ಸುಮ್ಮನಿದ್ದುದ ಬಳಿಕ,

''ನೋಡಿ...ರಾಯರು ಕಾರಣ ಏನು ಅಂತ ಹೇಳಲಿಲ್ಲ. ಆದರೆ ಮುಖ್ಯ ವಿಚಾರವೊಂದನ್ನು ನನಗೆ ಹೇಳಿದ್ದರು.''

ಗುರು, ''ಏನದು?''

''ಸಹನಾಳ ಮದುವೆಯ ಬಗ್ಗೆ.''

''ಏನು ಹೇಳಿದರು?''

''ಇನ್ನು ಇಪ್ಪತ್ತೈದು ದಿವಸಗಳ ಒಳಗೆ ಸಹನಾಳ ಮದುವೆ ಮಾಡಿ ಮುಗಿಸುತ್ತೇನೆ. ನಂತರ ವಿಲ್ ಅನ್ನು ಬಹಿರಂಗಪಡಿಸಿರಿ ಎಂದು ಸೂಚಿಸಿದರು.''

ಎಲ್ಲರಿಗೂ ಆಶ್ಚರ್ಯವಾಗುತ್ತಿದೆ.

ಸಹನಾಳಿಗೆ ನಂಬಿಕೆಯೇ ಬರುತ್ತಿಲ್ಲ. 'ಗಂಡು ಯಾರು ಅಂತ ಇನ್ನೂ ತೀರ್ಮಾನವೇ ಆಗಿರಲಿಲ್ಲ. ಆದರೆ ಡ್ಯಾಡಿ ಕೇವಲ ಇಪ್ಪತ್ತೈದ ದಿವಸಗಳಲ್ಲಿ ಮದುವೆಯನ್ನೇ ಮಾಡಿ ಮುಗಿಸುತ್ತೇನೆ ಅಂತ ಯಾಕೆ ಹೇಳಿದರು?'

ಗುರು, ''ಸೀತಾರಾಮಯ್ಯನವರೆ, ಸಹನಾಳ ಮದುವೆಯ ನಂತರವೇ ವಿಲ್ ಬಹಿರಂಗಪಡಿಸಲು ಸೂಚಿಸಿರಬೇಕಾದರೆ ಇದರ ಹಿಂದೆ ಏನಾದರೂ ಉದ್ದೇಶವಿದೆಯೇ?''

''ಇರಬಹುದು. ಆದರೆ ರಾಯರು ಅದರ ಬಗ್ಗೆ ನನಗೆ ಏನೂ ಹೇಳಲಿಲ್ಲ. ನಾನವರನ್ನು ಒಂದು ಪ್ರಶ್ನೆ ಕೇಳಿದೆ.''

ಎಲ್ಲರೂ ಕುತೂಹಲಗೊಂಡರು.

''ಈ ವಿಲ್ ಅನ್ನು ಈಗ ಯಾಕೆ ಮಾಡಿಸುತ್ತಿದ್ದೀರ ಅಂತ.''

''ಅದಕ್ಕೆ ರಾಯರು ಏನು ಹೇಳಿದರು?''

''ಅವರಿಗೆ ಹೊಸದಾಗಿ ಇಪ್ಪತ್ತೈದು ಲಕ್ಷ ರೂಪಾಯಿಗಳ ನಗದು ಹಣ ಬಂತಂತೆ. ಅದನ್ನು ಅವರು ಬ್ಯಾಂಕಿನಲ್ಲಿ ಹಾಕಿದ್ದಾರೆ ಈ ಹಣ ಬಂದ ಕಾರಣದಿಂದಲೇ ತಾವು ಹೊಸದಾಗಿ ವಿಲ್ ಮಾಡಲು ಕಾರಣ ಅಂತ ಹೇಳಿದರು.''

'4ಅಷ್ಟೊಂದು ಹಣ ಎಲ್ಲಿಂದ ಬಂತಂತೆ?''

''ಅದನ್ನೂ ವಿಲ್‌ನಲ್ಲಿ ವಿವರಿಸಿದ್ದಾರೆ.''

''ಅದರ ಬಗ್ಗೆ ಹೇಳಲಿಲ್ಲವೆ?''

ಸೀತಾರಾಮಯ್ಯ ಇಲ್ಲವೆಂಬಂತೆ ತಲೆಯಾಡಿಸಿದರು.

ಗುರು, ''ರಾಯರು ಇಲ್ಲಿಂದ ಮೈಸೂರಿಗೆ ಬಂದದ್ದು ಅವರ ಸಂಬಂಧಿಕರಿಗೆಲ್ಲಾ ಗೊತ್ತಿತ್ತು. ಆದರೆ ಅವರು ಊರಿಂದ ಹಿಂತಿರುಗುವುದು ಯಾರಿಗೆ ಗೊತ್ತಿತ್ತು?''

ಸೀತಾರಾಮಯ್ಯ ಚಿಂತಿಸುತ್ತಿದ್ದರು.

''ರಾಯರ ಜೊತೆ ಯಾರಾದರೂ ಬಂದಿದ್ದರೆ?''

''ಇಲ್ಲ. ಒಬ್ಬರೇ ಬಂದಿದ್ದರು.''

ಎಸ್. ಐ. ಶ್ರೀಕಾಂತ್, ''ರಾಯರು ಅದೇ ರಾತ್ರಿ ಮೈಸೂರಿನಿಂದ ಹಿಂತಿರುಗುತ್ತಿದ್ದಾರೆ ಅಂತ ಯಾರಿಗೂ ಗೊತ್ತಿರಲಿಲ್ಲ. ಅವರು ಬಂಗಲೆಗೆ ಹೋಗದೆ ಮಾವಿನ ತೋಟಕ್ಕೆ ಯಾಕೆ ಹೋದರು?''

ಸೀತಾರಾಮಯ್ಯ ಅದಕ್ಕೆ ಉತ್ತರಿಸಲಿಲ್ಲ.

''ಸಾರ್...ನೀವು ಹೇಳುವುದೇನಾದರೂ ಇದೇ?''

''ಒಂದೇ ಒಂದು ವಿಷಯ ಇದೆ.''

ಎಲ್ಲರೂ ಕುತೂಹಲಗೊಂಡರು.

ಸೀತಾರಾಮಯ್ಯ ಗಂಭೀರವಾಗಿ, ''ರಾಜಾರಾಯರು ನನ್ನ ಮನೆಯಿಂದ ಹೋದ ಕೂಡಲೇ ಸೊರಗೂರಿನಿಂದ ಫೋನ್ ಬಂದಿತ್ತು.''

ಹೊಸ ವಿಚಾರ...!

ಎಲ್ಲರೂ ಬೆಚ್ಚಿಬಿದ್ದರು.

''ಯಾರು ಫೋನ್ ಮಾಡಿದ್ದರು?''

ಸೀತಾರಾಮಯ್ಯ ಬೋಳು ತಲೆ ಸವರಿಕೊಳ್ಳುತ್ತಾ, ''ಹೆಸರು...ಹೆಸರು ಮರೆತುಹೋಗಿದೆ. ನೆನಪು ಮಾಡಿಕೊಳ್ಳುತ್ತೇನೆ.''

ಎಲ್ಲರಿಗೂ ತೀವ್ರ ನಿರಾಸೆಯಾಯಿತು.

''ಯಾವ ವಿಷಯ ಕೇಳಲು ಫೋನ್ ಮಾಡಿದ್ದರು?''

''ರಾಯರ ಪ್ರೋಗ್ರಾಮ್ ಬಗ್ಗೆ ಕೇಳಲು.''

''ಅಂದರೆ...?''

''ರಾಜಾರಾಯರು ಊರಿಗೆ ಯಾವಾಗ ಹಿಂತಿರುಗುತ್ತಾರೆ ಅನ್ನೋದರ ಬಗ್ಗೆ ವಿವರವಾಗಿ ಕೇಳಿತಿಳಿದುಕೊಂಡರು.''

''ಮೈಗಾಡ್...!''

ಸಹನಾ ಭಯದಿಂದ ನಡುಗುತ್ತಿದ್ದಾಳೆ.

ಗುರು, ''ಸೀತಾರಾಮಯ್ಯನವರೇ...ಕೊಲೆಗಾರರ ಬಗ್ಗೆ ತಿಳಿಯಬೇಕಾದರೆ ನಿಮಗೆ ಸೊರಗೂರಿನಿಂದ ಫೋನ್ ಮಾಡಿದ್ದು ಯಾರು ಅಂತ ಗೊತ್ತಾಗಬೇಕು.''

ಸೀತಾರಾಮಯ್ಯ ತಲೆ ಸವರಿಸಿಕೊಳ್ಳುತ್ತಿದ್ದಾರೆ.

ಎಲ್ಲಾ ಟೆನ್‌ಷನ್‌ನಿಂದ ಚಡಪಡಿಸುತ್ತಿದ್ದಾರೆ.

ಸಹನಾಳಿಗೆ ಭಯವಾಗುತ್ತಿದೆ. 'ನನ್ನ ತಂದೆ ಯಾವಾಗ ಊರಿಗೆ ಹಿಂತಿರುಗುತ್ತಾರೆ ಎಂದು ಫೋನ್ ಮಾಡಿ ತಿಳಿದುಕೊಂಡು, ಮಾವಿನ ತೋಪಿಗೆ ಮೊದಲೇ ಹೋಗಿದ್ದಾರೆ.

'ಆ ವ್ಯಕ್ತಿಯೇ ಕೊಲೆಗಾರ.'

'ಆ ಕೊಲೆಗಾರ ಯಾರು?'

ಗುರು ಸಿಗರೇಟನ್ನು ಸೇದುತ್ತಾ, ''ಮಿಸ್ಟರ್ ಶ್ರೀಕಾಂತ್...ಬಸ್ಸು ನಿಲ್ಲುವ ಸ್ಥಳದಿಂದ ರಾಯರ ಬಂಗಲೆಗೆ ಬರಬೇಕಾದರೆ ಯಾವ ದಾರಿಯಲ್ಲಿ ಬರಬೇಕು?''

''ಅವರು ಮಾವಿನ ತೋಪಿನ ಮೂಲಕವೇ ಬರಬೇಕು. ಈ ಆಲೋಚನೆ ನನ್ನ ತಲೆಗೂ ಬಂದಿತ್ತು.''

ಗುರು, ''ನನಗೆ ಅನ್ನಿಸುತ್ತೆ. ಕೊಲೆಗಾರ ರಾಯರಿಗಾಗಿ ಇಲ್ಲಿ ಕಾದು ಕುಳಿತಿದ್ದಾನೆ. ರಾಯರು ಬಂದ ಕೂಡಲೆ ಅವರನ್ನು ಕೊಲೆ ಮಾಡಲು ನುಗ್ಗಿದ್ದಾನೆ. ಆದರೆ ರಾಯರು ಅವನ ಕೈಯಿಂದ ತಪ್ಪಿಸಿಕೊಂಡು ತೋಪಿನೊಳಗೆ ನುಗ್ಗಿದ್ದಾರೆ. ಕೊಲೆಗಾರ ಅಲ್ಲಿಗೇ ನುಗ್ಗಿ, ಕೊಲೆ ಮಾಡಿ, ಅಲ್ಲೇ ಹೆಣ ಹೂತಿದ್ದಾನೆ.''

''ನಿಮ್ಮ ಊಹೆ ಸರಿಯಾಗಿದೆ ಸಾರ್.''

ಸೀತಾರಾಮಯ್ಯನವರ ಮುಖ ಅರಳಿತು. ಅವರು ತುಸು ಧ್ವನಿಯೇರಿಸಿ, ''ಮೋಹನ ಅಂತ...'' ಎಂದು ಕೂಗಿಕೊಂಡರು. ಎಲ್ಲರೂ ನಡುಗಿದರು.

ಊಹಿಸಲು ಅಸಾಧ್ಯವಾದ ವಿಷಯ.

'ಮೋಹನ...ಮೋಹನ ಕೊಲೆಗಾರನೇ?'

* * *

ಅದು ಪ್ರತ್ಯೇಕ ಕೊಠಡಿ!

ರವಿ, ಮೋಹನ ಎದುರುಬದಿರಾಗಿ ಕುಳಿತುಕೊಂಡಿದ್ದಾರೆ. ಮೋಹನ ವಿಸ್ಕಿ ಚಪ್ಪರಿಸುತ್ತಿದ್ದಾನೆ.

ರವಿ ಭಯದಿಂದ ನೋಡುತ್ತಿದ್ದಾನೆ.

ಮೋಹನನ ಕಣ್ಣುಗಳು ಕೆಂಪಡರಿವೆ. ಅವನು ಕೋಪದಿಂದ, ''ರವಿ...ಮಾವ ಬದುಕಿದ್ದಾಗ ನೀನು ಒಳ್ಳೆಯವನಂತೆ ನಾಟಕ ಆಡಿದೆ. ಅವರು ನಿನ್ನನ್ನು ಸದಾ ತಮ್ಮ ಜೊತೆಯಲ್ಲೇ ಇರಿಸಿಕೊಳ್ಳುತ್ತಿದ್ದರು.''

''ಅದಕ್ಕೆ ನಾನೇನು ಮಾಡಲಿ?''

''ಮಾವನಿಗೆ ಮಸ್ಕಾ ಹೊಡೆದು, ಅವರ ಅನುಗ್ರಹ ಸಂಪಾದಿಸಿದ್ದೆ. ಸಹನಾಳನ್ನು ನಿನಗೇ ಕೊಟ್ಟು ಮದುವೆ ಮಾಡಬೇಕು ಅಂತ ಅವರಿಗೆ ಆಸೆ ಇತ್ತು. ಅಲ್ಲವೆ?''

ರವಿ ಹೆದರುತ್ತಲೇ ತಲೆಯಾಡಿಸಿದನು.

''ಈಗ ಮಾವ ಬದುಕಿಲ್ಲ. ಅಲ್ಲವೆ?''

''ಇಲ್ಲ...ಬದುಕಿಲ್ಲ.''

''ಸಹನಾಳ ಆಸೆಯನ್ನು ಮರೆತುಬಿಡು.''

ರವಿ ಗಾಬರಿಯಿಂದ ''ಅದು...ಅದು...''

''ಸಹನಾಳನ್ನು ನೀನು ಮರೆಯಲೇಬೇಕು.''

ಮೋಹನ ಗಡುಸಾಗಿ ಹೇಳಿದನು.

ರವಿ ನಿರಾಸೆಯಿಂದಲೇ, ''ನಾನ್ಯಾಕೆ ಮರೆಯಬೇಕು?''

''ನಾನವಳನ್ನು ಮದುವೆಯಾಗಬೇಕು ಅಂತ ಇರೋದ್ರಿಂದ ನೀನು ಮರೆಯಬೇಕು ರವಿ.''

ರವಿ ಕೋಪದಿಂದ, ''ಅರೆ...ನೀನೇನು ಹೆದರಿಸುತ್ತಿದ್ದೀಯಲ್ಲ! ಸಹನಾ ನನ್ನನ್ನೇ ಒಪ್ಪಿಕೊಂಡರೆ ನಾನೇಕೆ ಅವಳಿಂದ ದೂರ ಸರಿಯಲಿ?''

''ನೀನಿನ್ನೂ ಬದುಕಬೇಕಾಗಿರೋದ್ರಿಂದ.''

ರವಿ ಭಯದಿಂದ ನೋಡಿದನು.

''ನೀನು ಸಹನಾಳನ್ನು ಮದುವೆಯಾಗಕೂಡದು. ಒಂದು ವೇಳೆ ಅವಳೇ ಒಪ್ಪಿಕೊಂಡರೂ ನೀನು ನಿರಾಕರಿಸಬೇಕು'' ಎಂದು ತಣ್ಣನೆಯ ಸ್ವರದಲ್ಲಿ, ತೀಕ್ಷ್ಣವಾಗಿ ಹೇಳಿದನು.

''ಗೂಂಡಾಗಿರಿ ಮಾಡುತ್ತಿದ್ದೀಯ?''

ಮೋಹನ ಸರ‍್ರನೆ ಎದ್ದು ರವಿಯ ಷರಟಿನ ಕಾಲರನ್ನು ಹಿಡಿದು ಎಳೆದಾಡುತ್ತಾ ''ಹೇಳಿದಂತೆ ಕೇಳು, ಪೊಗರು ತೋರಿಸಿದರೆ ಬೋಟಿ ತೆಗೆದುಬಿಡುತ್ತೇನೆ.''

ರವಿ ತತ್ತರಿಸಿ ಹೋಗುತ್ತಿದ್ದಾನೆ.

ಮೋಹನ ಕೋಪದಿಂದ ''ಸಹನಾಳಂತಹ ಸುಂದರಿಯ ಜೊತೆ ಈ ಆಸ್ತಿಯನ್ನು ಅನುಭವಿಸಲು ನಾನು ಏನು ಬೇಕಾದರೂ ಮಾಡುತ್ತೇನೆ. ಇಷ್ಟು ದಿವಸ ಮಾವನ ಕೃಪಾಕಟಾಕ್ಷ ನಿನ್ನ ಮೇಲಿತ್ತು. ಆದರೆ ಈಗ ಮಾವ ಬದುಕಿಲ್ಲ. ಅಂದ ಮೇಲೆ ನಿನಗೆ ಸಪೋರ್ಟ್ ಮಾಡಲು ಬೇರೆ ಯಾರೂ ಇಲ್ಲ.''

ರವಿ ಭಯದಿಂದ ನಡುಗುತ್ತಿದ್ದಾನೆ.

ಮೋಹನ ಅವನ ಕತ್ತನ್ನು ಅದುಮುತ್ತಾ, ''ನನ್ನ ಮಾತನ್ನು ಮೀರಿ ನೀನು ಸಹನಾಳನ್ನು ಮದುವೆ ಮಾಡಿಕೊಳ್ಳಲು ಪ್ರಯತ್ನಿಸಿದರೆ ನಿನ್ನ ಹೆಣ ಉರುಳಿಸಿಬಿಡುತ್ತೇನೆ. ಇನ್ನು ಮುಂದೆ ನೀನು ಸಹನಾಳ ಜೊತೆ ಏಕಾಂತವಾಗಿ ಸೇರಬಾರದು. ಬದುಕಬೇಕು ಅಂತ ಆಸೆಯಿದ್ದರೆ ಮರ್ಯಾದೆಯಿಂದ ಅವಳಿಂದ ದೂರ ಇರು. ಇಲ್ಲದಿದ್ದರೆ ನಿನ್ನ ಗತಿ...'' ಎಂದು ಬಲವಾಗಿ ತನ್ನ ಕೈಯನ್ನು ಜಾಡಿಸಿದನು. ರವಿ ದಡಾಲನೆ ನೆಲಕ್ಕೆ ಬಿದ್ದನು.

ಮೋಹನ ಅವನ ಎದೆಗೆ ಕಾಲಿನಿಂದ ಜಾಡಿಸಿ, ಸರಸರನೆ ರೂಮಿನಿಂದ ಹೊರಬಂದನು.

ಇವರಿಬ್ಬರ ಮಾತುಗಳನ್ನು ವ್ಯಕ್ತಿಯೊಂದು ಕೇಳಿಸಿಕೊಂಡಿತ್ತು! ಮೋಹನ ಹೊರಬರುವುದಕ್ಕೆ ಮೊದಲೇ ಅದು ಅಲ್ಲಿಂದ ಮರೆಯಾಗಿತ್ತು!

* * *

ಎಸ್. ಐ. ಶ್ರೀಕಾಂತ್ ಮತ್ತು ಗುರು ಈಗ ಮೋಹನನ್ನು ವಿಚಾರಣೆ ಮಾಡಬೇಕೆಂದು ರೂಮಿಗೆ ಬಂದರು.

ಆಗ ರಾತ್ರಿ ಎಂಟು ಗಂಟೆ.

ಗುರುವಾರ ರಾತ್ರಿ ರಾಜಾರಾಯರ ಲಾಯರ್ ಸೀತಾರಾಮಯ್ಯನವರನ್ನು ನೋಡಲು ಮೈಸೂರಿಗೆ ಹೋಗಿದ್ದರು.

ಸೊರಗೂರಿನಿಂದ ಫೋನ್ ಮಾಡಲಾಗಿತ್ತು.

ರಾಜಾರಾಯರು ಮೈಸೂರಿನಿಂದ ಊರಿಗೆ ಎಷ್ಟು ಹೊತ್ತಿಗೆ ಹೊರಟರು ಎಂದು ಲಾಯರ್ ಸೀತಾರಾಮಯ್ಯನವರನ್ನು ಫೋನ್ ಮಾಡಿ ಕೇಳಿ ತಿಳಿದುಕೊಂಡಿದ್ದರು.

ಆ ವ್ಯಕ್ತಿ ಮೋಹನ! ಅಂದರೆ ರಾಜಾರಾಯರು ಎಷ್ಟು ಹೊತ್ತಿಗೆ ಹಿಂತಿರುಗಿ ಬರುತ್ತಾರೆ ಎಂಬುದು ಮೋಹನನಿಗೆ ಗೊತ್ತಿತ್ತು.

ಮೋಹನ ಕೊಲೆ ಮಾಡಿರಬಹುದೆ?

ರವಿ ಮತ್ತು ಸಹನಾಳ ವಿಚಾರಣೆಯಿಂದ ಈ ಪೋಲೀಸ್ ಅಧಿಕಾರಿಗಳಿಗೆ ಮತ್ತೊಂದು ಅಂಶ ತಿಳಿದಿತ್ತು.

ರಾಜಾರಾಯರಿಗೆ ತಮ್ಮ ಮಗಳನ್ನು ರವಿಗೆ ಮದುವೆ ಮಾಡಿಕೊಡಬೇಕೆಂಬ ಆಸೆಯಿತ್ತು.

ಇದು ಮೋಹನನಿಗೆ ಹೇಗೋ ತಿಳಿದಿದೆ.

ರಾಜಾರಾಯರು ಬದುಕಿರುವ ತನಕ ಸಹನಾಳನ್ನು ಮದುವೆಯಾಗಲು ಸಾಧ್ಯವಿಲ್ಲ ಅಂತ ಕೊಲೆ ಮಾಡಿರಬಹುದೆ?

ಗುರುವಾರ ರಾತ್ರಿ ಮೋಹನ ಎಲ್ಲಿದ್ದ?

ಬಂಗಲೆಯಿಂದ ಹೊರಬಂದಿದ್ದನೆ?

ಈ ಅಂಶಗಳನ್ನು ದೃಢಪಡಿಸಿಕೊಳ್ಳಲು ಪೋಲೀಸ್ ಅಧಿಕಾರಿಗಳು ಮೋಹನನ ಕೊಠಡಿಗೆ ಬಂದರು.

ಮೋಹನನ ಕೊಠಡಿಯ ಬಾಗಿಲು ತೆರೆದಿತ್ತು.

ಆದರೆ ಮೋಹನ ಅಲ್ಲಿರಲಿಲ್ಲ!

ಬಂಗಲೆಯ ಕೆಲಸದ ಆಳುಗಳನ್ನು ವಿಚಾರಿಸಿದಾಗ ಮೋಹನ ಈಗ ತಾನೇ ಹೊರಗೆ ಹೋದ ಎಂದು ತಿಳಿಯಿತು.

ಆಗ ರಾತ್ರಿ ಒಂಭತ್ತು ಗಂಟಲ!

ಪೋಲೀಸ್ ಅಧಿಕಾರಿಗಳು ಪರಸ್ಪರ ಮುಖ ನೋಡಿಕೊಂಡರು. 'ಮೋಹನ ಈ ರಾತ್ರಿಯ ಹೊತ್ತಿನಲ್ಲಿ ಎಲ್ಲಿಗೆ ಹೋದ?'

* * *

ಅದೇ ಬಂಗಲೆಯ ಮತ್ತೊಂದು ಕೊಠಡಿ!

ರವಿ ಭಯ, ಗಾಬರಿಯಿಂದ ಚಡಪಡಿಸುತ್ತಿದ್ದಾನೆ.

ಆತನನ್ನು ಭಯ... ಮೋಹನನ ಭಯ ಕಾಡುತ್ತಿದೆ.

'ಸಹನಾಳನ್ನು ನೀನು ಮರೆಯಬೇಕು. ಸಹನಾಳನ್ನು ಬಯಸಿದರೆ, ಅವಳೊಡನೆ ಏಕಾಂತದಲ್ಲಿ ಮಾತಾಡಿದರೆ, ಅಲ್ಲಿಗೆ ನಿನ್ನ ಆಯಸ್ಸು ಮುಗಿದಂತೆಯೇ ಸರಿ.'

ಹಾಗೆಂದು ಮೋಹನ ಹೆದರಿಸಿದ್ದನು.

ಮೋಹನ ತುಂಬಾ ಒಡ್ಡ, ವಿಪರೀತ ಕುಡಿಯುತ್ತಿದ್ದ. ಅವನಿಗೆ ಊರಿನ ಪುಂಡು-ಪೋಕರಿಗಳ ಸಂಪರ್ಕ ಸಹಾ ಇತ್ತು. ಅವನು ಏನು ಮಾಡಲೂ ಸಹಾ ಹೇಸುವುದಿಲ್ಲ.

'ಸಹನಾಳನ್ನು ಮರೆಯಬೇಕಂತೆ.'

'ಮಾವ ಬದುಕಿದ್ದಾಗ ನಾನೇ ಅವರ ಅಳಿಯ ಆಗಬೇಕೆಂದು ಆಸೆಪಟ್ಟಿದ್ದರು. ಅದನ್ನು ಸಹನಾಳ ಹತ್ತಿರ ಸಹಾ ಹೇಳಿದ್ದರು. ಅದಕ್ಕೆ ಸಹನಾಳಿಗೆ ನನ್ನ ಬಗ್ಗೆ ಸದಭಿಪ್ರಾಯವಿದೆ.

'ಸಹನಾಳ ಮನಸ್ಸು ನನ್ನ ಕಡೆ ವಾಲುತ್ತಿದೆ.'

'ಇದೆಲ್ಲಾ ಮೋಹನನಿಗೆ ತಿಳಿದಿದೆ. ಅದಕ್ಕೇ ನನಗೆ ಬೆದರಿಕೆ ಹಾಕುತ್ತಿದ್ದಾನೆ. ಏಕೆಂದರೆ ಸಹನಾ ನನ್ನನ್ನು ಮದುವೆ ಮಾಡಿಕೊಂಡರೆ ಅವನಿಗೆ ಆಸ್ತಿ ದೊರೆಯುವುದಿಲ್ಲವಲ್ಲ!'

'ಈಗ ನಾನೇನು ಮಾಡಲಿ?'

'ಇವನಿಗೆ ಹೆದರಿ ಸಹನಾಳನ್ನು ಮರೆಯಬೇಕೆ?'

'ಅದು ಮಾತ್ರ ನನ್ನಿಂದ ಸಾಧ್ಯವಿಲ್ಲ.'

'ಸಹನಾಳನ್ನು ಯಾವಾಗ ಮದುವೆ ಮಾಡಿಕೊಂಡು, ಅವಳೊಂದಿಗೆ ಏಕಾಂತದ ರತಿ ಸುಖ ಅನುಭವಿಸುತ್ತೇನೋ!'

'ಆದರೆ ಮೋಹನ ನನಗೆ ತೊಂದರೆ ಮಾಡಿದರೆ?'

'ಅಹನಾಳಿಗೆ ಕೊಲೆ ಬೇಕಾದರೂ ಮಾಡುತ್ತಾನಂತೆ'

ರವಿ ಭಯದಿಂದ ನಡುಗಿದನು. ಕುಡುಕ, ಒಡ್ಡ ಮೋಹನ ಖಂಡಿತಾ ಹೇಳಿದಂತೆ ಮಾಡಿಯೇ ತೀರುತಾನೆ.

ಬಾಗಿಲು ತೆರೆದುಕೊಂಡಿತು.

ರವಿ ಬೆಚ್ಚಿಬಿದ್ದು ನೋಡಿದನು.

ಅವನ ತಂದೆ ಸೋಮಯ್ಯ ನಿಂತಿದ್ದನು.

ರವಿ ತಂದೆ ಒಳಗೆ ಬಂದ ಕೂಡಲೇ ಬಾಗಿಲನ್ನು ಭದ್ರಪಡಿಸಿದ, ತನ್ನ ಮನದ ಆತಂಕ, ಮೋಹನ ಹೆದರಿಸಿದ್ದನ್ನು ಸಹಾ ವಿವರಿಸಿದನು.

ಸೋಮಯ್ಯ ಕೂಡಲೇ ಮಾತಾಡಲಿಲ್ಲ.

''ಈಗ ನಾನು ಏನು ಮಾಡಲಿ ಡ್ಯಾಡಿ?''

''ನೀನು ಏನು ಮಾಡಬೇಕು ಅಂತ ಇದ್ದೀಯ?''

ರವಿ ತಲೆಯಾಡಿಸುತ್ತಾ, ''ನನಗೆ ಏನೂ ತೋಚುತ್ತಲೇ ಇಲ್ಲ.''

ಸೋಮಯ್ಯ, ''ನಿನಗೆ ಸಹನಾ ಬೇಕು ತಾನೆ?''

''ಬೇಕಾ ಅಂತ ಕೇಳ್ತಾ ಇದ್ದೀರಲ್ಲ ಡ್ಯಾಡಿ!''

''ಹಾಗಾದರೆ ನಾನು ಹೇಳಿದಂತೆ ಕೇಳಬೇಕು.''

ರವಿ ಸಂತೋಷ, ಆತುರದಿಂದ, ''ಹಾಂ...ಹಾಂ...ಹೇಳಿ...ಹೇಳಿ ಡ್ಯಾಡಿ ಕೇಳುತ್ತೇನೆ.''

''ಮೋಹನ ಯಾವತ್ತಿದ್ದರೂ ನಿನ್ನ ಶತ್ರು.''

ರವಿ ಬೆರಗಾಗಿ ನೋಡಿದನು.

''ನೀನು ಸಹನಾಳನ್ನು ಮದುವೆಯಾಗಲು ಅವನಿಂದ ನಿನಗೆ ಯಾವತ್ತಿದ್ದರೂ ತೊಂದರೆ ಬಂದೇ ಬರುತ್ತದೆ.''

''ನನಗದು ಗೊತ್ತಿದೆ ಡ್ಯಾಡಿ.''

ಸೋಮಯ್ಯ ಗಂಭೀರವಾಗಿ, ''ಬರೀ ಗೊತ್ತಿದ್ದರೆ ಸಾಲದು. ಆ ತೊಂದರೆಯನ್ನು ಶಾಶ್ವತವಾಗಿ ನಿವಾರಿಸಿಕೊಳ್ಳಬೇಕು.''

ರವಿ ಭಯದಿಂದ, ''ಹೇಗೆ ಡ್ಯಾಡಿ?''

''ಮೋಹನನನ್ನು ಶಾಶ್ವತವಾಗಿ ದೂರ ಮಾಡಬೇಕು.''

ರವಿ ನಡುಗುತ್ತಾ, ''ಅಂದರೆ...''

''ಅವನನ್ನು ಕೊಲೆ ಮಾಡಬೇಕು...!''

ರವಿ ತತ್ತರಿಸಿ ಹೋದನು.

ಸೋಮಯ್ಯ ನಡುಗುತ್ತಿದ್ದ ಮಗನ ಭುಜದ ಮೇಲೆ ಹಾಕಿ, ''ಮೈ ಸನ್...ನೀನು ಮೆಚ್ಚಿರುವ ಹೆಣ್ಣಿನ ಜೊತೆ ಈ ಸಮಸ್ತ ಆಸ್ತಿಯನ್ನೂ ನೀನೇ ಅನುಭವಿಸಬೇಕು.''

ರವಿ ಭಯದಿಂದ ನೋಡಿದನು.

ಸೋಮಯ್ಯ ಗಂಭೀರವಾಗಿ, ''ಮೋಹನ ಈಗ ಮಾವಿನ ತೋಪಿನ ಕಡೆ ಹೋಗುತ್ತಿದ್ದ ಅಂತ ಸುದ್ದಿ ಬಂತು. ಇಂತಹ ಅವಕಾಶ ಪುನಃ ಸಿಗೊಲ್ಲ.''

ರವಿ ಕಂಪಿಸುವ ಸ್ವರದಿಂದ, ''ನಾವೀಗ ಮಾವಿನ ತೋಪಿಗೆ ಹೋಗಬೇಕೆ...?''

ಸೋಮಯ್ಯ ಗಂಭೀರವಾಗಿ ತಲೆಯಾಡಿಸಿದನು.

ಆಗ ರಾತ್ರಿ ಹತ್ತು ಗಂಟೆ!

* * *

ಬೆಳಗಿನ ಜಾವ ಐದು ಗಂಟೆ!

ಎಸ್. ಐ. ಶ್ರೀಕಾಂತ್ ತನ್ನ ಹೆಂಡತಿಯನ್ನು ತಬ್ಬಿಕೊಂಡು ಸುಖನಿದ್ರೆಯಲ್ಲಿದ್ದನು.

ಫೋನಿನ ಕರೆಗಂಟೆ ಮೊಳಗಿತು.

ಸುಖನಿದ್ರೆಗೆ ರಸಭಂಗವಾಗಿದ್ದರಿಂದ ಶ್ರೀಕಾಂತ ಗೊಣಗುತ್ತಲೇ ಎದ್ದು, ರಿಸೀವರ್ ಎತ್ತಿ, ''ಹಲೋ...''

''ಗುಡ್ ಮಾರ್ನಿಂಗ್ ಶ್ರೀಕಾಂತ್.''

ಅದು ಪೋಲೀಸ್ ಅಧಿಕಾರಿ ಗುರುಮೂರ್ತಿಯ ಧ್ವನಿ.

''ವೆರಿ ಗುಡ್ ಮಾರ್ನಿಂಗ್ ಸಾರ್.''

''ತೊಂದರೆ ಕೊಡುತ್ತಿರುವುದಕ್ಕೆ ಕ್ಷಮಿಸಿ.''

''ಛೇ...ಛೇ...ಹಾಗೇನಿಲ್ಲ.''

''ನೀವು ಈಗಲೇ ಮಾವಿನ ತೋಪಿಗೆ ಬರಬೇಕು.''

''ಯಾಕೆ ಸಾರ್?''

''ಅಲ್ಲೊಂದು ಕೊಲೆ ನಡೆದಿದೆ.''

ಶ್ರೀಕಾಂತ ಬೆಚ್ಚಿಬಿದ್ದನು. ಅವನ ನಿದ್ರೆ, ಆಲಸ್ಯ ಎಲ್ಲಾ ಹಾರಿಹೋಯಿತು.

ಅವನು ಗಾಬರಿ, ಆತುರದಿಂದ ''ಏನು...ಮಾವಿನ ತೋಪಿನಲ್ಲಿ ಮತ್ತೊಂದು ಕೊಲೆ ನಡೆದಿದೆಯೆ?''

''ಹೌದು ಶ್ರೀಕಾಂತ್.''

''ಕೊಲೆಯಾಗಿರೋದು ಯಾರು ಸಾರ್?''

''ಮೋಹನ...!''

* * *

ಬೆಳಗಿನ ಆರು ಗಂಟೆಯ ಸಮಯ.

ಮಬ್ಬುಗತ್ತಲು ಆವರಿಸಿಕೊಂಡಿದೆ.

ಹಿಮ ಸುರಿಯುತ್ತಿದೆ.

ಗಾಳಿ 'ಸೊಂಯ್' ಎಂದು ಬೀಸುತ್ತಿದೆ.

ಡಿಸೆಂಬರ್ ತಿಂಗಳ ಚಳಿ ಮೈ ನಡುಗಿಸುತ್ತಿದೆ. ಆ ಚಳಿಯಲ್ಲೂ ಸಹಾ ಜನಗಳು ಗುಂಪುಗೂಡಿದ್ದಾರೆ.

ಸಹನಾ ಮೈತುಂಬಾ ಶಾಲು ಹೊದ್ದುಕೊಂಡಿದ್ದಾಳೆ. ಅವಳ ಮುಖ ಭಯದಿಂದ ಬಿಳುಚಿಕೊಂಡಿದೆ.

ಮೂರು ದಿನಗಳ ಅವಧಿಯಲ್ಲಿ ಎರಡು ಕೊಲೆಗಳು ನಡೆದಿರುವುದರಿಂದ ಭಯಗೊಂಡಿದ್ದಾರೆ.

ರಂಗಯ್ಯ ತಲೆ ಚಚ್ಚಿಕೊಂಡು ಅಳುತ್ತಿದ್ದಾನೆ.

ಆತ ಮಗನ ಬಗ್ಗೆ ಅಪಾರ ನಿರೀಕ್ಷೆ ಇರಿಸಿಕೊಂಡಿದ್ದನು. ಮುಂದೆ ಮಗನೇ ಈ ಸಮಸ್ತ ಆಸ್ತಿಗೆಲ್ಲಾ ಯಜಮಾನನಾಗಿ ಬಾಳುತ್ತಾನೆ' ಎಂದು ಕನಸು ಕಂಡಿದ್ದನು.

ಆದರೆ ಮಗ ಸತ್ತಿದ್ದಾನೆ.

ಅದೂ ಸಹಜ ಸಾವಲ್ಲ, ಕೊಲೆ!

ಭೀಕರ ರೀತಿಯ ಕೊಲೆ!

ಹೆಣದಿಂದ ಕೊಂಚ ಮುಂದೆ, ಎಡಭಾಗದಲ್ಲಿ ರವಿ ತನ್ನ ತಂದೆ ಸೋಮಯ್ಯನೊಂದಿಗೆ ನಿಂತಿದ್ದಾನೆ.

ರವಿ ಭಯದಿಂದ ತತ್ತರಿಸಿ ಹೋಗಿದ್ದಾನೆ.

ಸೋಮಯ್ಯ ಗೊಂದಲಗೊಂಡಿದ್ದಾನೆ.

ಹಲಣದ ಎದುರಿಗೆ ಮರದ ಕೆಳಗೆ, ಮಾವಿನ ತೋಪಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಕೆಲಸದಾಳು ವಾಸು ತನ್ನ ತಾಯಿಯೊಂದಿಗೆ ನಿಂತುಕೊಂಡಿದ್ದಾನೆ.

ರಂಗಯ್ಯ ಗೋಳಾಡುತ್ತಿದ್ದಾನೆ.

ಗುರು ಸಿಗರೇಟ್ ಸೇದುತ್ತಿದ್ದಾನೆ.

ಎಸ್. ಐ. ಶ್ರೀಕಾಂತ್ ಹೆಣ ಬಿದ್ದಿರುವ ಸ್ಥಳವನ್ನು ನೋಡುತ್ತಿದ್ದಾನೆ. ಅವನಿಗೆ ಆಶ್ಚರ್ಯವಾಗುತ್ತಿದೆ.

ಕೊಲೆ ಒಂದೇ ರೀತಿ ನಡೆದಿದೆ.

ಈ ಬಾರಿಯೂ ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ.

ಹೆಣ ಭಯಂಕರವಾಗಿ ಕಾಣುತ್ತಿದೆ.

ಕಣ್ಣಿನ ಗುಡ್ಡೆಗಳು ಹೊರಬಂದಿವೆ. ನಾಲಿಗೆ ಬಾಯಿಯಿಂದ ಹೊರಕ್ಕೆ ಚಾಚಿಕೊಂಡಿದೆ.

ಸಾಯುವ ಮುನ್ನ ಸೆಣಸಾಟ ನಡೆದಿದೆ.

ಹೆಣ ಬಿದ್ದಿರುವ ಸ್ಥಳದಲ್ಲಿ ಮಣ್ಣು ಕೆತ್ತಿದಂತೆ ಕಾಣುತ್ತಿದೆ. ಕೆಲ ಗುರುತುಗಳು ಮೂಡಿವೆ.

ಕಾಲುಗಳ ಹತ್ತಿರ ತಿಕ್ಕಾಟ ನಡೆದಿದೆ.

ಮಣ್ಣು ಎದ್ದಿರುವಂತೆ ಕಾಣುತ್ತಿದೆ.

ಅಂದರೆ ಕತ್ತಲಲ್ಲಿ ಯಾರೋ ಸಡನ್ ಆಗಿ ಮೇಲೆ ಬಿದ್ದು, ಮೋಹನನ್ನು ಕತ್ತು ಹಿಸುಕಿ ಸಾಯಿಸಿದ್ದಾರೆ.

ಶ್ರೀಕಾಂತ ಎಚ್ಚರಿಕೆಯಿಂದ ನೋಡುತ್ತಿದ್ದಾನೆ.

ಸಮಯ ಉರುಳುತ್ತಿದೆ.

ಕೇಸಿನಲ್ಲಿ ಮುಂದುವರೆಯಲು ಯಾವುದೇ ರೀತಿಯ ಸುಳಿವೂ ದೊರೆತಿಲ್ಲ. ಹುಡುಕುತ್ತಿದ್ದಾನೆ.

ಕ್ಯಾಮೆರಾಗಳು ದೃಶ್ಯವನ್ನು ಸೆರೆಹಿಡಿಯುತ್ತಿವೆ.

ಪಿ.ಸಿ.ಗಳು ಟೇಪನ್ನು ಹಿಡಿದುಕೊಂಡು ಹೆಣದ ಹತ್ತಿರ ಬಂದು ಅಳೆಯುತ್ತಿದ್ದಾರೆ.

ಡಾಕ್ಟರ್ ಶವವನ್ನು ಪರೀಕ್ಷಿಸುತ್ತಿದ್ದಾರೆ.

ಒಂದೇ ಸ್ಥಳದಲ್ಲಿ ಎರಡು ಕೊಲೆಗಳು ನಡೆದಿರುವುದರಿಂದ, ಜನಗಳು ತಮ್ಮ ಮನಸ್ಸಿಗೆ ತೋಚಿದಂತೆ ಮಾತಾಡಿಕೊಳ್ಳುತ್ತಿದ್ದಾರೆ. ರಂಗುರಂಗಿನ ಕತೆ ಹರಡಿದೆ.

ಗುರುಮೂರ್ತಿ ಈಗ ದುಃಖಿತಪ್ತನಾಗಿದ್ದ ರಂಗಯ್ಯನನ್ನು ಸಂತೈಸಿ, ಪ್ರತ್ಯೇಕ ಸ್ಥಳಕ್ಕೆ ಕರೆತಂದನು.

ಅಲ್ಲಿಗೆ ಎಸ್. ಐ. ಶ್ರೀಕಾಂತ್ ಸಹಾ ಬಂದನು.

ವಿಚಾರಣೆ ಪ್ರಾರಂಭವಾಯಿತು.

ಗುರು, ''ರಂಗಯ್ಯನವರೆ...ಪುತ್ರಶೋಕದಿಂದ ಪರಿತಪಿಸುತ್ತಿರುವ ನಿಮ್ಮನ್ನ ಪ್ರಶ್ನಿಸಬೇಕಾಗಿದೆ.''

ರಂಗಯ್ಯ ತಲೆ ಎತ್ತಿದರು.

ಅವರ ಕಣ್ಣುಗಳು ಹನಿಗೂಡುತ್ತಿದ್ದವು.

''ಐ ಯಾಮ್ ಸೋ ಸಾರಿ. ಕೊಲೆಗಾರರನ್ನು ಕಂಡುಹಿಡಿಯಬೇಕಾದರೆ ನಾವು...''

ರಂಗಯ್ಯ ದುಃಖ, ಕೋಪ, ಆವೇಶದಿಂದ, ''ನನ್ನ ಮಗನನ್ನು ಕೊಂದಿರುವ ಕೊಲೆಗಾರ ಯಾರು ಅಂತ ಗೊತ್ತಾಗಬೇಕು.. ಅದಕ+ಕ ನಾನೇ ಸಹಕರಿಸುತ್ತೇನೆ'' ಎಂದು ತನ್ನ ಎದುರಿಗೆ ನಿಂತಿದ್ದ ಸೋಮಯ್ಯನ ಕಡೆ ನೋಡಿದನು.

ಮಗನ ಜೊತೆ ನಿಂತಿದ್ದ ಸೋಮಯ್ಯ ಬೆಚ್ಚಿಬಿದ್ದನು.

ಗುರು, ''ನೆನ್ನೆ ರಾತ್ರಿ ಮೋಹನ ಬಂಗಲೆಯಿಂದ ಹೊರಗೆ ಬಂದಿದ್ದು ಯಾವಾಗ ಅಂತ ಗೊತ್ತೆ?''

''ರಾತ್ರಿ ಒಂಭತ್ತೂವರೆ ಇರಬೇಕು.''

''ರಾತ್ರಿ ಎಲ್ಲಿಗೆ ಹೋಗುತ್ತೇನೆ ಅಂತ ಹೇಳಿದ್ದನೆ?''

''ಇಲ್ಲ. ಇಂತಹ ಕಡೆ ಹೋಗುತ್ತಿದ್ದೇನೆ ಅಂತ ಹೇಳಿರಲಿಲ್ಲ.''

''ಮಾವಿನ ತೋಪಿಗೆ ಯಾಕೆ ಬಂದ?''

''ಅದೇ ನನಗೂ ಅರ್ಥವಾಗುತ್ತಿಲ್ಲ.''

''ಅಂದರೆ...''

''ರಾತ್ರಿಯ ಹೊತ್ತಿನಲ್ಲಿ ಮಾವಿನ ತೋಪಿಗೆ ಹೋಗಿ ಮಾಡುವಂತಹ ರಾಜಕಾರ್ಯ ಅವನಿಗೆ ಏನೂ ಇರಲಿಲ್ಲ.''

''ಕಾರಣವಿಲ್ಲದೆ ಅಲ್ಲಿಗೆ ಹೋಗುತ್ತಾನೆಯೇ?''

''ಕಾರಣ ಇರಲೇಬೇಕು. ಆದರೆ ನನಗೆ ಗೊತ್ತಿಲ್ಲ.''

''ಚೆನ್ನಾಗಿ ನೆನಪು ಮಾಡಿಕೊಂಡು ಹೇಳಿ.''

''ಇಲ್ಲ...ನನಗೆ ಗೊತ್ತಿರೋ ಹಾಗೆ ಏನೂ ಇಲ್ಲ.''

''ಯಾರಾದರೂ ಬರಲು ಹೇಳಿದ್ದರೆ?''

''ರಾತ್ರಿಯ ಹೊತ್ತಿನಲ್ಲಿ ತೋಪಿಗೆ ಯಾರು ಹೋಗಿದ್ದರೆ?''

''ಇಲ್ಲ ಇನ್‌ಸ್ಪೆಕ್ಟರ್.''

''ಫೋನ್ ಕಾಲ್ ಬಂದಿತ್ತೆ?''

ರಂಗಯ್ಯ ನೆನಪು ಮಾಡಿಕೊಂಡು ಗಾಬರಿಯಿಂದೂ ''ಹಾನ...ಹಾಂ...ನನಗೆ ಈಗ ನೆನಪಾಗುತ್ತಿದೆ, ನನ್ನ ಮಗ ಬಂಗಲೆಯಿಂದ ಹೊರಗೆ ಹೋಗುವ ಐದು ನಿಮಿಷಗಳ ಮೊದಲು ಫೋನ್ ಬಂದಿತ್ತು. ಒಂದು ನಿಮಿಷ ಫೋನಿನಲ್ಲಿ ಮಾತಾಡಿದ್ದ.''

''ಫೋನ್ ಮಾಡಿದ್ದು ಯಾರು?''

''ನನಗೆ ಅದು ಹೇಗೆ ಗೊತ್ತಾಗಲು ಸಾಧ್ಯ?''

ಗುರು ಸಿಗರೇಟ್ ಹೊತ್ತಿಸುತ್ತಾ, ''ಆ ಸಮಯದಲ್ಲಿ ಮೋಹನ ಕೊನೆಯಲ್ಲಿ ಏನು ಹೇಳಿದ?''

''ಈಗಲೇ ಅಲ್ಲಿಗೆ ಬರುತ್ತಿದ್ದೇನೆ ಅಂತ ಅಂದ.''

''ಹೂಂ...ಆಮೇಲೆ?''

''ಅಲ್ಲಿಂದ ಹೊರಟುಹೋದ.''

ಉರು ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ. ''ರಂಗಯ್ಯ...ನಿಮಗೆ ಯಾರ ಮೇಲಾದರೂ ಅನುಮಾನ ಇದೆಯೆ?''

''ಖಂಡಿತಾ ಇದೆ.''

ಗುರು ಆತುರದಿಂದ, ''ಯಾರ ಮೇಲೆ?''

''ನನ್ನ ಅಣ್ಣ ಸೋಮಯ್ಯ ಮತ್ತು ಅವನ ಮಗನ ಮೇಲೆ. ಅವರಿಬ್ಬರೇ ನನ್ನ ಮಗನನ್ನು ಕೊಂದಿದ್ದಾರೆ.''

ಗುರು ಬೆಚ್ಚಿಬಿದ್ದನು. ಹತ್ತಿರ ಬಂದು. ''ಸೋಮಯ್ಯ ಅಥವಾ ರವಿ ಯಾಕೆ ನಿಮ್ಮ ಮಗನನ್ನು ಕೊಲೆ ಮಾಡುತ್ತಾರೆ?''

''ಸಹನಾಳ ಆಸ್ತಿಗಾಗಿ...''

''ಅಂದರೆ...''

ರಂಗಯ್ಯ ಹಲ್ಲು ಕಡಿಯುತ್ತಾ ಎಲ್ಲವನ್ನೂ ವಿವರಿಸಿದನು. ಕೊನೆಯಲ್ಲಿ, ''ನನ್ನ ಮಗ ಬದುಕಿದ್ದರೆ ಸಹನಾ ಸಿಗಲಾರಳು ಅಂತ ಅವರುಗಳೇ ಈ ಕೆಲಸ ಮಾಡಿದ್ದಾರೆ.''

''ಇದಕ್ಕೆ ಆಧಾರ ಏನಾದರೂ ಇದೆಯೆ?''

''ನೆನ್ನೆ ರಾತ್ರಿ ನನ್ನ ಅಣ್ಣ ಸೋಮಯ್ಯ ಬಂಗಲೆಯಲ್ಲಿ ಇರಲಿಲ್ಲ.''

ಗುರು ಆಶ್ಚರ್ಯದಿಂದ ''ಇದು ನಿಜವೆ?''

''ಬೇಕಿದ್ದರೆ ಅವನನ್ನೇ ಕರೆಸಿ. ಕೇಳಿ.''

ಗುರು ಈಗ ಎಸ್. ಐ. ಶ್ರೀಕಾಂತ್‌ನ ಹತ್ತಿರ ಬಂದು ಅವನ ಕಿವಿಯಲ್ಲಿ ಏನೋ ಪಿಸುಗುಟ್ಟಿದನು.

ಶ್ರೀಕಾಂತ್ ಈಗ ಕೆಲಸದಾಳಿನ ಹತ್ತಿರ ಬಂದನು.

ವಾಸು ಪೆಚ್ಚಾಗಿ ನಿಂತಿದ್ದನು.

ಅನಸೂಯಮ್ಮ ಭಯ, ಗಾಬರಿಯಿಂದ ತತ್ತರಿಸಿಹೋಗಿದ್ದ ಸಹನಾಳನ್ನು ತಬ್ಬಿಕೊಂಡು ಸಂತೈಸಿ ಧೈರ್ಯ ಹೇಳುತ್ತಿದ್ದರು.

''ಏನಯ್ಯ ಕುಂಭಕರ್ಣ?''

ವಾಸು ಪೇಲವ ನಗೆ ಬೀರಿದನು.

''ನೆನ್ನೆ ರಾತ್ರಿ ಸಹಾ ಗಡದ್ದಾಗಿ ನಿದ್ದೆ ಬಂದಿತ್ತೆ?''

''ಇಲ್ಲಾ ಸಾರ್...ಮಧ್ಯೆ ಎಚ್ಚರವಾಗಿತ್ತು.''

ಶ್ರೀಕಾಂತ್ ಹುಬ್ಬೇರಿಸಿ, ''ಏನಂದೆ...ನಿನಗೆ ನೆನ್ನೆ ರಾತ್ರಿ ಎಚ್ಚರವಾಗಿತ್ತೆ? ಎಷ್ಟು ಹೊತ್ತಿನಲ್ಲಿ?''

''ಟೈಮ್ ನೋಡಲಿಲ್ಲ ಸಾರ್.''

''ನಿನಗೆ ಎಚ್ಚರ ಆಗಲು ಕಾರಣ ಏನು?''

ವಾಸು ಗಡ್ಡ ಕೆರೆದುಕೊಳ್ಳುತ್ತಾ, ''ಯಾರೋ ಜೋರಾಗಿ ದಡದಡನೆ ಮನೆಯ ಪಕ್ಕದಲ್ಲೇ ಓಡಾಡಿದಂತೆ ಸದ್ದು ಕೇಳಿ ನನಗೆ ಎಚ್ಚರವಾಯಿತು ಸಾರ್.''

''ಆಗ ನೀನೇನು ಮಾಡಿದೆ?''

''ಲ್ಯಾಂಪ್ ತಗೊಂಡು ಹೊರಗೆ ಬಂದೆ?''

ಶ್ರೀಕಾಂತ್ ಕುತೂಹಲದಿಂದ, ''ಅಲ್ಲಿ ನೀನೇನು ಕಂಡೆ?''

''ಈ ಹೆಣವನ್ನು.'' ಕೈ ತೋರಿಸುತ್ತಾ ಹೇಳಿದನು.

''ಹೆಣ ಆಗ ಹ್ಯಾಗೆ ಬಿದ್ದಿತ್ತು?''

''ಈಗ ಇರೋ ರೀತಿಯಲ್ಲೇ.''

''ಅಲ್ಲಿ ಯಾರನ್ನಾದರೂ ಕಂಡೆಯಾ?''

ವಾಸು ಉತ್ತರಿಸಲು ಅನುಮಾನಿಸಿದನು.

ಶ್ರೀಕಾಂತ ಅವನ ಕೈ ಅದುಮುತ್ತಾ, ''ಹೆದರಬೇಡ ನೀನು ಕಂಡಿದ್ದನ್ನು ಧೈರ್ಯವಾಗಿ ಹೇಳು.''

''ಹೆಣದ ಹತ್ತಿರ ಸೋಮಯ್ಯ ಇದ್ದರು.''

ಶ್ರೀಕಾಂತ್ ಬೆಚ್ಚಿಬೀಳುತ್ತಾ, ''ಅವರು ಕೊಲೆ ಮಾಡುತ್ತಿದ್ದರೆ?''

''ಇಲ್ಲ. ನಾನು ನೋಡಿದಾಗ ಸುಮ್ಮನೆ ನಿಂತಿದ್ದರು.''

''ಅವರು ನಿನ್ನನ್ನು ನೋಡಿದರೆ.''

''ನೋಡಲಿಲ್ಲ ಅಂತ ಕಾಣುತ್ತೆ.''

''ಸೋಮಯ್ಯ ಆಮೇಲೆ ಏನು ಮಾಡಿದರು?''

''ಭಯದಿಂದ ಓಡಿಹೋದರು.''

''ಆಮೇಲೆ ನೀನೇನು ಮಾಡಿದೆ?''

''ಬಂಗಲೆಗೆ ಬಂದು ವಿಷಯ ತಿಳಿಸಿದೆ.''

''ಯಾರಿಗೆ ತಿಳಿಸಿದೆ?''

ಗುರುಮೂರ್ತಿಯ ಕಡೆ ತೋರಿಸಿದನು.

ಶವವನ್ನು ಪಂಚನಾಮೆ ನಡೆಸಿದ ಬಳಿಕ ವೈದ್ಯಕೀಯ ವಿಚಾರಣೆಗೆಂದು ಆಸ್ಪತ್ರೆಗೆ ಕಳುಹಿಸಲಾಯಿತು.

ಪ್ರತ್ಯೇಕ ಸ್ಥಳದಲ್ಲಿ...

ಗುರು, ಎಸ್.ಐ. ಶ್ರೀಕಾಂತ್ ಮರವೊಂದರ ಕೆಳಗೆ ನಿಂತಿದ್ದಾರೆ. ಅವರೆದುರಿಗೆ ಸೋಮಯ್ಯ ನಿಂತಿದ್ದಾನೆ.

ಸೋಮಯ್ಯನ ಮುಖ ಬಿಳುಚಿಕೊಂಡಿದೆ.

ಗುರು ಸಿಗರೇಟನ್ನು ಸೇದುತ್ತಾ, ''ಸೋಮಯ್ಯನವರೆ...ನೆನ್ನೆ ರಾತ್ರಿ ನೀವು ಬಂಗಲೆಯಲ್ಲೇ ಇದ್ರಾ?''

''ಹಾಂ...ಹಾಂ...ಇದ್ದೆ.''

''ಸುಳ್ಳು ಹೇಳಬೇಡಿ ಸೋಮಯ್ಯ.''

ಸೋಮಯ್ಯ ಗಾಬರಿಯಿಂದ, ''ಅದು...ಅದು...''

''ರಾತ್ರಿ ಹತ್ತರಿಂದ ಹನ್ನೆರಡರ ತನಕ ಇರಲಿಲ್ಲ. ಅಲ್ಲವೇ?''

ಸೋಮಯ್ಯ ಇದಕ್ಕೆ ಉತ್ತರಿಸಲಿಲ್ಲ.

ಗುರು ತೀಕ್ಷ್ಣವಾಗಿ, ''ಆ ಸಮಯದಲ್ಲಿ ನೀವು ಮಾವಿನ ತೋಪಿನಲ್ಲಿ ಇದ್ದಿರಿ. ನಿಜ ತಾನೆ? ಅದಕ್ಕೆ ಸಾಕ್ಷಿ ಬೇಕೆ?''

ಸೋಮಯ್ಯ ತಲೆ ತಗ್ಗಿಸಿದರು.

''ಈಗ ಹೇಳಿ... ಮಾವಿನ ತೋಪಿಗೆ ನೀವ್ಯಾಕೆ ಬಂದಿದ್ರಿ?''

''ಅದು...ಅದು...''

''ಮಾವಿನ ಜಹಣ್ಣು ತಿನ್ನಲು ಬಂದಿದ್ರಾ?''

ಸೋಮಯ್ಯ ಉತ್ತರಿಸಲಿಲ್ಲ.

ಗುರು ಗಡುಸಾಗಿ, ''ನಾನು ಹೇಳುತ್ತಿದ್ದೇನೆ, ನೀವು ಕೊಲೆ ಮಾಡಬೇಕು ಅಂತಾನೆ ತೋಪಿಗೆ ಬಂದಿದ್ರಿ ಅಂತ.''

ಸೋಮಯ್ಯ ಭಯದಿಂದ ತತ್ತರಿಸಿದನು.

ಗುರು ಮುಂದುವರೆಸುತ್ತಾ, ''ನಿಮ್ಮ ಅಣ್ಣನ ಮಗ ಮೋಹನ ತೋಪಿಗೆ ಬಂದಿದ್ದು ಗೊತ್ತಾಗಿ ನೀವು ಹಿಂಬಾಲಿಸಿಕೊಂಡು ಬರಲಿಲ್ಲವೇ?''

ಸೋಮಯ್ಯ ಮೆಲ್ಲಗೆ, ''ಹೌದು.''

''ನೀವು ಇಲ್ಲಿಗೆ ಬಂದಾಗ ಎಷ್ಟು ಹೊತ್ತಾಗಿತ್ತು?''

''ಹತ್ತೂ ಮುಕ್ಕಾಲು ಗಂಟೆ ಇರಬೇಕು.''

''ಮೋಹನನ್ನು ಹ್ಯಾಗೆ ಸಾಯಿಸಿದ್ರಿ?''

ಸೋಮಯ್ಯ ತಡಬಡಾಯಿಸಿಹೋದನು.

ಗುರು ಕೋಪದಿಂದ, ''ಕೇಳಿದ ಪ್ರಶ್ನೆಗಳಿಗೆ ಪಟಪಟನೆ ಉತ್ತರ ಕೊಡೋದನ್ನ ಕಲಿಯಿರಿ ಸೋಮಯ್ಯ. ಮೋಹನನನ್ನು ನೀವು ಕತ್ತು ಹಿಸುಕಿ ತಾನೇ ಕೊಲೆ ಮಾಡಿದ್ದು?''

ಸೋಮಯ್ಯ ಭಯ,ಗಾಬರಿ,ಆತುರದಿಂದ, ''ಇಲ್ಲ...ಇಲ್ಲ...ನಾನು ಮೋಹನನನ್ನು ಕೊಲೆ ಮಾಡಲಿಲ್ಲ.''

''ಸುಳ್ಳು ಹೇಳಬೇಡಿ ಸೋಮಯ್ಯ.''

''ಇಲ್ಲ...ಇಲ್ಲ...ದೇವರಾಣೆಯಾಗಿಯೂ ಕೊಲೆ ಮಾಡಿಲ್ಲ'' ಎಂದು ಕೈ ಜೋಡಿಸಿ ಭಯದಿಂದ ಹೇಳಿದರು.

''ದನ ತಿನ್ನುವವನು ಗೊಬ್ಬರದ ಮೇಲೆ ಪ್ರಮಾಣ ಮಾಡಿದ ಹಾಗಿದೆ ನಿಮ್ಮ ಮಾತು. ನೀವು ಮೋಹನನನ್ನು ಕೊಲೆ ಮಾಡಿದ್ದೀರ. ಅದಕ್ಕೆ ಬಲವಾದ ಕಾರಣ ಸಹಾ ಇದೆ.''

ಸೋಮಯ್ಯ ಭಯದಿಂದ ನೋಡಿದರು.

''ಮೋಹನ ಬದುಕಿದ್ದರೆ ಸಹನಾಳನ್ನು ನಿಮ್ಮ ಮಗ ಮದುವೆಯಾಗಲು ಸಾಧ್ಯವಿಲ್ಲ ಅಂತ ಈ ಕೊಲೆ ಮಾಡಿದ್ದೀರ!''

ಸೋಮಯ್ಯ ತಲೆ ತಗ್ಗಿಸಿದನು.

''ಕೊಲೆಗೆ ಕಾರಣ ಆಸ್ತಿ ಮತ್ತು ಹೆಣ್ಣು.''

ಸೋಮಯ್ಯ ನಡುಗುತ್ತಿದ್ದಾನೆ.

ಗುರು ಗಡುಸಾಗಿ, ''ಕೇವಲ ಈ ಕಾರಣದಿಂದ ರಕ್ತಸಂಬಂಧಿಯನ್ನೇ ಕೊಲೆ ಮಾಡಿದ್ದೀರಲ್ಲ...!''

ಸೋಮಯ್ಯ ಜೋರಾಗಿ, ''ಇಲ್ಲ...ಇಲ್ಲ...ನಾನು ಕೊಲೆ ಮಾಡಿಲ್ಲ. ನಾನು ಹೇಳೋದನ್ನ ನಂಬಿ.''

''ನಿಮಗೆ ಕೊಲೆ ಮಾಡೋ ಉದ್ದೇಶ ಇರಲಿಲ್ಲವೆ?''

''ಇತ್ತು.''

''ಅದಕ್ಕಾಗಿಯೇ ಇಲ್ಲಿಗೆ ಬರಲಿಲ್ಲವೆ?''

''ಇತ್ತು.''

ಅದಕ್ಕಾಗಿಯೇ ಇಲ್ಲಿಗೆ ಬರಲಿಲ್ಲವೆ?''

''ಹೌದು.''

''ಅಂದ ಮೇಲೆ ಕೊಲೆ ಮಾಡಲಿಲ್ಲ ಅಂದರೆ ಯಾರು ನಂಬ್ತಾರೆ? ನೀವು ಹೆಣದ ಹತ್ತಿರ ಇದ್ದದ್ದನ್ನು ನೋಡಿದವರು ಇದ್ದಾರೆ.''

ಸೋಮಯ್ಯ ಸೋತವನಂತೆ, ''ಎಲ್ಲಾ ನಿಜ ಇನ್‌ಸ್ಪೆಕ್ಟರ್. ಆದರೆ ನಾನು ಬರೋದಿಕ್ಕೆ ಮೊದಲೇ ಮೋಹನನನ್ನು ಕೊಲೆ ಮಾಡಿ, ಇಲ್ಲಿ ಬಿಸಾಕಿದ್ದರು.''

''ವಾಟ್...!''

''ನಾನು ಮಾಡಬೇಕು ಅಂದುಕೊಂಡಿದ್ದನ್ನು ಬೇರೆ ಯಾರೋ ಮಾಡಿ ಮುಗಿಸಿದ್ದಾರೆ ಇನ್ಸ್‌ಪೆಕ್ಟರ್.''

''ನೀವು ಹೇಳ್ತಾ ಇರೋದು ನಿಜವೆ?''

ಸೋಮಯ್ಯ ತಲೆಯಾಡಿಸುತ್ತಾ, ''ಮೋಹನನನ್ನು ಕೊಲೆ ಮಾಡಬೇಕು ಅಂತ ತೋಪಿಗೆ ಬಂದೆ. ಆದರೆ ನಾನು ಬಂದಾಗ ಮೋಹನ ಸತ್ತು ಬಿದ್ದಿದ್ದ. ನಾನು ಹೆಣದ ಹತ್ತಿರ ಬಂದು ನೋಡಿದೆ. ಭಯವಾಯಿತು ಓಡಿ ಹೋದೆ.''

''ಇದು ನಿಜ ಅಂತ ನಂಬಬಹುದೇ?''

''ನಡೆದಿರೋದನ್ನ ಹೇಳಿದ್ದೇನೆ. ನಂಬಿಕೆ ಬಾರದೇ ಇದ್ದರೆ ನೀವು ನನ್ನನ್ನು ಅರೆಸ್ಟ್ ಮಾಡಬಹುದು.''

'4ಆಗ ಅಲ್ಲಿ ಬೇರೆ ಯಾರಿದ್ದರು?''

''ಇಲ್ಲ...ಇಲ್ಲ ಯಾರೂ ಇರಲಿಲ್ಲ.''

''ಚೆನ್ನಾಗಿ ನೆನಪು ಮಾಡಿಕೊಂಡು ಹೇಳಿ.''

''ಇಲ್ಲ...ಯಾರೂ ಇರಲಿಲ್ಲ.''

ಗುರು ಈಗ ಎಸ್.ಐ. ಶ್ರೀಕಾಂತ್‌ನ ಕಡೆ ತಿರುಗಿ, ''ಸೋಮಯ್ಯನ ಹೇಳಿಕೆ ಪಡೆದುಕೊಳ್ಳಿ.''

'ಸಾರ್...ಈತನನ್ನು ಅರೆಸ್ಟ್ ಮಾಡೋಣವೆ?''

''ಕೊಲೆಯಾಗಿರುವ ಸ್ಥಳದಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಓಡಾಡುತ್ತಿದ್ದುದ್ದರಿಂದ ಧಾರಾಳವಾಗಿ ಅರೆಸ್ಟ್ ಮಾಡಬಹುದು. ಆದರೆ ಆ ಕ್ರಮದ ಅಗತ್ಯ ಇಲ್ಲ. ಮುಚ್ಚಳಿಕೆ ಬರೆಸಿಕೊಂಡು, ಬಿಡಿ.''

ಎಸ್.ಐ. ಶ್ರೀಕಾಂತ್ ತಲೆಯಾಡಿಸಿದನು.

''ಸಾರ್...ನನ್ನದೊಂದು ಮನವಿ.''

ಇಬ್ಬರೂ ಸೋಮಯ್ಯನ ಕಡೆ ತಿರುಗಿದರು.

''ಈ ವಿಚಾರಣೆಯ ವಿವರಗಳನ್ನು ದಯವಿಟ್ಟು ಬಹಿರಂಗಪಡಿಸಬೇಡಿ. ಇದರಿಂದ ಸಹನಾ...''

''ಆಯ್ತು, ಆದರೆ ನೀವು ನಮ್ಮ ಅನುಮತಿ ಇಲ್ಲದೇ ಬೇರೆ ಯಾವ ಊರಿಗೂ ಹೋಗಕೂಡದು.''

ಸೋಮಯ್ಯ ಒಪ್ಪಿ ತಲೆಯಾಡಿಸಿದರು.

ಪೋಲೀಸ್ ಅಧಿಕಾರಿಗಳು ಚರ್ಚಿಸುತ್ತಿದ್ದಾರೆ.

ಮಾಪಿನ ತೋಪಿನಲ್ಲಿ ಎರಡು ಕೊಲೆಗಳು ನಡೆದಿದೆ. ಆದರೆ ಕೊಲೆಗಾರ ಯಾರು ಅಂತ ಆಗಲಿ, ಕೊಲೆಗಳಿಗೆ ಕಾರಣ ಏನು ಅಂತ ಆಗಲಿ ಗೊತ್ತಿರಲಿಲ್ಲ.

ಕೊಲೆಗಾರ ಯಾರು?

6

ಮೋಹನನ ಶವಸಂಸ್ಕಾರ ಮುಗಿಯಿತು.

ರಂಗಯ್ಯ ಹನಿ ತುಂಬಿದ ಕಣ್ಣುಗಳಿಂದ, ಮಗನ ಫೋಟೋ ನೋಡುತ್ತಾ ನಿಟ್ಟುಸಿರು ಬಿಡುತ್ತಿದ್ದಾನೆ.

ಪುತ್ರ ಶೋಕಂ ನಿರಂತರಂ.

ಈ ಕೊಲೆಗಾರ ಯಾರು ಅಂತ ರಂಗಯ್ಯನಿಗೆ ಗೊತ್ತಿದೆ. ಆದರೂ ಅವನನ್ನು ಪೋಲೀಸರೇಕೆ ಅರೆಸ್ಟ್ ಮಾಡಿಲ್ಲ.

'ಕೊಲೆಗಾರ ನನ್ನ ಸಹೋದರ ಸೋಮಯ್ಯ!'

'ಇದೇ ಬಂಗಲೆಯಲ್ಲೇ ತಿರುಗಾಡಿಕೊಂಡಿದ್ದಾನೆ.'

ಕೋಪ, ಆವೇಶದಿಂದ ಹಲ್ಲು ಕಡಿಯುತ್ತಾ, ಮುಷ್ಟಿ ಬಿಗಿದು ನೆಲಕ್ಕೆ ಗುದ್ದಿದನು.

'ಸೋಮಯ್ಯ ಕೊಲೆಗಾರ!'

'ಅವನೇ ನನ್ನ ಮಗನನ್ನು ಕೊಂದಿರೋದು.'

'ನನ್ನ ಮಗ ಬದುಕಿದ್ದರೆ ಸಹನಾಳನ್ನು ತನ್ನ ಸೊಸೆಯನ್ನಾಗಿ ಮಾಡಿಕೊಳ್ಳಲು ತೊಂದರೆಯಾಗುತ್ತೆ ಅಂತ ಮೋಹನನನ್ನು ಕೊಲೆ ಮಾಡಿದ್ದಾನೆ. ಆದರೂ ಪೋಲೀಸರು ಬಂಧಿಸಿಲ್ಲ.'

'ಸರಿಯಾಗಿ ಸುಳ್ಳು ಹೇಳಿ ಜಾರಿಕೊಂಡಿದ್ದಾನೆ.'

'ನಾನವನನ್ನು ಸುಮ್ಮನೆ ಬಿಡೊಲ್ಲ.'

'ನನ್ನ ಮಗನ ಸಾವಿನ ಸೇಡನ್ನು ತೀರಿಸಿಕೊಳ್ಳಬೇಕು. ಸೋಮಯ್ಯನನ್ನು ನಾನೇ ಕೊಲೆ ಮಾಡಬೇಕು!'

ರಂಗಯ್ಯ ಕೋಪದಿಂದ ನಡುಗುತ್ತಿದ್ದಾನೆ.

* * *

ಅದೇ ಬಂಗಲೆಯ ಮತ್ತೊಂದು ಕೊಠಡಿ.

ಸಹನಾ ಭಯದಿಂದ ಚಿಂತಿಸುತ್ತಿದ್ದಾಳೆ.

'ಕೇವಲ ಕೆಲವೇ ದಿನಗಳ ಅಂತರದಲ್ಲಿ ಎರಡು ಕೊಲೆಗಳು ನಡೆದಿವೆ. ನನ್ನ ರಕ್ತ ಸಂಬಂಧಿಗಳ ಕೊಲೆ.'

'ತಂದೆ ಕೊಲೆಯಾಗಿದ್ದಾರೆ.'

'ಈಗ ಸೋದರಮಾವನ ಮಗ!'

'ಈ ಕೊಲೆಗಳ ಉದ್ದೇಶ ಏನು?'

'ಈ ಕೊಲೆಗಳನ್ನು ಮಾಡುತ್ತಿರುವವರು ಯಾರು?'

ಸಹನಾ ತಂಪಾದ ವಾತಾವರಣದಲ್ಲೂ ಬೆವರುತ್ತಿದ್ದಾಳೆ. ಭಯದಿಂದ ದೇಹದಲ್ಲಿ ಬೆವರು ಬರುತ್ತಿದೆ.

'ನಾನು ಮುಂದೇನು ಮಾಡಲಿ?'

'ತಂದೆಯ ಅಪೇಕ್ಷೆಯಂತೆ ರವಿಯನ್ನು ಬೇಗ ಮದುವೆ ಮಾಡಿಕೊಂಡರೆ ಕ್ಷೇಮ ಅಂತ ಅನಿಸುತ್ತೆ. ಇಲ್ಲದಿದ್ದರೆ ಒಂಟಿಯಾಗಿ ಬರೀ ಭಯದಲ್ಲೇ ಕಾಲ ಕಳೆಯಬೇಕಾಗುತ್ತೆ.''

ರವಿಯ ರೂಪ ತೇಲಿ ಬಂದಿತು.

'ರವಿ ಪರವಾಗಿಲ್ಲ ಎನ್ನಬಹುದಾದ ರೂಪವಂತ.'

'ಜೊತೆಗೆ ವಿದ್ಯಾವಂತ, ಬುದ್ಧಿವಂತ, ಯಾವ ದುರಭ್ಯಾಸಗಳೂ ಸಹಾ ಅವನಿಗಿಲ್ಲ, ಸಭ್ಯ, ಸುಸಂಸ್ಕೃತವಂತ.'

'ತಂದೆ ಅವನನ್ನು ಮೆಚ್ಚಿದ್ದರು.'

'ಅವನಿಗಿಂತ ನನಗೆ ಬೇರ್‍ಯಾರೂ ಸೂಕ್ತರಲ್ಲ.'

ರವಿಯ ರೂಪ ಇವಳ ಕಣ್ಣುಗಳ ಮುಂದೆ ತೇಲಿ ಬಂದಿತು. ಧುರವಾದ ಕಲ್ಪನೆಗಳಿಂದ ಮೈ ಮರೆತಳು.

'ರವಿಯನ್ನು ಕಂಡು ನಾಳೆಯೇ ಮಾತಾಡಬೇಕು.'

''ಸಾಧ್ಯವಾದರೆ ಮುಂದಿನ ವಾರವೇ ಮದುವೆ ಮಾಡಿಕೊಂಡುಬಿಡಬೇಕು. ಈಗ ಅದೊಂದೆ ದಾರಿ ಇರೋದು.''

ಅನಸೂಯಮ್ಮ ನೆನಪಾದರು.

ವಾಸು ಜ್ಞಾಪಕಕ್ಕೆ ಬಂದ.

ಸಹನಾ ಎದ್ದು ಮುಖ ತೊಳೆದುಕೊಂಡು, ಕಾರಿನಲ್ಲಿ ಮಾವಿನ ತೋಪಿಗೆ ಬಂದಳು.

ತನ್ನ ಈ ಹೊಸ ನಿರ್ಧಾರದ ಬಗ್ಗೆ ತನ್ನನ್ನು ತಾಯಿಗಿಂತ ಹೆಚ್ಚಾಗಿ ಪ್ರೀತಿಸುತ್ತಿರುವ ಅನಸೂಯಮ್ಮನ ಹತ್ತಿರ ಹೇಳಿಕೊಳ್ಳಬೇಕು ಅಂತ ಇವಳಿಗೆ ಅನಿಸಿತ್ತು.

ವಾಸು ಇವಳು ಬಂದಾಗ ಗುದ್ದಲಿ ಹಿಡಿದುಕೊಂಡು ಹೊಸ ಮಾವಿನ ಗಿಡಗಳಿಗೆ ಪಾತಿ ಮಾಡುತ್ತಿದ್ದ.

ಅನಸೂಯಮ್ಮ ರಂಗೋಲಿ ಇಡುತ್ತಿದ್ದರು.

ಮುಂಜಾನೆಯೇ ಧಿಡೀರ್ ಅಂತ ಬಂದ ಸಹನಾಳನ್ನು ಕಂಡು ತಾಯಿ. ಮಗನಿಗೆ ಆಶ್ಚರ್ಯವಾದರೂ ಸಂತೋಷ, ಸಡಗರದಿಂದಲೇ ಸ್ವಾಗತಿಸಿದರು.

ಅಡುಗೆ ಕೋಣೆಯಲ್ಲಿ...

ಅನಸೂಯಮ್ಮನವರು ಮಗ ಮತ್ತು ಸಹನಾಳಿಗೆ ಬಿಸಿಬಿಸಿ ಕಾಫಿ ಮಾಡಿಕೊಟ್ಟರು ಇಬ್ಬರೂ ಕಾಫಿ ಕುಡಿದರು.

ವಾಸು, ''ಸಹನಾ...ನೀನು ಬೆಳಿಗ್ಗೆಯೇ ಇಲ್ಲಿಗೆ ಬಂದಿರಬೇಕಾದರೆ ಏನೋ ಕಾರಣ ಇರಲೇಬೇಕು.''

ಸಹನಾ ನಗುತ್ತಾ ತಲೆಯಾಡಿಸಿದಳು.

''ಏನಮ್ಮ ಅದು?''

ಸಹನಾ ನಾಚಿಕೆಯಿಂದಲೇ, ''ನಾನು ಮದುವೆ ಮಾಡಿಕೊಳ್ಳಬೇಕು ಅಂತ ಇದ್ದೀನಿ.''

ತಾಯಿ, ಮಗ ಪರಸ್ಪರ ಮುಖ ನೋಡಿಕೊಂಡರು. ಅವರಿಬ್ಬರ ಮುಖದಲ್ಲಿ ಸಂತೋಷ., ಸಡಗರ ತುಂಬಿ ತುಳುಕಾಡುತ್ತಿತ್ತು. ಅನಸೂಯಮ್ಮ. ''ತುಂಬಾ ಒಳ್ಳೆಯ ನಿರ್ಧಾರಕ್ಕೆ ಬಂದಿದ್ದೀಯ ತಾಯಿ. ರಾಯರ ಸಂಸಾರ ಸಾರಥಿಯೇ ಇಲ್ಲ. ರಥದಂತೆ ಆಗಿತ್ತು.''

ವಾಸು ನಗುತ್ತಾ, ''ನಿನ್ನಂಥ ಅಪ್ಸರೆಯ ಕೈಹಿಡಿಯುವ ಅದೃಷ್ಟವಂತ ಯಾರು?''

''ರವಿ.'' ಮೆಲ್ಲಗೆ ಹೇಳಿದಳು.

ವಾಸು, ಅನಸೂಯಮ್ಮ ಜೋರಾಗಿ ನಿಟ್ಟುಸಿರು ಬಿಟ್ಟರು.

ಸಹನಾ ಅವರ ಮುಖ ನೋಡಿದಳು.

ವಾಸು, ''ನಿನ್ನ ಆಯ್ಕೆ ಸರಿಯಾಗಿದೆ ಸಹನಾ. ರಾಯರು ಬದುಕಿದ್ದಾಗ ರವಿಯನ್ನು ತುಂಬಾ ಮೆಚ್ಚಿಕೊಂಡಿದ್ದರು. ಆದರೆ ಬಾಯಿಬಿಟ್ಟು ಹೇಳಿರಲಿಲ್ಲ.''

ಅನಸೂಯಮ್ಮ, ''ರವಿ ತುಂಬಾ ಒಳ್ಳೆಯ ಹುಡುಗ, ನೀನವನನ್ನು ಧೈರ್ಯವಾಗಿ ಮದುವೆ ಮಾಡಿಕೊಳ್ಳಬಹುದು ಸಹನಾ.''

ಸಹನಾ ಕೃತಜ್ಞತೆಯಿಂದ ನೋಡಿದಳು.

ವಾಸು ಗಂಭೀರವಾಗಿ, ''ಸಹನಾ...ಈಗಿನ ಪರಿಸ್ಥಿತಿಯನ್ನು ನೆನಸಿಕೊಂಡರೆ ಭಯವಾಗುತ್ತೆ. ನೀನು ಆದಷ್ಟೂ ಬೇಗ ರವಿಯನ್ನು ಮದುವೆ ಮಾಡಿಕೊಳ್ಳೋದು ಒಳ್ಳೆಯದು.''

ಸಹನಾ ಆಗಲಿ ಎಂಬಂತೆ ತಲೆಯಾಡಿಸಿದಳು.

ಎಲ್ಲವೂ ಅಂದುಕೊಂಡಂತೆ ನಡೆಯಲು ಸಾಧ್ಯವೆ!

* * *

ಸಹನಾಳ ನಿರ್ಧಾರ ಎಲ್ಲರಿಗೂ ತಿಳಿಯಿತು.

ರವಿ, ಸೃಮಯ್ಯನಿಗೆ ನಂಬಿಕೆಯೇ ಬರಲಿಲ್ಲ. ಸಹನಾ ಇಷ್ಟು ಬೇಗ ಮದುವೆಗೆ ಒಪ್ಪಿಕೊಂಡಿದ್ದಾಳೆ.

ಬಂಪರ್ ಪ್ರೈಝ್ ಹೊಡೆದಂತೆಯೇ ಸರಿ.

ರವಿ ಕನಸುಗಳನ್ನು ಕಾಣಲಾರಂಭಿಸಿದ.

ಸೋಮಯ್ಯ ಸಡಗರ ಪಡಲಾರಂಭಿಸಿದನು.

ಈ ಸಡಗರ, ಸಂಭ್ರಮ ಕಂಡು, ಆ ಬಂಗಲೆಯಲ್ಲಿದ್ದ, ಒಂದೇ ಒಂದು ವ್ಯಕ್ತಿಗೆ ಮಾತ್ರ ಸಹಿಸಲಾಗಲಿಲ್ಲ.

ಆ ವ್ಯಕ್ತಿ ರಂಗಯ್ಯ!

ರಂಗಯ್ಯ ನಿರಾಸೆ, ಹತಾಶೆ, ಕೋಪದಿಂದ ಮುಷ್ಟಿ ಬಿಗಿದು ನೆಲಕ್ಕೆ ಗುದ್ದಿದನು.

ಅವನ ಮಗ ಮೋಹನ ಕೊಲೆಯಾಗಿದ್ದಾನೆ.

ಇನ್ನೂ ಅದರ ಕರ್ಮಗಳೇ ಮುಗಿದಿಲ್ಲ.

ಆಗಲೇ ಮದುವೆ!

ರಂಗಯ್ಯ ಕೋಪ, ಆವೇಶದಿಂದ ಹಲ್ಲು ಕಡಿದನು. ಅಸಹನೆಯಿಂದ ಚಡಪಡಿಸುತ್ತಿದ್ದಾನೆ.

'ಈ ಮದುವೆ ನಡೆಯಕೂಡದು.'

'ನನ್ನ ಮಗ ಮದುವೆಯಾಗಿ ಸುಖಪಡಬೇಕಾಗಿದ್ದ ಹೆಣ್ಣನ್ನು ಆ ರವಿ ಮದುವೆಯಾಗುತ್ತಿದ್ದಾನೆ.'

'ನನ್ನ ಮಗನನ್ನು ಕೊಲೆ ಮಾಡಿರೋದು ಅವನ ತಂದೆ.'

'ನನ್ನ ಸಹೋದರ ಸೋಮಯ್ಯ!'

'ಈಗ ಈ ಶ್ರೀಮಂತ ಹೆಣ್ಣನ್ನು ಸೊಸೆ ಮಾಡಿಕೊಳ್ಳುವ ಸಡಗರದಲ್ಲಿದ್ದಾನೆ. ಇದು ನಡೆಯಕೂಡದು.'

'ಈ ಮದುವೆ ನಡೆಯಕೂಡದು.'

ರಂಗಯ್ಯ ಬೀರುವಿನಿಂದ ವಿಸ್ಕಿಯ ಸೀಸೆ ತೆಗೆದು ಗಟಗಟನೆ ಕುಡಿಯುತ್ತಾ ಮುಖ ಸಿಂಡರಿಸಿದನು.

'ಮದುವೆಗೆ ಇನ್ನು ನಾಲ್ಕು ದಿನಗಳಿವೆ!'

'ಆದರೆ ಈ ಮದುವೆ ನಡೆಯೊಲ್ಲ.'

'ಈ ಮನೆಯಲ್ಲಿ ಇನ್ನು ಮುಂದೆ ಮದುವೆಯ ಮಂಗಳ ಕಾರ್ಯ ನಡೆಯೊಲ್ಲ.'

'ಮತ್ತೊಂದು ಅಮಂಗಳ ನಡೆಯುತ್ತದೆ.'

'ಶವ ಸಂಸ್ಕಾರ ನಡೆಯುತ್ತದೆ.'

'ನನ್ನ ಮಗನಿಗೆ ಸಿಗದಿರುವ ಸುಖ ಅವನಿಗೇಕೆ ಸಿಗಬೇಕು? ಇನ್ನೊಂದು ಕೊಲೆ ನಡೆದು ಹೋಗಲಿ!'

'ರವಿ...ನೀನು ಸಾಯಲೇಬೇಕು!'

ರಂಗಯ್ಯ ರೂಮಿನಿಂದ ಹೊರಬಂದನು.

* * *

ಸೋಮಯ್ಯ ನಗರಕ್ಕೆ ಹೋಗಿದ್ದಾನೆ.

ಏಕೆಂದರೆ ಸಹನಾಳೇ ಅವನನ್ನು ಮದುವೆಗೆ ಅಗತ್ಯವಾಗಿ ಬೇಕಾಗಿರುವ ವಸ್ತುಗಳನ್ನು ತರಲು ಕಳುಹಿಸಿದ್ದಾಳೆ.

ರವಿ ರೂಮಿನಲ್ಲಿ ಇದ್ದಾನೆ.

ಕನಸು ಕಾಣುತ್ತಿದ್ದಾನೆ.

ಮದುವೆಯ ವಿಷಯ ನಿರ್ಧಾರವಾದ ಮೇಲೆ ಸಹನಾಳನ್ನು ಏಕಾಂತದಲ್ಲಿ ನೋಡಲು ಆಗಿಲ್ಲ.

ಅವಳ ಸನಿಹ ಬೇಕು ಅನ್ನಿಸುತ್ತಿದೆ.

ಈ ಚೆಲುವೆಯ ಕೆಂದುಟಗಳ ಜೇನನ್ನು ಹೀರಲು ಮನಸ್ಸು ಕಾತರಗೊಂಡಿದೆ. ಕಾಲೇಜಿನ ಯುವತಿ ಸಹನಾ. ಮದುವೆಗೆ ಮೊದಲೂ ಚುಂಬನ ಬಯಸಿದರೆ ಖಂಡಿತಾ ನಿರಾಕರಿಸೊಲ್ಲ. ಸಂತಿಷದಿಂದಲೇ ಸಹಕರಿಸುತ್ತಾಳೆ.

ರವಿ ಹಾಸಿಗೆಯ ಮೇಲೆ ಮಲಗಿಕೊಂಡ.

ಕಲ್ಪನೆಯಲ್ಲೇ ಸಹನಾಳನ್ನು ತನ್ನ ಜೊತೆ ಮಲಗಿಸಿಕೊಂಡು ರತಿಸುಖವನ್ನು ಅನುಭವಿಸುತ್ತಿದ್ದಾನೆ.

ಸಹನಾ ಅಂಗಾತನೆ ಮಲಗಿದ್ದಾಳೆ.

ಅವಳ ಮುಂಗುರುಳನ್ನು ಹಿಂದಕ್ಕೆ ಸರಿಸಿ, ಮುದ್ದಾದ ದುಂಡನೆಯ ಮುಖದ ತುಂಬಾ ಮುತ್ತುಗಳನ್ನು ನೀಡಿದ.

ಸಹನಾ ಸಿಹಿಯಾಗಿ ನರಳಿದನು.

ಹಣೆಯಿಂದ ಆರಂಭಿಸಿ ಸವರಲಾರಂಭಿಸಿದ.

ಸಹನಾ ಸಹಕರಿಸುತ್ತಿದ್ದಾಳೆ.

ಸೀರೆ ದೂರ ಸರಿಸಿ, ಅವಳ ಮೇಲೆ ಬಿದ್ದು ಉನ್ಮತ್ತನಂತೆ ತಬ್ಬಿಕೊಂಡು ಉರುಳುತ್ತಿದ್ದಾನೆ.

ಅವಳ ಕೆಂದುಟಿಗಳನ್ನು ಕಚ್ಚುತ್ತಿದ್ದಾನೆ.

ಫೋನಿನ ಕರೆಗಂಟೆ ಮೊಳಗಿತು.

ಎಂತಹ ರಸಭಂಗ!

ಕನಸು ಮುಗಿಯಿತು.

ರವಿ ಎದ್ದು ಬಂದು ರಿಸೀವರ್ ಎತ್ತಿ, ''ಹಲೋ...'' ಎಂದು ಅಸಹನೆಯಿಂದಲೇ ಹೇಳಿದ.

ಅತ್ತ ಕಡೆಯಿಂದ ಮಾತುಗಳು ಕೇಳಿಸುತ್ತಿವೆ.

ರವಿಯ ಮುಖ ಸಂತೋಷದಿಂದ ಅರಳಿತು.

ಸಂಭಾಷಣೆ ನಡೆಯುತ್ತಿದೆ.

ರವಿ ಫೋನನ್ನು ಡಿಸ್‌ಕನೆಕ್ಟ್ ಮಾಡಿ, ರಿಸೀವರನ್ನು ಕ್ರೆಡಲ್ ಮೇಲೆ ಇರಿಸಿ, ಸಂತೋಷದಿಂದ ಕುಣಿದಾಡಿದನು.

ಮುಖ ತೊಳೆದು ಡ್ರೆಸ್ ಮಾಡಿಕೊಂಡನು.

ಆಗ ರಾತ್ರಿ ಏಳು ಗಂಟೆ.

ರವಿ ತನ್ನ ರೂಮಿನಿಂದ ಹೊರಬಂದಾಗ ಅಡುಗೆ ಭಟ್ಟರಾದ ರಾಮಯ್ಯ, ಹೀರೆಕಾಯಿ ಬಜ್ಜಿ ಮಾಡಿಕೊಂಡು ಬಂದು ಇವನ ಮುಂದೆ ಹಿಡಿದರು.

ಬಿಸಿಬಿಸಿ ಬಜ್ಜಿ!

ರಾಮಯ್ಯ ನಗುತ್ತಾ, ''ನಾಡಿದ್ದು ಮದುಮಗ ಆಗೋವ್ರು ನೀವು. ಚೆನ್ನಾಗಿ ಬಜ್ಜಿ ತಿಂದು ಶಕ್ತಿ ಪಡೆದುಕೊಳ್ಳಿ.''

''ಬಗ್ಗಿ ತಿನ್ನೋಕೆ ಟೈಮ್ ಇಲ್ಲ ಭಟ್ರೆ.''

''ಎಂಥಾದ್ದು...ಬಜ್ಜಿ ತಿನ್ನೋಕೆ ಟೈಮ್ ಇಲ್ಲವೆ?''

''ಅಲ್ಲಿ ನನ್ನ ಹುಡುಗಿ ಕಾದಿರುತ್ತಾಳೆ.''

ರಾಮಯ್ಯ ನಗುತ್ತಾ, ''ಓ ಹಾಗೋ ವಿಷಯ.''

ರವಿ ಹೊರಡುತ್ತಾ, '4ಸಹನಾ ಬರೋಕ್ಕೆ ಹೇಳಿದ್ದಾಳಂತೆ. ನಾನು ಈಗಲೇ ಹಿಗಿಬರುತ್ತೇನೆ.''

ರವಿ ಹೊರಬಂದನು.

''ಹೋಗಿ ಬನ್ನಿ. ದೇವರು ಒಳ್ಳೆಯದನ್ನು ಮಾಡಲಿ'' ಎಂದು ರಾಮಯ್ಯ ಬಜ್ಜಿಯನ್ನು ತಾವೇ ತಿಂದರು.

ಆಗ ರಾತ್ರಿ ಏಳೂವರೆಯಾಗಿತ್ತು!

* * *

ಸೋಮಯ್ಯ ಊರಿಗೆ ಹಿಂತಿರುಗಿದನು. ಅವನ ಕೈಯಲ್ಲಿ ಎರಡು ಚೀಲಗಳಿವೆ. ಅದರಲ್ಲಿ ಮದುವೆಗೆ ಅಗತ್ಯವಾದ ವಸ್ತುಗಳಿವೆ.

ಆಗ ರಾತ್ರಿ ಒಂಭತ್ತು ಗಂಟೆ.

ಸೋಮಯ್ಯ ಬಂಗಲೆಗೆ ಬಂದಾಗ ಅಲ್ಲಿ ಯಾರೂ ಇರಲಿಲ್ಲ. 'ಬಿಕೋ' ಎನ್ನುತ್ತಿತ್ತು.

ರಾಮಯ್ಯ ಮಾತ್ರ ಮಂಕಾಗಿ ನಿಂತಿದ್ದರು. ಸೋಮಯ್ಯ, ''ಭಟ್ರೆ...ಇದೇನು, ಯಾರೂ ಕಾಣ್ತಾ ಇಲ್ಲ!''

''ಎಲ್ಲಾ!'' ''ಎಲ್ಲ ಮಾವಿನ ತೋಪಿಗೆ ಹೋಗಿದ್ದಾರೆ.''

ಸೋಮಯ್ಯ-ಯ ಭಯ, ಅನುಮಾನದಿಂದ, ''ಯಾಕೆ...?''

''ನೀವು ಈಗಲೇ ಅಲ್ಲಿಗೆ ಹೋಗಬೇಕಂತೆ.''

ಸೋಮಯ್ಯ ಗಾಬರಿಯಿಂದ, ''ಯಾಕಂತೆ?''

'4ಅಲ್ಲಿ ನಿಮ್ಮ ಮಗನ ಕೊಲೆಯಾಗಿದೆ!''

''ಹಾಂ...ಏನಂದ್ರಿ...!''

ಅವನ ಕೈಯಲ್ಲಿದ್ದ ವಸ್ತುಗಳು ಜಾರಿ ನೆಲದ ತುಂಬಾ ಹರಡಿಕೊಂಡು ಬಿದ್ದವು.

ಮಾಂಗಲ್ಯ, ಬಳೆ, ಚಿನ್ನದ ಸರ!

ರೇಶಿಮೆ ಸೀರೆ!

ಸಂಕಲಿಕೆಯ ಪಂಚೆ, ಪೇಟ!

ಇನ್ನೂ ಏನೇನೋ...

ಮದುವೆ ಮಾಡಿಕೊಳ್ಳಬೇಕಾಗಿದ್ದ ಗಂಡು ರವಿ, ಮಾವಿನ ತೋಪಿನಲ್ಲಿ ಭೀಕರ ರೀತಿಯಲ್ಲಿ ಕೊಲೆಯಾಗಿದ್ದ!

## 7

ಅದು ಮಾವಿನ ತೋಪು!

ರಾತ್ರಿ ಒಂಭತ್ತು ಗಂಟೆಯ ಸಮಯ.

ಸುತ್ತಲೂ ಗಾಢಾಂಧಕಾರ ಆವರಿಸಿಕೊಂಡಿದೆ. ಕತ್ತಲಿನ ಛಾಯೆಯಲ್ಲಿ ಮರಗಳು ಭಯಾನಕವಾಗಿ ಕಾಣುತ್ತಿವೆ.

ತಂಗಾಳಿ ಹಿತವಾಗಿ ಬೀಸುತ್ತಿದೆ.

ಕೆಲವೇ ಮಂದಿ ಗುಂಪುಗೂಡಿದ್ದಾರೆ.

ಗ್ಯಾಸ್ ಲೈಟುಗಳು ಉರಿಯುತ್ತಿವೆ.

ಸಹನಾಳ ಮುಖ ಭಯದಿಂದ ಬಿಳುಚಿಕೊಂಡಿದೆ. ಅವಳು ಅನಸೂಯಮ್ಮನನ್ನು ತಬ್ಬಿಕೊಂಡು ನಡುಗುತ್ತಿದ್ದಾಳೆ.

ಕೊಲೆ...ಅವಳ ಸಂಗಾತಿ ಆಗಬೇಕಾಗಿದ್ದ ರವಿಯ ಕೊಲೆ!

ಭಯದಿಂದ ತತ್ತರಿಸಿಹೋಗಿದ್ದಾಳೆ.

ರಂಗಯ್ಯ ಮರವೊಂದರ ಕೆಳಗೆ ಸಿಗರೇಟನ್ನು ಸೇದುತ್ತಾ ನಿಂತುಕೊಂಡಿದ್ದಾನೆ. ಮುಖದಲ್ಲಿ ತೃಪ್ತಿಯಿದೆ.

ಸೇಡು ತೀರಿದ ತೃಪ್ತಿ!

ವಾಸು ಸಹಾ ಭಯದಿಂದ ನಡುಗುತ್ತಿದ್ದಾನೆ.

ಅದೇ ಸಮಯಕ್ಕೆ ಯಾರೋ ದೂರದಿಂದ ಓಡಿ ಬರುತ್ತಿರುವುದು ಕಂಡಿತು. ಎಲ್ಲರೂ ಅತ್ತ ತಿರುಗಿದರು.

ಸೋಮಯ್ಯ ಓಡಿಬರುತ್ತಿದ್ದಾನೆ.

ಸೋಮಯ್ಯ ದುಃಖ, ಉದ್ವೇಗದಿಂದ, ''ಮಗನೇ ರವಿ...'' ಎಂದು ಕಿರುಚುತ್ತಾ ಹೆಣದ ಮೇಲೆ ಬೀಳಲು ಪ್ರಯತ್ನಿಸಿದಾಗ ಪಿ.ಸಿ.ಗಳು ತಡೆದು ನಿಲ್ಲಿಸಿದರು.

ಸೋಮಯ್ಯ ಗೋಳಾಡುತ್ತಿದ್ದಾನೆ.

ಎದೆ ಬಿರಿಯುವಂತೆ ಅಳುತ್ತಿದ್ದಾನೆ.

ಮಗನನ್ನು ಕಳೆದುಕೊಂಡಿರುವ ದುಃಖ ಸಾಮಾನ್ಯವೇ? ಕಣ್ಣೀರಿಡುತ್ತಾ ಪ್ರಲಾಪಿಸುತ್ತಿದ್ದಾನೆ.

ಮುಖದಲ್ಲಿ ನಗು ಮೂಡುತ್ತಿದೆ.

ಕ್ರೂರ ಛಾಯೆಯ ನಗು!

'ಅಂದು ನಾನು ಮಗನನ್ನು ಕಳೆದುಕೊಂಡು ಇದೇ ರೀತಿ ದುಃಖ ಅನುಭವಿಸಿದ್ದೆ. ಈಗ ನಿನ್ನ ಸರದಿ.

'ಪುತ್ರಶೋಕ ಹೇಗಿದೆ ಸಹೋದರ?'

ರಂಗಯ್ಯ ಮನಸ್ಸಿನಲ್ಲೇ ಅಂದುಕೊಳ್ಳುತ್ತಿದ್ದಾನೆ.

ಇತ್ತ ಕಡೆ...

ಮಾವಿನ ಮರಗಳ ನಡುವೆ ಹೆಣ ಬೋರಲಾಗಿ ಬಿದ್ದಿದೆ. ತಲೆಯ ಮಧ್ಯಭಾಗಕ್ಕೆ ಹೊಡೆತ ಬಿದ್ದಿದೆ.

ರಕ್ತಸೋರಿ ಹೆಪ್ಪುಕಟ್ಟಿದೆ.

ಎಸ್.ಐ. ಶ್ರೀಕಾಂತ್, ಗುರು ವಿಪರೀತ ತಲೆ ಕೆಡಿಸಿಕೊಂಡಿದ್ದಾರೆ. ಏಕೆಂದರೆ ಒಂದು ಸಣ್ಣಹಳ್ಳಿಯಲ್ಲಿ ಕೆಲವೇ ದಿನಗಳ ಅಂತರದಲ್ಲಿ ಮೂರು ಕೊಲೆಗಳು ನಡೆದಿವೆ.

ಒಂದೇ ಸಂಸಾರದ ಮೂರು ವ್ಯಕ್ತಿಗಳ ಕೊಲೆ!

ಕೊಲೆಗಾರನ ಸುಳಿವೇ ಇಲ್ಲ!

ಕ್ಯಾಮೆರಾಗಳು ಬೆಳಕು ಬೀರುತ್ತಿವೆ.

ತಲೆಗೆ ಬಲವಾದ ವಸ್ತುವಿನಿಂದ ಹೊಡೆದು ಕೊಲೆ ಮಾಡಲಾಗಿದೆ. ಕೊಲೆಗೆ ಬಸಳಲಾಗಿರುವ ಆಯುಧಕ್ಕಾಗಿ ಪೋಲೀಸ್ ಅಧಿಕಾರಿಗಳು ಹುಡುಕುತ್ತಿದ್ದಾರೆ.

ಇಲ್ಲ...ಕೊಲೆಗೆ ಬಳಸಲಾದ ಆಯುಧ ಸಿಕ್ಕಿಲ್ಲ.

ಡಾಕ್ಟರ್ ಹೆಣವನ್ನು ಪರೀಕ್ಷಿಸುತ್ತಿದ್ದಾರೆ.

ಜನಗಳ ಗುಂಪಿನಲ್ಲಿ ಗುಸುಗುಸು ಶುರುವಾಗಿದೆ.

ಎಸ್.ಐ. ಶ್ರೀಕಾಂತ್ ಈಗ ಉನ್ನತ ಪೋಲೀಸ್ ಅಧಿಕಾರಿಯ ಕಡೆ ನೋಡಿದಾಗ ಗುರು ಸೂಚನೆ ನೀಡಿದ.

ಶ್ರೀಕಾಂತ್, ''ವಾಸು...'' ಎಂದು ಕರೆದ.

ಭಯದಿಂದ ನಡುಗುತ್ತಿದ್ದ ವಾಸು ಮುಂದೆ ಬಂದ.

''ನೀನು ಎಚ್ಚರವಾಗಿಯೇ ಇದ್ದೆ ಅಲ್ಲವೆ?''

ವಾಸು ತಲೆಯಾಡಿಸಿದನು.

''ರಪಿ ತೋಪಿಗೆ ಯಾವಾಗ ಬಂದ?''

''ನೋಡಲಿಲ್ಲ ಸಾರ್.''

ಶ್ರೀಕಾಂತ್ ಕೋಪದಿಂದ, ''ತೋಪಿಗೆ ಯಾರು ಹೋಗುತ್ತಾರೆ, ಯಾರು ಬರುತ್ತಾರೆ ಅಂತ ನಿನಗೆ ಗೊತ್ತಾಗೋಲ್ಲ ಅಂದಮೇಲೆ ನೀನೇನು ಇಲ್ಲಿ ಕತ್ತೆ ಕಾಯುತ್ತೀಯ?''

ವಾಸು ಅವಮಾನದಿಂದ ತಲೆ ತಗ್ಗಿಸಿದ.

ಶ್ರೀಕಾಂತ್ ಸಹನಾಳ ಕಡೆ ತಿರುಗಿ, ''ಇಂತಹ ನಾಲಾಯಕ್ ಜನರನ್ನು ಯಾಕೆ ಕೆಲಸಕ್ಕೆ ಇಟ್ಟುಕೊಂಡಿದ್ದೀರಾ ಸಹನಾ? ಕತ್ತಲಾಯಿತು ಅಂದರೆ ಕಂಬಳಿ ಹೊದ್ದುಕೊಂಡು ಮಲಗಿಬಿಡುತಾನೋ, ಏನೋ?''

ಸಹನಾಳಿಗೂ ಸಹ ಆಕೋಪ ಬಂದಿತ್ತು.

'ಹೌದು, ಇವನು ಎಚ್ಚರಿಕೆಯಿಂದ ಇದ್ದಿದ್ದರೆ ಕೊಲೆಗಾರ ಯಾರು ಅಂತ ಪತ್ತೆಯಾಗುತ್ತಿತ್ತು.'

'ಇಲ್ಲದಿದ್ದರೆ ರವಿಯ ಕೊಲೆಯನ್ನು ತಪ್ಪಿಸಬಹುದಿತ್ತು.'

'ಛೇ...ಛೆ...! ಈ ವಾಸು ಕಾವಲಿನ ಕೆಲಸಕ್ಕೇ ನಾಲಾಯಕ್ಕು. ನಾಳೆಯೇ ಬೇರೆಯವರನ್ನು ನೇಮಿಸಬೇಕು.'

ಸಹನಾ ಈ ರೀತಿ ಆಲೋಚಿಸುತ್ತಿದ್ದಾಳೆ.

ಶ್ರೀಕಾಂತ್ ಗಡುಸಾಗಿ, ''ವಾಸು...ಸದಾ ಈ ತೋಟದಲ್ಲಿ ಇರುವವನು ನೀನು. ಇವತ್ತು ರಾತ್ರಿ ಏಳೂವರೆಯಿಂದ ಎಂಟು ಗಂಟೆಯ ಸಮಯದಲ್ಲಿ ಏನು ನಡೆಯಿತು ಅಂತ ನೆನಪು ಮಾಡಿಕೊಂಡು ಹೇಳು.''

ವಾಸು ತಲೆಯಾಡಿಸಿದನು.

'4ಆಗ ನೀನು ಏನು ಮಾಡುತ್ತಿದ್ದೆ?''

''ಮಾವಿನಕಾಯಿ ಹಣ್ಣಾಗಲಿ ಅಂತ ಹುಲ್ಲಿನ ಗೂಡೆಗೆ ಹಾಕುತ್ತಿದ್ದೆ. ನಾನು ಮಹಡಿಯಲ್ಲಿದ್ದೆ.''

'4ಆಗ ಏನಾದರೂ ಶಬ್ದ ಕೇಳಿಸಿತೆ?''

''ಹೂಂ...ಕೇಳಿಸಿತು.''

'4ಆಗ ನೀನೇನು ಕೇಳಿಸಿಕೊಂಡೆ?''

''ಯಾರೋ ಪ್ರಾಣ ಹೋದವರಂತೆ ಕೂಗಿಕೊಂಡಿದ್ದನ್ನು.''

'4ಆಗ ನೀನೇನು ಮಾಡಿದೆ?''

''ಹೊರಗೆ ಓಡಿ ಬಂದೆ.''

ಎಸ್.ಐ. ಶ್ರೀಕಾಂತ್ ಈಗ ಅನಸೂಯಮ್ಮನ ಕಡೆ ತಿರುಗಿ, ''ಈ ಕೂಗು ನಿಮಗೂ ಸಹಾ ಕೇಳಿಸಿರಬೇಕಲ್ಲವೆ?''

ಅನಸೂಯಮ್ಮ ತಲೆಯಾಡಿಸಿದರು.

'4ಆಗ ನೀವೇನು ಮಾಡಿದಿರಿ?''

''ಹೊರಗೆ ಬಂದು ನೋಡಿದೆ.''

''ಆಗ ನೀವೇನು ನೋಡಿದ್ರಿ?''

''ನನ್ನ ಮಗ ವಾಸು ಭಯ, ಗಾಬರಿಯಿಂದ ಓಡಿ ಬಂದು ಕೊಲೆಗಾಗಿರೋ ವಿಷಯ ತಿಳಿಸಿದ.''

ಎಸ್.ಐ. ಶ್ರೀಕಾಂತ್, ''ವಾಸು...ನೀನು ಓಡಿ ಹೋಗಿ ನೋಡಿದಾಗ ಅಲ್ಲೇನು ಕಂಡಿತು?''

''ರವಿ ಕೊಲೆಯಾಗಿ ಬಿದ್ದಿದ್ದರು.''

''ಹೆಣ ಯಾವ ರೀತಿ ಇತ್ತು?''

''ಬೋರಲಾಗಿ ಬಿದ್ದಿತ್ತು.''

''ಸತ್ತಿರೋದು ರವಿ ಅಂತ ಹ್ಯಾಗೆ ಗೊತ್ತಾಯಿತು?''

''ಹತ್ತಿರ ಬಂದು ನೋಡಿದೆ.''

''ಅಲ್ಲಿ ಬೇರೆ ಯಾರಾದರೂ ಇದ್ದರೆ?''

ವಾಸು ಉತ್ತರಿಸಲು ಅನುಮಾನಿಸಿದನು.

''ಹೆದರಬೇಡ. ನೀನು ಕಂಡಿದ್ದನ್ನು ಹೇಳು.''

''ಅಲ್ಲಿ...ರಂಗಯ್ಯ ಇದ್ದರು.''

ಎಲ್ಲರೂ ಭಯದಿಂದ ನಡುಗಿದರು.

ರಂಗಯ್ಯನ ಮುಖ ಭಯದಿಂದ ಬಿಳುಚಿಕೊಂಡಿತು.

ಎಸ್.ಐ. ಶ್ರೀಕಾಂತ್ ಗಡುಸಾಗಿ, ''ಮೈ ಗಾಡ್...! ರಂಗಯ್ಯ ಕೊಲೆಗಾರ! ಅವರು ಕೊಲೆ ಮಾಡಿದ್ದನ್ನು ನೀನು ನೋಡಿದೆಯ?''

ವಾಸು ಕೋಪದಿಂದ, ''ಹಾಗಂತ ನಾನೆಲ್ಲಿ ಹೇಳಿದೆ ಸಾರ್? ಯಾರೋ ಪ್ರಾಣ ಹೋದವರಂತೆ ಕಿರುಚಿಕೊಂಡಿದ್ದರಿಂದ ನಾನು ಮಹಡಿಯ ಮೇಲೆ ಇದ್ದವನು ಹೊರಗೆ ಬಂದೆ.''

''ನೀನು ಕೊಲೆ ಮಾಡಿದ್ದನ್ನು ನೋಡಲಿಲ್ಲವೆ?''

ವಾಸು ತಲೆಯಾಡಿಸುತ್ತಾ, ''ಇಲ್ಲ, ರಂಗಯ್ಯ ನನ್ನ ಮುಖ ಕಂಡ ಕೂಡಲೇ ಓಡಿಹೋದರು.''

''ಅಲ್ಲಿ ಬೇರೆ ಇನ್ಯಾರಾದರೂ ಇದ್ದರೆ?''

''ಇಲ್ಲ. ನನಗೆ ಯಾರೂ ಕಾಣಿಸಲಿಲ್ಲ.''

ರಂಗಯ್ಯನ ಮುಖದಲ್ಲಿ ಈಗ ಯಾವ ಬದಲಾವಣೆಯೂ ಇಲ್ಲ. ಸ್ನಾಯುಗಳು ಬಿಗಿದುಕೊಂಡಿದೆ.

ಎಸ್.ಐ. ಶ್ರೀಕಾಂತ್, ''ರಂಗಯ್ಯ ಕೊಲೆ ಮಾಡಬೇಕು ಅಂತ ನಾನು ಹಿಂಬಾಲಿಸಿಕೊಂಡು ಬಂದೆ.''

ಇದನ್ನು ಕೇಳಿ ಎಲ್ಲರೂ ಬೆಚ್ಚಿಬಿದ್ದರು.

ಸೋಮಯ್ಯ ಕೋಪದಿಂದ ಬುಸುಗುಟ್ಟಿದನು.

ಶ್ರೀಕಾಂತ್ ಗಡುಸಾಗಿ, ''ಯಾವುದರಿಂದ ಕೊಲೆ ಮಾಡಿದ್ರಿ?''

''ಯಾವುದರಿಂದಲೂ ಇಲ್ಲ.''

ಎಲ್ಲರಿಗೂ ಇದೇಕೋ ವಿಚಿತ್ರ ಎನಿಸುತ್ತಿದೆ.

''ಪೋಲೀಸರ ಜೊತೆ ತಮಾಷೆ ಮಾಡಬೇಡಿ.''

ರಂಗಯ್ಯ ಗಂಭೀರವಾಗಿ, ''ನಾನು ಯಾರ ಜೊತೆಯೂ ತಮಾಷೆ ಮಾಡಲು ಬಂದಿಲ್ಲ. ಯಾಕೆ ಅಂದರೆ ನಾನೂ ಸಹಾ ಮಗನನ್ನು ಕಳೆದುಕೊಂಡಿದ್ದೇನೆ.'' ಎಂದು ಹೇಳಿದನು.

ಎಸ್.ಐ. ಶ್ರೀಕಾಂತ್ ಕೋಪ, ವ್ಯಂಗ್ಯದಿಂದ, ''ಓ...ಅದಕ್ಕೇ ಸೋಮಯ್ಯನ ಮಗನನ್ನು ಕೊಂದು ಸೇಡುತೀರಿಸಿಕೊಂಡಿರಿ ಅಂತ ಕಾಣುತ್ತೆ.''

ರಂಗಯ್ಯ ತೀಕ್ಷ್ಣವಾಗಿ, ''ನಿಜ, ನೀವು ಹೇಳುತ್ತಿರುವುದು ನಿಜ. ನಾನು ಅದೇ ಉದ್ದೇಶದಿಂದಲೇ ರವಿಯನ್ನು ಹಿಂಬಾಲಿಸಿಕೊಂಡು ಮಾವಿನ ತೋಪಿಗೆ ಬಂದೆ.''

''ಮುಂದಿನ ನಿಜವನ್ನು ಒಪ್ಪಿಕೊಂಡುಬಿಡಿ.''

''ಮುಂದಿನ ನಿಜ ಯಾವುದು?''

''ರವಿಯನ್ನು ನೀವು ಕೊಲೆ ಮಾಡಿರೋದು.''

ರಂಗಯ್ಯ ಗಡುಸಾಗಿ, ''ನಾನು ಕೊಲೆ ಮಾಡಬೇಕು ಅಂತ ಇಲ್ಲಿಗೆ ಬಂದದ್ದು ನಿಜ ಇನ್‌ಸ್ಪೆಕ್ಟರ್, ಆದರೆ...''

ಗುರು ವ್ಯಂಗ್ಯವಾಗಿ, ''ಬೆಕ್ಕು ಅಡ್ಡ ಬಂತೆ...?''

''ಇಲ್ಲ, ರವಿಯನ್ನು ಬೇರೆ ಯಾರೋ ಕೊಂದಿದ್ದರು!''

ಈ ಉತ್ತರದಿಂದ ಎಲ್ಲರೂ ತತ್ತರಿಸಿಹೋದರು.

ಎಸ್.ಐ. ಶ್ರೀಕಾಂತ್ ಕೋಪದಿಂದ, ''ಸುಳ್ಳು ಹೇಳಿ, ಕೊಲೆ ಆರೋಪದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಡಿ.''

ರಂಗಯ್ಯ ವಿಷಾದದಿಂದ, ''ಅದರ ಅಗತ್ಯ ನನಗಿಲ್ಲ. ನನಗೆ ಅರಮನೆ,

ಸೆರೆಮನೆ ಎರಡೂ ಒಂದೇ. ಯಾಕೆ ಅಂದರೆ ಪುತ್ರನನ್ನು ಕಳೆದುಕೊಂಡಿರುವ ನಾನು ಎಲ್ಲೇ ಇದ್ದರೂ ಬದುಕಿರುವ ತನಕ ದುಃಖ ಅನುಭವಿಸಲೇಬೇಕು. ನಿಮ್ಮ ಹತ್ತಿರ ಸಾಕ್ಷಿ, ಆಧಾರ ಇದ್ದರೆ ನನ್ನನ್ನು ಅರೆಸ್ಟ್ ಮಾಡಿ ಕರೆದುಕೊಂಡು ಹೋಗಿ. ಆದರೆ ಅನಾವಶ್ಯಕವಾಗಿ ಕೊಲೆ ಆರೋಪವನ್ನು ಹೊರಿಸಬೇಡಿ.''

ಎಸ್.ಐ. ಶ್ರೀಕಾಂತ್ ಅಸಹಾಯಕತೆಯಿಂದ ಪೋಲೀಸ್ ಅಧಿಕಾರಿ ಗುರುವಿನ ಮುಖ ನೋಡಿದನು.

''ಅಂದರೆ ಈ ಕೊಲೆಯನ್ನು ನೀವು ಮಾಡಿಲ್ಲವೆ?''

''ಖಂಡಿತಾ ಮಾಡಿಲ್ಲ.''

ಗುರು, ''ನೀವು ತೋಟಕ್ಕೆ ಬಂದಾಗ ಗಂಟೆ ಎಷ್ಟಾಗಿತ್ತು?''

''ರಾತ್ರಿ ಎಂಟು ಗಂಟೆ.''

''ಆಗ ನೀವು ಇಲ್ಲಿ ಏನು ಕಂಡಿರಿ?''

''ರವಿ ಜೋರಾಗಿ ಕಿರುಚಿಕೊಂಡಿದ್ದನ್ನು.''

''ಕಿರುಚಿಕೊಂಡಿದ್ದು ರವಿ ಅಂತ ಹೇಗೆ ಗೊತ್ತಾಯಿತು?''

''ಹತ್ತಿರ ಬಂದು ನೋಡಿದ ಮೇಲೆ ಗೊತ್ತಾಯಿತು?''

''ಆಗ ಹೆಣ ಯಾವ ರೀತಿ ಇತ್ತು?''

''ಬೋರಲಾಗಿ ಬಿದ್ದಿತ್ತು. ತಲೆಯಯಿಂದ ರಕ್ತ ಬರುತ್ತಿತ್ತು.''

''ಆಮೇಲೆ ನೀವೇನು ಮಾಡಿದ್ರಿ?''

''ಬಂಗಲೆಗೆ ಬಂದುಬಿಟ್ಟೆ.''

''ಅಲ್ಲಿ ಯಾರನ್ನಾದರೂ ಕಂಡಿರಾ?''

''ಇಲ್ಲ. ಯಾರೂ ಕಾಣಿಸಲಿಲ್ಲ.''

ಗುರು ಗಂಭೀರವಾಗಿ, ''ಚೆನ್ನಾಗಿ ನೆನಪು ಮಾಡಿಕೊಂಡು ಹೇಳಿ. ನೀವು ಕೊಡುವ ಹೇಳಿಕೆಯಿಂದಲೇ ನಾವು ಕೊಲೆಯ ಕೇಸಿನಲ್ಲಿ ಮುಂದುವರೆಯಲು ಸಾಧ್ಯ.''

ರಂಗಯ್ಯ ನೆನಪು ಮಾಡಿಕೊಳ್ಳುತ್ತಾ ''ಇಲ್ಲ...ಯಾರೂ ನನಗೆ ಕಾಣಿಸಲಿಲ್ಲ. ಯಾಕೆ ಅಂದರೆ ಎಲ್ಲಾ ಕಡೆ ಕತ್ತಲಿತ್ತು. ಒಂದು ವೇಳೆ ಪಕ್ಕದಲ್ಲೇ ಅವಿತಿದ್ದರೂ ಗೊತ್ತಾಗುತ್ತಿರಲಿಲ್ಲ.''

''ಹೆಜ್ಜೆಗಳ ಸಪ್ಪಳ ಏನಾದರೂ ಕೇಳಿಸಿತೆ?''

''ಇಲ್ಲ...ಭಯ, ಗಾಬರಿಯಲ್ಲಿ ಗಮನಿಸಲಿಲ್ಲ.''

ಗುರು ಗಡುಸಾಗಿ, ''ರಂಗಯ್ಯ...ಸದ್ಯಕ್ಕೆ ನಿಮ್ಮ ಹೇಳಿಕೆಯನ್ನು ನಂಬುತ್ತೇವೆ. ಆದರೆ ನಮ್ಮ ಅನುಮತಿ ಇಲ್ಲದೆ ನೀವು ಬೇರೆ ಊರಿಗೆ ಹೋಗುವಂತೆ ಇಲ್ಲ.''

ರಂಗಯ್ಯ ತಲೆಯಾಡಿಸಿದನು. ಶವದ ಪಂಚನಾಮೆಯ ಕಾರ್ಯ ನಡೆದ ಬಳಿಕ, ವೈದ್ಯಕೀಯ ಪರೀಕ್ಷೆಗಾಗಿ ಅದನ್ನು ಆಸ್ಪತ್ರೆಗೆ ಕಳುಹಿಸಲಾಯಿತು.

ಗುರುವಿನ ಆದೇಶದ ಮೇರೆಗೆ ಇಬ್ಬರು ಪಿ.ಸಿ.ಗಳನ್ನು ಮಾವಿನ ತೋಪಿನಲ್ಲಿ ಸದಾ ಕಾವಲಿರುವಂತೆ ಹೊಸ ಏರ್ಪಾಡು ಮಾಡಲಾಯಿತು.

ಮಾವಿನ ತೋಪಿನಲ್ಲಿ ನಡೆಯುತ್ತಿರುವ ನಿಗೂಢ ಕೊಲೆಗಳ ಸುದ್ದಿ ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಸಹಾಬರಲಾರಂಭಿಸಿತು. ಊರಿನ ಜನತೆ ಭಯಗೊಂಡಿದ್ದರು.

ಈ ಸರಣಿ ಕೊಲೆಗಳ ಕೊಲೆಗಾರ ಯಾರು?

ಕೊಲೆಗಳ ಉದ್ದೇಶ ಏನು?

ಮುಂದೆಯೂ ಕೊಲೆ ನಡೆಯಬಹುದೆ?

* * *

ಅದು ರಾಯರ ಬಂಗಲೆ!

ಪೋಲೀಸ್ ಜೀಪ್ ಸೈರನ್ ಮೊಳಗಿಸುತ್ತಾ ಬಂಗಲೆಯ ಮುಂದೆ ಬಂದು ನಿಂತಿತು. ಅದರಿಂದ ಎಸ್.ಐ. ಶ್ರೀಕಾಂತ್ ಮತ್ತು ಗುರು ಇಳಿದು ಬಂದರು.

ಹಾಲ್‌ನಲ್ಲಿ ಈಗ ಮೂರು ಫೋಟೋಗಳಿದ್ದವು!

ರಾಜಾರಾಯರು, ಮೋಹನ, ರವಿ!

ಈ ಫೋಟೋಗಳಿಗೆ ಹಾರ ಹಾಕಲಾಗಿತ್ತು. ಸಹನಾ ಸೋಫಾದ ಮೇಲೆ ಮಂಕಾಗಿ ಕುಳಿತಿದ್ದಳು. ಅವಳ ಎದುರಿಗೆ ಅಡುಗೆ ಕೆಲಸದಾಳು ರಾಮಯ್ಯ ಕುಳಿತಿದ್ದರು.

ಪೋಲೀಸ್ ಅಧಿಕಾರಿಗಳು ಆಸೀನರಾದರು.

ಗುರು ಸಹನಾಳ ಕಡೆ ತಿರುಗಿ, ''ಸಹನಾ...ನೀನು ನೆನ್ನೆ ರಾತ್ರಿ ಏಳೂವರೆಯಿಂದ ಒಂಭತ್ತರ ತನಕ ಎಲ್ಲಿದ್ದೆ?''

ಸಹನಾ ಹುಬ್ಬೇರಿಸಿ ನೋಡಿದಳು.

''ನೀನು ಆ ಸಮಯದಲ್ಲಿ ಬಂಗಲೆಯಲ್ಲಿ ಇದ್ದೆಯ?''

''ಇಲ್ಲ. ಇರಲಿಲ್ಲ.''

''ಎಲ್ಲಿಗೆ ಹೋಗಿದ್ದೆ?''

''ಮದುವೆಗೆ ನನ್ನ ಗೆಳತಿಯನ್ನು ಕರೆಯಲು ಹೋಗಿದ್ದೆ.''

''ಬಂಗಲೆಗೆ ಎಷ್ಟು ಹೊತ್ತಿಗೆ ಬಂದೆ?''

''ಒಂಭತ್ತು ಗಂಟೆಯಾಗಿತ್ತು.''

''ಈ ಕೊಲೆ ವಿಚಾರವನ್ನು ನಿನಗೆ ತಿಳಿಸಿದ್ದು ಯಾರು?''

''ಅಡುಗೆ ಭಟ್ಟ ರಾಮಯ್ಯನವರು.'' ಗುರು ಈಗ ಎಸ್.ಐ. ಶ್ರೀಕಾಂತ್‌ನ ಕಡೆ ನೋಡಿದನು. ಈ ಸೂಚನೆ ಅರ್ಥ ಮಾಡಿಕೊಂಡು, ''ರಾಮಯ್ಯನವರೆ...ನೆನ್ನೆ ರಾತ್ರಿ ಏಳೂವರೆಯ ಸಮಯದಲ್ಲಿ ನೀವೆಲ್ಲಿದ್ದಿರಿ?''

''ಬಂಗಲೆಯಲ್ಲೇ ಇದ್ದೆ.''

''ಆಗ ಇಲ್ಲಿ ಬೇರೆ ಯಾರಿದ್ದರು?''

''ರವಿ ಸಾಹೇಬರು ರೂಮಿನಲ್ಲಿ ಇದ್ದರು.''

''ಅವನು ಹೊರಗೆ ಹೋಗಿದ್ದು ಯಾವಾಗ?''

''ಅದೇ ಸಮಯ ಇರಬೇಕು ಸಾರ್.''

''ನೀವು ಅದನ್ನು ನೋಡಿದ್ದೀರ ತಾನೆ?''

''ರವಿ ಸಾಹೇಬರು ನನ್ನ ಜೊತೆ ಮಾತಾಡಿದರು.''

ಎಲ್ಲರಿಗೂ ಕುತೂಹಲ ಜಾಸ್ತಿಯಾಯಿತು.

''ರವಿ ನಿಮಗೆ ಏನು ಹೇಳಿದ್ದ?''

''ಮಾವಿನ ತೋಪಿಗೆ ಹೋಗುತ್ತಿದ್ದೇನೆ ಅಂತ.''

''ರವಿ ಆಗ ಭಯಗೊಂಡಿದ್ದನೆ?''

ರಾಮಯ್ಯ ಹುಬ್ಬೇರಿಸಿ, ''ಭಯ ಅಲ್ಲ. ಸಂತಷದಿಂದ ಕುಣಿದಾಡುತ್ತಿದ್ದರು. ಹಾಡು ಹೇಳುತ್ತಿದ್ದರು.''

ಶ್ರೀಕಾಂತ್ ಆಶ್ಚರ್ಯದಿಂದ, ''ಏನಂದ್ರಿ...? ರವಿ ಮಾವಿನ ತೋಪಿಗೆ ಹೋಗುವಾಗ ತುಂಬಾ ಸಂತಷದಿಂದ ಇದ್ದನೆ? ನಂಬಿಕೆಯೇ ಬರುತ್ತಿಲ್ಲ.''

ರಾಮಯ್ಯ ತಲೆಯಾಡಿಸಿದರು.

''ಕಾರಣ ಏನಾದರೂ ಹೇಳಿದನೆ?''

ರಾಮಯ್ಯ ತಲೆಯಾಡಿಸುತ್ತಾ, ''ಅವರಿಗೆ ಫೋನ್ ಬಂದಿತ್ತು. ಅದಕ್ಕೇ ಅವರು ಸಂತೋಷದಿಂದ ಹೊರಟಿದ್ದರು.''

''ಅವನಿಗೆ ಯಾರಿಂದ ಫೋನ್ ಬಂದಿತ್ತು?''

ರಾಮಯ್ಯ ಅನುಮಾನ ಭಯದಿಂದ, ''ಅದು...ಅದು...ಸಹನಾ ಮೇಡಮ್ ಫೋನ್ ಮಾಡಿದ್ದರಂತೆ.''

ಎಲ್ಲರೂ ಬಾಂಬ್ ಸಿಡಿದವರಂತೆ ಬೆಚ್ಚಿಬಿದ್ದರು.

ಶ್ರೀಕಾಂತ್ ಸಹನಾಳ ಕಡೆ ನೋಡಿದನು. ಸಹನಾ ಗಾಬರಿಯಿಂದ, ''ಭಟ್ಟರೆ, ನೀವು ಏನು ಹೇಳ್ತಾ ಇದ್ದೀರ! ನಾನು... ನಾನು ರವಿಗೆ ಯಾಕೆ ಫೋನ್ ಮಾಡಲಿ?''

ಗುರು ಗಂಭೀರವಾಗಿ, ''ಸಹನಾ...ಕೀಪ್ ಕ್ವೈಟ್.''

ಸಹನಾ ಪೆಚ್ಚಾಗಿ ಕುಳಿತಳು.

''ನೀವು ಹೇಳಿ ರಾಮಯ್ಯನವರೆ.''

ರಾಮಯ್ಯ, ''ಮಾವಿನ ತೋಪಿಗೆ ಬಾ ಅಂತ ಸಹನಾ ಹೇಳಿದ್ದಾಳೆ ಅಂತ ರವಿ ಸಾಹೇಬರು ಹೇಳಿದರು.''

ಶ್ರೀಕಾಂತ್ ಅವಳ ಕಡೆ ತಿರುಗಿ, ''ಸಹನಾ...ನೀನು ಯಾಕೆ ರವಿಗೆ ಫೋನ್ ಮಾಡಿದ್ದೆ?''

ಸಹನಾ ಗಾಬರಿಯಿಂದ ''ಮೈ ಗಾಡ್!''

'4ಅವನನ್ನು ಯಾಕೆ ತೋಪಿಗೆ ಬರಲು ಹೇಳಿದ್ದೆ?''

ಸಹನಾ ಕೋಪದಿಂದ, ''ರವಿಗೆ ನಾನು ಫೋನ್ ಮಾಡಿರಲಿಲ್ಲ. ನಾನು ಆ ಸಮಯದಲ್ಲಿ ನನ್ನ ಗೆಳತಿಯ ಮನೆಯಲ್ಲಿದ್ದೆ.''

''ಗೆಳತಿಯ ಮನೆಯಿಂದಲೇ ಯಾಕೆ ಫೋನ್ ಮಾಡಿರಲಿಲ್ಲ. ನಾನು ಆ ಸಮಯದಲ್ಲಿ ನನ್ನ ಗೆಳತಿಯ ಮನೆಯಲ್ಲಿದ್ದೆ.''

''ಗೆಳತಿಯ ಮನೆಯಿಂದಲೇ ಯಾಕೆ ಫೋನ್ ಮಾಡಿರಲಿಲ್ಲ. ಅದರ ಅಗತ್ಯವಾದರೂ ನನಗೆ ಏನಿದೆ? ಅದೂ ನಾವಿಬ್ಬರು...''

ಶ್ರೀಕಾಂತ್ ಕೂಡಲೇ, ''ರವಿಯ ಜೊತೆ ಏಕಾಂತವಾಗಿ ಮಾತಾಡುವ ನೆಪದಿಂದ ನೀನೇ ಏಕೆ ತೋಪಿಗೆ ರವಿಯನ್ನು ಕರೆಸಿಕೊಂಡಿರಬಾರದು?''

ಸಹನಾ ತೀಕ್ಷ್ಣವಾಗಿ, ''ನಾನೇನು ರವಿಯನ್ನು ಪ್ರೀತಿಸಿ ಗುರು, ''ಸಹನಾಳ

ಮದುವೆಯಾಗುವಂತಿರಲಿಲ್ಲ. ನನ್ನ ತಂದೆ ಆರಿಸಿದ್ದ ಯೋಗ್ಯ ವರ ಎಂದು ಮದುವೆಗೆ ಒಪ್ಪಿಕೊಂಡಿದ್ದೆ. ಅಂತಹುದರಲ್ಲಿ ಮದುವೆಗೆ ಮೊದಲೇ ಅವನ ಜೊತೆ ಏಕಾಂತವಾಗಿ ಮಾತಾಡುವ ಆಸೆ. ಆತುರ ನನಗೆ ಇರಲಿಲ್ಲ ಇನ್‌ಸ್ಪೆಕ್ಟರ್."

ಶ್ರೀಕಾಂತ್ ಗುರುವಿನ ಮುಖ ನೋಡಿದನು.

ಸಹನಾ ಮುಂದುವರೆಸುತ್ತಾ, 'ರವಿಯೊಡನೆ ಏಕಾಂತವಾಗಿ ಮಾತಾಡಬೇಕು ಎಂಬ ಆಸೆ, ಉದ್ದೇಶ ನನಗೆ ಇದ್ದಿದ್ದರೆ ಅದಕ್ಕಾಗಿ ನಾನು ಮಾವಿನ ತೋಪಿಗೆ ಹೋಗಬೇಕಾಗಿರಲಿಲ್ಲ. ಬಂಗಲೆಯಲ್ಲೇ ಮಾತಡುತ್ತಿದ್ದೆ. ನನ್ನನ್ನು ಇದರ ಬಗ್ಗೆ ಪ್ರಶ್ನಿಸುವವರು ಯಾರೂ ಇಲ್ಲಿ ಇಲ್ಲ."

"ಅಂದರೆ ನೀನು ಫೋನ್ ಮಾಡಿಲ್ಲವೆ?"

'ಖಂಡಿತಾ ಮಾಡಿಲ್ಲ."

ಗುರು ಕೂಡಲೇ, "ಒಂದು ನಿಮಿಷ ಇರಿ. ಇಲ್ಲೊಂದು ಸಣ್ಣ ಗೊಂದಲ ಉಂಟಾಗಿದೆ. ರಾಮಯ್ಯನವರೆ... ಸರಿಯಾಗಿ ನೆನಪು ಮಾಡಿಕೊಂಡು ಹೇಳಿ. ಸಹನಾಳೇ ತನಗೆ ಫೋನ್ ಮಾಡಿದ್ದಳು ಅಂತ ರವಿ ಹೇಳಿದ್ದನೆ?"

ರಾಮಯ್ಯ ಹೊಟ್ಟೆ ಸವರಿಕೊಳ್ಳಲಾರಂಭಿಸಿದರು.

ತೀವ್ರವಾಗಿ ಚಿಂತಿಸುತ್ತಿದ್ದಾರೆ.

ಎಲ್ಲರೂ ಅವರ ಕಡೆಯೇ ನೋಡುತ್ತಿದ್ದಾರೆ.

ರಾಮಯ್ಯ ಕೂಡಲೇ, "ಹಾಂ...ಈಗ ನೆನಪಿಗೆ ಬಂತು. ಸಹನಾ ಮಾವಿನ ತೋಪಿನಲ್ಲಿ ಕಾಯುತ್ತಿದ್ದಾಳೆ. ಬೇಗ ಬರಲು ಹೇಳಿದ್ದಾಳೆ ಅಂತ ಬೇರೆ ಯಾರೋ ಹೇಳಿದ್ದರಂತೆ, ಹಾಗಂತ ರವಿ ಹೇಳಿದ್ದರು."

"ರವಿಗೆ ಆ ರೀತಿ ಫೋನ್ ಮಾಡಿದ್ದು ಯಾರು?"

"ಯಾರು ಅಂತ ಹೇಳಲಿಲ್ಲ."

"ನೀವು ಅದನ್ನು ಕೇಳಲಿಲ್ಲವೆ?"

ರಾಮಯ್ಯ ಪೆಚ್ಚಾಗಿ, "ಇಲ್ಲ, ಕೇಳಬೇಕು ಅಂತ ನನಗೆ ಹೊಳೆಯಲೇ ಇಲ್ಲ ಸಾರ್."

ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ.

ಸಹನಾ ತುಂಬಾ ಭಯಗೊಂಡಿದ್ದಾಳೆ.

ಹೆಸರಿನಲ್ಲಿ ಬೇರೆ ಯಾರೋ ಫೋನ್ ಮಾಡಿ, ಪಿಯನ್ನು ತೋಪಿಗೆ ಕರೆಸಿಕೊಂಡಿದ್ದಾರೆ. ಇಲ್ಲಿ ಇನ್ನೊಂದು ಸೂಕ್ಷ್ಮ ವಿಚಾರವಿದೆ.''

ಶ್ರೀಕಾಂತ್ ಹುಬ್ಬೇರಿಸಿ ನೋಡಿದನು.

''ಮೋಹನನನ್ನೂ ಸಹಾ ಅದೇ ರೀತಿ ಫೋನ್ ಮಾಡಿ ಮಾವಿನ ತೋಪಿಗೆ ಕರೆಸಿಕೊಂಡು ಕೊಲೆ ಮಾಡಲಾಗಿದೆ. ಎರಡು ಕೊಲೆಗಳಲ್ಲೂ ಒಂದೇ ತಂತ್ರ ಬಳಸಿ ಕಾರ್ಯ ಸಾಧಿಸಲಾಗಿದೆ.''

ಶ್ರೀಕಾಂತ ಗಾಢವಾಗಿ ಚಿಂತಿಸುತ್ತಿದ್ದಾನೆ.

ಗುರು, ''ಈಗ ನಡೆದಿರುವ ಮೂರು ಕೊಲೆಗಳಿಗೆ ಯಾವ ರೀತಿ ಒಂದಕ್ಕೊಂದು ಸಂಬಂಧ ಇದೆ ಅಂತ ಚಿಂತಿಸಬೇಕಾಗಿದೆ. ರಾಜಾರಾಯರ ಕೊಲೆಗೆ ಕಾರಣ ಅವರು ಹೊಸದಾಗಿ ಮಾಡಿದ್ದ ವಿಲ್. ಅವರಿಗೆ ನಗದು ಇಪ್ಪತ್ತೈದು ಲಕ್ಷ ರೂಪಾಯಿ ಬಂತಂತೆ. ಇದು ಎಲ್ಲಿಂದ ಬಂತು? ಶ್ರೀಕಾಂತ್...ನೀವು ಇವತ್ತೇ ಬ್ಯಾಂಕ್‌ನಲ್ಲಿ ಎನ್‌ಕ್ವಯರಿ ಮಾಡಿ, ರಾಜಾರಾಯರ ಖಾತೆಗಳಿರುವ ಎಲ್ಲಾ ಬ್ಯಾಂಕುಗಳಿಗೂ ಹೋಗಿ.''

ಶ್ರೀಕಾಂತ್ ತಲೆಯಾಡಿಸಿದನು.

ಗುರು ಮುಂದುವರೆಸುತ್ತಾ, ''ಇನ್ನು ಉಳಿದಿರುವುದು ಯುವಕರಿಬ್ಬರ ಕೊಲೆಗಳು. ರವಿ, ಮೋಹನ ಇಬ್ಬರೂ ಸಹಾ ಸಹನಾಳನ್ನು ಮದುವೆಯಾಗಲು ಬಯಸಿದ್ದರು. ಅವರಿಬ್ಬರೂ ಪರಸ್ಪರ ಪ್ರತಿಸ್ಪರ್ಧಿಗಳಾಗಿದ್ದರು.''

ಶ್ರೀಕಾಂತ್, ''ಸಾರ್...ಮೋಹನ ಕೊಲೆಯಾಗಿದ್ದಾಗ ಆ ಸ್ಥಳದಲ್ಲಿ ಸೋಮಯ್ಯ ಇದ್ದನು. ರವಿ ಕೊಲೆಯಾಗಿದ್ದಾಗ ರಂಗಯ್ಯ ಅನುಮಾನಾಸ್ಪದ ರೀತಿಯಲ್ಲಿ ಅಲ್ಲಿದ್ದನು. ಆದರೆ ಅವರಿಬ್ಬರೂ ತಾವು ಕೊಲೆಗಳನ್ನು ಮಾಡಿಲ್ಲ ಅಂತ ಹೇಳಿಕೆ ನೀಡಿದ್ದಾರೆ. ಆದರೆ ಇವರಿಬ್ಬರಿಗೂ ಸಹಾ ಕೊಲೆಗಳನ್ನು ಮಾಡಲು ಕಾರಣ ಹಾಗೂ ಅವಕಾಶಗಳೂ ಇದ್ದವು.''

ಗುರು ಗಂಭೀರವಾಗಿ, ''ಇದು ನನ್ನ ಗಮನಕ್ಕೂ ಸಹಾ ಬಂದಿದೆ. ನಾನು ಇಬ್ಬರನ್ನೂ ಸಹಾ ಪೂರ್ಣವಾಗಿ ನಂಬಿಲ್ಲ. ಅವರ ಮೇಲೆ ಕಣ್ಣಿಟ್ಟಿದ್ದೇನೆ.''

''ಈಗ ಮುಂದೇನು ಮಾಡೋದು ಸಾರ್?''

''ಈ ಬಂಗಲೆಯ ಕಾವಲಿಗೆ ಇಬ್ಬರು ಪಿ.ಸಿ.ಗಳನ್ನು ನೇಮಿಸಿ. ತೋಪಿನಲ್ಲೂ ಸಹಾ ಕಾವಲು ಮುಂದುವರೆಯಲಿ. ನಾನು ಇಲ್ಲೇ ಇದ್ದೂಉದ ಉಳಿದಿದ್ದನ್ನು ಗಮನಿಸುತ್ತೇನೆ.''

ಶ್ರೀಕಾಂತ್ ತಲೆಯಾಡಿಸಿದನು.

ಮೂರು ಕೊಲೆಗಳು ನಡೆದಿದ್ದರೂ ಸಹಾ ಕೊಲೆಗಾರನನ್ನು ಪತ್ತೆ ಮಾಡುವಂತಹ ಯಾವ ಸುಳಿವೂ ಸಿಕ್ಕಿರಲಿಲ್ಲ. ಪೋಲೀಸ್ ಅಧಿಕಾರಿಗಳು ತಲೆಕೆಡಿಸಿಕೊಂಡಿದ್ದರು.

**8**

ಅದೇ ಬಂಗಲೆಯ ಮತ್ತೊಂದು ಕೊಠಡಿ!

ಸೋಮಯ್ಯ ಮಗನ ಫೋಟೋ ನೋಡುತ್ತಾ ಕಣ್ಣೀರು ಮಿಡಿಯುತ್ತಿದ್ದಾರೆ. ಪುತ್ರ ಶೋಕಂ ನಿರಂತರಂ!

ಕತ್ತಲಾಯಿತೆಂದರೆ, ಏಕಾಂತದಲ್ಲಿ ಮಲಗಿದ್ದರೆ ಸಾಕು, ದುಃಖ, ಚಿಂತೆ ಕಾಡಲು ಪ್ರಾರಂಭಿಸುತ್ತದೆ.

ಮಗನ ಸಾವಿನ ಚಿಂತೆ ಸಾಮಾನ್ಯವೇ?

ಅಲ್ಲದೇ ಸಾವು ಸಹಜವಲ್ಲ, ಅದು ಕೊಲೆ!

ಸಹನಾಳಂಥ ಶ್ರೀಮಂತ ಯುವತಿ ರಪಿಯನ್ನು ಮದುವೆಯಾಗಲು ಒಪ್ಪಿಕೊಂಡಿದ್ದಳು. ಇದೇ ದೊಡ್ಡ ಅದೃಷ್ಟ.

ಮೂರೇ ದಿನಗಳ ನಂತರ ಮದುವೆಯಿತ್ತು.

ಎಲ್ಲಾ ಸಿದ್ಧತೆಗಳೂ ಮುಗಿದಿದ್ದವು. ಸೋಮಯ್ಯ ಮದುವೆಯಾಗಿ ಮಾಂಗಲ್ಯ, ರೇಶಿಮೆ ಸೀರೆ, ಸಂಕಲಕೆ ಪಂಚೆ, ಹೊಸ ಬಟ್ಟೆ ತೆಗೆದುಕೊಂಡು ಬಂದಿದ್ದನು.

ಅವನಿಗೆ ಆಘಾತ ಕಾದಿತ್ತು!

ಮಗನ ಸಾವಿನ ಸುದ್ದಿ ಕೇಳಬೇಕಾಯಿತು. ಸೋಮಯ್ಯ ಕಣ್ಣೀರಿಡುತ್ತಿದ್ದಾನೆ. ಆಡಿಗಡಿಗೆ ನಿಟ್ಟುಸಿರು ಬಿಡುತ್ತಾನೆ. ಎದೆ ಹಿಡಿದುಕೊಂಡು ಸಂಕಟ ಪಡುತ್ತಿದ್ದಾನೆ. ಅವರಿಗೆ ಆಗಿರುವ ನಿರಾಸೆ, ಸಂಕಟ ಕಡಿಮೆಯೇನಲ್ಲವಲ್ಲ!

ಮದುವೆಯಾಗಬೇಕಾಗಿದ್ದ ಮಗ ಸತ್ತಿದ್ದಾನೆ!

'ಇದಕ್ಕೆ ಕಾರಣ ನನ್ನ ಸಹೋದರ ರಂಗಯ್ಯ!' ಸೋಮಯ್ಯನವರಿಗೆ ಈ ಆಲೋಚನೆಯಿಂದ ಕೋಪ ಉಕ್ಕೇರಿತು. ಆವೇಶದಿಂದ ಬುಸುಗುಟ್ಟಿದನು.

'ಸಹನಾಳನ್ನು ತನ್ನ ಮಗ ಮದುವೆಯಾಗದೇ ಸತ್ತ ಅಂತ ರಂಗಯ್ಯ ಸೇಡು ತೋರಿಸಿಕೊಂಡಿದ್ದಾನೆ.'

'ನನ್ನ ಮಗನನ್ನು ಕೊಂದಿದ್ದಾನೆ!'

'ತಾನು ಅನುಭವಿಸುತ್ತಿದ್ದ ಪುತ್ರ ಶೋಕ ನನಗೂ ಬರಲಿ ಅಂತ ನನ್ನ ಮಗನನ್ನು ಕೊಂದಿದ್ದಾನೆ.'

'ರಂಗಯ್ಯ ಮಾವಿನ ತೋಪಿಗೆ ಏಕೆ ಹೋದ?'

'ನನ್ನ ಮಗನನ್ನು ಕೊಲೆ ಮಾಡಲು ತಾನೆ?'

'ನನ್ನ ಮಗನನ್ನು ಕೊಂದಿದ್ದಾನೆ. ಆದರೆ ಸಾಕ್ಷಿ, ಸುಳಿವು ಪೋಲೀಸರ ಕಣ್ಣಿಗೆ ಮಣ್ಣೆರಚಿದ್ದಾನೆ.'

'ರಂಗಯ್ಯ ನನ್ನ ಮಗನ ಹೆಣದ ಹತ್ತಿರ ನಿಂತಿದ್ದನು ಕೆಲಸದಾಳು ವಾಸು ನೋಡಿದ್ದಾನೆ.'

'ಇದಕ್ಕಿಂತ ಉತ್ತಮ ಸಾಕ್ಷಿ ಬೇಕೆ?'

'ರಂಗಯ್ಯ...ನೀನು ನನ್ನ ಸಹೋದರನೇ ಇರಬಹುದು. ನೀನು ಕೊಲೆ ಮಾಡಿ ಪೋಲೀಸರನ್ನೇ ಏಮಾರಿಸಬಹುದು. ಆದರೆ ನನ್ನ ಕೈಯಿಂದ ತಪ್ಪಿಸಿಕೊಳ್ಳಲಾರೆ.

'ನಾನು ಸೇಡು ತೀರಿಸಿಕೊಳ್ಳುತ್ತೇನೆ.'

'ನಾನು ನಿನ್ನನ್ನು ಕೊಲೆ ಮಾಡುತ್ತೇನೆ.'

'ನಿನ್ನನ್ನು ಕೊಂದು ನಾನಾಗಿಯೇ ಪೋಲೀಸರಿಗೆ ಸರೆಂಡರ್ ಆಗುತ್ತೇನೆ. ನನ್ನ ಮಗನ ಬದುಕನ್ನೇ ನುಂಗಿ ನೀರು ಕುಡಿದಿರುವ ನಿನ್ನನ್ನು ಖಂಡಿತಾ ಉಳಿಸಲಾರೆ. ಇವತ್ತು ರಾತ್ರಿಯೇ ನಿನಗೊಂದು ಗತಿ ಕಾಣಿಸುತ್ತೇನೆ.'

ಸೋಮಯ್ಯ ಎದ್ದು ಫೋನಿನ ಹತ್ತಿರ ಬಂದನು.

ಯಾವುದೋ ನಂಬರ್‌ಗೆ ಡಯಲ್ ಮಾಡಿದನು.

ಸಮಯ ಉರುಳುತ್ತಿತ್ತು.

ಅತ್ತ ಕಡೆಯಿಂದ, ''ಹಲೋ...''

ಅದು ರಂಗಯ್ಯನ ಧ್ವನಿ!

ಸೋಮಯ್ಯ ಕೂಡಲೇ ಮೌತ್‌ಪೀಸ್‌ಗೆ ಕರ್ಚಿಫ್ ಅನ್ನು ಹಾಕಿ, ಧ್ವನಿ ಬದಲಿಸುತ್ತಾ, ''ಯಾರು...? ರಂಗಯ್ಯನೆ?''

''ಹಾಂ...ನಾನೇ...''

''ನೀನು ಈಗಲೇ ತೋಪಿಗೆ ಬರಬೇಕು.''

"ಯಾಕೆ...? ನೀನ್ಯಾರು?"

"ನಿನ್ನ ಹಿತೈಷಿ."

"ನಾನ್ಯಾಕೆ ತೋಪಿಗೆ ಬರಬೇಕು?"

"ನಿನಗೆ ಕೊಲೆಯ ಬಗ್ಗೆ ಸುಳಿವು ನೀಡಲು."

ರಂಗಯ್ಯ ಆತುರದಿಂದ, "ಯಾರ ಕೊಲೆಯ ಬಗ್ಗೆ?"

"ಏ...ಪೋಲ್, ನಿನ್ನ ಮಗನ ಕೊಲೆಯ ಬಗ್ಗೆ."

"ಏನು...? ಏನಂದೆ?"

"ನಿನ್ನ ಮಗನ ಕೊಲೆಗಾರನನ್ನು ತೋರಿಸುತ್ತೇನೆ ಅಂದೆ."

"ಯಾರು...? ಯಾರು?"

"ಹೇಳೊಲ್ಲ, ತೋರಿಸುತ್ತೇನೆ."

"ಕೊಲೆಗಾರ ಈಗ ಎಲ್ಲಿದ್ದಾನೆ?"

"ಮಾವಿನ ತೋಪಿನಲ್ಲಿ."

"ನಿನ್ನ ಮಾತು ನಿಜವೆ?"

ಸೋಮಯ್ಯ ಗಡುಸಾಗಿ, "ನಂಬಿಕೆ ಇದ್ದರೆ ಬಾ. ಮೋಹನನ ಕೊಲೆಗಾರ ಈ ಊರನ್ನೇ ಬಿಡಲು ಪ್ರಯತ್ನಿಸುತ್ತಿದ್ದಾನೆ."

"ಇಲ್ಲ...ನಾನದಕ್ಕೆ ಅವಕಾಶ ಕೊಡೊಲ್ಲ."

"ಹಾಗಾದರೆ ಈಗಲೇ ತೋಪಿಗೆ ಹೋಗು."

ರಂಗಯ್ಯ, "ನನ್ನ ಮಗನ ಕೊಲೆಗಾರ ಯಾರು ಅಂತ ನಾನು ಊಹಿಸಬಲ್ಲೆ. ನನ್ನ ಅಣ್ಣ ಸೋಮಯ್ಯ."

ಸೋಮಯ್ಯ ತಾನೇ ನಗುತ್ತಾ, "ನಿನ್ನ ಊಹೆ ಸರಿ. ಆದರೆ ನೀನಲ್ಲಿಗೆ ಹೋದರೆ ಸೋಮಯ್ಯನೇ ಕೊಲೆ ಮಾಡಿದ್ದಾನೆ ಅನ್ನೋದಿಕ್ಕೆ ಆಧಾರ ಸಹಾ ಸಿಗುತ್ತೆ."

"ಇಷ್ಟಕ್ಕೂ ನೀನ್ಯಾರು?"

"ಅದು ನಿನಗೆ ಅನಗತ್ಯ."

"ನಿನ್ನನ್ನು ಹೇಗೆ ನಂಬಲಿ?"

"ನಂಬಿಕೆಯಿದ್ದರೆ ಬಾ. ಇಲ್ಲದಿದ್ದರೆ ಬೇಡ."

ಫೋನ್ ಡಿಸ್‌ಕನೆಕ್ಟ್ ಆಯಿತು.

ಸೋಮಯ್ಯ ಧ್ವನಿಯನ್ನು ಬದಲಿಸಿ ರಂಗಯ್ಯನ ಜೊತೆ ಮಾತನಾಡಿ ಪ್ರಚೋದಿಸಿದ್ದ.

ಅವನಿಗೆ ಗೊತ್ತಿತ್ತು, ತನ್ನ ಸಹೋದರ ರಂಗಯ್ಯ ಕೊಲೆಗಾರನನ್ನು ಹುಡುಕಿಕೊಂಡು ತೋಪಿಗೆ ಹೊಗುತ್ತಾನೆ ಎಂದು.

ಅದೇ ರೀತಿ ನಡೆಯಿತು.

ಸೋಮಯ್ಯ ನೋಡುತ್ತಿರುವಂತೆಯೇ ರಂಗಯ್ಯ ಬಂಗಲೆಯಿಂದ ಸರಸರನೆ ಹೊರ ನಡೆದ.

ರಂಗಯ್ಯ ಕತ್ತಲಲ್ಲಿ ನಡೆಯುತ್ತಿದ್ದಾನೆ.

ಸೋಮಯ್ಯನ ಮುಖದಲ್ಲಿ ಪೈಶಾಚಿಕ ತೃಪ್ತಿ ಕಾಣುತ್ತಿತ್ತು.

'ರಂಗಯ್ಯ...ನೀನಿನ್ನು ಬದುಕಲಾರೆ. ನನ್ನ ತಂತ್ರಕ್ಕೆ ಬಲಿಯಾಗಿ ನೀನು ಸಾಯಲೇಬೇಕು.'

ಸೋಮಯ್ಯ ಬಂಗಲೆಯ ಹಿತ್ತಲಿನ ಕಡೆ ಬಂದು, ಕಳ್ಳನಂತೆ ಕಾಂಪೌಂಡನ್ನು ಹಾರಿ ನಡೆಯಲಾರಂಭಿಸಿದ.

ಸೋಮಯ್ಯ ಹೊರಗೆ ಹೋದದ್ದನ್ನು ಬಂಗಲೆಯಲ್ಲಿ ಇದ್ದವರು ಯಾರೂ ನೋಡಲೇ ಇಲ್ಲ.

ಆಗ ರಾತ್ರಿ ಏಳೂವರೆ ಗಂಟೆ!

ಅದೇ ರಾತ್ರಿ ವಿಚಿತ್ರ ಘಟನೆ ನಡೆಯುವುದರಲ್ಲಿತ್ತು!

## 9

ಅದು ಪೋಲೀಸ್ ಸ್ಟೇಷನ್!

ಗುರುವಿನ ಸಲಹೆಯಂತೆ ಎಸ್.ಐ. ಶ್ರೀಕಾಂತ್ ಈಗ ರಾಜಾರಾಯರ ಖಾತೆಗಳಿದ್ದ ಬ್ಯಾಂಕುಗಳಿಂದ ಸ್ಟೇಟ್‌ಮೆಂಟ್ ತರಿಸಿಕೊಂಡಿದ್ದನು. ಚರ್ಚೆ ನಡೆಯುತ್ತಿತ್ತು.

ಫೋನಿನ ಕರೆಗಂಟೆ ಮೊಳಗಿತು.

ಶ್ರೀಕಾಂತ್ ರಿಸೀವರ್ ಎತ್ತಿ "ಹಲೋ..."

"ಯಾರು...? ಇನ್‌ಸ್ಪೆಕ್ಟರ್ ತಾನೆ?"

ಸಹನಾ ಗಾಬರಿಯಿಂದ ಕೇಳಿದಳು.

"ಸಹನಾ...ನೀನಾ...! ಗಾಬರಿಯಾಗಿದ್ದೀಯ?"

ಗುರು ಈಗ ಚುರುಕಾದನು.

"ಇನ್‌ಸ್ಪೆಕ್ಟರ್...ನೀವು ಈಗಲೇ ತೋಪಿನ ಕಡೆ ಹೋಗಿ." ಸಹನಾ ಭಯದಿಂದ ಹೇಳಿದಳು.

"ಯಾಕೆ...? ಏನು ವಿಷಯ?"

"ಅಲ್ಲಿಗೆ ನನ್ನ ಮಾವ ಹೋದರು."

"ನಿನ್ನ ಮಾವ ಅಂದರೆ..."

"ರಂಗಯ್ಯ ಮಾವ."

"ಅದಕ್ಕೆ ನೀನ್ಯಾಕೆ ಗಾಬರಿಯಾಗಿದ್ದೀಯ?"

"ನನ್ನ ಮಾವನಿಗೆ ಫೋನ್ ಬಂದಿತ್ತು."

"ವಾಟ್...!"

"ಹೌದು ಇನ್‌ಸ್ಪೆಕ್ಟರ್."

"ಫೋನನ್ನು ಟ್ಯಾಪ್ ಮಾಡಿದ್ದೆಯ?"

"ಇಲ್ಲ."

"ಛೇ...! ಛೇ...!"

"ನನ್ನ ಮಾವ ಫೋನಿನಲ್ಲಿ ಮಾತಾಡುತ್ತಿದ್ದುದನ್ನು ನಾನು ದೂರದಿಂದಲೇ ನೋಡಿದೆ. ಅವರು ಕೂಡಲೇ ಹೊರಗೆ ಹೋದರು. ಅವರು ಖಂಡಿತಾ ತೋಪಿಗೆ ಹಿಗಿರುತ್ತಾರೆ."

"ರಂಗಯ್ಯ ಹೋಗಿ ಎಷ್ಟು ಹೊತ್ತು ಆಯ್ತು?"

"ಹತ್ತು ನಿಮಿಷಗಳಾಗಿವೆ."

"ಓ.ಕೆ. ನಾನು ಈಗಲೇ ಹೋಗುತ್ತಿದ್ದೇನೆ."

ಫೋನ್ ಡಿಸ್‌ಕನೆಕ್ಟ್ ಆಯಿತು.

ಎಸ್.ಐ. ಶ್ರೀಕಾಂತ್ ಸಂಕ್ಷಿಪ್ತವಾಗಿ ಗುರುವಿಗೆ ಹೇಳಿದನು. ಇಬ್ಬರು ಆತುರದಿಂದ ಹೊರಟರು.

ಗುರು ಉದ್ವಿಗ್ನತೆಯಿಂದ, "ಇನ್‌ಸ್ಪೆಕ್ಟರ್...ಈ ಬಾರಿ ಹೇಗಾದರೂ ಮಾಡಿ ಈ ಕೊಲೆಯನ್ನು ತಪ್ಪಿಸಬೇಕು."

ಜೀಪಿನ ವೇಗ ಹೆಚ್ಚಿತು.

''ರಂಗಯ್ಯನನ್ನು ಕೊಲೆ ಮಾಡಲು ಯಾರೋ ಧ್ವನಿ ಬದಲಿಸಿ ಫೋನಿನಲ್ಲಿ ಮಾತಾಡಿ ಕರೆಸಿಕೊಂಡಿದ್ದಾರೆ.''

''ರಂಗಯ್ಯ...ರಂಗಯ್ಯ ಕೊಲೆಯಾಗಬಾರದು!''

* * *

ಅದು ಮಾವಿನ ತೋಪು!

ಪೋಲೀಸ್ ಜೀಪ್ ಸೈರನ್ ಮೊಳಗಿಸುತ್ತಾ ಗೇಟಿನ ಹತ್ತಿರ ಬಂದು ನಿಂತುಕೊಂಡಿತು.

ಅದೇ ಸಮಯಕ್ಕೆ ಮಾವಿನ ತೋಪಿನೊಳಗಿನಿಂದ ವ್ಯಕ್ತಿಯೊಂದು ಭಯ, ಗಾಬರಿಯಿಂದ ಓಡಿ ಬರುತ್ತಿರುವುದನ್ನು ಕಂಡು ಪೋಲೀಸರು ಚುರುಕಾದರು.

ಸರ‍್ರನೆ ನುಗ್ಗಿ ಓಡಿ ಬರುತ್ತಿದ್ದ ವ್ಯಕ್ತಿಯನ್ನು ಗಬಕ್ಕನೆ ಹಿಡಿದುಕೊಂಡು ಎಳೆ ತಂದರು.

ಎಲ್ಲರೂ ತೋಟದೊಳಗೆ ಬಂದರು.

ಕತ್ತಲು...! ಎಲ್ಲಾ ಕಡೆ ಕತ್ತಲು! ಪೋಲೀಸರು ಹಿಡಿದುಕೊಂಡಿರುವ ವ್ಯಕ್ತಿಯ ಮುಖ ಸಹಾ ಸರಿಯಾಗಿ ಕಾಣಿಸುತ್ತಿಲ್ಲ. ಅಮಾವಾಸ್ಯೆಯ ಕತ್ತಲು ತೀವ್ರವಾಗಿದೆ.

ಗುರು ಜೋರಾಗಿ, ''ವಾಸು...ವಾಸು...ಬೇಗ ಎರಡು ಗ್ಯಾಸ್ ಲೈಟ್ ತೆಗೆದುಕೊಂಡು ಬಾ.''

ಬಂಗಲೆಯ ಮುಂಭಾಗದ ದೀಪ ಹೊತ್ತಿಕೊಂಡಿತು.

ಎಲ್ಲರೂ ಚಳಿಯಿಂದ ನಡುಗುತ್ತಿದ್ದಾರೆ.

ಎರಡು ನಿಮಿಷಗಳ ನಂತರ ಬಂಗಲೆಯೊಳಗಿಂದ ಗ್ಯಾಸ್ ಲೈಟನ್ನು ಹೊತ್ತಿಸಿಕೊಂಡು ವಾಸು ಬಂದ.

ಅವನ ಹಿಂದೆ ಅನಸೂಯಮ್ಮ ಬಂದರು.

ಗ್ಯಾಸ್ ಲೈಟನ್ನು ಮೇಲಕ್ಕೆ ಹಿಡಿದನು.

ಪೋಲೀಸರು ಬಲವಾಗಿ ಹಿಡಿದುಕೊಂಡಿದ್ದ ವ್ಯಕ್ತಿಯ ಮುಖದ ಮೇಲೆ ಬೆಳಕನ್ನು ಬೀರಿದರು.

ಆ ವ್ಯಕ್ತಿಯ ಮುಖ ಕಂಡು ತತ್ತರಿಸಿದರು.

ಯಾರು ಕೊಲೆಯಾಗಿರುತ್ತಾರೆ ಎಂದು ಕಾಪಾಡಲು ಆತುರದಿಂದ ಓಡಿ ಬಂದಿದ್ದರೋ ಅವನನ್ನೇ ಹಿಡಿದುಕೊಂಡಿದ್ದರು.

ಆ ವ್ಯಕ್ತಿ ರಂಗಯ್ಯ!

ರಂಗಯ್ಯ ಜೀವಂತವಾಗಿಯೇ ಇದ್ದ!

ರಂಗಯ್ಯನ ಮುಖ ಭಯದಿಂದ ಕಪ್ಪಿಡರಿ ಹಿಗಿದೆ. ಒಂದೇ ಸಮನೆ ಗಡಗಡನೆ ನಡುಗುತ್ತಿದ್ದಾನೆ.

ಅದೇ ಸಮಯಕ್ಕೆ ಅಲ್ಲಿಗೆ ಕಾರು ಬಂದಿತು.

ಅದರಲ್ಲಿ ಸಹನಾ ಬಂದಿದ್ದಳು.

ಶ್ರೀಕಾಂತ ಗಡುಸಾಗಿ, "ರಂಗಯ್ಯ...ಏನಿದೆಲ್ಲಾ? ನೀವ್ಯಾಕೆ ಈ ರಾತ್ರಿಯ ಹೊತ್ತಿನಲ್ಲಿ ಇಲ್ಲಿಗೆ ಬರಲು ಹೋದಿರಿ?"

ರಂಗಯ್ಯ ಉತ್ತರಿಸದೆ ಕೈ ತೋರಿಸಿದನು.

ಆ ಕೈ ಸಹಾ ನಡುಗುತ್ತಿತ್ತು.

ಎಲ್ಲರೂ ಅತ್ತ ಕಡೆ ತಿರುಗಿದರು.

ವಾಸು ಗ್ಯಾಸ್ ಲೈಟ್ ಎತ್ತಿ ಹಿಡಿದನು.

ಎಲ್ಲರೂ ಭಯಾಶ್ಚರ್ಯದಿಂದ ತತ್ತರಿಸಿ ಹೋದರು. ರಂಗಯ್ಯ ತೋರಿಸಿದ್ದ ಜಾಗದಲ್ಲಿ ಯಾರೋ ಬಿದ್ದಿದ್ದರು.

ಎಲ್ಲರೂ ಅತ್ತ ಕಡೆ ಧಾವಿಸಿದರು.

ಅಲ್ಲಿ ದಡೂತಿ ದೇಹದ ವ್ಯಕ್ತಿ ಬೋರಲಾಗಿ ಬಿದ್ದಿತ್ತು. ತಲೆಯಿಂದ ರಕ್ತ ಸುರಿದು ನೆಲದತ್ತ ಹರಿಯುತ್ತಿತ್ತು.

ಪಿ.ಸಿ.ಗಳು ದೇಹ ಹೊರಳಿಸಿದರು.

ಆ ವ್ಯಕ್ತಿ ಸೋಮಯ್ಯ!

ಸೋಮಯ್ಯ ಕೊಲೆಯಾಗಿದ್ದನು!

* * *

ಅರ್ಧ ಗಂಟೆಯ ನಂತರ

ಮತ್ತೊಂದು ವೆಹಿಕಲ್‌ನಲ್ಲಿ ಡಾಕ್ಟರ್, ಫೋಟೋಗ್ರಾಫರ್ ಮತ್ತು ಬೆರಳ ಗುರುತು ತಜ್ಞರು ಬಂದರು.

ಸುದ್ದಿ ಹರಡಿಲ್ಲವಾದ್ದರಿಂದ ಊರಿನ ಜನಗಳು ಅಲ್ಲಿಗೆ ಬಂದಿರಲಿಲ್ಲ. ಪರಿಸರ ಗಂಭೀರವಾಗಿತ್ತು.

ಕ್ಯಾಮೆರಾಗಳು ಬೆಳಕು ಚೆಲ್ಲುತ್ತಿದ್ದವು.

ಡಾಕ್ಟರ್ ಹೆಣವನ್ನು ಪರೀಕ್ಷಿಸುತ್ತಿದ್ದರು.

ಎಸ್.ಐ. ಶ್ರೀಕಾಂತ್ ಮತ್ತು ಗುರು ತುಂಬಾ ಎಚ್ಚರಿಕೆಯಿಂದ ಹೆಣ ಬಿದ್ದಿದ್ದ ಸ್ಥಳ ಮತ್ತು ಆಸುಪಾಸಿನಲ್ಲಿ ನೋಡುತ್ತಿದ್ದಾರೆ. ಕೊಲೆಗೆ ಬಳಸಲಾದ ಆಯುಧ ಸಿಕ್ಕಿರಲಿಲ್ಲ.

ಎಸ್.ಐ. ಶ್ರೀಕಾಂತ್ ಸಹನಾಳ ಕಡೆ ತಿರುಗಿದನು. ಅವಳು ಭಯದಿಂದ ಗರಬಡಿದವರಂತೆ ನಿಂತಿದ್ದಳು.

ಅವಳ ಭುಜ ತಿವಿದು ಎಚ್ಚರಿಸಿದರು.

''ಸಹನಾ...ನೀನು ನಮಗೆ ಫೋನ್ ಮಾಡಿದ್ದ ತಾನೆ?''

ಸಹನಾ ತಲೆಯಾಡಿಸಿದಳು.

''ನಿನ್ನ ಮಾವ ರಂಗಯ್ಯ ತೋಟದ ಕಡೆ ಹೋಗುತ್ತಿದ್ದಾರೆ ಅಂತ ತಾನೇ ನೀನು ನನಗೆ ಹೇಳಿದ್ದು?''

ಸಹನಾ ಮೆಲ್ಲಗೆ, ''ಹೌದು.''

''ಆದರೆ ಇಲ್ಲಿ ಸೋಮಯ್ಯ ಕೊಲೆಯಾಗಿದ್ದಾರಲ್ಲ!''

ಸಹನಾ ಹಣೆಯನ್ನು ಉಜ್ಜಿಕೊಳ್ಳುತ್ತಾ, ''ನನಗೆ ಇದೇ ಅರ್ಥ ಆಗುತ್ತಿಲ್ಲ ಇನ್ಸ್‌ಪೆಕ್ಟರ್ ನಾನು ನೋಡಿದಾಗ ಸೋಮಯ್ಯ ಮಾವ ರೂಮಿನಲ್ಲೇ ಇದ್ದರು. ಈಗಲೂ ಸಹಾ ಅವರ ರೂಮು ಒಳಗಿನಿಂದ ಬಾಗಿಲು ಹಾಕಿಕೊಂಡಿದೆ. ಅವರು ಯಾವಾಗ, ಯಾವ ರೀತಿ ಬಂಗಲೆಯಿಂದ ತೋಟದ ಕಡೆ ಹೋದರು ಅಂತ ನನಗೆ ಗೊತ್ತಾಗುತ್ತಿಲ್ಲ.''

ಗುರು, ''ಬಹುಶಃ...ರೂಮಿನ ಕಿಟಕಿಯ ಮೂಲಕ ಇಳಿದು ಹಿತ್ತಲಿನ ಕಡೆಯಿಂದ ಸೋಮಯ್ಯ ಹೊರಗೆ ಬಂದಿದ್ದಾರೆ.''

''ಹಾಗೇಕೆ ಕದ್ದು ಹೋದರು?''

''ಅವರು ತೋಟಕ್ಕೆ ಹೋಗುವುದನ್ನು ನೀವ್ಯಾರೂ ನೋಡಬಾರದು ಅಂತ ಇರಬೇಕು.''

ಶ್ರೀಕಾಂತ್, ''ನನಗೆ ಅನಿಸುತ್ತೆ ಸೋಮಯ್ಯನ ಈ ಪ್ರಯತ್ನದ ಹಿಂದೆ ಏನೋ ದುರುದ್ದೇಶ ಇತ್ತು ಅಂತ. ನನ್ನ ಊಹೆ ಸರಿಯಾಗಿದ್ದರೆ ಅವರು ತಮ್ಮ ಸಹೋದರ ರಂಗಯ್ಯನನ್ನು ಕೊಲೆ ಮಾಡಲು ಆ ರೀತಿ ಕಳ್ಳತನದಲ್ಲಿ ತೋಪಿಗೆ ಬಂದಿದ್ದಾರೆ. ಆದರೆ ಬ್ಯಾಡ್ ಲಕ್, ಅವರೇ ಭೀಕರ ರೀತಿಯಲ್ಲಿ ಕೊಲೆಯಾಗಿದ್ದಾರೆ. ನನ್ನ ಊಹೆ ಸರಿಯೆ?''

ಗುರು ತಲೆಯಾಡಿಸಿದನು.

ಎಸ್.ಐ. ಶ್ರೀಕಾಂತ್ ಪ್ರಾಣಭಯದಿಂದ ನಡುಗುತ್ತಿದ್ದ ರಂಗಯ್ಯನ ಕಡೆ ತಿರುಗಿ, ''ರಂಗಯ್ಯ...ನಾವು ಪ್ರಶ್ನೆಗಳಿಗೆ ನಿಜವಾದ ಉತ್ತರ ನೀಡಿದರೆ ಮಾತ್ರ ಕೊಲೆಗಾರನನ್ನು ಪತ್ತೆ ಮಾಡಿ ನಿಮ್ಮ ಪ್ರಾಣ ಕಾಪಾಡಬಹುದು.''

ಗುರು ಗಡುಸಾಗಿ, ''ಎಲ್ಲರನ್ನೂ ಸಾಯಿಸಿರುವ ಕೊಲೆಗಾರ ಖಂಡಿತಾ ನಿಮ್ಮನ್ನೂ ಬಿಡಲಾರ.''

ರಂಗಯ್ಯ ಭಯದಿಂದಲೇ ತಲೆಯಾಡಿಸಿದನು.

ಗುರು, ''ನೀವ್ಯಾಕೆ ತೋಪಿಗೆ ಬಂದ್ರಿ ರಂಗಯ್ಯ?''

''ನನಗೆ ಫೋನ್ ಬಂದಿತ್ತು.''

''ಯಾರಿಂದ?''

''ಕೊಲೆಗಾರನಿಂದಲೇ ಇರಬೇಕು.''

''ಧ್ವನಿಯ ಗುರುತು ಸಿಗಲಿಲ್ಲವೆ?''

''ಧ್ವನಿ ಬದಲಿಸಿ ಮಾತಾಡಿದ್ದನು.''

''ಅವನು ಏನಂತ ಹೇಳಿದ್ದ?''

ರಂಗಯ್ಯ ಗಂಟಲನ್ನು ಸರಿಪಡಿಸಿಕೊಂಡು, ''ನನ್ನ ಮಗ ಮೋಹನನನ್ನು ಕೊಂದಿರುವ ಕೊಲೆಗಾರ ತೋಪಿನಲ್ಲಿ ಇದ್ದಾನೆ. ಈಗಲೇ ಅಲ್ಲಿಗೆ ಹೋಗು ಅಂತ ಅಂದ.''

''ನೀವು ನಿಮ್ಮ ಮಗನನ್ನು ಕೊಂದಿರುವ ವ್ಯಕ್ತಿಯನ್ನು ಮುಗಿಸಬೇಕು ಅಂತ ತಾನೇ ಬಂದಿದ್ದು?''

ರಂಗಯ್ಯ ಭಯದಿಂದಲೇ ತಲೆಯಾಡಿಸಿದ.

''ನಿಮಗೆ ಕೊಲೆಗಾರ ಸೋಮಯ್ಯನೇ ಅಂತ ಸಂದೇಹ ಬಂದಿರಲಿಲ್ಲವೆ?''

''ಕೊನೆಯಲ್ಲಿ ಸಂದೇಹ ಬಂದಿತು.''

''ಸೋಮಯ್ಯನನ್ನು ನೀವೇ ಯಾಕೆ ಕೊಂದಿರಬಾರದು? ಯಾಕೆ ಅಂದರೆ ಅವಕಾಶ, ಕಾರಣ ಎರಡೂ ನಿಮಗೆ ಇತ್ತು.'' ಶ್ರೀಕಾಂತ್ ಹೇಳಿದನು.

ಗುರು, ''ಸಾಧ್ಯತೆಗಳು ತುಂಬಾ ಇವೆ. ಯಾಕೆ ಅಂದರೆ ನಾವು ಇಲ್ಲಿಗೆ ಬಂದಾಗ ರಂಗಯ್ಯ ತೋಪಿನಿಂದ ಓಡಿ ಬರುತ್ತಿದ್ದರು. ನೀವು ಕೊಲೆ ಮಾಡಿದ ನಂತರವೇ ಯಾಕ ಓಡಿ ಬಂದಿರಬಾರದು.''

ಶ್ರೀಕಾಂತ್, ''ನೂರಕ್ಕೆ ನೂರು ಭಾಗ ಸಾಧ್ಯತೆ ಇದೆ. ಯಾಕೆ ಅಂದರೆ ಮೊದಲಿನಿಂದಲೂ ನಿಮಗೆ ನಿಮ್ಮ ಸಹೋದರ ಸೋಮಯ್ಯನ ಮೇಲೆ ದ್ವೇಷ ಇತ್ತು.''

ರಂಗಯ್ಯ ಅತಿಯಾದ ಭಯ, ಗಾಬರಿ, ಆತುರದಿಂದ, ''ಇಲ್ಲ...ಇಲ್ಲ...ನಾನು ಕೊಲೆ ಮಾಡಿಲ್ಲ. ನಾನು ಇಲ್ಲಿಗೆ ಬರುವ ಹೊತ್ತಿಗೆ ಸೋಮಯ್ಯ ಕೊಲೆಯಾಗಿದ್ದ. ಅದನ್ನು ಕಂಡು ನಾನು ಭಯದಿಂದ ಓಡಿ ಬಂದೆ.''

''ಈ ಕತೆಯನ್ನು ನಂಬಬೇಕೆ?''

ರಂಗಯ್ಯ ಭಯದಿಂದಲೇ, ''ನಡೆದದ್ದನ್ನು ಹೇಳುತ್ತಿದ್ದೇನೆ. ನಂಬುವುದು, ಬಿಡುವುದು ನಿಮಗೇ ಸೇರಿದ್ದು. ದಯವಿಟ್ಟು ನನ್ನನ್ನು ಜೈಲಿಗೆ ಕರೆದುಕೊಂಡು ಹೋಗಿ.''

ಎಲ್ಲರೂ ವಿಚಿತ್ರವಾಗಿ ನೋಡಿದರು.

ರಂಗಯ್ಯ ಕಂಪಿಸುವ ಸ್ವರದಿಂದ, ''ನಾನು ಇಲ್ಲಿಯೇ ಇದ್ದರೆ ಕೊಲೆಗಾರ ನನ್ನನ್ನು ಕೊಂದುಬಿಡುತ್ತಾನೆ. ಜೈಲಿನಲ್ಲಿ ಇದ್ದರೆ ಕೊನೆಯ ಪಕ್ಷ ನನ್ನ ಪ್ರಾಣವಾದರೂ ಉಳಿದುಕೊಳ್ಳುತ್ತದೆ. ಪ್ಲೀಸ್...ನನ್ನನ್ನು ಜೈಲಿಗೆ ಹಾಕಿ.''

ಗುರು ಈಗ ರಂಗಯ್ಯನ ಕೈ ಅದುಮಿ, ''ಹೆದರಬೇಡಿ ರಂಗಯ್ಯ. ನಿಮ್ಮ ರಕ್ಷಣೆಯ ಜವಾಬ್ದಾರಿ ನಮಗೆ ಇರಲಿ. ನಿಮಗೆ ಪೋಲೀಸ್ ಪ್ರೊಟೆಕ್ಷನ್ ಕೊಡುತ್ತೇವೆ.''

ರಂಗಯ್ಯ ಭಯದಿಂದ ನಡುಗುತ್ತಲೇ ಇದ್ದನು.

ಆಗ ಶ್ರೀಕಾಂತ್, ''ರಂಗಯ್ಯ...ನೀವು ಇಲ್ಲಿಗೆ ಬಂದಿದ್ದಾಗ ಬೇರೆ ಯಾರಾದರೂ ಇದ್ದದ್ದನ್ನು ನೋಡಿದಿರಾ?''

''ಭಯ, ಗಾಬರಿಯಲ್ಲಿ ಗಮನಿಸಲಿಲ್ಲ.''

ಗುರು, ''ಶ್ರೀಕಾಂತ್...ರಂಗಯ್ಯನಿಗೆ ರಕ್ಷಣೆ ಕೊಡಿ. ಅವರ ಜೊತೆ ಸದಾ ಇಬ್ಬರು ಪಿ.ಸಿ.ಗಳು ಇರಲಿ.''

ಶ್ರೀಕಾಂತ್ ತಲೆಯಾಡಿಸಿದನು.

ಗುರು ಮಾವಿನ ತೋಪಿನ ಕಾವಲಿಗೆ ಇದ್ದ ಪಿ.ಸಿ.ಗಳನ್ನು ಕರೆದು, ''ಕಂಚಯ್ಯ...ಕಾವಲಿಗೆ ನೀವಿಬ್ಬರು ಇದ್ದರೂ ಸಹಾ ಕೊಲೆ ನಡೆದಿದೆ.''

ಪಿ.ಸಿ.ಗಳು ಭಯದಿಂದ ನಡುಗುತ್ತಿದ್ದಾರೆ.

''ಆಗ ನೀವಿಬ್ಬರೂ ತೋಪಿನಲ್ಲೇ ಇದ್ದಿರಿ ತಾನೆ?''

''ಇಲ್ಲಾ ಸಾರ್.'' ನಡುಗುತ್ತಾ ಹೇಳಿದ.

ಗುರು ಕೋಪದಿಂದ, ''ಎಲ್ಲಿಗೆ ಹೋಗಿದ್ದಿರಿ?''

''ಕಾಫಿ ಕುಡಿಯಲು ಹೋಗಿದ್ದೆವು.''

''ಇಬ್ಬರು ಹೆದರುತ್ತಲೇ ತಲೆಯಾಡಿಸಿದನು.''

''ಕಾಫಿ ಕುಡಿಯಲು ಎಲ್ಲಿಗೆ ಹೋಗಿದ್ದಿ?''

''ತೋಪಿನ ಮನೆಗೆ ಸಾರ್.''

ಗುರು ಈಗ ಕೆಕ್ಕರಿಸಿಕೊಂಡು ಅನಸೂಯಮ್ಮ ಮತ್ತು ವಾಸುವಿನ ಕಡೆ ನೋಡಿದನು.

ಅನಸೂಯಮ್ಮ ಹೆದರುತ್ತಲೇ, ''ಚಳಿಯಲ್ಲಿ ನಡುಗುತ್ತಾ ನಿಂತಿದ್ದರು. ಪಾಪ ಅಂತ ಅನ್ನಿಸಿ ನಾನೇ ಒಳಗೆ ಕರೆದು ತಿಂಡಿ, ಕಾಫಿ ಕೊಟ್ಟೆ ಸಾರ್. ಹೀಗಾಗುತ್ತೆ ಅಂತ ಗೊತ್ತಿರಲಿಲ್ಲ.''

ಗುರುವಿಗೆ ಕೋಪ ಬಂದರೂ ಸಹಿಸಿಕೊಂಡನು. ನಂತರ, ''ಕಂಚಯ್ಯ, ನಿಮಗೇನಾದರೂ ಶಬ್ದ ಕೇಳಿಸಿತೆ?''

''ವಿಕಾರವಾಗಿ ಕೂಗಿಕೊಂಡಿದ್ದು ಕೇಳಿಸಿತು.''

''ಆಗ ನೀವೇನು ಮಾಡಿದಿರಿ?''

''ಕೂಡಲೇ ಹೊರಗೆ ಬಂದೆವು.''

''ಅಲ್ಲಿ ಯಾರಾದರೂ ಇದ್ದರೆ?''

''ಇಲ್ಲ...ಯಾರೂ ಇರಲಿಲ್ಲ.''

ಗುರು ಅನಸೂಯಮ್ಮನ ಕಡೆ ತೀಕ್ಷ್ಣವಾಗಿ ನೋಡುತ್ತಾ, ''ಆಗ ನೀವು ಎಲ್ಲಿದ್ದಿರಿ ಅನಸೂಯಮ್ಮ?''

''ಅಡುಗೆ ಕೋಣೆಯಲ್ಲಿದ್ದೆ?''

''ಹೊರಗೆ ಬರಲಿಲ್ಲವೆ?''

''ಇವರೆಲ್ಲಾ ಹೊರಗೆ ಹೋದ ಮೇಲೆ ನಾನು...''

ಗುರು ಕೂಡಲೇ ತೋಟದ ಮನೆಯ ಕಡೆ ನಡೆಯುತ್ತಾ, ''ನಾನೊಂದು ಸಲ ಮನೆ ನೋಡಬೇಕು ಶ್ರೀಕಾಂತ್.''

ಶ್ರೀಕಾಂತ್ ತಾನೂ ಸಹಾ ಹಿಂಬಾಲಿಸಿದನು.

ಅನಸೂಯಮ್ಮ, ವಾಸು ಭಯಗೊಂಡರು. ಸಹನಾ ಮತ್ತು ರಂಗಯ್ಯನಿಗೆ ಆಶ್ಚರ್ಯ ಉಂಟಾಗುತ್ತಿದೆ.

ಈ ತೋಟದ ಮನೆಯಲ್ಲಿ ನೋಡಲು ಏನಿದೆ?

ಗುರು ಮನೆಯೊಳಗೆ ಮೊದಲು ಪ್ರವೇಶಿಸಿದನು. ಶ್ರೀಕಾಂತ್ ಅವನನ್ನು ಹಿಂಬಾಲಿಸಿಕೊಂಡು ಹೋದನು.

ಮುಂಭಾಗದ ಹಾಲ್‌ಗೆ ಹೊಂದಿಕೊಂಡಂತೆ ಎಡಭಾಗಕ್ಕೆ ಅಡುಗೆಯ ಕೋಣೆ ಇದೆ. ವಿಶಾಲವಾದ ಸ್ಲ್ಯಾಬ್ ಇದ್ದ ಕೋಣೆ. ಎಲ್ಲವೂ ಸುಸಜ್ಜಿತವಾಗಿತ್ತು.

ಅದರ ಬಲಭಾಗದಲ್ಲೇ ಬಾಗಿಲಿತ್ತು. ಅದರ ಮೂಲಕ ಹಿತ್ತಲಿಗೆ ಹೋಗಬಹುದಿತ್ತು.

ಗುರು ಹತ್ತಿರ ಬಂದ

ಆ ಬಾಗಿಲು ತೆರೆದಿತ್ತು!

ಗುರು ಹಿತ್ತಲಿನ ಬಾಗಿಲಿನ ಮೂಲಕ ಬಂದು ಸುತ್ತಲೂ ನೋಡಿದ. ಅಲ್ಲಿಂದ ಮಾವಿನ ತೋಟದ ಕಡೆ ಸುಲಭವಾಗಿ ಹೋಗಬಹುದಿತ್ತು. ಪುನಃ ಮುಂಭಾಗಕ್ಕೆ ಎಲ್ಲರೂ ಬಂದರು.

ಗುರು, ''ಅನಸೂಯಮ್ಮ...ಕತ್ತಲಾದ ಮೇಲೆ ಹಿತ್ತಲಿನ ಬಾಗಿಲನ್ನು ಹಾಕುವುದಿಲ್ಲವೇ?''

''ಹಾಕುತ್ತೇನೆ.''

''ಮತ್ತೂ ಬಾಗಿಲುಗಳು ತೆರೆದಿವೆಯಲ್ಲ?''

''ಎಲ್ಲೋ ಮರೆತಿರಬೇಕು.''

ಗುರು ತೀಕ್ಷ್ಣವಾಗಿ, ''ಮರೆತಿದ್ದೀರೋ ಅಥವಾ ಹಾಕಿದ್ದ ಬಾಗಿಲನ್ನು ಪುನಃ ತೆಗೆದಿದ್ದೀರೋ?''

ಅನಸೂಯಮ್ಮ ತಡಬಡಾಯಿಸಿಹೋದರು.

ಸಹನಾ ಬೆರಗಾಗಿ ನೋಡುತ್ತಿದ್ದಾಳೆ.

''ಇನ್‌ಸ್ಪೆಕ್ಟರ್ ...ನೀವು ಏನು ಹೇಳ್ತಾ ಇದ್ದೀರ?''

ಗುರು ಅಲ್ಲಿಂದ ಹೊರಡುತ್ತಾ, ''ನಾನು ಹೇಳಿದ್ದನ್ನು ನಿಧಾನವಾಗಿ ಆಲೋಚಿಸಿ ಆಗ ನಾನು ಏನು ಹೇಳಿದೆ ಅಂತ ಗೊತ್ತಾಗುತ್ತೆ.''

ಸಹನಾ ತಲೆ ಕರೆದುಕೊಂಡಳು. 'ಇದೇನಿದು? ಈ ಗುರು ಸಾತ್ವಿಕ ಗುಣದ ಅನಸೂಯಮ್ಮನನ್ನೇ ಅನುಮಾನಿಸುತ್ತಿದ್ದಾನಲ್ಲ!' ಎಂದುಕೊಂಡು ಬಂಗಲೆಗೆ ಬಂದಳು.

ಆ ರಾತ್ರಿ ಯಾರೂ ನಿದ್ರಿಸಲಿಲ್ಲ.

ಎಲ್ಲರನ್ನೂ ಭಯ, ಚಿಂತೆ ಕಾಡುತ್ತಿತ್ತು.

ಆದರೆ ಒಂದೇ ಒಂದು ರಾತ್ರಿ ವ್ಯಕ್ತಿ ಮಾತ್ರ ರಾತ್ರಿ ಹನ್ನೊಂದು ಗಂಟೆಯ ನಂತರ ಆ ಬಂಗಲೆಯಿಂದ ಹೊರ ಬಂದು, ಮಾವಿನ ತೋಟದ ಕಡೆ ನಡೆಯಲಾರಂಭಿಸಿತು.

ಆ ವ್ಯಕ್ತಿ ಪೋಲೀಸ್ ಇಲಾಖೆಯ ಗುರು!

## 10

ರಾತ್ರಿ ಹನ್ನೊಂದರ ಸಮಯ.

ಸುತ್ತಲೂ ಕತ್ತಲು ಆವರಿಕೊಂಡಿದೆ.

ಅಂದು ಅಮಾವಾಸ್ಯೆಯಾಗಿದ್ದರಿಂದ ಕತ್ತಲಿನ ತೀವ್ರತೆ ಹೆಚ್ಚಿದೆ. ಗಾಳಿ 'ಬರ್ರೋ' ಎಂದು ಬೀಸುತ್ತಿದೆ.

ಗುರು ನಡೆಯುತ್ತಿದ್ದಾನೆ.

'ಗವ್' ಎನ್ನುವ ಕತ್ತಲನ್ನು ಸೀಳಿಕೊಂಡು ಟಾರ್ಚಿನ ಬೆಳಕನ್ನು ಬೀರುತ್ತಾ ಮಾವಿನ ತೋಟಕ್ಕೆ ಬಂದ.

ಗೇಟನ್ನು ಹಾಕಲಾಗಿತ್ತು.

ಅವನು ಶಬ್ದ ಮಾಡದಂತೆ ಗೇಟನ್ನು ಹಾರಿ ತೋಟದೊಳಗೆ ನಡೆಯಲಾರಂಭಿಸಿದ. ಪಿ.ಸಿ.ಗಳು ಚಳಿಯಲ್ಲಿ ನಡುಗುತ್ತಾ, ಕಂಬಳಿ ಹೊದ್ದುಕೊಂಡು ಮನೆಯ ಜಗುಲಿಯ ಮೇಲೆ ಮಲಗಿಕೊಂಡಿದ್ದಾರೆ. ಪಾಪ...ಅವನಿಗೆ ಅವರ ಅವಸ್ಥೆಯನ್ನು ಕಂಡು ಕನಿಕರ ಬಂದಿತು.

ಮನೆಯ ಹಿಂಭಾಗಕ್ಕೆ ಬಂದ.

ರೂಮೊಂದರಲ್ಲಿ ದೀಪ ಉರಿಯುತ್ತಿತ್ತು.

ಗುರು ನೆಲದಲ್ಲಿ ಬಿದ್ದಿದ್ದ ದಪ್ಪನೆಯ ಕಲ್ಲುಗಳನ್ನು ಒಂದರ ಮೇಲೆ ಮತ್ತೊಂದನ್ನು ಜೋಡಿಸಿ, ಅದರ ಮೇಲೆ ಹತ್ತಿ ನಿಂತುಕೊಂಡ.

ರೂಮಿನ ಕಿಟಕಿ ತೆರೆದಿತ್ತು.

ದೀಪ ಉರಿಯುತ್ತಿತ್ತು.

ಕತ್ತನ್ನು ತುಸುವೇ ಹೊರಳಿಸಿ ನಿಡಿದ. ಅಲ್ಲಿ ಅನಸೂಯಮ್ಮ ಹಾಸಿಗೆಯ ಮೇಲೆ ಕುಳಿತುಕೊಂಡಿದ್ದರು.

ಗುರು ಭಯಾಶ್ಚರ್ಯದಿಂದ ತತ್ತರಿಸಿದನು.

ಅನಸೂಯಮ್ಮನನ್ನು ಮೊದಲನೆಯ ಸಲ ಸಹನಾ ತೋಪಿನ ಮನೆಯಲ್ಲಿ ತೋರಿಸಿದ್ದಾಗ ಮುತ್ತೈದೆಯಂತೆ ಕಂಗೊಳಿಸುತ್ತಿದ್ದರು. ತಲೆಯ ತುಂಬಾ ಹೂವು, ಕೈತುಂಬಾ ಬಳೆಗಳು, ಅಗಲವಾಗಿ ಇಟ್ಟುಕೊಂಡಿದ್ದ ಕುಂಕುಮ, ಕೆನ್ನೆಗಳಿಗೆ ಲೇಪಿಸಿದ್ದ ಅರಿಶಿನ, ಇತ್ಯಾದಿಗಳಿಂದ ಅವರ ಬಗ್ಗೆ ಗೌರವ ಬರುತ್ತಿತ್ತು.

ಅನಸೂಯಮ್ಮನ ಗಂಡನ ಬಗ್ಗೆ ಕೇಳಿದಾಗ ಸಹನಾ ಸರಿಯಾಗಿ ಉತ್ತರಿಸಿರಲಿಲ್ಲ. ಅವರ ಗಂಡ ಮೋಸಮಾಡಿ ಎಲ್ಲೋ ಹೋಗಿದ್ದರಂತೆ. ಅದಕ್ಕೆ ಅವರು ನಿತ್ಯ ಮುತ್ತೈದೆಯಂತೆ ಇರುತ್ತಿದ್ದರು, ನಿಜ.

ಆದರೆ ಈಗ ಗುರು ಕಾಣುತ್ತಿರುವುದೇನು?

ಬೋಳು ಹಣೆ, ಬೋಳು ಕೈಗಳು, ಬಿಳಿಯ ಸೀರೆ. ಅಂದರೆ ಮದುವೆಯ ವೇಷ. ರಾತ್ರಿಯ ಹೊತ್ತು ಮಾನಸಿಕ ತೃಪ್ತಿಗಾಗಿ ನಿಜ ವೇಷದಲ್ಲಿದ್ದಾರೆ.

'ನಾನು ಇಲ್ಲಿಗೆ ಬಂದು ಒಂದು ವಾರ ಆಯಿತು. ಇಲ್ಲಿಗೆ ಬಂದು ಮೊದಲ ಸಲ ನೋಡಿದಾಗ ಮುತ್ತೈದೆಯಂತೆ ಕಾಣುತ್ತಿದ್ದವರು ಅದೇಕೆ ಈ ಅವತಾರದಲ್ಲಿದ್ದಾರೆ! ಅಂದರೆ ಅವರ ಗಂಡ ಇತ್ತೀಚೆಗೆ ಸತ್ತಿದ್ದಾರೆ!'

'ಅನಸೂಯಮ್ಮನ ಗಂಡ ಯಾರು?'

ಅನಸೂಯಮ್ಮನ ತೊಡೆಗಳ ಮೇಲೆ ಫೋಟೋ ಇದೆ. ಅದನ್ನು ಕೈಯಿಂದ ಸವರುತ್ತಿದ್ದಾರೆ.

ಆ ಫೋಟೋ ಗುರುವಿಗೆ ಕಾಣುತ್ತಿಲ್ಲ.

ಅನಸೂಯಮ್ಮ ಅಳುತ್ತಿದ್ದಾರೆ.

ಒಳಗೆ ನುಗ್ಗಿ ಅವರ ಕೈಯಿಂದ ಫೋಟೋ ಕಿತ್ತುಕೊಂಡು ನೋಡಲೇ ಎಂದು ಅಂದುಕೊಂಡನು.

ಆದರೆ ಗುರು ದುಡುಕಲಿಲ್ಲ.

ದುಡುಕಿದರೆ ಹೊರಬರಬೇಕಾಗಿರುವ ಎಷ್ಟೋ ರಹಸ್ಯಗಳು ಅಡಗಿಹೋಗಿಬಿಡುತ್ತವೆ.

ಗುರು ಮತ್ತೊಂದು ಕೊಠಡಿಗೆ ಬಂದ.

ಗೊರಕೆಯ ಶಬ್ದ ಕೇಳಿಸುತ್ತಿದೆ.

ವಾಸು ನಿದ್ರಿಸುತ್ತಿದ್ದಾನೆ.

ಅಬ್ಬ...ಇವನು ನಿಜವಾಗಿಯೂ ಕುಂಭಕರ್ಣನ ಜಾತಿಯವನೇ ಇರಬೇಕು ಇವನೊಂದು ರೀತಿ ಎಮ್ಮೆ!

ಗುರು ಮಾವಿನ ತೋಟದಿಂದ ಹೊರಬಂದನು.

ಆಗ ರಾತ್ರಿ ಹನ್ನೆರಡು ಗಂಟೆ.

ಗುರು ಪುನಃ ಬಂಗಲೆಗೆ ಬಂದು, ತನ್ನ ಕೊಠಡಿಗೆ ಸೇರಿಕೊಂಡನು. ಆದರೆ ನಿದ್ದೆ ಬರಲಿಲ್ಲ.

ಎರಡು ಸಿಗರೇಟುಗಳನ್ನು ಸೇದಿದನು.

ಹೊಸ ಆಲೋಚನೆಯೊಂದು ಬಂದಿತು. ಒಂದು ಸಲ ಸಹನಾಳ ತಂದೆ ರಾಜಾರಾಯರ ಕೊಠಡಿಯನ್ನು ನೋಡಿದರೆ ಹೇಗೆ ಎಂದುಕೊಂಡನು. ಅದೇ ಸರಿ ಎನಿಸಿತು.

ಸಾಲು ಕೊಲೆಗಳಿಂದ ಬಂಗಲೆಯಲ್ಲಿ ಇದ್ದವರೆಲ್ಲಾ ವಿಪರೀತ ಭಯಗೊಂಡಿದ್ದರು. ಹಾಗಾಗಿ ಎಲ್ಲರೂ ರೂಮಿನ ಬಾಗಿಲನ್ನು ಹಾಕಿಕೊಂಡಿದ್ದರು.

ಗುರುವಿಗೆ ಇದು ಅನುಕೂಲವೇ ಆಯಿತು.

ತನ್ನ ಹತ್ತಿರ ಇದ್ದ ಡೂಪ್ಲಿಕೇಟ್ ಕೀ ಬಂಚ್‌ನಿಂದ ಸರಿಯಾದ ಕೀಲಿಕೈ ಉಪಯೋಗಿಸಿ ಬಾಗಿಲನ್ನು ತೆರೆದನು.

ಸಣ್ಣಗೆ 'ಕಿರ್' ಎಂಬ ಶಬ್ದವಾಯಿತು.

ರೂಮಿನ ತುಂಬಾ ಕತ್ತಲು ತುಂಬಿದೆ.

ಗುರು ದೀಪ ಹಾಕಲಿಲ್ಲ. ಜೇಬಿನಿಂದ ಪೆನ್ ಟಾರ್ಚ್ ತೆಗೆದು ಬೆಳಕನ್ನು ಬೀರುತ್ತಾ ಮಂಚದ ಹತ್ತಿರ ಬಂದನು.

ರಾಯರು ಸತ್ತಾಗಿನಿಂದ ಕಸ ಗುಡಿಸಿರಲಿಲ್ಲವಾದ್ದರಿಂದ ಕಾಲಿಗೆ ಧೂಳು ಮೆತ್ತಿಕೊಳ್ಳುತ್ತಿತ್ತು.

ಜೇಡ ಸಣ್ಣ ಬಲೆಗಳನ್ನು ಹೆಣೆದಿತ್ತು.

ಗುರು ಹಾಸಿಗೆಯನ್ನು, ದಿಂಬನ್ನು ಸರಿಸಿ ನೋಡಿದ. ಅಲ್ಲಿ ಅವನಿಗೆ ಏನೂ ಸಿಗಲಿಲ್ಲ.

ಅದು ಸುಸಜ್ಜಿತ ಕೊಠಡಿ. ಕಲರ್ ಟಿ.ವಿ., ಫ್ರಿಡ್ಜ್, ಬೀರುಗಳು, ಡ್ರೆಸ್ಸಿಂಗ್ ಮಿರರ್, ಫೋನ್, ಫ್ಯಾನ್ ಎಲ್ಲವೂ ಇತ್ತು. ನೆಲಕ್ಕೆ ರತ್ನಕಂಬಳಿ ಹಾಸಲಾಗಿತ್ತು.

ಗುರು ಬೀರುವಿನ ಹತ್ತಿರ ಬಂದನು.

ಪುನಃ ತನ್ನ ಜೇಬಿನಿಂದ ಕೀ ಬಂಚ್ ತೆಗೆದು ಎರಡೂ ಬೀರುಗಳ ಬಾಗಿಲುಗಳನ್ನು ತೆರೆದನು.

ಸೀಕ್ರೇಟ್ ಲಾಕರ್ ಸಹಾ ಓಪನ್ ಆಯಿತು.

ಅದರೊಳಗೆ ಕೈಯಾಡಿಸಿದನು.

ಎರಡನೆಯ ಬೀರುವಿನ ಸೀಕ್ರೇಟ್ ಕಾಲರ್‌ನೊಳಗೆ ಕೈಯಾಡಿಸುತ್ತಿದ್ದಾಗ ಪುಸ್ತಕವೊಂದು ದೊರೆಯಿತು.

ನೀಲಿ ಬಣ್ಣದ ಕವರ್ ಇದ್ದ ಡೈರಿ!

ಅದನ್ನು ತೆರೆದು ನೋಡಿದನು. ಅದರಲ್ಲಿ ಕೇಸರಿ ಬಣ್ಣದ ಕವರ್ ಇತ್ತು. ಅದನ್ನು ತೆಗೆದು ನೋಡಿದನು.

ಅದರಲ್ಲಿ ಕಲರ್ ಫೋಟೋಗಳಿದ್ದವು!

ಆಶ್ಚರ್ಯ...ನಂಬಿಕೆಯೇ ಬರುತ್ತಿಲ್ಲ! ಮೊದಲನೆಯದರಲ್ಲಿ ರಾಜಾರಾಯರು ಮತ್ತು ಅನಸೂಯಮ್ಮ ಜೋಡಿಯಾಗಿರುವ ದೃಶ್ಯ!

ಎರಡನೆಯದರಲ್ಲಿ ರಾಜಾರಾಯರು ಮತ್ತು ಅನಸೂಯಮ್ಮನ ಜೊತೆ ಸಣ್ಣ ಮಗು ಸಹಾ ಇದೆ.

ಮೂರನೆಯದರಲ್ಲಿ ರಾಜಾರಾಯರು, ಅನಸೂಯಮ್ಮನಿಗೆ ಮಾಂಗಲ್ಯ ಕಟ್ಟುತ್ತಿರುವಾಗ ತೆಗೆದಿರುವ ದೃಶ್ಯ.

ಗುರು ಈಗ ಡೈರಿಯನ್ನು ಸರಸರನೆ ಓದಲು ಪ್ರಾರಂಭಿಸಿದನು. ಈ ದೃಶ್ಯಗಳ ಹಿನ್ನೆಲೆಯನ್ನು ಬರೆಯಲಾಗಿತ್ತು.

ಅದು ಇಪ್ಪತ್ತು ವರ್ಷಗಳ ಹಿಂದಿನ ಡೈರಿ!

ಡೈರಿಯ ಮೊದಲನೇ ಪುಟದಲ್ಲಿ, ಅನಸೂಯಳ ತವರಿನವರು ಈ ದಿನ ಐದು ಲಕ್ಷ ರೂಪಾಯಿ ನೀಡಿದರು. ಆದರೆ ಅದನ್ನು ನಮ್ಮಿಬ್ಬರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಫಿಕ್ಸ್ಡ್ ಮಾಡಿದ್ದಾರೆ.

ಎರಡನೆಯ ಪುಟದಲ್ಲಿ, ಅನಸೂಯಳ ತವರಿನವರು ನನಗೆ ತುಂಬಾ ಸಹಾಯ ಮಾಡುತ್ತಿದ್ದಾರೆ. ಅವಳಿಂದಲೇ ನಾನು ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಯಿತು.

ಮೂರನೆಯ ಪುಟದಲ್ಲಿ, ಅನಸೂಯಳನ್ನು ನಾನು ತುಂಬಾ ಪ್ರೀತಿಸುತ್ತೇನೆ. ಅವಳು ನನ್ನ ಭಾಗ್ಯ ದೇವತೆ. ನಮ್ಮಿಬ್ಬರನ್ನು ಆದರ್ಶ ದಾಂಪತ್ಯ.

ನಾಲ್ಕನೆಯ ಪುಟದಲ್ಲಿ, ಸಾವು ಅನಿರೀಕ್ಷಿತ. ಈ ದಿನ ಅನಸೂಯಳ ತಂದೆ-ತಾಯಿ ಕಾರಿನ ಅಪಘಾತದಲ್ಲಿ ಸತ್ತು ಹೋದರು. ನನ್ನ ವ್ಯಾಪಾರ ಅಭಿವೃದ್ಧಿಯಾಗಿತ್ತು. ಆದರೆ ಶ್ರೀಮಂತಿಕೆ ಇರಲಿಲ್ಲ.

ಐದನೆಯ ಪುಟದಲ್ಲಿ, ಅದೃಷ್ಟ ಕೈಎ ಕೊಡುತ್ತಿದೆ. ನನಗೆ ವ್ಯಾಪಾರದಲ್ಲಿ ಲಾಭ ಬರುತ್ತಿಲ್ಲ. ಅನಸೂಯಳ ತಂದೆ ನಮ್ಮಿಬ್ಬರ ಹೆಸರಿನಲ್ಲಿ ಹಾಕಿರುವ ಹಣದ ಪಿನಃ ಬೇರೆ ದುಡ್ಡಿಲ್ಲ. ಐದು ಲಕ್ಷ ಸಾಕು. ಆದರೆ ಅದನ್ನು ತೆಗೆಯುವ ಹಾಗಿಲ್ಲ. ಅದಕ್ಕೆ ಏನೋ ನಿಬಂಧನೆ ಬೇರೆ ಇದೆ.

ನನ್ನಿಂದ ಅನಸೂಯಳಿಗೆ ಹುಟ್ಟುವ ಮಗನಿಗೆ ಇಪ್ಪತ್ತೆರಡು ವರ್ಷಗಳು ಆದ ನಂತರ ಆ ಹಣವನ್ನು ಉಪಯೋಗಿಸಬೇಕಂತೆ. ಹಣ ಇದ್ದರೂ ಈಗದು ನನ್ನ ಕಷ್ಟ ಕಾಲಕ್ಕೆ ಆಗುತ್ತಿಲ್ಲ.

ಆರನೆಯ ಪುಟದಲ್ಲಿ, ನಾನು ಅನಸೂಯಳನ್ನು ಕರೆದುಕೊಂಡು ಬೇರೆ ಊರಿಗೆ ಬಂದೆ. ನನ್ನ ಜೊತೆ ನಮ್ಮ ಮಗು ಸಹಾ ಇತ್ತು. ಹೊಸ ಊರಿನಲ್ಲಿ ಜೀವನಕ್ಕಾಗಿ ಪರದಾಡುತ್ತಿದ್ದೆ. ನನಗೆ ಹೊಸ ಶ್ರೀಮಂತ ಯುವತಿಯ ಪರಿಚಯ ಆಯಿತು. ಅವಳ ಹೆಸರು ಸುನಂದ.

ಏಳನೆಯ ಪುಟದಲ್ಲಿ, ಸುನಂದಳಿಗೆ ಇಬ್ಬರು ಅಣ್ಣಂದಿರು ಇದ್ದರು. ಸೋಮಯ್ಯ

ಮತ್ತು ರಂಗಯ್ಯ. ಅವರು ನನ್ನ ಜೊತೆ ಸದಾ ಬೆರೆಯುತ್ತಿದ್ದರು. ನನ್ನ ವ್ಯಾಪಾರಕ್ಕೆ ಸಹಾಯ ಮಾಡುವ ಭರವಸೆ ನೀಡಿದರು.

ಎಂಟನೆಯ ಪುಟದಲ್ಲಿ, ಸುನಂದ ನನ್ನನ್ನು ತುಂಬಾ ಇಷ್ಟಪಟ್ಟಿದ್ದಾಳಂತೆ. ಇದು ಹೇಗೆ ಸಾಧ್ಯ? ನಾನು ಗೃಹಸ್ಥ. ಅನಸೂಯಳಂತಹ ಚೆಲುವಾದ ಹೆಣ್ಣಿನ ಗಂಡ. ಮಗು ಬೇರೆ ಇದೆ. ಅವಳೇಕೆ ನನ್ನನ್ನು ಬಯಸುತ್ತಿದ್ದಾಳೆ?

ಒಂಭತ್ತನೆಯ ಪುಟದಲ್ಲಿ, ಸುನಂದ ತುಂಬಾ ಕಪ್ಪು. ಬೊಜ್ಜುಮೈ, ಉಬ್ಬು ಹಲ್ಲು ಬೇರೆ ಇದೆ. ನಾನು ನೋಡಲು ಚೆನ್ನಾಗಿರುವುದರಿಂದ ನಾನು ವಿವಾಹಿತ ಎಂದು ತಿಳಿದಿದ್ದರೂ ಸಹಾ ಬಯಸಿದ್ದಾಳೆ. ಸೋಮಯ್ಯ, ರಂಗಯ್ಯ ಪ್ರತಿದಿನಾ ನಾನಿರುವ ಮನೆಗೆ ಬರುತ್ತಾರೆ.

ಹತ್ತನೆಯ ಪುಟದಲ್ಲಿ, ನನಗೆ ನಂಬಿಕೆಯೇ ಬರುತ್ತಿಲ್ಲ. ಹಲವಾರು ರೀತಿಯಲ್ಲಿ ಪರೀಕ್ಷಿಸಿದೆ. ಅನಸೂಯ... ನನ್ನ ಪ್ರೀತಿಯ ಹೆಂಡತಿ ನಡತೆಗೆಟ್ಟವಳೆ?

ನಾನು ನಂಬಲಿಲ್ಲ. ಆದರೆ ಅತಿಕಾಮಿ. ನಾನಿಲ್ಲದ ವೇಳೆಯಲ್ಲಿ ತನ್ನ ಕಾಮದಾಹ ತೀರಿಸಿಕೊಳ್ಳಲು ಬೇರೆಯವರ ಜೊತೆ ಮಲಗುತ್ತಿದ್ದಳಂತೆ. ಅಯ್ಯೋ...ನನ್ನ ಅನಸೂಯ ಇಂತಹ ಹೆಣ್ಣೆ? ಸೋಮಯ್ಯ, ರಂಗಯ್ಯ ಬಲವಾದ ಸಾಕ್ಷಿ, ಆಧಾರಗಳ ಸಮೇತ ನನ್ನ ಹೆಂಡತಿ ಶೀಲಗೆಟ್ಟ ಹೆಣ್ಣು ಎಂಬುದನ್ನು ನಿರೂಪಿಸಿದರು.

ಅಂದಿನಿಂದ ನಾನು ಅನಸೂಯಳನ್ನು ಸೇರುತ್ತಿರಲಿಲ್ಲ. ಒಂದೇ ಮನೆಯಲ್ಲೇ ಇದ್ದರೂ ಸಹಾ ಅವಳಿಂದ ದೂರ ಇರುತ್ತಿದ್ದೆ.

ಹನ್ನೊಂದನೆಯ ಪುಟದಲ್ಲಿ, ಅನಸೂಯಳ ಅನೈತಿಕ ಸಂಬಂಧದ ಬಗ್ಗೆ ತಿಳಿದ ಕೂಡಲೇ ಅವಳನ್ನು ನನ್ನ ಜೀವನದಿಂದಲೇ ದೂರ ಮಾಡಿಕೊಳ್ಳಬೇಕು ಎಂದುಕೊಂಡಿದ್ದೆ. ಹಾಗೆ ಮಾಡಿದರೆ ಬ್ಯಾಂಕಿನಲ್ಲಿರುವ ಹಣ ನನಗೆ ಸಿಗುತ್ತಿರಲಿಲ್ಲ. ಮುಂದೆ ಅದು ಇಪ್ಪತ್ತೈದು ಲಕ್ಷ ಆಗುತ್ತದೆ. ಅದನ್ನು ಪಡೆಯಬೇಕಾದರೆ ಅನಸೂಯ ನನ್ನ ಜೊತೆ ಇರಬೇಕು. ಅದಕ್ಕೋಸ್ಕರ ಅವಳನ್ನು ಸಹಿಸಿಕೊಂಡೆ.

ಹನ್ನೆರಡನೆಯ ಪುಟದಲ್ಲಿ, ರಂಗಯ್ಯ, ಸೋಮಯ್ಯನ ಸಲಹೆ ಮತ್ತು ಒತ್ತಾಯದಂತೆ ಸುನಂದಳನ್ನು ಮದುವೆ ಮಾಡಿಕೊಂಡೆ. ಹೊಸ ದಾಂಪತ್ಯ ಪ್ರಾರಂಭವಾಯಿತು.

ಹದಿಮೂರನೆಯ ಪುಟದಲ್ಲಿ, ಅನಸೂಯಳಂತಹ ಚೆಲುವೆಯ ಜೊತೆ ಸುಖ

ಕಂಡಿದ್ದ ನನಗೆ ದಡೂತಿ ದೇಹದ ಕಪ್ಪು ಮೈ ಹೆಂಗಸು ಸುನಂದ ತೃಪ್ತಿ ನೀಡಲಿಲ್ಲ. ಹಾಗಂತ ಬೇರೆ ಗಂಡಸರೊಡನೆ ಮಲಗಿದ್ದ ಅನಸೂಯಳ ಜೊತೆ ಪುನಃ ಸೇರಿ ಸುಖಿಸಲಾರೆ. ಅದಕ್ಕಿಂತ ಕತ್ತಲಲ್ಲಿ ಈ ದಡೂತಿ ಸುನಂದಳ ಜೊತೆ ಬೆವರು ಸುರಿಸುವುದರಲ್ಲೇ ಸುಖ ಕಾಣಲು ಪ್ರಯತ್ನಿಸುತ್ತಿದ್ದೇನೆ.

ಹದಿನಾಲ್ಕನೆಯ ಪುಟದಲ್ಲಿ, ಸುನಂದಳಿಗೆ ನನ್ನಿಂದ ಹೆಣ್ಣು ಮಗು ಆಯಿತು. ಅವಳ ತರಹ ಇರದೆ ಮಗು ರೂಪದಲ್ಲಿ ನನ್ನಂತೆಯೇ ಬಿಡಬಾರದೆಂದು ಎಚ್ಚರಿಸಿದ್ದ.

ಹದಿನಾರನೇ ಪುಟದಲ್ಲಿ, ಮಾವಿನ ತೋಪಿನಲ್ಲಿ ಕಾವಲು ಕಾಯಲು, ಉಸ್ತುವಾರಿ ನೋಡಿಕೊಳ್ಳಲು ಯಾರಾದರೂ ಬೇಕಲ್ಲ! ಅದಕ್ಕೆ ನನ್ನ ಮೊದಲ ಹೆಂಡತಿ ಮತ್ತು ಮಗನನ್ನು ನೇಮಿಸಲು ನನ್ನ ಹೆಂಡತಿ ಸಲಹೆ ನೀಡಿದಳು. ನಾನು ಅದೇ ರೀತಿ ಮಾಡಿದೆ. ಅವರಿಬ್ಬರೂ ಮಾವಿನ ತೋಪಿನ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ನನ್ನ ಮೊದಲ ಹೆಂಡತಿಯಿಂದ ಮುಂದೆ ತುಂಬಾ ಹಣ ಬರುತ್ತದೆ ಎಂದು ತಿಳಿದು ಸುನಂದ ಅವಳಿಗೆ ನಮ್ಮ ತೋಪಿನ ಮನೆಯಲ್ಲೇ ಇರಲು ಅವಕಾಶ ನೀಡಿದ್ದಾಳೆ. ಇಲ್ಲದಿದ್ದರೆ ಎಂದೋ ಗೇಟ್ ಪಾಸ್ ಕೊಟ್ಟಿರುತ್ತಿದ್ದಳು.

ಹದಿನೇಳನೆಯ ಪುಟದಲ್ಲಿ, ಸನಸೂಯಳ ನಡೆ, ನುಡಿ ಗಮನಿಸುತ್ತಿದ್ದರೆ ನನಗೆ, ನಾನು ತಪ್ಪು ತಿಳಿದುಕೊಂಡಿರುವೆನೇನೋ ಅಂತ ಅನಿಸುತ್ತೆ. ಇದನ್ನು ರಂಗಯ್ಯ ಮತ್ತು ಸೋಮಯ್ಯನ ಹತ್ತಿರ ಹೇಳಿದೆ. ಅವರೇ ತಾನೇ ನನ್ನ ಮನಸ್ಸಿನಲ್ಲಿ ನನ್ನ ಮೊದಲ ಹೆಂಡತಿಯ ಬಗ್ಗೆ ಸಂದೇಹದ ಬೀಜ ಬಿತ್ತಿದ್ದು. ಅದಕ್ಕೆ ರಂಗಯ್ಯ, ಸೋಮಯ್ಯ ಏನೇನೋ ಘಟನೆಗಳನ್ನು ಕೆಲವು ಸಾಕ್ಷಿ, ಆಧಾರಗಳ ಸಮೇತ ಹೇಳಿದರು. ಆದ್ದರಿಂದ ನನ್ನ ಮನಸ್ಸಿನಲ್ಲಿ ಅನಸೂಯಳ ಶೀಲದ ಬಗ್ಗೆ ಸಂದೇಹ ಇದ್ದೇ ಇದೆ.

ರಂಗಯ್ಯ, ಸೋಮಯ್ಯ ಜೂಜಿನಲ್ಲಿ ತಮ್ಮ ಪಾಲಿಗೆ ಬಂದಿದ್ದ ಆಸ್ತಿಯನ್ನೆಲ್ಲಾ ಕಳೆದುಕೊಂಡರು. ಜೀವನಕ್ಕೆ ಬೇರೆ ಗತಿಯಿಲ್ಲದೆ ನನ್ನ ಜೊತೆಯೇ ಇದ್ದಾರೆ ನನ್ನ ಹೆಂಡತಿ ಸುನಂದ ಹೇಳಿದ ಮೇಲೆ ಆಗೊಲ್ಲ ಅನ್ನಲು ಸಾಧ್ಯವೆ?

ಹದಿನೆಂಟನೆಯ ಪುಟದಲ್ಲಿ, ನನ್ನ ಎರಡನೆಯ ಹೆಂಡತಿ ಸುನಂದ ಹೃದಯಾಘಾತದಿಂದ ತೀರಿಕೊಂಡಳು. ಹತ್ತುವರ್ಷದ ಸಹನಾಳನ್ನು ಮೈಸೂರಿನ ಹಾಸ್ಟೆಲ್‌ನಲ್ಲಿ ಬಿಟ್ಟು ಓದಿಸುತ್ತಿದ್ದೇನೆ. ಸಹನಾ ಪ್ರತಿ ತಿಂಗಳೂ ಬರುತ್ತಾಳೆ. ಅವಳಿಗೆ ಅನಸೂಯಳನ್ನು ಕಂಡರೆ ತುಂಬಾ ಪ್ರೀತಿ.

ಡೈರಿಯಲ್ಲಿ ಮುಂದೆ ಏನು ಬರೆದಿರಲಿಲ್ಲ!

ಅದನ್ನು ಓದಿದ ಪೋಲೀಸ್ ಇಲಾಖೆಯ ಗುರು ಜೋರಾಗಿ ನಿಟ್ಟುಸಿರು ಬಿಟ್ಟನು. ಡೆದಿರುವ ಕೊಲೆಗಳಿಗೆ ಕಾರಣ ಮತ್ತು ಕೊಲೆಗಾರ್ತಿ ಯಾರೆಂದು ಗೊತ್ತಾಗಿತ್ತು. ಕೊಲೆಗಾರ್ತಿ ಅನಸೂಯಮ್ಮ!

ಗುರು ಕೂಡಲೇ ಯಾವುದೋ ನಂಬರ್‌ಗೆ ಡಯಲ್ ಮಾಡುತ್ತಾ, ''ಹಲೋ...ಎಸ್.ಐ. ಶ್ರೀಕಾಂತ್ ಇದ್ದಾರ?''

''ಸಾರ್...ಇದೇನು ಈ ರಾತ್ರಿಯ ಹೊತ್ತಿನಲ್ಲಿ?''

''ನೀವು ಈಗಲೇ ತೋಪಿಗೂ ಬರ್ತೀರ?''

ಶ್ರೀಕಾಂತ್ ಗಾಬರಿಯಿಂದ, ''ಪುನಃ ಕೊಲೆಯಾಗಿದೆಯೇ?''

ಗುರು ನಗುತ್ತಾ ''ಗಾಬರಿಯಾಗಬೇಡಿ. ಹಾಗೇನೂ ಆಗಿಲ್ಲ.''

''ಹಾಗಾದರೆ ಈಗ್ಯಾಕೆ ಬರಬೇಕು?''

''ಹೇಳುತ್ತೇನೆ. ಸಣ್ಣದೊಂದು ಕ್ಲಾರಿಫಿಕೇಷನ್.''

''ಅದೇನು ಅಂತ ಕೇಳಿ ಸಾರ್.''

''ರಾಜಾರಾಯರಿಗೆ ಹೊಸದಾಗಿ ಇಪ್ಪತ್ತೈದು ಲಕ್ಷ ಬಂತು ಅಲ್ಲವೆ ಶ್ರೀಕಾಂತ್?''

''ಹಾಂ...ಬಂದಿದೆ ಸಾರ್.''

''ಅದು ಜಾಯಿಂಟ್ ಹೆಸರಿನಲ್ಲಿ ಇತ್ತು, ಅಲ್ಲವೆ?''

''ರಾಜಾರಾಮ್ ಮತ್ತು ಅನಸೂಯ ಅಂತ.''

''ಆ ಅನಸೂಯ ಯಾರು ಅಂತ ಗೊತ್ತಾಯಿತೆ?''

''ಗೊತ್ತಿಲ್ಲ ಸಾರ್. ರಾಜಾರಾಯರ ಅವರ ಮೊದಲ ಹೆಂಡತಿ ಅಂತೆ. ಎಫ್.ಡಿ. ಮೆಚ್ಯೂರ್ ಆದ ದಿನ ಅವರನ್ನು ಬ್ಯಾಂಕಿಗೆ ಕರೆದುಕಲೊಂಡು ಬಂದು ಹಣ ಡ್ರಾ ಮಾಡಿದರಂತೆ. ಆಮೇಲೆ ಅವರು ಎಲ್ಲಿ ಅಂತ ಗೊತ್ತಿಲ್ಲ.''

ಗುರು ನಗುತ್ತಾ ''ಅವರು ಎಲ್ಲೂ ಹೋಗಿಲ್ಲ. ತೋಪಿನಲ್ಲೇ ಕೆಲಸದ ಆಳಿನಂತೆ ಇದ್ದಾರೆ.''

ಶ್ರೀಕಾಂತ ಆಶ್ಚರ್ಯದಿಂದ, ''ನೀವು ಏನ್ ಸಾರ್ ಹೇಳ್ತಾ ಇರೋದು. ರಾಯರ ಹೆಂಡತಿ ಕೆಲಸದ ಹೆಂಗಸಿನಂತೆ. ಮೈ ಗಾಡ್...! ತೋಪಿನ ಮನೆಯಲ್ಲಿರುವ

ಅನಸೂಯಮ್ಮ ರಾಯರ ಮೊದಲ ಹೆಂಡತಿಯೇ?''

''ಅದರಲ್ಲಿ ಸಂದೇಹವೇ ಇಲ್ಲ.?''

''ಇದು...ಇದು...ಹೇಗೆ ಸಾಧ್ಯ?''

ಗುರು ಗಂಭೀರವಾಗಿ, ''ಇದರ ಹಿಂದೆ ದೊಡ್ಡ ಕತೆಯೇ ಅಡಗಿದೆ. ನೀವು ಈಗಲೇ ಮಾವಿನ ತೋಪಿಗೆ ಹೋಗಿ, ಅನಸೂಯಮ್ಮನನ್ನು ಅರೆಸ್ಟ್ ಮಾಡಿ ಕರೆತನ್ನಿ.''

ಶ್ರೀಕಾಂತ್ ಬೆಚ್ಚಿಬೀಳುತ್ತಾ, ''ಯಾಕೆ...?''

ಗುರು ಈಗ ಬೇರೆ ದಾರಿಯಿಲ್ಲದೆ ಫೋನಿನಲ್ಲೇ ರಾಯರ ಡೈರಿಯ ಕತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದನು.

''ಮೈ ಗಾಡ್...! ಕೊಲೆಗಾರ್ತಿ ಅನಸೂಯಮ್ಮ.''

''ಹೌದು. ನನ್ನ ಊಹೆಯ ಪ್ರಕಾರ ಈಗ ಬದುಕಿರುವ ರಂಗಯ್ಯ ಸಹಾ ಕೊಲೆಯಾಗಬಹುದು. ಅದಕ್ಕೆ ಅವಕಾಶ ಕೊಡದೆ ಈಗಲೇ ತೋಪಿಗೆ ಹೋಗಿ ಅನಸೂಯಮ್ಮನನ್ನು ಅರೆಸ್ಟ್ ಮಾಡಿ ಕರೆತನ್ನಿ.''

''ನೀವೆಲ್ಲಿಗೆ ಬರುತ್ತೀರ ತಾನೆ?''

''ಇಲ್ಲ. ನಾನು ಈಗಲೇ ಮೈಸೂರಿಗೆ ಹೋಗುತ್ತಿದ್ದೇನೆ.''

''ಈಗ ಅವರನ್ನು ನೋಡುವ ಅಗತ್ಯವಿದೆಯೆ?''

ಗುರು ನಗುತ್ತಾ, ''ನಿಮಗೆ ಮರೆವು ಜಾಸ್ತಿ ಅಂತ ಕಾಣುತ್ತೆ. ರಾಯರ ಹೊಸ ವಿಲ್ ಬಗ್ಗೆ ತಿಳಿಯಲು.''

''ಐ ಯಾಮ್ ಸೋ ಸಾರಿ ಸಾರ್.''

''ಇಟ್ಸ್ ಆಲ್ ರೈಟ್. ಬೇಗ ಹೊರಡಿ.''

''ಓ.ಕೆ. ಸಾರ್.''

ಫೋನ್ ಡಿಸ್‌ಕನೆಕ್ಟ್ ಆಯಿತು.

ಗುರು ಸಹನಾಳ ಕಾರನ್ನು ತೆಗೆದುಕೊಂಡು ಮೈಸೂರಿನ ಕಡೆ ಪ್ರಯಾಣ ಮಾಡಿದನು.

ಇವನು ಅನದುಕೊಂಡಂತೆ ಎಲ್ಲವೂ ಆಗಲು ಸಾಧ್ಯವೆ? ಕತೆ, ವಿಚಿತ್ರ ಪಡೆಯುವುದರಲ್ಲಿತ್ತು!

* * *

ಬೆಳಗಿನ ಜಾವ ಆರು ಗಂಟೆ!

ಅದು ಲಾಯರ್ ಸೀತಾರಾಮಯ್ಯನವರ ಮನೆ.

ಇಬ್ಬರೂ ಕಾಫಿ ಕುಡಿಯುತ್ತಿದ್ದಾರೆ.

ಗುರು ಸಂಕೋಚದಿಂದಲೇ, ''ಸುಖ ನಿದ್ದೆಗೆ ತೊಂದರೆ ಕೊಡುತ್ತಿದ್ದೇನೆ. ಕ್ಷಮಿಸಿ, ರಾಯರು ವಿಲ್ ಮಾಡಿದ ಒಂದು ತಿಂಗಳಿನ ನಂತರ ಅದನ್ನು ಒಡೆದು ಓದಬಹುದು ಅಂತ ನೀವು ಹೇಳಿದ್ದಿರಿ. ಇದು ಕೊಲೆ ಕೇಸ್ ಆಗಿದ್ದರಿಂದ ನಿಮಗೆ ಬೆಳಗ್ಗೆಯೇ ಬಂದು ತೊಂದರೆ ಕೊಡುತ್ತಿದ್ದೇನೆ.''

ಲಾಯರ್ ಸೀತಾರಾಮಯ್ಯ ಫೈಲನ್ನು ತೆಗೆಯುತ್ತಾ, ''ಅದರ ಅವಧಿ ನೆನ್ನೆಗೇ ಮುಗಿಯಿತು. ಜಡ್ಜ್ ಎದುರಿಗೇ ಆ ವಿಲ್ ಅನ್ನು ಓಪನ್ ಮಾಡಿ ಓದಿದೆವು. ಒಂದೇ ಒಂದು ಅಂಶ ಮಾತ್ರ ತುಂಬಾ ವಿಚಿತ್ರವಾಗಿದೆ.

''ಅದೇನಂ ಅಂತ ವಿವರಿಸಿ ಸಾರ್.''

''ರಾಜಾರಾಯರು ತಮ್ಮೆಲ್ಲಾ ಆಸ್ತಿಯನ್ನು ಮಗಳು ಸಹನಾಳ ಹೆಸರಿಗೆ ಬರೆದಿದ್ದಾರೆ. ಅವರ ಜೊತೆಗೆ ಅವಳ ಹೆಸರಿಗೆ ಹೊಸದಾಗಿ ಇಪ್ಪತ್ತೆರಡು ಲಕ್ಷ ರೂಪಾಯಿಗಳನ್ನು ಸಹಾ ಬರೆದಿದ್ದಾರೆ.''

''ಈ ಇಪ್ಪತ್ತೆರಡು ಲಕ್ಷ ಹ್ಯಾಗೆ ಬಂತು?''

''ಅವರ ಮೊದಲ ಹೆಂಡತಿಯ ತವರಿನವರಿಂದ. ಅದು ಅವರಿಬ್ಬರ ಜಾಯಿಂಟ್ ಹೆಸರಿನಲ್ಲಿ ಇತ್ತಂತೆ.''

'4ಉಳಿದ ಮೂರು ಲಕ್ಷ ಏನು ಮಾಡಿದರು?''

''ವಾಸು ಅನ್ನೋ ಕೆಲಸದಾಳಿನ ಹೆಸರಿಗೆ ಬರೆದಿದ್ದಾರೆ. ಅದು ಅವನಿಗೆ ಸಂದಾಯವಾಗುತ್ತೆ.''

'4ವಾಸು ಬಗ್ಗೆ ಬೇರೆ ಏನೂ ಬರೆದಿಲ್ಲವೆ?''

'4ಇಲ್ಲ. ಇನ್ನೇನು ಬರೆಯಬೇಕಿತ್ತು?''

ಲಾಯರ್ ಜೊತೆ ರಹಸ್ಯ ಮುಚ್ಚಿಡುವ ಅಗತ್ಯ ಇಲ್ಲವೆಂದು ಎಲ್ಲವನ್ನೂ ವಿವರಿಸಿದನು.

ಲಾಯರ್ ಬೆರಗಾಗಿ ಕೇಳುತ್ತಿದ್ದಾರೆ.

ಫೋನಿನ ಕರೆಗಂಟೆ ಮೊಳಗಿತು. ಲಾಯರ್ ಸೀತಾರಾಮಯ-ಯ ರಿಸೀವರ್ ಎತ್ತಿ ''ಹಲೋ...''

"ಅಲ್ಲಿ ಪೋಲೀಸ್ ಇಲಾಖೆಯ ಗುರು ಇದ್ದಾರ?"

"ಹೂಂ...ಇದ್ದಾರೆ."

"ಪ್ಲೀಸ್...ಅವರಿಗೆ ಫೋನ್ ಕೊಡ್ತೀರಾ?"

"ನೀವ್ಯಾರು ಅಂತ ಗೊತ್ತಾಗಲಿಲ್ಲ."

"ಎಸ್.ಐ. ಶ್ರೀಕಾಂತ್ ಅಂತ ಹೇಳಿ."

ಸಮಯ ಉರುಳುತ್ತಿತ್ತು. ಗುರು ರಿಸೀವರ್ ಪಡೆದುಕೊಂಡು "ಹಲೋ..."

'4ಸಾರ್...ನೀವು ಈಗಲೇ ಬರಬೇಕು."

"ಯಾಕೆ...ಏನಾಯ್ತು?"

"ಇನ್ನೊಂದು ಕೊಲೆ ನಡೆದಿದೆ."

"ಹಾಂ...ಏನಂದ್ರಿ?"

"ರಂಗಯ್ಯ ಕೊಲೆಯಾಗಿದ್ದಾನೆ."

"ಮೈ ಗಾಡ್...!" ಎಂದು ಉದ್ಗರಿಸಿದನು. ಕೂಡಲೇ ಕೋಪದಿಂದ, "ಅಲ್ರೀ...ಅನಸೂಯಮ್ಮ ಅರೆಸ್ಟ್ ಮಾಡಿ ಅಂತ ಹೇಳಿದ್ದೆನಲ್ಲ. ನೀವು..."

"ಆಕೆಯನ್ನು ಅರೆಸ್ಟ್ ಮಾಡಿದ್ದೇವೆ."

"ಮತ್ತೆ ಕೊಲೆ ಹೇಗೆ ಆಯಿತು?"

"ಈ ಕೊಲೆಗಳನ್ನು ಮಾಡಿರೋದು ಅನಸೂಯಮ್ಮ ಅಲ್ಲ, ಆಕೆಯ ಮಗ ಕುಂಭಕರ್ಣ ಅಂತ ನಾವು ತಿಳಿದುಕೊಂಡಿದ್ದ ವಾಸು...! ಪಾಪ...ಮುಗ್ಧ ಅನಸೂಯಮ್ಮನಿಗೆ ಈ ವಿಷಯವೇ ಗೊತ್ತಿಲ್ಲ."

"ಈಗ ವಾಸು ಎಲ್ಲಿದ್ದಾನೆ?"

"ಕಾಲಪ್‌ನಲ್ಲಿ."

"ಅವನನ್ನು ಹೇಗೆ ಅರೆಸ್ಟ್ ಮಾಡಿದ್ರಿ?"

ಶ್ರೀಕಾಂತ್, "ರಂಗಯ್ಯನನ್ನು ಬಂಗಲೆಯಲ್ಲಿ ಕೊಲೆ ಮಾಡಿ ವಾಸು ಓಡುತ್ತಿದ್ದಾಗ ಪಿ.ಸಿ.ಗಳು ಅವನನ್ನು ಹಿಡಿದು ಕಂಬಕ್ಕೆ ಕಟ್ಟಿದರು. ಅವನನ್ನು ಈಗ ಲಾಕಪ್ ನಲ್ಲಿ ಇರಿಸಿದ್ದೇನೆ ಬೇಗ ಬನ್ನಿ."

"ನಾನು ಈಗಲೇ ಬರುತ್ತಿದ್ದೇನೆ."

ಗುರು ಎಲ್ಲವನ್ನೂ ಲಾಯರ್‌ಗೆ ವಿವರಿಸಿ ಅವರನ್ನು ಕರೆದುಕೊಂಡೇ ಸೊರಗೂರಿನ ಕಡೆ ಹೊರಟನು.

*　　*　　*

ಅದು ಪೋಲೀಸ್ ಲಾಕಪ್!

ವಾಸು ತಲೆ ತಗ್ಗಿಸಿಕೊಂಡು ನಿಂತಿದ್ದಾನೆ.

ಪಕ್ಕದಲ್ಲೇ ಇದ್ದ ದೊಡ್ಡ ಹಾಲ್‌ನಲ್ಲಿ ಆಸನಗಳನ್ನು ಹಾಕಲಾಗಿದೆ. ಅಲ್ಲಿ ಸಹನಾ ಈಗಲೂ ಸಹಾ ಅನಸೂಯಮ್ಮನನ್ನು ತಬ್ಬಿಕೊಂಡು ಅಳುತ್ತಿದ್ದಾಳೆ. ವ್ಯತ್ಯಾಸ ಏನೆಂದರೆ ಅವಳಿಗೆ ಈಗ ಸತ್ಯ ತಿಳಿದಿದೆ. ಅವಳೇ ಈಗ ತನ್ನ ದೊಡ್ಡಮ್ಮನನ್ನು ಸಂತೈಸುತ್ತಿದ್ದಾಳೆ.

ವಾಸು ತನಗೆ ಅಣ್ಣ!

ಸಹನಾಳ ಮನಸ್ಸು ಭಾವನೆಗಳ ತಾಕಲಾಟದಿಂದ ಗೊಂದಲಗೊಂಡಿದೆ. ಇದರಲ್ಲಿ ತಪ್ಪು ಯಾರದ್ದು ಎಂಬುದರ ಬಗ್ಗೆ ಚಿಂತಿಸುತ್ತಿದ್ದಾಳೆ.

ಅನಸೂಯಮ್ಮ ದುಃಖ, ಭಯ, ಆಶ್ಚರ್ಯದಿಂದ ತತ್ತರಿಸಿಹೋಗುತ್ತಿದ್ದಾರೆ. ಈ ಎಲ್ಲಾ ಕೊಲೆಗಳನ್ನು ಮಾಡಿರೋದು ತಮ್ಮ ಮಗ ವಾಸು ಎಂದರೆ ನಂಬಿಕೆಯೇ ಬರುತ್ತಿಲ್ಲ.

ವಾಸು ತಾಯಿಗೂ ತಿಳಿಸದೆ ಕೊಲೆಗಳನ್ನು ಮಾಡಿದ್ದ.

ಗುರು ಎದ್ದು ಬಂದು, ''ವಾಸು...ನಿನ್ನ ಹೇಳಿಕೆಗೆ ಎಲ್ಲರೂ ಕಾತರಗೊಂಡಿದ್ದಾರೆ. ಸತ್ಯವನ್ನು ಮರೆಮಾಚಬೇಡ.''

ವಾಸು ಒಪ್ಪಿಕೊಂಡು ತಲೆಯಾಡಿಸಿದನು.

''ರಾಜಾರಾಯರು ಅಂದು ರಾತ್ರಿ ಮೈಸೂರಿನಿಂದ ಹಿಂತಿರುಗಿ ಬಂದವರು ಮನೆಗೂ ಹೋಗದೆ ಮಾವಿನ ತೋಪಿಗೆ ಬಂದರು. ಆಗ ಅವರೇನು ಹೇಳಿದರು?''

''ಹೊಸದಾಗಿ ಮಾಡಿರುವ ವಿಲ್ ಬಗ್ಗೆ.''

''ಅಂದರೆ?''

''ನನ್ನ ತಾಯಿಯ ತವರಿನವರು ಇವರಿಬ್ಬರ ಹೆಸರಿನಲ್ಲಿ ಇಟ್ಟಿದ್ದ ಹಣ ಈಗ

ಇಪ್ಪತ್ತೈದು ಲಕ್ಷ ಆಗಿತ್ತು. ಅದು ಪೂರ್ತಿ ನನಗೆ ಸೇರಬೇಕಿತ್ತು. ನನ್ನ ತಾಯಿಯ ತವರಿನವರ ಆಸೆಯೂ ಅದೇ ಆಗಿತ್ತು. ಆದರೆ ನನ್ನ ತಂದೆ ಅದರಲ್ಲಿ ಕೇವಲ ಮೂರು ಲಕ್ಷವನ್ನು ಮಾತ್ರ ನನ್ನ ಹೆಸರಿಗೆ ಬರೆದರಂತೆ.''

''ನಿನ್ನ ತಂದೆಯನ್ನೇ ಯಾಕೆ ಕೊಲೆ ಮಾಡಿದೆ?''

ವಾಸು ಸ್ವಲ್ಪವೂ ಅಂಜದೆ, ''ಅದಕ್ಕೆ ಎರಡು ಕಾರಣಗಳು ಇವೆ. ಮೊದಲನೆಯದು ಹಣ. ಇಪ್ಪತ್ತೈದು ಲಕ್ಷ ನನ್ನ ತಂದೆ ಸಂಪಾದಿಸಿದ್ದಲ್ಲ. ಅದು ನನ್ನ ತಾಯಿಯ ತವರಿನವರ ಕೊಡುಗೆ. ಅದನ್ನು ಸಹನಾಳ ಹೆಸರಿಗೆ ಬರೆಯಲು ಅವರಿಗೇನು ಹಕ್ಕಿದೆ? ಅದೂ ಇಪ್ಪತ್ತೆರಡು ಲಕ್ಷವನ್ನು ಅವಳಿಗೆ ಬರೆದಿದ್ದಾರೆ. ಈ ಅನ್ಯಾಯ ಏಕೆ ಮಾಡಿದರು? ಸಹನಾಳಂತೆ ನಾನೂ ಸಹಾ ಅವರ ರಕ್ತದಿಂದ ಜನಿಸಿರುವ ಸಂತಾನ ಅಲ್ಲವೆ? ಈ ತಾರತಮ್ಯವನ್ನು ಏಕೆ ಮಾಡಿದರು? ಇದೇ ಮೊದಲ ಕಾರಣ.''

ಎಲ್ಲರೂ ಬೆರಗಾಗಿ ಕೇಳುತ್ತಿದ್ದಾರೆ.

''ಎರಡನೆಯ ಕಾರಣ ಏನು?''

''ಯಾರೋ ಕಾಂಜಿ-ಪೀಂಜಿಗಳ, ತಲೆ ಹಿಡುಕರ ಮಾತುಗಳನ್ನು ಕೇಳಿಕೊಂಡು ನನ್ನ ತಾಯಿಯಂಥ ಶೀಲವತಿಯನ್ನು ಸಂದೇಹಿಸಿದರು. ಪರೀಕ್ಷಿಸಿ ಸತ್ಯ ತಿಳಿಯುವ ಸಹನೆ, ಚುರುಕುತನ ಇಲ್ಲದೆ ರಂಗಯ್ಯ, ಸೋಮಯ್ಯನ ಮಾತುಗಳನ್ನು ಕೇಳಿಸಿಕೆಂಡು, ನನ್ನ ತಾಯಿಯ ಬದುಕನ್ನೇ ಬಲಿ ತೆಗೆದುಕೊಂಡರು. ನನ್ನ ತಾಯಿಯ ಕಣ್ಣೀರು. ನಿರಾಸೆ, ನಿಟ್ಟುಸಿರು ನನ್ನನ್ನು ಈ ಕೊಲೆಗಳಿಗೆ ಪ್ರಚೋದಿಸಿತು.''

''ನಿನ್ನ ತಂದೆಯನ್ನು ಹೇಗೆ ಕೊಲೆ ಮಾಡಿದೆ?''

''ಕತ್ತು ಹಿಸುಕಿ ಕೊಂದೆ.''

''ರಂಗಯ್ಯ, ಸೋಮಯ-ಯನನ್ನು ಯಾಕೆ ಕೊಂದೆ?''

'4ಸೇಡು...ಸೇಡು ತೀರಿಸಿಕೊಳ್ಳಲು.''

ವಾಸು ಆವೇಶದಿಂದ ಅಬ್ಬರಿಸಿದನು.

ಎಲ್ಲರೂ ಬೆಚ್ಚಿಬಿದ್ದರು.

ವಾಸು, ''ನನ್ನ ತಾಯಿಯ ಬಗ್ಗೆ ಸುಳ್ಳು ಸಾಕ್ಷಿ, ಆಧಾರಗಳನ್ನು ಸೃಷ್ಟಿಸಿ ನನ್ನ ತಂದೆಗೆ

ಅಪನಂಬಿಕೆ ಬರುವಂತೆ ಮಾಡಿದರು. ನನ್ತಾಯಿಯ ಶೀಲ ಶಂಕಿಸಿದ ಅವರು ನನ್ನ ತಂದೆಯ ಬದುಕಿನಿಂದ ದೂರಾಗಲು ಈ ಇಬ್ಬರು ಮಹಾನುಭಾವರುಗಳೇ ಕಾರಣ. ಅದಕ್ಕೇ ಅವರನ್ನು ಕೊಂದು ಸೇಡು ತೀರಿಸಿಕೊಂಡೆ.''

''ಇವರಿಬ್ಬರನ್ನೂ ಹ್ಯಾಗೆ ಕೊಂದೆ?''

''ಒಬ್ಬರ ಹೆಸರಿನಲ್ಲಿ ಮತ್ತೊಬ್ಬರಿಗೆ ಫೋನ್ ಮಾಡಿ ಮಾವಿನ ತೋಪಿಗೆ ಕರೆಸಿಕೊಂಡು ಕೊಲೆ ಮಾಡಿದೆ.''

''ರವಿ, ಮೋಹನನ್ನು ಯಾಕೆ ಕೊಂದೆ?''

ವಾಸು ಗಂಭೀರವಾಗಿ, ''ಮೋಹನ ಕುಡುಕ, ವ್ಯಭಿಚಾರಿ ಆಸ್ತಿಯ ಆಸೆಯಿಂದ ನನ್ನ ತಂಗಿಯನ್ನು ಮದುವೆಯಾಗಲು ಪ್ರಯತ್ನಿಸುತ್ತಿದ್ದ. ಅವನಿಂದ ಮುಂದೆ ಸಹನಾಳ ಬಾಳು ಹಾಳಾಗಬಹುದು ಅಂತ ಕೊಂದೆ.''

ಗುರು ಕೋಪದಿಂದ, '4ಆದರೆ ರವಿ ನಿನಗೆ, ನಿನ್ನ ತಂಗಿ ಸಹನಾಳಿಗೆ ಏನು ಅನ್ಯಾಯ ಮಾಡಿದ್ದ? ಸಹನಾ ಅವನನ್ನು ಮದುವೆಯಾಗಲು ಒಪ್ಪಿಕೊಂಡಿದ್ದಳು ರವಿ ಯೋಗ್ಯ ಅವನನ್ನು ಅನ್ಯಾಯವಾಗಿ ಕೊಂದೆಯಲ್ಲ?''

ವಾಸು ದುಃಖ, ಬೇಸರದಿಂದ, ''ಇದೇ ನಾನು ಮಾಡಿದ ತಪ್ಪು ಸೇಡಿನಿಂದ ಕುರುಡನಾಗಿದ್ದ ನಾನು ವಿವೇಚನೆ ಕಳೆದುಕೊಂಡಿದ್ದೆ. ರವಿಯ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೆ ದುಡುಕಿ ಕೊಲೆ ಮಾಡಿದೆ.''

ಸಹನಾಳ ಕಣ್ಣುಗಳು ಹನಿಗೂಡಿದವು.

ರವಿಯ ನೆನಪಾಗಿ ಜೋರಾಗಿ ಅತ್ತಳು.

ಅನಸೂಯಮ್ಮ ಮಗನತ್ತ ಒಂದು ಸಲ ನೋಡಿ, ಜೋರಾಗಿ ನಿಟ್ಟುಸಿರು ಬಿಟ್ಟರು. ಸಹನಾ ಕಣ್ಣೀರಿಡುತ್ತಿದ್ದಳು.

ವಾಸು ದುಃಖದಿಂದ, ''ನನ್ನನ್ನು ಕ್ಷಮಿಸು ಸಹನಾ. ನನ್ನ ದುಡುಕಿನಿಂದ ನೀನು ಉತ್ತಮ ಸಂಗಾತಿಯನ್ನು ಕಳೆದುಕೊಳ್ಳಬೇಕಾಯಿತು.''

ಸಹನಾ ಅನಸೂಯಮ್ಮನನ್ನು ತಬ್ಬಿಕೊಂಡಳು.

ವಾಸು, '4ಸಹನಾ...ನಾವಿಬ್ಬರೂ ಒಬ್ಬನೇ ತಂದೆಯಿಂದ ಜನಿಸಿದವರು. ನನ್ನ

ತಾಯಿ ಜೀವನದಲ್ಲಿ ತುಂಬಾ ನೊಂದಿದ್ದಾರೆ. ಅವರನ್ನು ಕೊನೆಯತನಕ ಮಗಳಾಗಿ ನೀನೇ ಕಾಪಾಡಬೇಕು. ಇದೇ ನನ್ನ ಕೊನೆಯ ಪ್ರಾರ್ಥನೆ.''

ಸಹನಾ ಅಳುತ್ತಲೇ ತಲೆಯಾಡಿಸಿದಳು.

ಮಾವಿನ ತೋಪಿನಲ್ಲಿ...!?

ಈಗ ಅಲ್ಲಿ ಯಾವ ದುರಂತ ಘಟನೆಯೂ ನಡೆಯುತ್ತಿಲ್ಲ. ಮಾವಿನ ತೋಪು ತನ್ನ ಹಸಿರು ಸೌಂದರ್ಯದಿಂದ ಕಂಗೊಳಿಸುತ್ತಾ ಪ್ರಶಾಂತವಾಗಿದೆ.

ನವಚೇತನ ಪಬ್ಲಿಕೇಷನ್
ನಂ. 16, 25ನೇ ಮುಖ್ಯರಸ್ತೆ, ಬನಶಂಕರಿ ಮೊದಲನೇ ಹಂತ,
2ನೇ ಘಟ್ಟ, ಬೆಂಗಳೂರು - 560 050